ಕಸ್ತೂರಿ

ಫೆಬ್ರುವರಿ ೧೯೮೧







ರೂ. ೧-೫೦

ವೈಶ್ಯ ಬ್ಯಾಂಕಿನ ಸುವರ್ಣ ಮಹೋತ್ಸವದ ಅಮೋಘ ಕೊಡುಗೆ!

ರೂ.1,00,000 ಬಂಪರ್ ಬಹುಮಾನ.

ವೈಶ್ಯ ಬ್ಯಾಂಕ್
ಸುವರ್ಣ ಮಹೋತ್ಸವ

ನಗದು ಸರ್ಟಿಫಿಕೇಟ್‌ಗಳ ಮೇಲೆ

ನಿಮಗೆ ಅಪೂರ್ವವಾದ ಒಂದು ಕೊಡುಗೆ ನೀಡುವ ಮೂಲಕ ವೈಶ್ಯ ಬ್ಯಾಂಕಿನವರು 50 ವರ್ಷಗಳ ಬ್ಯಾಂಕಿಂಗ್ ಸೇವೆಯ ಸಮಾರಂಭವನ್ನು ಆಚರಿಸುತ್ತಾರೆ. 100 ರೂ.ಗಳ ಒಂದು ನಗದು ಸರ್ಟಿಫಿಕೇಟ್ ವಾರ್ಷಿಕ ಶೇ. 10 ರಂತೆ ಬಡ್ಡಿಯನ್ನು ದುಡಿಯುವುದರ ಜೊತೆಗೆ 1,00,000 ರೂ.ಗಳ ಬಹುಮಾನ ಪಡೆವ ಅವಕಾಶವನ್ನೂ ಕಲ್ಪಿಸುತ್ತದೆ. ಅದು ಬಂಪರ್ ಬಹುಮಾನವಾಗಿರುತ್ತದೆ.

ರೂ. 16,75,000 ಬೆಲೆಯ ಒಟ್ಟು 2551 ಬಹುಮಾನಗಳಿವೆ! ಪ್ರಥಮ ಬಹುಮಾನ 50,000 ರೂ.ಗಳಿಂದ ಮೊದಲುಗೊಂಡು 100 ರೂ.ಗಳ ವರೆಗೆ ಬಹುಮಾನಗಳಿವೆ. ಆರು ತಿಂಗಳಿಗೆ ಒಂದರಂತೆ ಹತ್ತು ಅರ್ಧ ವರ್ಷದ ಡ್ರಾಗಳಿವೆ ಎಂಬುದನ್ನು ನೆನಪಿನಲ್ಲಿಡಿ. ಈ ಕಾರಣದಿಂದಾಗಿ ನಿಮ್ಮ ಸರ್ಟಿಫಿಕೇಟ್‌ಗೆ ಒಂದು ಸಲಕ್ಕಿಂತ ಹೆಚ್ಚು ಬಾರಿ ಗೆಲ್ಲುವ ಅವಕಾಶವಿದೆ! ಆಕಸ್ಮಿಕ ಲಾಭ ಪ್ರಾಪ್ತಿ! 63 ತಿಂಗಳ ನಂತರ ವಾಯಿದೆ ಮುಗಿದ ಮೇಲೆ ನಿಮ್ಮ ಬಂಡವಾಳ (ಅಸಲು) ದ ಜೊತೆಗೆ ಬಡ್ಡಿ ಎಂದಿನಂತೆ ಖಚಿತವಾಗಿ ದೊರೆಯುವುದು.

ಬನ್ನಿ, ವೈಶ್ಯ ಬ್ಯಾಂಕ್ ಸಮಾರಂಭದಲ್ಲಿ ನೀವೂ ಪಾಲ್ಗೊಳ್ಳಿರಿ. ನಗದು ಸರ್ಟಿಫಿಕೇಟ್‌ಗಳನ್ನು ನಿಮಗೆ ಅಥವಾ ನಿಮ್ಮ ಮಕ್ಕಳಿಗೆ ಅಥವಾ ನಿಮ್ಮ ಪ್ರೀತಿ ಪಾತ್ರರಾದವರಿಗೆ ಕೊಡುಗೆಯಾಗಿ ಕೊಡಿ.

ಹತ್ತಿರದ ವೈಶ್ಯ ಬ್ಯಾಂಕಿನ ಶಾಖೆಗೆ ಭೇಟಿ ನೀಡಿ. ಅವರು ನಿಮಗೆ ಸಂತಸದಿಂದ ವಿವರವಾದ ಮಾಹಿತಿ ಮತ್ತು ಫಾರಂಗಳನ್ನು ನೀಡುವರು.

ನಿಮ್ಮ ಸಂಪದಭಿವೃದ್ಧಿಗೆ ವೈಶ್ಯ ಬ್ಯಾಂಕ್



ದಿ ವೈಶ್ಯ ಬ್ಯಾಂಕ್ ಲಿಮಿಟೆಡ್

ಅಧಿಕೃತ ಕಛೇರಿ : ಅವೆನ್ಯೂ ರಸ್ತೆ, ಬೆಂಗಳೂರು 560 002
ಆಡಳಿತ ಕಛೇರಿ : 72, ಸ್ಟೆಂಟ್ ಮಾರ್ಕ್ಸ್ ರಸ್ತೆ
ಬೆಂಗಳೂರು 560 001

ಛೇರ್ಮನ್ : ಟಿ.ಕೆ.ಕೆ. ಭಾಗವತ್

ರೈತನ ನೆಮ್ಮದಿ-ನಾಡಿಗೆ ಸಮೃದ್ಧಿ

ಕಡೆಗಣಿಸಲ್ಪಟ್ಟಿದ್ದ ರೈತ ಸಮುದಾಯದ ಏಳಿಗೆಯ ಕಡೆಗೆ ಕರ್ನಾಟಕದ ಹೊಸ ಸರ್ಕಾರವು ತನ್ನ ಮೊದಲ ೧೨ ತಿಂಗಳಲ್ಲಿ ಹೆಚ್ಚಿನ ಗಮನ ಹರಿಸಿದೆ. ಈ ವಿಶೇಷ ಗಮನ ಆಲೋಚನೆಗೆ ಆಹಾರವಾಯಿತು. ಹರ್ಷಚಿತ್ತ ರೈತನೆಂದರೆ ಅಧಿಕ ಸಮೃದ್ಧಿ ಬೆಳೆ. ಆದರಿಂದ ಹೆಚ್ಚು ಜನಕ್ಕೆ ಹೆಚ್ಚು ಆಹಾರ.

ತನ್ನ ಪ್ರಥಮ ವಾರ್ಷಿಕ ದಿನವಾದ ಇಂದು ಸರ್ಕಾರ ತಾನು ನೀಡಿದ ಭರವಸೆ ಹೇಳಿಕೆಗಳನ್ನೂ ಕಾರ್ಯಗತಗೊಳಿಸಿರುವ ಸಾಧನೆಗಳನ್ನೂ ಮತ್ತು ಈ ದಿಶೆಯಲ್ಲಿ ನಡೆಸಿದ ಸತತ ಪ್ರಯತ್ನವನ್ನೂ ಮೆಲುಕು ಹಾಕುತ್ತಿದೆ.

ಬೇಸಾಯದ ಬದುಕಿಗೆ ಭದ್ರ ನೆಲೆ

ಕಳೆದ ೧೨ ತಿಂಗಳಲ್ಲಿ ರಾಜ್ಯದ ರೈತರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವಂತಹ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ ಮುಖ್ಯವಾದುವು ಈ ಕೆಳಕಂಡಂತಿವೆ

- ಹತ್ತು ಎಕರೆಗಳ ವರೆಗೆ ಭೂಕಂದಾಯ ಕೊಡಬೇಕಾಗಿಲ್ಲ.
- ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯಲ್ಲಿ ಏರಿಕೆ.
- ನೀರಾವರಿಗೆ ಬಳಸುವ ವಿದ್ಯುಚ್ಛಕ್ತಿ ದರದಲ್ಲಿ ಇಳಿತಾಯ.
- ೫ ಅಶ್ವಶಕ್ತಿ ವರೆಗೆ ಪ್ರತಿ ಅಶ್ವಶಕ್ತಿಗೆ ರೈತರು ಕೊಡಬೇಕಾದ ದರ ಕೇವಲ ೫೦ ರೂ. ಗಳು. ೫ ಅಶ್ವಶಕ್ತಿಯ ಮೇಲಿನ ಪಂಪುಸೆಟ್ಟುಗಳಿಗೆ ಕೊಡಬೇಕಾದ ದರವನ್ನು ಪ್ರತಿ ಯುನಿಟ್ಟಿಗೆ ೨೨ ಪೈಸೆಯಿಂದ ೧೭ ಪೈಸೆಗೆ ಇಳಿಸಿದೆ.
- ಎಲ್ಲ ಖುಷ್ಕಿ ಬೆಳೆಗಳ ಮೇಲಿನ ಕೃಷಿ ಆದಾಯ ತೆರಿಗೆಯು ರದ್ದು.
- ನೀರಾವರಿ ಭೂಮಿಯ ಮೇಲಿನ ಅಭಿವೃದ್ಧಿ ತೆರಿಗೆಯು ರದ್ದು.
- ಸಣ್ಣ ಮತ್ತು ಅತಿಸಣ್ಣ ರೈತರ ತಕಾವಿ ಸಾಲಗಳ ಮನ್ನಾ.
- ಗೊಬ್ಬರಗಳ ಮೇಲಿನ ಮಾರಾಟ ತೆರಿಗೆಯಲ್ಲಿ ಶೇಕಡ ೫ ರಿಂದ ೨ಕ್ಕೆ ಇಳಿತ.
- ಕಬ್ಬಿನ ಮೇಲಿನ ಸರಚಾರ್ಜ ಮನ್ನಾ ಹಾಗೂ ಕಬ್ಬಿನ ಕೊಳ್ಳುವ ತೆರಿಗೆಯಲ್ಲಿ ಪ್ರತಿ ಟನ್ನಿಗೆ ೨–೫೦ ರೂ. ಲಾಭ ದೊರೆಯುವಂತೆ ಮಾರ್ಪಾಡು.
- ೧೯೭೦ರ ಬರಗಾಲದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡಿದ್ದ ಮೂಲಧನ ಸಾಲದ ಮನ್ನಾ.
- ಕೃಷಿ ಕಾರ್ಮಿಕರಿಗೆ ಸಾಮೂಹಿಕ ವಿಮಾ ಯೋಜನೆ ರೂಪದಲ್ಲಿ ಸಾಮಾಜಿಕ ಭದ್ರತಾ ಕ್ರಮಗಳ ಜೊತೆಗೆ ಕೃಷಿ ಕಾರ್ಮಿಕನು ಪ್ರಾಕೃತಿಕ ಅಪಘಾತಕ್ಕೀಡಾಗಿ ಸತ್ತಾಗ ೫೦೦೦ ರೂ. ಗಳಷ್ಟು ಆಪತ್‌ಧನವನ್ನು ನೀಡಲು ಸರ್ಕಾರ ತೀರ್ಮಾನಿಸಿದೆ.

- ಸಣ್ಣ ಮತ್ತು ಅತಿಸಣ್ಣ ರೈತರಿಗಾಗಿ ಭವಿಷ್ಯನಿಧಿ ಯೋಜನೆಯನ್ನು ಆರಂಭಿಸಲು ನಿರ್ಧಾರ.
- ಭೂಸುಧಾರಣಾ ಕಾಯಿದೆಯನ್ವಯ ಜಮೀನು ಪಡೆದ ರೈತರಿಂದ ಜಮೀನು ಹಕ್ಕು ಪಡೆಯಲು ನೀಡಬೇಕಾದ ಪ್ರಥಮ ಕಂತಿನ ಹಣವನ್ನು ಒತ್ತಾಯಿಸದೇ ಪಟ್ಟಾ ನೀಡಲು ನಿರ್ಧಾರ
- ರಾಜ್ಯದ ಎಲ್ಲ ರೈತರಿಗೂ ಅನುಕೂಲವಾಗುವಂತೆ ಬೆಳೆ ವಿಮಾ ಯೋಜನೆ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ.
- ಬಿಡುವಿನ ಹಂಗಾಮಿನಲ್ಲಿ ರೈತರಿಗೆ ಅಭಿವೃದ್ಧಿ ಕಾರ್ಯಗಳಲ್ಲಿ ೧೦೦ ದಿನಗಳ ಉದ್ಯೋಗ ನೀಡಿದೆ. ೩೯ ತಾಲ್ಲೂಕುಗಳು ಈ ಯೋಜನೆಗೊಳಪಟ್ಟಿದೆ. ಈ ಯೋಜನೆಯ ಪ್ರಕಾರ ಕೆಲಸಗಾರರ ದಿನಗೂಲಿಯನ್ನು ರೂ. ೪ ರಿಂದ ೫ಕ್ಕೆ ಏರಿಸಲಾಗಿದೆ.

ರೇಷ್ಮೆ ಮಾರುಕಟ್ಟೆ

ಸರ್ಕಾರವು ರೇಷ್ಮೆಗೂಡಾರ ಉತ್ಪಾದಕರು ಮತ್ತು ರೇಷ್ಮೆ ವರ್ತಕರ ನಡುವೆ ರೇಷ್ಮೆ ವಿನಿಮಯದ ವ್ಯವಸ್ಥೆಯನ್ನು ಮಾಡಿದೆ. ಇದರಿಂದ ಉತ್ಪಾದಕರಿಗೆ ಬಹಿರಂಗ ಹರಾಜಿನಲ್ಲಿ ನಿಗದಿಯಾದ ಬೆಲೆ ದೊರೆಯುವುದರ ಜೊತೆಗೆ ರೇಷ್ಮೆಯ ನಿಖರವಾದ ಪರೀಕ್ಷೆ ವಿಂಗಡಣೆ, ತೂಕ ಸಿಗುವಂತಾಗಿದೆ.

ಈ ವರ್ಷ ರೇಷ್ಮೆ ಅಭಿವೃದ್ಧಿಗಾಗಿ ವಿಶ್ವಬ್ಯಾಂಕಿನಿಂದ ೮೩ ಕೋಟಿ ರೂ.ಗಳ ನೆರವು ದೊರಕಿದೆ.

ಕೈಗಾರಿಕೆಗಳಲ್ಲಿ ಹಿಂದುಳಿದ ಪ್ರದೇಶಗಳಿಗೆ ನವಚೇತನ

ರಾಜ್ಯದ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಬೇಕಾದ ಸಮೀಕ್ಷೆ ನಡೆಸಿ, ಯೋಜನೆ ತಯಾರಿಸಲು ಸರ್ಕಾರವು ಒಂದು ಸಮಿತಿಯನ್ನು ನೇಮಿಸಿದೆ. ಈ ಸಮಿತಿಯು ೫೦ ತಾಲೂಕುಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳೆಂದು ಪರಿಗಣಿಸಿದೆ. ಈ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಕೈಗೊಳ್ಳಲು ಮುಂದೆ ಬರುವ ಉದ್ಯಮಿಗಳಿಗೆ ಹಲವಾರು ಉತ್ತೇಜನ ಮತ್ತು ರಿಯಾಯತಿಗಳನ್ನು ನೀಡಲಾಗಿದೆ. ತೀರ ಸಣ್ಣಪುಟ್ಟ ಕೈಗಾರಿಕೆಗಳಿಗಾಗಿ ವಸಾಹತು ನಿರ್ಮಿಸಲು ಡಚ್ ಸರಕಾರದಿಂದ ೧೮ ಕೋಟಿ ರೂ.ಗಳ ನೆರವನ್ನು ಪಡೆಯಲಾಗಿದೆ.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ

ಹೈದರಾಬಾದ ಕರ್ನಾಟಕ ಪ್ರದೇಶದ ಸಮಸ್ಯೆಗಳನ್ನು ಪರಿಶೀಲಿಸಿ ಅಭಿವೃದ್ಧಿಗೆ ಸಲಹೆ ನೀಡಲು ಸರ್ಕಾರ ಉನ್ನತ ಮಟ್ಟದ ಸಮಿತಿಯೊಂದನ್ನು ನೇಮಿಸಿದೆ. ಈ ಪ್ರದೇಶದ ಪ್ರಮುಖ ಯೋಜನೆಗಳಲ್ಲೊಂದಾದ ೨೦ ಲಕ್ಷ ಎಕರೆಗಳಿಗೆ ನೀರಾವರಿ ಒದಗಿಸುವ ಕೃಷ್ಣಾ ಮೇಲ್ದಂಡೆ ಯೋಜನೆಯು ಕಾರ್ಯ ಭರದಿಂದ ಸಾಗುತ್ತಿದೆ.

ಕಾವೇರಿ ನೀರು ಹಂಚಿಕೆ

ಕರ್ನಾಟಕ ಸರ್ಕಾರದ ೧೦ ಅಂಶಗಳ ಯೋಜನೆ

ಕಾವೇರಿ ನೀರನ್ನು ಸಂಬಂಧಪಟ್ಟ ರಾಜ್ಯಗಳು ಸಮನಾಗಿ ಮತ್ತು ಉಪಯುಕ್ತವಾಗಿ ಬಳಸಿ ಕೊಳ್ಳಲು ಸಾಧ್ಯವಾಗುವಂತೆ ಇತ್ತೀಚೆಗೆ ಕರ್ನಾಟಕ ಸರ್ಕಾರವು ೧೦ ಅಂಶಗಳ ಸೂತ್ರವನ್ನು ತಯಾರಿಸಿದೆ. ಈ ಸೂತ್ರ ಒಪ್ಪಿಗೆಯಾದಲ್ಲಿ ಈ ವಿಷಯವನ್ನು ಪರಸ್ಪರ ಅರಿವು ಮತ್ತು ಸಹಕಾರ ದಿಂದ ಪರಿಹರಿಸಿಕೊಳ್ಳಲು ಸಾಧ್ಯವಾಗಿ ಅನೇಕ ವರ್ಷಗಳ ವಿವಾದ ಇತ್ಯರ್ಥವಾಗುತ್ತದೆ.

ನೀರಾವರಿ : ವರಾಹಿ ಮತ್ತಿತರ ಯೋಜನೆಗಳು

ಕುಂದಾಪುರ ೧೯.೮ ಕೋಟಿ ರೂ. ಗಳ ವೆಚ್ಚದ ವರಾಹಿ ನೀರಾವರಿ ಯೋಜನೆಯು ಭಾರತದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳಲ್ಲೇ ಅತ್ಯಂತ ದೊಡ್ಡದಾದ ಪ್ರಥಮ ಯೋಜನೆ. ೧೯೮೭ರ ಹೊತ್ತಿಗೆ ಪೂರ್ಣಗೊಳಿಸಲು ಉದ್ದೇಶಿಸಿರುವ ಈ ಯೋಜನೆಯಿಂದ ಈ ಪ್ರದೇಶದ ಆರ್ಥಿಕ ಸಾಮಾಜಿಕ ಪ್ರಗತಿಗೆ ಹೆಚ್ಚಿಗೆ ನೆರವು ದೊರೆಯಲಿದೆ.

ಇತ್ತೀಚೆಗೆ ಕಾರ್ಯಾರಂಭವಾದ ಹಾರಂಗಿ ಮತ್ತು ಹೇಮಾವತಿ ಯೋಜನೆಗಳು ರಾಜದ ರೈತರಿಗೆ ನೀರಾವರಿ ಸೌಲಭ್ಯ ವಿಸ್ತರಿಸಲು ಸರ್ಕಾರ ಕೈಕೊಂಡ ಪ್ರಯತ್ನವನ್ನು ಸಫಲಗೊಳಿಸಿವೆ. ನೀರಾವರಿ ವಿಸ್ತರಣೆಯ ವಿಚಾರದಲ್ಲಿ ಹೆಚ್ಚು ಆಸಕ್ತಿವಹಿಸಿರುವ ಸರಕಾರ ೧೯೮೦–೮೧ ರಲ್ಲಿ ೨೦,೦೦೦ ನೀರಾವರಿ ಭಾವಿಗಳನ್ನು ತೋಡಲು ಹಾಗೂ ೨೦,೦೦೦ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಯೋಚಿಸಿದೆ.

ಅಧಿಕ ವಿದ್ಯುತ್ ಉತ್ಪಾದನೆ

೧೩೫ ಮೆಗಾವಾಟ್ ಅಧಿಕ್ ವಿದ್ಯುತ್ ಉತ್ಪಾದಿಸುವ ಕಾಳೀನದಿ ದ್ವಿತೀಯ ಜಲವಿದ್ಯುತ್ ಘಟಕವು ೧೯೮೦ರಲ್ಲಿ ಆರಂಭಗೊಂಡಿದೆ. ರಾಯಚೂರಿನ ಥರ್ಮಲ್ ಘಟಕದ ಕೆಲಸ ಮುಂದುವ ರಿಯುತ್ತಿದೆ. ಈ ಯೋಜನೆಯ ೨೧೦ ಮೆಗಾವಾಟ್ ಸಾಮರ್ಥ್ಯದ ಮೊದಲ ಘಟಕವು ೧೯೮೩ರಲ್ಲಿ ಅಷ್ಟೇ ಸಾಮರ್ಥ್ಯದ ಎರಡನೆ ಘಟಕವು ೧೯೮೪ರಲ್ಲೂ ಕಾರ್ಯಾರಂಭ ಮಾಡಲಿದೆ.

ಸಾಂಸ್ಕೃತಿಕ ಕ್ಷೇತ್ರ

ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಜೀವಂತವಾಗಿ ಉಳಿಸಿ ಬೆಳೆಸುವ ಸಲುವಾಗಿ ಸರ್ಕಾರವು ಜಾನಪದ ಕಲೆ ಸಾಹಿತ್ಯಗಳ ಬೆಳವಣಿಗೆಗೆ ಸಾಕಷ್ಟು ಹಣ ಖರ್ಚು ಮಾಡುತ್ತಿದೆ ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿರುವ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ನಮ್ಮ ಜಾನಪದ ಕಲೆ ಮತ್ತು ಕಲಾವಿದರ ಅಭಿವೃದ್ಧಿಯ ಕಡೆ ಗಮನ ನೀಡಲಿದೆ. ರಾಜ್ಯದ ೩೩ ಜನ ಖ್ಯಾತ ಸಾಹಿತಿ ಕಲಾವಿದರಿಗೆ ಅವರ ಜೀವನ ಪರ್ಯಂತ ೫೦೦ ರೂ.ಗಳ ಮಾಸಿಕ ವೇತನ ನೀಡಲಾಗಿದೆ.

ಸಾಧನೆ ಮತ್ತು ಯೋಜನೆ

ಮಂಗಳೂರು ಮತ್ತು ಗುಲ್ಬರ್ಗಗಳಲ್ಲಿ ಎರಡು ವಿಶ್ವವಿದ್ಯಾನಿಲಯಗಳ ಸ್ಥಾಪನೆ ೧೪೦ ಪ್ರೌಢಶಾಲೆಗಳು, ೨೯ ಜ್ಯೂನಿಯರ್ ಕಾಲೇಜುಗಳು, ೫೧ ಪ್ರಥಮ ದರ್ಜೆ ಕಾಲೇಜುಗಳು, ೧೧ ಶಿಕ್ಷಣ ಕಾಲೇಜುಗಳು, ೯ ಪಾಲಿಟೆಕ್ನಿಕ್‌ಗಳು, ೧೨ ಇಂಜಿನಿಯರಿಂಗ್ ಕಾಲೇಜುಗಳು, ೪ ಫಾರ್ಮಸಿ ಮತ್ತು ಔಷಧಿ ಕಾಲೇಜುಗಳು ಮತ್ತು ಒಂದು ಕಾನೂನು ಕಾಲೇಜಿನ ಆರಂಭಕ್ಕೆ ಮಂಜೂರಾತಿ.

ಸುಮಾರು ೧೬ ಲಕ್ಷ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಮತ್ತು ಮಧ್ಯಾಹ್ನದ ಉಪಹಾರದ ವ್ಯವಸ್ಥೆ. ಹರಿಜನರ ಸರ್ವಾಂಗೀಣ ಅಭಿವೃದ್ಧಿಗಾಗಿ ೧೯೮೦–೮೧ನೇ ಸಾಲಿಗಾಗಿ ೬೪ ಕೋಟಿ ರೂ. ಗಳ ಸಂಘಟಿತ ಯೋಜನೆಯನ್ನು ಸಿದ್ಧಗೊಳಿಸಲಾಗಿದೆ. ಗಿರಿಜನರಿಗಾಗಿಯೇ ೩.೮ ಕೋಟಿ ರೂ.ಗಳ ಉಪಯೋಜನೆಯೂ ಸಿದ್ಧವಾಗಿದೆ.

ಶಾಲಾನಂತರ ಮಕ್ಕಳು ಓದಲು ಅನುಕೂಲವಾಗುವಂತೆ ದೀಪ ಮತ್ತು ಪಿಠೋಪಕರಣಗಳನ್ನು ಒಳಗೊಂಡ ಭಜನ ಮಂದಿರಗಳ ಸ್ಥಾಪನೆ.

- ಗ್ರಾಮಾಂತರ ಸಂಪರ್ಕ ವ್ಯವಸ್ಥೆಗಾಗಿ ೧೮.೭ ಕೋಟಿ ರೂ. ಗಳ ಅವಕಾಶ.
- ೩೬ ಅನಗತ್ಯ ಮಂಡಳಿ ಮತ್ತು ಸಮಿತಿಗಳ ರದ್ದು.
- ಸಾಂದ್ರ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ೧೭೫ ತಾಲೂಕುಗಳ ಅಭಿವೃದ್ಧಿ.
- ನಿವೃತ್ತ ಸರ್ಕಾರಿ ಅಧಿಕಾರಿ ನೌಕರರ ಸೇವಾವಧಿ ವಿಸ್ತರಣೆ ಮತ್ತು ಮರು ನೇಮಕದ ರದ್ದು.
- ಬಡವರಿಗೆ ಒಂದು ಲಕ್ಷ ಜನತಾ ಗೃಹಗಳು.
- ರಾಜ್ಯೋತ್ಸವಕ್ಕೆ ಮುಂಚೆ ೨.೫ ಲಕ್ಷಕ್ಕೂ ಹೆಚ್ಚು ಕಡತಗಳು ವಿಲೇವಾರಿ ವರ್ಗಾವರ್ಗಿ ಹಾಗೂ ಮುಂಬಡ್ತಿಗಳು ವಿಚಾರದಲ್ಲಿ ಒತ್ತಾಯ ತರುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ.
- ೧೯೮೧ರ ನವೆಂಬರ ಒಂದರ ವೇಳೆಗೆ ರಾಜ್ಯದ ಪ್ರತಿಹಳ್ಳಿಗೂ ಕುಡಿಯುವ ನೀರು ಮತ್ತು ಪ್ರಾಥಮಿಕ ಶಾಲಾ ಸೌಲಭ್ಯ ಕಲ್ಪಿಸಲು ಯೋಜನೆಯು ಪೂರ್ಣಗೊಂಡಿದೆ.
- ೧೯೮೧ರ ನವೆಂಬರ ಒಂದರ ವೇಳೆಗೆ ಎಲ್ಲ ಭೂ ವಿವಾದ ಪ್ರಕರಣಗಳ ವಿಲೇವಾರಿ ನಿರ್ಧಾರ
- ೧೯೮೦ರಲ್ಲಿ ೧,೦೦೦ಕ್ಕೂ ಹೆಚ್ಚು ಹಳ್ಳಿಗಳಿಗೆ ವಿದ್ಯುತ್ ಸೌಲಭ್ಯ.
- ಹಿಂದುಳಿದ ಕುಶಲಕರ್ಮಿಗಳ ಕುಟುಂಬದ ಯುವಕರಿಗಾಗಿ ಒಂದು ಸಮಗ್ರ ಯೋಜನೆ ಸಿದ್ಧ.
- ಹೊಸ ಆರನೆಯ ಪಂಚವಾರ್ಷಿಕ ಯೋಜನೆಗಾಗಿ ೨,೪೦೦ ಕೋಟಿ ರೂ. ಗಳ ಹೂಡಿಕೆಗೆ ಅಂತಿಮ ಸ್ವರೂಪ ನೀಡಲಾಗಿದೆ.
- ಜನತೆಯ ಅಗತ್ಯಗಳನ್ನು ಪೂರೈಸಲು ಕಂಕಣಬದ್ಧವಾದ ಯುವಸರ್ಕಾರ ಕರ್ನಾಟಕ ಸರ್ಕಾರ.

ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆ

'ಕಸ್ತೂರಿ'ಯ ಅರ್ಧವಾರ್ಷಿಕ ಪರಿವಿಡಿ

ಸಪ್ಟಂಬರ್ ೧೯೮೦ ರಿಂದ ಫೆಬ್ರುವರಿ ೧೯೮೧ ರ ವರೆಗೆ

ಕ್ರಮ : ಲೇಖನದ ಹೆಸರು, ತಿಂಗಳು, ಪುಟಸಂಖ್ಯೆ

ಸ = ಸಪ್ಟಂಬರ್, ಅ = ಅಕ್ಟೋಬರ್, ನ = ನವಂಬರ್, ಡಿ = ಡಿಸೆಂಬರ್,
ಜ = ಜನೆವರಿ, ಫೆ = ಫೆಬ್ರುವರಿ,

ಕಥೆ

ಚರ್ಚೆ–ಚಿಂತನ

ಜೀವನ ಚರಿತ್ರೆ–ವ್ಯಕ್ತಿಚಿತ್ರ

ದೇಶ-ನಗರ

ನಗೆ ಮಲ್ಲಿಗೆ

ಶಬ್ದ ಭಾಂಡಾರ

ನೀತಿಕಥೆ

ಪುಸ್ತಕ ವಿಭಾಗ

ಪ್ರಾಣಿ ಜೀವನ

ರಹಸ್ಯ- ಸಾಹಸ-ಸೋಜಿಗ

ವಿಜ್ಞಾನ

ಕಸ್ತೂರಿ

ಕನ್ನಡ ಡೈಜೆಸ್ಟ್

ಸಂಪಾದಕ :

ಜಿ. ವಾಸುದೇವ

ಕಲೆ

ಕೆ. ಬಿ. ಕುಲಕರ್ಣಿ

ಮುಖಪುಟ :

ಗೊಮ್ಮಟ ದರ್ಶನ

ಚಿತ್ರ :

ಎನ್. ಪಿ. ಜವಳಿ

ಚಂದಾದರ :

ಅರ್ಧವರ್ಷ ಅಂಚೆ ಸೇರಿ ರೂ. ೧೦-೦೦

೧ ವರ್ಷ ,, ರೂ. ೧೮-೦೦

(ವಿಶೇಷ ಸಂಚಿಕೆ ಸೇರಿ)

KASTURI February 1981

ಬೆಳಕಿಂಡಿ

ಪತಿ ಹಾಸ್ಯದ ಚಟಾಕಿ ಹಾರಿಸಿದಾಗ ಪತ್ನಿ ನಕ್ಕರೆ ಅದರರ್ಥ ಆ ಚಟಾಕಿ ಅಷ್ಟು ಹಾಸ್ಯಮಯವಾಗಿತ್ತು ಎಂದಲ್ಲ-ಬದಲು ಆತನ ಹೆಂಡತಿ ಅಷ್ಟು ಜಾಣೆಯಾಗಿದ್ದಳು ಎಂದು. —ಶರದ ಸಿವ್ಹಾ

*

ಚಟ : ಸ್ವಚ್ಛಂದವಾಗಿರುವವರ ಕೈಕೋಳ. —ಅಂಬ್ರೋಸ್ ಬಿಯರ್ಸ್

*

ನಾಯಿ ಬಾಲದಿಂದಲೂ, ಮನುಷ್ಯ ಬಾಯಿಯಿಂದಲೂ ಸ್ನೇಹಿತರನ್ನು ಗಳಿಸಿಕೊಳ್ಳುತ್ತಾರೆ. ಆದರೆ ನಾಯಿ ಬಾಯಿ ತೆರೆದರೆ, ಮನುಷ್ಯ ಬಾಲ ಬಿಚ್ಚಿದರೆ ಮಾತ್ರ...... —ಅಲಿಸ್ ಗಿಬ್ಬನ್

*

'ಶಾಂತಿ' ಎಂಬುದು ನಕ್ಷೆಗಳನ್ನು ಪರಿವರ್ತಿಸುವುದರಿಂದ ಬರುವುದಿಲ್ಲ, ಮನುಷ್ಯನನ್ನು ಪರಿವರ್ತಿಸುವುದರಿಂದ ಮಾತ್ರ ಬರುತ್ತದೆ. —ಜೆ. ಎಸ್. ಗ್ರಿಫಿತ್

*

ಆತ: ನನ್ನಿಂದ ಇಷ್ಟು ಖರ್ಚು ಮಾಡೋದೇ ಸಾಧ್ಯವಿಲ್ಲ. ಅಂದ ಮೇಲೆ ಮದ್ವೆ ಆಗೋದು ಹ್ಯಾಗೆ.

ಆಕೆ: ಕಾಳಜಿ ಮಾಡಬೇಡಿ. ಆ ಜವಾಬ್ದಾರಿ ನನ್ನದು.

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ತಾರೆಗಳ ಚಿರಂತನ ಮೂಕಶ್ಲೋಕ

ಜಿ.ಟಿ. ನಾರಾಯಣರಾಯರ 'ತಾರೆಗಳ ಚಿರಂತನ ಮೂಕ ಶ್ಲೋಕ' ಪ್ರಬಂಧವನ್ನು ನನ್ನ ಮಗಳಿಗೆ ವಿವರಿಸುತ್ತಾ (ಜನವರಿ ೫ರ ರಾತ್ರಿಯ ನಿರ್ಭರ ಆಕಾಶವನ್ನು ಅವಳಿಗೆ ತೋರಿಸಿ) ಲುಬ್ಧಕ ನಕ್ಷತ್ರದ ವಿಷಯವನ್ನು ಹೇಳಿದೆ. "ತಾರಾಲೋಕದ ರಾಜ. ನಮ್ಮ ಸೂರ್ಯನನ್ನೇನಾದರೂ ಇದರ ಸ್ಥಾನದಲ್ಲಿ ಪ್ರತಿಷ್ಠಾಪಿಸಿದರೆ, ಆ ಮಂಕು ಚುಕ್ಕೆಯನ್ನು ಗುರುತಿಸುವುದೇ ಕಷ್ಟವಾದೀತು" (ಕಸ್ತೂರಿ: ಜನವರಿ ೮೧ರ ಪು. ೪೬). ತದೇಕ ಚಿತ್ತದಿಂದ ಕೇಳುತ್ತಾ, ಪ್ರಖರವಾದ ಮಹಾವ್ಯಾಧ ನಕ್ಷತ್ರ ಪುಂಜವನ್ನೂ, ಸಪ್ತರ್ಷಿ ಕೃತ್ತಿಕೆಗಳ ನಕ್ಷತ್ರ ಪುಂಜಗಳನ್ನೂ, ಲುಬ್ಧಕ, ಅಗಸ್ತ್ಯ ಮತ್ತು ಮಂಕಾಗಿ ಕಾಣುವ ಧ್ರುವ ನಕ್ಷತ್ರವನ್ನೂ ಗಮನಿಸುತ್ತಾ, ನನ್ನ ೧೧ ವರ್ಷದ ಮಗಳು; "ನಮ್ಮ ಸೂರ್ಯನ ಸ್ಥಾನದಲ್ಲಿ ಲುಬ್ಧಕ ನಕ್ಷತ್ರವನ್ನು ತಂದಿಟ್ಟರೆ ಏನಾಗುತ್ತದೆ?" ಎಂದು ಮುಗ್ಧತೆಯಿಂದ ಕೇಳಿದಳು. ಆಗ ನಮ್ಮ ಭೂಮಿಯ ಗತಿ ಏನು? ಎಂದು ಅನ್ನಿಸಿ ನನಗೆ ಉತ್ತರ ಕೊಡಲೇ ಆಗಲಿಲ್ಲ.

ಸ್ವಲ್ಪ ಸಮಯದ ನಂತರ ಅವಳೇ, "ಆ ಲುಬ್ಧಕದ ಶಾಖ ಮತ್ತು ಆಕರ್ಷಣೆಗೆ ಭೂಮಿಯೇ ಇರುವುದಿಲ್ಲ ಅಲ್ಲವೇ?" ಎಂದಳು.

ಜಿ. ಟಿ. ನಾರಾಯಣರಾಯರಿಗೂ ನಿಮಗೂ ವಂದನೆಗಳು.

ಚನ್ನಪಟ್ಟಣ —ಎಂ. ಎಸ್. ಶ್ರೀಮಾನ್

ಜನವರಿ 'ಕಸ್ತೂರಿ' ಯಲ್ಲಿ ಪ್ರಕಟವಾದ 'ತಾರೆಗಳ ಚಿಂತನ ಮೂಕ ಶ್ಲೋಕ' ನಾನು ಬಹಳ ದಿನಗಳಿಂದ ಅಪೇಕ್ಷಿಸಿದಂತಹ ಒಂದು ಸುಂದರ ಲೇಖನ.

ಇದು ನನ್ನಲ್ಲಿದ್ದಂತಹ ಕೆಲವು ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿತಲ್ಲದೆ, ನಕ್ಷತ್ರಗಳನ್ನು ವೀಕ್ಷಿಸುವುದರಲ್ಲಿ ಆಸಕ್ತಿಯನ್ನೂ ಹುಟ್ಟಿಸಿತು.

ಉಳಿದ ನಕ್ಷತ್ರಗಳ ಬಗ್ಗೆಯೂ ಇದೇ ರೀತಿ ಮಾಹಿತಿ ಕೊಡುವ ಲೇಖನವನ್ನು ನಾನು ನಿರೀಕ್ಷಿಸಲೆ? ಒಂದು ವೇಳೆ ಸಾಧ್ಯವಿಲ್ಲದಲ್ಲಿ ಯಾವುದಾದರೂ ಪುಸ್ತಕಗಳು ಪ್ರಕಟವಾಗಿದ್ದರೆ ಅದರ ಬಗ್ಗೆ ತಿಳಿಸಿ. ಇಲ್ಲದಲ್ಲಿ ಜಿ. ಟಿ. ನಾರಾಯಣರಾವ್ ಅವರ ಅಪ್ಪಣೆ ಪಡೆದು ಅವರ ವಿಳಾಸವನ್ನಾದರೂ ಪ್ರಕಟಿಸಿದಲ್ಲಿ ನಾನು ನಿಮಗೂ 'ಕಸ್ತೂರಿ'ಗೂ ತುಂಬಾ ಆಭಾರಿ.

ಇದೇ ಸಂಚಿಕೆಯ ೫೬ನೇ ಪುಟದಲ್ಲಿ ಅರ್ಪಿಸಿದ 'ಶ್ರದ್ಧಾಂಜಲಿ' ಯಾರಿಗೆಂದು ತಿಳಿಯಲಿಲ್ಲ.

ಕೆ. ಜಿ. ಎಫ್. —ಅನಂತ ಭಟ್ಟ

[ಸ್ವಾಮಿ, ನಗೆಮಲ್ಲಿಗೆಯಲ್ಲಿ ಬಂದ 'ಶ್ರದ್ಧಾಂಜಲಿ'ಯೂ ಅಂಥದೊಂದು ಮಲ್ಲಿಗೆಯೇ ಅಲ್ಲವೆ? —ಸಂ.]

ನೇಪಲ್ಸಿನ ಮೊಸಳೆ

ತಮ್ಮ ಜನವರಿ ಸಂಚಿಕೆಯ ಏಳನೇ ಪುಟದಲ್ಲಿ ಲೇಖಿಸಿದ್ದ ಲೇಖನ 'ನೇಪಲ್ಸಿನ ಮೊಸಳೆಯ ಸಮಸ್ಯೆ' (ಆರ್. ನಾರಾಯಣ ಅಯ್ಯರ್) ಇದು ಕೋ. ವಾ. ಕಾರಂತರು ಬರೆದಂತಹ 'ಬ್ರಾಹ್ಮಣರಿಗೆ ದಾರಿ' ಎಂಬ ಪುಸ್ತಕದಲ್ಲಿ ಪ್ರಕಟವಾಗಿದೆ.

ಮುಡಿಪು —ಎಂ. ಎಸ್. ಎನ್. ಬಿ.

['ಕಸ್ತೂರಿ'ಯಲ್ಲಿ ಈ ಲೇಖನ ಮೊದಲು ಪ್ರಕಟವಾದುದು ೧೯೬೫ರಲ್ಲಿ ಎಂಬುದನ್ನು ದಯವಿಟ್ಟು ಗಮನಿಸಬೇಕು. —ಸಂ.]

ಉತ್ತಮ ಸಂಚಿಕೆ

ಕಳೆದ ೨೦ ವರ್ಷಗಳಿಂದ ಕಸ್ತೂರಿಯ ಓದುಗಳು ನಾನು, ಆದರೆ ಇತ್ತೀಚಿನ ಪುಸ್ತಕ ವಿಭಾಗ ಅಷ್ಟೇನೂ ಚೆನ್ನಾಗಿರುವುದಿಲ್ಲವಲ್ಲಾ ಎಂದು ಯೋಚಿಸುತ್ತಿದ್ದೆ. ಆದರೆ 'ಸೂರ್ಯಸೇನ' ಹಾಗೂ ಈ ತಿಂಗಳಿನ 'ಕಚ' ಓದಿ ನನ್ನ ಕೊರಗು ದೂರವಾಯಿತು. ಹಾಗೆಯೇ 'ನೇಪಲ್ಸಿನ ಮೊಸಳೆಯ ಸಮಸ್ಯೆ?' 'ಒಂದು ಮುತ್ತಿನ ಕಥೆ' ಇವು ಒಂದಕ್ಕಿಂತ ಒಂದು ಚೆನ್ನಿವೆ.

ಆದರೆ ಜನವರಿ ಸಂಚಿಕೆಯ ೪೦ನೇ ಪುಟ

ದಲ್ಲಿ ಪ್ರಕಟವಾದ 'ದೇಶಪ್ರೇಮ'ದ ಬಗ್ಗೆ, ಒಂದು ಮಾತು!

ರಷ್ಯ ಅಮೇರಿಕದವರು ದೇಶಕ್ಕಾಗಿ ತ್ಯಾಗ ಮಾಡಿದರೆ ಭಾರತೀಯ ಪಾಕಿಸ್ತಾನಿಯನ್ನು ಸೆರೆಗೆಸೆದು ತನ್ನ ದೇಶಪ್ರೇಮ ತೋರಿಸುತ್ತಾನೆ ಎಂದು ಹೇಳುವ ಘಟನೆ ಭಾರತೀಯರ ಮುಖಕ್ಕೆ ಮಸಿ ಬಳಿದಂತಿದೆ. ದೇಶಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದ ಮಹನೀಯರಿಗೆ ಇದು ಅವಮಾನವಲ್ಲವೆ?

ತುಮಕೂರು —ಸುಮತಿ ಕೃಷ್ಣರಾವ್

[ಮನುಷ್ಯನ ಶ್ರೇಷ್ಠ ಗುಣವೆಂದರೆ ಆತನ ಸ್ವವಿಮರ್ಶನ ಶಕ್ತಿ, ತನ್ನನ್ನೇ ನಗೆಗೆ ಗುರಿ ಮಾಡಿಕೊಂಡು ಕನ್ನಡಿಯಲ್ಲಿ ಪ್ರತಿಬಿಂಬ ನೋಡಿಕೊಳ್ಳಬಲ್ಲ ಶಕ್ತಿ. ಇಲ್ಲಿ ಭಾರತೀಯ ಯೋಧರಿಗೆ ಅವಮಾನ ಮಾಡುವ ಉದ್ದೇಶವೇನೂ ಇಲ್ಲ. ಭಾರತೀಯ ಎಂಬ ಶಬ್ದ ತೆಗೆದು ಅದರ ಬದಲು ಬೇರೆ ಯಾವುದಾದರೂ ರಾಷ್ಟ್ರೀಯ ಎಂದು ಬರೆದಿದ್ದರೆ ಹಿತವಾಗುತ್ತಿತ್ತೆ? —ಸಂ.]

ಒಂದು ಮುತ್ತಿನ ಕಥೆ

ಜನವರಿ ಸಂಚಿಕೆಯಲ್ಲಿ ಪ್ರಕಟವಾದ 'ಒಂದು ಮುತ್ತಿನ ಕತೆ'ಯನ್ನು ಓದಿ ತುಂಬಾ ಮೆಚ್ಚಿಗೆಯಾಯಿತು. ಬಡತನವಿದ್ದರೂ ತೃಪ್ತ ಜೀವನವನ್ನು ನಡೆಸುತ್ತಿದ್ದ ಕೈನೊ- ಜುಆನಾರ ಬಾಳ ಮಂದಿರದಲ್ಲಿ ಮುತ್ತೊಂದು ವರವಾಗದೇ ಒಂದು ಶಾಪವಾಗಿ ಪರಿಣಮಿಸಿತು. ಮುತ್ತಿನ ಆಶೆಗಾಗಿ ಮುತ್ತಿನಂತಹ ಮಗುವನ್ನು ಬಲಿ ಕೊಡಬೇಕಾಗಿ ಬಂದದ್ದಂತೂ ಕರುಳನ್ನೇ ಕತ್ತರಿಸುವಂತಹ ದಾರುಣ ಪ್ರಸಂಗ. ನಿಧಿಯನ್ನು ಪಡೆಯುವುದಕ್ಕಿಂತಲೂ ಅದನ್ನು ದಕ್ಕಿಸಿಕೊಳ್ಳುವುದು ಕಷ್ಟ. ಬಂದ ಪ್ರತಿಫಲ ದಾರುಣ ಕಠೋರವಾದರೂ ಅಪ್ಪಟವಾದ ಸತ್ಯ.

ಕುಮಟಾ —ಎಸ್. ಪಿ. ಶಾನಭಾಗ

ಶ್ರೇಷ್ಠ ಕಥೆ; ಆದರೆ...

ಬೋಳುವಾರು ಮಹಮದ್ ಕುಂಞಯವರ 'ಜನ-ಗಣ-ಮನ' ಕಥೆ ತುಂಬ ವಿಚಾರಪ್ರಚೋದಕವಾಗಿದೆ. ಕಥೆಯ ತಂತ್ರ, ಶೈಲಿಗಳು ಮನಸ್ಸಿಗೆ ತಟ್ಟುತ್ತವೆ. ಹಿಂದು, ಮುಸ್ಲಿಮ್ ಮತೀಯ ತಿಕ್ಕಾಟದ ಒಂದು ಮುಖಕ್ಕೆ ಮಾತ್ರ ಸ್ವಲ್ಪ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕು ಕಥೆ ಸೀಮಿತ ಚೌಕಟ್ಟಿಗೆ ಒಳಪಟ್ಟಿತೇನೋ ಎನ್ನಿಸುತ್ತದೆ.

ಮತ ಸಾರ್ವಜನಿಕವಾಗದೆ ವ್ಯಕ್ತಿಗತವಾಗಬೇಕು. ಯಾವಾಗ ಮಂದಿರಗಳ ರೂಪದಲ್ಲಿ ಧರ್ಮ ಪ್ರತ್ಯೇಕಗೊಳ್ಳುತ್ತದೋ ಆಗ ಅಲ್ಲಿ ಹೊಲಸು, ರಾಜಕೀಯ ಆರಂಭವಾಗಿ ಬಿಡುತ್ತದೆ. ಹಿಂದು, ಮುಸ್ಲಿಮ್, ಕ್ರೈಸ್ತ ಇತ್ಯಾದಿ ಯಾವ ಪಂಗಡಗಳಿಗೂ ಸೇರದಂತೆ, ಆ ಮತಗಳಲ್ಲಿ ಆಚರಣೆಯಲ್ಲಿರುವ ಅನೀತಿ, ಅನಾಚಾರಗಳನ್ನು [ಕುರಿತು ವೈಚಾರಿಕ ಬುದ್ಧಿಯನ್ನು ಬೆಳೆಸುವಂಥ ಶಿಕ್ಷಣವನ್ನು ಶಾಲೆ, ಕಾಲೇಜುಗಳಲ್ಲಿ (ಉಪಾಧ್ಯಾಯರಿಗೂ ಸೇರಿದಂತೆ) ಕೊಡಬೇಕು.

ಕೆ. ಎಸ್. ನಿಸಾರ್ ಅಹಮದ್‌ರವರದ್ದೂ ಮಾರ್ಮಿಕ. ವಿಚಾರಗಳ ಗೊಂದಲದಿಂದ ಕೂಡಿದ ಸಮಾಜ ತಲೆಗಳಿಗೆ ಪೆಟ್ಟು ಕೊಟ್ಟು ಎಚ್ಚರಿಸುವ ಉತ್ತಮ ಕವನ.

ಈ ಕಥೆ, ಕವನಗಳನ್ನು ಪ್ರಕಟಿಸಿದ 'ಕಸ್ತೂರಿ'ಗೆ ಧನ್ಯವಾದಗಳು.

ಬೆಂಗಳೂರು —ಅನಲಾ

ವಾಮನ ಬೇಂದ್ರೆ

ಜನವರಿ 'ಕಸ್ತೂರಿ'ಯಲ್ಲಿ ವಾಮನ ಬೇಂದ್ರೆಯವರ ಕುರಿತು ಎನ್ಕೆಯವರು ಬರೆದ ಲೇಖನ ಮನಸ್ಸನ್ನು ಅರಳಿಸಿತು.

ಗೋಕರ್ಣ —ನರೇಂದ್ರ ಜಿ. ಉಪಾಧ್ಯ



ಕಸ್ತೂರಿ

ವರ್ಷ : ೨೫ ಸಂಚಿಕೆ : ೨

ಫೆಬ್ರುವರಿ ೧೯೮೧

ಒಳಗಿನ ಅಳತೆ

ವಿನೀತ ರಾಮಚಂದ್ರ

ಒಬ್ಬ ಪತಿವ್ರತೆಯ ಮನೆಯ ಎದುರುಗಡೆಯಲ್ಲಿಯೇ ವೇಶ್ಯೆಯೊಬ್ಬಳು ಮನೆ ಮಾಡಿಕೊಂಡಿದ್ದಳು. ವೇಶ್ಯೆಯ ಜಾರಕರ್ಮ 'ವ್ಯವಹಾರಗಳನ್ನೆಲ್ಲಾ ಪತಿವ್ರತೆ ಸಮಯ ಸಾಧಿಸಿದಾಗಲೆಲ್ಲಾ ಆಕೆಗೆ ಕಾಣಿಸದಂತೆ ಮರೆಯಲ್ಲಿ ನಿಂತುಕೊಂಡು ನೋಡಿಯೇ ನೋಡುತ್ತಿದ್ದಳು; ಮತ್ತು ಕಂಡ ಕಂಡ ಜನರ ಮುಂದೆ ವೇಶ್ಯೆಯ ದುಷ್ಕೃತಿಗಳನ್ನು ಹೊಟ್ಟೆ ತುಂಬ ಹಳಿದು ಮಾತನಾಡುತ್ತಿದ್ದಳು.

ಪತಿವ್ರತೆಯ ಪತಿ ಗುಣಹೀನನಿದ್ದ, ರೋಗಿಯಿದ್ದ, ನಿರ್ಧನನಿದ್ದ; 'ಆದರೂ ಅದೆಂತಹ ಏಕಾಗ್ರಭಾವದಿಂದ ಪತಿವ್ರತೆ ಪತಿಸೇವೆ ಮಾಡುತ್ತಿದ್ದಾಳಲ್ಲ!' ಎಂದುಕೊಳ್ಳುತ್ತ ಆ ವೇಶ್ಯೆ ಗದ್ಗದಕಂಠದಿಂದ ಬಂದು ಹೋದವರ ಮುಂದೆ ಗರತಿಯ ಸ್ತುತಿಯನ್ನು ಎದೆದುಂಬಿ ಮಾಡುತ್ತಿದ್ದಳು.

ಕೆಲವು ದಿನಗಳ ತರುವಾಯ ಗರತಿಯು ಮೃತ್ಯುವಾಯಿತು. ಅವಳ ಜೀವಾತ್ಮಕ್ಕೆ ಅಲ್ಪಾವಧಿಯ ನರಕವಾಸ ಸಿಕ್ಕಿತು. ವಿಧಿವಶಾತ್ ಮರುದಿನವೇ ವೇಶ್ಯೆಯೂ ಮೃತಿಯನ್ನೈದಿದಳು; ಅವಳ ಜೀವಾತ್ಮವು ಸ್ವರ್ಗವನ್ನು ತಲುಪಿತು.

ಪತಿವ್ರತೆಗೆ ಕೆಳತರಗತಿಯ ಸ್ಥಿತಿ ಸಿಕ್ಕಿತು. ವೇಶ್ಯೆಗೆ ಮೇಲ್ತರಗತಿಯ ಸ್ವರ್ಗಕ್ಕೆ ಹೋಗಲು ಆಜ್ಞೆಯಾಯಿತು! ಈ ನ್ಯಾಯದಾನ ತೀರ ಅನುಚಿತವೆನಿಸಿ ಪತಿವ್ರತೆ ಯಮಧರ್ಮನನ್ನು ಕೇಳಿದಳು: "ಭಗವಾನ್, ಪಾಪಕರ್ಮದಲ್ಲಿ ಎಡೆಬಿಡದೆ ತೊಡಗಿದ್ದರೂ ವೇಶ್ಯೆಗೇಕೆ ನನಗಿಂತ ಹಿರಿದಾದ ಸದ್ಗತಿ?"

ಗಂಭೀರವದನನಾಗಿ ಯಮಧರ್ಮನೆಂದ: "ನಿನ್ನ ಮನಸ್ಸು ವೇಶ್ಯೆಯ ವೈಷಯಿಕ ವ್ಯವಹಾರಗಳನ್ನೇ ಆಸಕ್ತಿಯಿಂದ ನಿರೀಕ್ಷಿಸುತ್ತಿತ್ತು; ಮತ್ತು ಅವುಗಳಲ್ಲಿ ಸೂಕ್ಷ್ಮವಾಗಿ ಅಭಿರುಚಿಯನ್ನು ತಾಳಿತ್ತು. ಅವಳೆಷ್ಟು ಕನಿಷ್ಠಳು, ನಾನೆಷ್ಟು ಶ್ರೇಷ್ಠಳು ಎಂಬ ಅಹಂಕಾರದಿಂದ ನಿನ್ನೊಡಲು ತುಂಬಿತ್ತು. ಉಪಾಯವಿಲ್ಲದೆ ಅವಳು ವೇಶ್ಯಾವೃತ್ತಿಗಿಳಿದವಳೆಂಬುದನ್ನು ನೀನು ತಿಳಿದುಕೊಳ್ಳಲಿಲ್ಲ. ಅವಳ ಬಗೆಗೆ ಹೀನಭಾವನೆಯಿಂದ ದ್ವೇಷದಿಂದ ನಿನ್ನ ಹೃದಯ ಕಲಂಕಿತವಾಗಿತ್ತು. ನಿನ್ನ ಶಾರೀರಿಕ ಪಾತಿವ್ರತ್ಯದಿಂದ ನಿನಗೆಷ್ಟು ಪುಣ್ಯ ಸಂಚಯವಾಯಿತೋ ಅದಕ್ಕೆ ತಕ್ಕಂತೆ ಕೆಲ ಸಮಯ ನೀನು ನರಕದಲ್ಲಿ ಕಳೆಯಬೇಕಾಗುವುದು. ನೀನು ಪುಣ್ಯವನ್ನೂ ಮಾಡಿದ್ದೀ. ಆದ್ದರಿಂದ ಮುಂದೆ ನಿನಗೆ ತಕ್ಕಂತೆ ಅವರೆ ವೇಶ್ಯೆಗಿಂತ ಕೆಳತರಗತಿಯ ಸ್ವರ್ಗವಾಸವೂ ಲಭ್ಯವಾಗುವುದು." ✡

ರಾಂಕಾ ಬಾಂಕಾ ಪತಿಪತ್ನಿಯರು. ಇಬ್ಬರೂ ಮಹಾಭಕ್ತರು. ಪ್ರಭುವಿನ ಮೇಲೆ ಪೂರ್ತಿ ವಿಶ್ವಾಸವಿರಿಸಿದವರು.

ಒಂದು ದಿನ ಅವರಿಬ್ಬರೂ ಸೌದೆ ತರಲು ಕಾಡಿಗೆ ಹೋದರು. ಗಂಡ ಮುಂದೆ ಮುಂದೆ ಹೋಗುತ್ತಿದ್ದ, ಹೆಂಡತಿ ಹಿಂದೆ ಹಿಂದೆ ಬರುತ್ತಿದ್ದಳು. ಗಂಡ ಮುಂದೆ ಹೋಗುತ್ತಿರುವಾಗ ಯಾವುದೋ ಒಂದು ವಸ್ತುವನ್ನು ಎಡವಿದ. ನೋಡಿದ, ಬಂಗಾರದ ಮೊಹರುಗಳಿಂದ ತುಂಬಿದ ಚೀಲ ಬಿದ್ದಿದೆ. ಲಗುಬಗೆಯಿಂದ ಮಣ್ಣು ತಂದು ಅದನ್ನು ಮುಚ್ಚಿಬಿಡತೊಡಗಿದ. ಅಷ್ಟರಲ್ಲಿ ಬಾಂಕಾ ಬಂದವಳು "ಏನು ನಡೆಯಿಸಿದ್ದೀರಿ?" ಎಂದು ಕೇಳಿದಳು. ರಾಂಕಾ ಮೊದಮೊದಲು ಏನೂ ಮಾತನಾಡಲಿಲ್ಲ. ಬಹಳ ಒತ್ತಾಯಪಡಿಸಿದ ಮೇಲೆ, "ಬಂಗಾರದ ಮೊಹರುಗಳಿದ್ದವು. ಇದರ ಮೇಲೆ ನಿನ್ನ ಮನಸ್ಸು ಹೋಗಬಾರದೆನಿಸಿತು. ಅದ್ದರಿಂದ ಮಣ್ಣು ತಂದು ಮುಚ್ಚತೊಡಗಿದ್ದೆ." ಎಂದ.

ಬಾಂಕಾ ಗಹಗಹಿಸಿ ನಗತೊಡಗಿದಳು. "ವಾಃ! ಮಣ್ಣ ಮೇಲೆ ಮಣ್ಣು ಹಾಕುವುದರಿಂದ ಏನು ಲಾಭ? ಹೊನ್ನಿನಲ್ಲಿಯೂ ಮಣ್ಣಿನಲ್ಲಿಯೂ ಏನು ಭೇದ ಅಂತ ಮಣ್ಣು ತಂದು ಮಣ್ಣ ಮೇಲೆ ಹಾಕುತ್ತಿರುವಿರಿ?" ಎಂದಳು. ✡

ಇಬ್ಬರಲ್ಲೂ ತಮ್ಮ ತಮ್ಮ ಗಂಡಂದಿರ ಗುಣವಿಶೇಷಗಳ ಬಗ್ಗೆ ಚರ್ಚೆ ನಡೆದಿತ್ತು.

"ನೋಡೆ, ನಮ್ಮೆಜಮಾನ್ರಿಗೆ ಕಿಟಕಿಯಿಂದ ಬಿಸಿಲು ತೂರಿ ಮುಖದ ಮೇಲೆ ಬಿದ್ದಾಗ್ಲೇ ಎಚ್ಚರಾಗೋದು."

"ಹೌದಾ? ಪೂರ್ವದ ಗೋಡೆಗಿರೋ ಕಿಟಕಿ ಎತ್ತರದಲ್ಲಿದೆಯಾ?"

"ಇಲ್ಲ ಕಣೆ, ಕಿಟಕಿ ಪಶ್ಚಿಮದ ಗೋಡೆಗಿದೆ."

ವೀತರಾಗ ವೈಭವ



ಪಾರ್ಶ್ವ ನೋಟ


ಅನುಪಮರೂಪನೆ ಸ್ಮರನುದಗ್ರನೇ
ನಿರ್ಜಿತ ಚಕ್ರಿ ಮತ್ತುದಾ
ರನೆ ನೆರೆಗೆಲ್ದು ಮಿತ್ತನಖಿಲೋರ್ವಿಯು
ನತ್ಯಭಿಮಾನಿಯೇ ತಪಃ
ಸ್ಥನುಮೆರಡಂಘ್ರಿಯಿತ್ತಳೆಯೊಳಿರ್ದ
ಮುದೆಂಬನನೂನಬೋಧನೆ
ವಿನಿಹತಕರ್ಮ ಬಂಧನೆನೆ ಬಾಹುಬಲೀಶ
ನಿದೇನುದಾತ್ತನೋ

ಜೈನರಿಗೆ ದಕ್ಷಿಣಕಾಶಿ ಎನಿಸಿರುವ ಶ್ರವಣ ಬೆಳ್ಗೊಳದ ಆ ಮಹಾಮೂರ್ತಿ, ವೈರಾಗ್ಯನಿಧಿ, ಪ್ರತಿಮಾಯೋಗಿ ಬಾಹುಬಲಿಯ ವೀತರಾಗ ವೈಭವವನ್ನು ಬೊಪ್ಪಣ ಕವಿ ಮೇಲಿನಂತೆ ಹಾಡಿದ್ದಾನೆ.

ಈ ಮಹಾಕಾರನ ಸ್ಥಾಪನೆಯಾದದ್ದು ಈ ತಿಂಗಳಿಗೆ ಸರಿಯಾಗಿ ಸಾವಿರ ವರ್ಷದ ಹಿಂದೆ. ಆದಿನಿಂದಲೂ ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ಈ ಮಹಾಮಸ್ತಕನಿಗೆ ಅಭಿಷೇಕ. ಮಹಾಮುಹೂರ್ತದಲ್ಲಿ ನಡೆಯುವ ಈ ಮಹಾಮಸ್ತಕಾಭಿಷೇಕ ಒಂದು ಪರಂಪರೆಯಾಗಿ ಬೆಳೆದುಕೊಂಡೇ ಬಂದಿದೆ. ೧೩೯೮ರ ಹೊತ್ತಿಗೆ ಏಳು ಸಾರೆ ನಂತರ ೧೫೦೦ರಲ್ಲಿ, ೧೬೧೨ರಲ್ಲಿ, ೧೬೭೭ರಲ್ಲಿ, ೧೮೨೫ರಲ್ಲಿ ನಡೆದ ಮಹಾಮಸ್ತಕಾಭಿಷೇಕಗಳ ಉಲ್ಲೇಖ ಸಿಕ್ಕುತ್ತದೆ. ೧೮೨೭. ೧೮೭೧, ೧೯೦೯ ಮತ್ತು ೧೯೨೫ರ ನಂತರ ಸರಿಯಾಗಿ ಈ ಕಾರ್ಯ ನಡೆದುಕೊಂಡು ಬಂತು. ಲೆಕ್ಕದ ಪ್ರಕಾರ ಕಳೆದ ವರ್ಷವೇ ನಡೆಯಬೇಕಿತ್ತು. ಈ ತಿಂಗಳು ಸಾವಿರ ವರ್ಷ ಪೂರ್ತಿಯಾ



ಎದುರಿನಿಂದ ಭವ್ಯಾಕಾರದ ದಿವ್ಯ ನೋಟ



ಹಿಂದಿನಿಂದ

ಗುವ ಸಂದರ್ಭವಾದ್ದರಿಂದ ಎರಡೂ ಮಹಾಕಾರ್ಯಗಳು ಒಮ್ಮೆಲೇ ನಡೆಯುತ್ತಿವೆ. ದೇಶಾದ್ಯಂತದ ಜೈನರಿಗೆ ಈಗ ಪರ್ವಕಾಲ.

ಬಾಹುಬಲೀಶ್ವರನಿಗೆ ಗೊಮ್ಮಟೇಶ್ವರ ಎಂಬ ಹೆಸರು ಸರ್ವವಿದಿತ. ದೋರ್ಬಲಿ, ಭುಜಬಲಿ, ಕುಕ್ಕುಟೇಶ್ವರ ಇವು ಪರ್ಯಾಯ ನಾಮಗಳು. ಗೊಮ್ಮಟ ಎಂದರೆ ಚೆಲುವ, ಮನ್ಮಥ, ಸುಂದರ ಎಂದರ್ಥ. ೫೭ ಅಡಿ ಎತ್ತರದ ಈ ಮಹಾಮೂರ್ತಿಯನ್ನು ಚಾಮುಂಡರಾಯನೆಂಬಾತ ಕೆತ್ತಿಸಿದನಂತೆ. ಇಂಥ ಬೃಹತ್ ಏಕಶಿಲಾವಿಗ್ರಹ ಅಪರೂಪ.

೫೨೫ ಬಿಲ್ಲಿನೆತ್ತರದ ತದ್ರೂಪ ಮೂರ್ತಿಯೊಂದನ್ನು ಅಲ್ಲಿ ಭರತೇಶ ಸ್ಥಾಪಿಸಿದನೆಂಬ ಆಖ್ಯಾಯಿಕೆಯೂ ಇದೆ.

ಬಾದಾಮಿಯಲ್ಲಿ ಗೊಮ್ಮಟನ ಹಳೆಯ ವಿಗ್ರಹವಿದೆ. ಕಾರ್ಕಳದಲ್ಲಿ ೪೨ ಅಡಿ, ವೇಣೂರಿನಲ್ಲಿ ೩೫ ಅಡಿ, ಧರ್ಮಸ್ಥಳದಲ್ಲಿ ೪೮ ಅಡಿ ಎತ್ತರದ ಗೊಮ್ಮಟೇಶ್ವರನ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಶ್ರವಣಗಿರಿಯಲ್ಲಿ ಅಲ್ಲದೆ ಮದ್ದೂರು ಬಳಿಯ ಬಸ್ತಿತಿಪ್ಪೂರಲ್ಲಿ ಕೂಡ ಒಂದು ಗೊಮ್ಮಟ ಪ್ರತಿಮೆ ಇದೆ. ಕೃಷ್ಣರಾಜನಗರದ ಬಳಿಯಿರುವ ಬಸ್ತಿಹಳ್ಳಿಯ ೨೦ ಅಡಿ ಎತ್ತರದ ಗೊಮ್ಮಟ ವಿಗ್ರಹ ನೋಡಲು ಸುಂದರವಾಗಿದೆ.

ಸೌಂದರ್ಯ, ಶಿಲ್ಪಸಾಹಸ, ಭವ್ಯತೆ, ಪಾವಿತ್ರ್ಯ ಮತ್ತು ವೀತರಾಗತೆಯನ್ನು ಹೊಮ್ಮುವ ಈ ವಿಗ್ರಹಗಳು ನಮ್ಮವರ ಕಲಾಚಾತುರ್ಯವನ್ನು ಜಗತ್ತಿಗೇ ಸಾರುವಂಥವು. ✡

ವಿಚಾರ ಲಹರಿ

- ನೀನು ಕರ್ಮಕ್ಕೆ ಅಂಜುವೆಯಾದರೆ ಅಂಜಿಕೆಯೇ ನಿನ್ನ ಕರ್ಮವಾಗಿ ನಿನ್ನನ್ನು ನಾಶ ಮಾಡುತ್ತದೆ.
- ಧರ್ಮ ರಕ್ಷಣೆಗಾಗಿ ನೀನು ಹೋರಾಡುವೆಯಾದರೆ ಮೊದಲು ನಿನ್ನ ಶೀಲ ಸಂರಕ್ಷಣೆ ಮಾಡಿಕೋ.
- ನಮ್ಮನ್ನು ನಾವು ಪ್ರಶ್ನಿಸಿಕೊಂಡಾಗ ಜಗತ್ತೇ ನಮಗೆ ಉತ್ತರ ಕೊಡುತ್ತದೆ.
- ಅರಿತು ನಡೆಯುವುದಕ್ಕಿಂತ ಅರಿಯದೇ ನಡೆಯುವುದರಿಂದ ನಮ್ಮ ಕಷ್ಟಗಳು ಇಲ್ಲವಾಗುತ್ತವೆ.
- ಜ್ಞಾನವೆಂಬ ಮೋಕ್ಷಕ್ಕಿಂತ ಅಜ್ಞಾನವೆಂಬ ಬಂಧನವೇ ಶ್ರೇಯಸ್ಕರ.
- ರೋಗಕ್ಕೆ ಔಷಧಿ ತಾರಕ. ರೋಗಿಗೆ ಚಿಕಿತ್ಸೆ ತಾರಕ. ಔಷಧಿ, ಚಿಕಿತ್ಸೆಬಲ್ಲ ಆರೋಗ್ಯಕ್ಕೆ ತಾರಕ. ಈ ಮೂರರಲ್ಲಿ ಯಾವುದೊಂದು ಕಳಂಕಿತವಾದರೂ ಅದು ಆಯುಷ್ಯಕ್ಕೇ ಮಾರಕ.
- ಚೇತನವು ಅವಿನಾಶಿ. ಚೇತನದಿಂದ ಜೀವವು ಸ್ಫುಟಗೊಳ್ಳುತ್ತದೆ.
- ಒಮ್ಮೆ ನಾವು ಬೆಳಕು ಕಂಡೆವೆಂದರೆ ಒಳ್ಳೆಯದು ಕೆಟ್ಟದ್ದು ಎರಡೂ ಪ್ರಾರಂಭವಾಗುತ್ತವೆ.

— ಎಸ್ಸೆಲ್ಕೆ.

ಅವಳಿಗೆ ಭವಿಷ್ಯ ದರ್ಶನ ಆಗಿತ್ತೆ?

ಎನ್. ಎಸ್. ಗದಗಕರ

ಹತ್ತೊಂಬತ್ತನೆಯ ಶತಮಾನದಲ್ಲಿ ಏಶಿಯಾ. ಯೂರೋಪ್, ಅಮೇರಿಕ ಹಾಗೂ ಆಫ್ರಿಕಗಳಲ್ಲಿ ಅಸಂಖ್ಯಾತ ಯುದ್ಧಗಳು ಜರುಗಿದವು. ಇವೆಲ್ಲವುಗಳಲ್ಲಿ ನೆಪೋಲಿಯನ್ನನು ನಡೆಸಿದ ಯುದ್ಧಗಳನ್ನು ಬಿಟ್ಟರೆ, ಅತ್ಯಂತ ಪ್ರಸಿದ್ಧ ಎಂದರೆ. ಭಾರತದ ಸಿಪಾಯಿ ಬಂಡಾಯ ಎನ್ನಬೇಕು. ಆ ಕಾಲಕ್ಕೆ ಸತ್ತವರ ಸಂಖ್ಯೆಯು ಲೆಕ್ಕಕ್ಕೆ ಸಿಕ್ಕದಿದ್ದರೂ. ಸುಮಾರು ಹತ್ತು ಲಕ್ಷ ಜನರು ಸತ್ತಿರಬೇಕು.

ಸಿಪಾಯಿ ಯುದ್ಧವನ್ನು ಬಂಡಾಯ ಎಂದು ಕರೆಯುವದು ತಪ್ಪು. ಯುದ್ಧಕ್ಕಿಂತಲೂ ಅದು ಹೆಚ್ಚಿನದಿದ್ದಿತು. ಆಗ ಉತ್ತರ ಭಾರತದ ವಿಸ್ತಾರ ಪ್ರದೇಶದಲ್ಲಿ ಆದ ಹಾಹಾಕಾರ ಅಷ್ಟಿಷ್ಟಲ್ಲ! ದುರ್ದೈವದಿಂದ ಅದಕ್ಕೆ ನೈಜ ರಾಷ್ಟ್ರೀಯ ಸ್ವರೂಪ ಉಂಟಾಗಲಿಲ್ಲ. ಹಾಗೆ ಆಗಿದ್ದರೆ ಭಾರತಾದ್ಯಂತ ಬ್ರಿಟಿಶರ ಆಡಳಿತ ಹರಡುತ್ತಿರಲಿಲ್ಲ !

ಅದೇನೇ ಇದ್ದರೂ, ಬ್ರಿಟಿಶ್ ಈಸ್ಟ್ ಇಂಡಿಯಾ ಕಂಪನಿಗೆ ಈ ಭಾರತೀಯ ಬಂಡಾಯವೊಂದು ವಿಸ್ಮಯ ಘಟನೆ ಎಂದೇ ಅನಿಸಿತು. ೧೮೫೭ನೇ ಮೇ ೧೦ನೆಯ ದಿನಾಂಕದಂದು ಮೀರತದ ಸಿಪಾಯಿ ಬಂಡೇಳಲು ವಿಲಕ್ಷಣ ತೊಡಕು ಉಂಟಾಯಿತು. ಮೊದಲಿನಿಂದಲೂ ಬ್ರಿಟಿಶರಿಗೆ ಮುನ್ನೆಚ್ಚರಿಕೆ ನೀಡಲಾಗಿದ್ದರೂ ಅವರು ಯುದ್ಧಕ್ಕೆ ಸನ್ನದ್ಧರಿರಲಿಲ್ಲ. ಬ್ರಿಟಿಶ್ ಅಧಿಕಾರಿಯೊಬ್ಬನ ಮೇಲೆ ಮಂಗಲ ಪಾಂಡೆ ಗುಂಡು ಹಾರಿಸಿದ. ಮಾರ್ಚ್ ೨೯ರಂದು ಅವನನ್ನು ದಿನಾಂಕದಂದು ಅವನಿಗೆ ಗಲ್ಲಾಯಿತು. ಆಗಲೂ ಬ್ರಿಟಿಶರಿಗೆ ಮುಂದೆ ಸಂಭವಿಸಲಿರುವ ಅನರ್ಥದ. ಕಲ್ಪನೆ ಇರಲಿಲ್ಲ!

ವಿಚಿತ್ರ ಎಂದರೆ, ಸಿಪಾಯಿಗಳು ಕೂಡ ಅವರ ಬಗೆಗೆ ಸುನಿಶ್ಚಿತವಾಗಿ ಯೋಚಿಸಿರಲಿಲ್ಲ. ಬಂಡಾಯದ ಖಚಿತ ಕಾಲ ತಿಳಿದಿರಲಿಲ್ಲ. ಸಂಭವಿಸಿದಾಗಲೆ ಗೊತ್ತು! ಈಸ್ಟ್ ಇಂಡಿಯಾ ಬಂಗಾಲ ಸೇನೆಯ ಹಲವು ವಿಭಾಗಗಳು ಬ್ರಿಟಿಶ್ ಸ್ವಾಮಿನಿಷ್ಠೆಯನ್ನು ಒಪ್ಪಿಕೊಳ್ಳುವಂತಾಗಿದ್ದವು. ಆದರೆ ಮೀರತ್ ಸಿಪಾಯಿಗಳ ಅನಿರೀಕ್ಷಿತ ಬಂಡಿನಿಂದ ಅವು ಪೇಚಿಗೆ ಬಿದ್ದವು.

ಹೀಗೆ ಸಿಪಾಯಿ ಯುದ್ಧವು ಭಾರತೀಯರಂತೆ ಆಂಗ್ಲರಿಗೂ ಆಘಾತಕರವಾಗಿಯೇ ಪರಿಣಮಿಸಿತು. ಅದು ಸಿಡಿಲಿನಂತೆ ಎರಗಿತು! ಆದರೆ ಭಾರತದಲ್ಲಿ ನೆಲೆಸಿದ ಒಬ್ಬ ಆಂಗ್ಲ ಮಹಿಳೆಗೆ ಮಾತ್ರ ಈ ಬಂಡಾಯ ಅಚ್ಚರಿಯದೆನಿಸಲಿಲ್ಲ. ಆಕೆಗೆ ಇದು ಅನೇಕ ಸಲ ಹಿಂದೆಯೇ ದುಃಸ್ವಪ್ನವಾಗಿ ಪರಿಣಮಿಸಿತ್ತು.

ಆ ಮಹಿಳೆಯ ಹೆಸರು ಆ್ಯನಾ ಲೆಸ್ಟೈಟ್. ಬಂಗಾಲ ಸೇನೆಯ ೨೪ನೆಯ ಕಾಲ್ದಳದ ಡಾಕ್ಟರ್ ಕ್ಯಾಪ್ಟನ್ ರಿಚರ್ಡ್ ಲೆಸ್ಟೈಟರ ಹೆಂಡತಿ. ಬಂಗಾಲದ ಬಗೆಗಿನ ಆಕೆಯ ಸ್ಮೃತಿಗಳು ಸಮಕಾಲೀನ ಗ್ರಂಥಗಳಲ್ಲಿ ಉಪಲಬ್ಧವಿರುವವು. ಇಪ್ಪತ್ತು ವರ್ಷಗಳ ಹಿಂದೆಯೇ ಕನಸು ಕಂಡ ಆ ಭಯೋತ್ಪಾದಕ ಬಿರುಗಾಳಿಯಲ್ಲಿ ಗಂಡ ಹೆಂಡರಿರ್ವರೂ ಭಸ್ಮವಾದರು. ಆಧುನಿಕ ಇತಿಹಾಸದ ಪುಟಗಳಲ್ಲಿ ಇದೊಂದು ರಕ್ತರಂಜಿತ ಸನ್ನಿವೇಶ.

ಆ್ಯನಾ ಲೈಸೆಟಳು ಬಂಡಾಯಕ್ಕೆ ಪೂರ್ವದಲ್ಲಿ. ಕಾಲು ಶತಮಾನದ ಹಿಂದೆಯೇ ಇಂಗ್ಲಂಡಿನಲ್ಲಿ ಜನ್ಮ ತಳೆದಿದ್ದಳು. ಭಾರತಕ್ಕೂ ಆಕೆಗೂ ಸಂಬಂಧ ಬಾರದಂತಹ ಪ್ರಶಾಂತ ಬಾಲ್ಯದಲ್ಲಿದ್ದಳಾಕೆ. ೧೮೩೭ರಲ್ಲಿ ಆ್ಯನಾ ಐದು ವರ್ಷದವಳಿರುವಾಗ ವಿಕ್ಟೋರಿಯಾ ಇಂಗ್ಲಂಡಿನ ಮಹಾರಾಣಿಯಾದಳು. ಆ ವರ್ಷದಿಂದಲೆ ಆ್ಯನಾಳಿಗೆ ದುಃಸ್ವಪ್ನಗಳು ಬೀಳಲಾರಂಭಿಸಿದವು.

ಹೀಗೆಯೇ ಆ್ಯನಾಳಿಗೆ ತಾರುಣ್ಯಾವಸ್ಥೆ ಪ್ರಾಪ್ತವಾಯ್ತು. ಅಪರಿಚಿತ ದೂರದ ಪ್ರಾರ್ಥನಾ ಮಂದಿರದಲ್ಲಿ ಆರಾಧನೆ ನಡೆದ ಪ್ರಸಂಗ

ನೆನಪಿಗೆ ಬರುತ್ತಿತ್ತು. ವಿಶಾಲ ಕಿಟಕಿಗಳೊಳಗಿಂದ ಸ್ವರ್ಣವರ್ಣ ಸೂರ್ಯ ರಶ್ಮಿಗಳು ವಿಪುಲವಾಗಿ ಹರಡಿದ್ದವು. ಅದು ಉಷ್ಣವಲಯ ಪ್ರದೇಶ. ಕಾರ್ಯಕ್ರಮ ಇನ್ನೂ ನಡೆದಿರುವಾಗಲೆ ಒಮ್ಮಿಂದೊಮ್ಮೆಲೆ ಭೀಕರ ಕೋಲಾಹಲ. ಗಲಭೆ ನಡೆದು ಅಶಾಂತಿ ತಲೆದೋರಿತು.

ಆ ಕ್ಷಣಕ್ಕೆ ಆ್ಯನಾ ಕನಸಿನಲ್ಲಿ ಚೀರುತ್ತ ಎದ್ದಳು. ಮೈ ಥರಥರ ನಡುಗುತ್ತಿತ್ತು. ಶಸ್ತ್ರಸಜ್ಜಿತ ಪಡೆ ನುಗ್ಗುತ್ತಿದ್ದಂತೆ ಪೂಜೆಗೆ ವ್ಯತ್ಯಯವಾಯ್ತು. ಖಡ್ಗ ಝಳಪಿಸುತ್ತ ಬಂಡಾಯಗಾರರು ಬಂದರು. ಕ್ಷಣಾರ್ಧದಲ್ಲಿ ರಕ್ತ ಮಡುವುಗಟ್ಟಿತು. ಜನರ ಚೀತ್ಕಾರದೊಡನೆ ನೋಡುವಾಗಲೆ ಜೀವರ ಧಾರೆಯತ್ತ ಆಕೆ ಸ್ತಂಭಿತಳಾದಳು.

೧೮೫೫ರಲ್ಲಿ ಆ್ಯನಾ ಭಾರತದಿಂದ ಇಂಗ್ಲೆಂಡಿಗೆ ಮರಳಿದ ತರುಣ ಸೈನ್ಯದ ಸರ್ಜನನನ್ನು ಮೋಹಿಸಿದಳು. ಅವನ ಹೆಸರು ರಿಚರ್ಡ್ ಲಿಸ್ಟೈಟ್. ಬಂಗಾಳದ ಕಾಲ್ದಳ ದಂಡಿನ ಮುಖ್ಯಾಧಿಕಾರಿಯಾಗಿದ್ದನು. ಶೀಘ್ರದಲ್ಲಿಯೇ ಅವರ ವಿವಾಹ ಜರುಗಿತು. ತರುಣ ಪ್ರೇಮಿಗಳು ಮಧುಚಂದ್ರಕ್ಕೆ ಭಾರತಕ್ಕೆ ಬಂದರು. ಆ್ಯನಾ ಹಾಗೂ ಅವಳ ತಾಯಿಯ ಮನೋರಂಗದಲ್ಲಿ ಎಲ್ಲಿಯೋ ಮುಂದಿನ ವಿಪತ್ತಿನ ಸುಳಿವು ಇದ್ದಿತು. ದುಃಖಸ್ವಪ್ನವನ್ನು ಕಡೆಗಣಿಸುವಂತಿರಲಿಲ್ಲ!

ಎರಡು ತಿಂಗಳಿನ ಜಲಪ್ರಯಾಣದ ತರುವಾಯ ದಂಪತಿಗಳು ೧೮೫೫ರಲ್ಲಿ ಕಲ್ಕತ್ತೆಗೆ ಬಂದಿಳಿದರು. ಇಲ್ಲಿಯ ಶುಭ್ರ ಪ್ರಕಾಶ ಕಾಣುತ್ತಲೆ ಆ್ಯನಾಳಿಗೆ ತನ್ನ ಕನಸಿನ ಝಳುಕು ಹಾಯ್ದಿತು. ಕಲಕತ್ತೆಯ ಸುತ್ತಮುತ್ತ ಸಂಚರಿಸಿದಾಗಲೆಲ್ಲ ಆಕೆಗೆ ಕನಸಿನ ಪ್ರಾರ್ಥನಾ ಮಂದಿರದ ನೆನಪಾಗುತ್ತಿತ್ತು.

೧೮೫೭ನೇ ಇಸ್ವಿಯ ಆರಂಭದಲ್ಲಿ ಲಿಸ್ಟೈಟ್ ದಂಪತಿಗಳು ರೋಹಿಲಖಂಡದ ಶಹಜಾನಪುರಕ್ಕೆ ಬಂದರು. ಅಲ್ಲಿಯೇ ರಿಚರ್ಡನ ಸೇವೆ. ಅಲ್ಲಿಯ ಚರ್ಚನ್ನು ಹುಡುಕಲು ಆ್ಯನಾ ಮುಂದಾದಳು. ತನ್ನ ಕನಸಿನ ಪ್ರಾರ್ಥನಾ ಮಂದಿರ ಇದೇ ಎಂದು ಮನವರಿಕೆ ಮಾಡಿಕೊಂಡಳು.

ಆ್ಯನಾ ಮನೆಗೆ ಬಂದೊಡನೆ ತಾನು ಹುಡುಕಿದ ಚರ್ಚನ್ನು ಬಣ್ಣಿಸಿ ಭೀತಿ ವ್ಯಕ್ತಗೊಳಿಸಿದಳು. ಇದು ತೀರ ಮೊನ್ನೆ ಮೊನ್ನಿನ ಕಟ್ಟಡ ಎಂದೂ ನೆರೆಹೊರೆಯವರು ಹೇಳಿದರು. ಕನಸಿಗೂ ಇದಕ್ಕೂ ಕಾಲದ ಅಂತರ ಬಹಳ ಎಂದು ಹೇಳಿದರು. ಆ್ಯನಾಳ ಭಯವು ಬಯಲಾಗಲಿಲ್ಲ. ಮಾಡುವುದೇನು?

೧೮೫೭ನೆಯ ಇಸ್ವಿ ಮೇ ತಿಂಗಳ ಸುಮಾರಿಗೆ ಶಹಜಾನಪುರದ ಸಾಮಾಜಿಕ ಜೀವನ ಶಾಂತ ಸ್ವರೂಪವಾಗಿತ್ತು. ಆದರೆ ಬಂಡೆದ್ದ ಸೇನೆಗಳು ದೆಹಲಿಯನ್ನು ಆಕ್ರಮಿಸಿದ ಸುದ್ದಿಯು ಬ್ರಿಟಿಶ್ ಸೇನಾಧಿಕಾರಿಗಳಿಗೆ ತಲುಪಿ ಅವರ ಉದ್ವಿಗ್ನತೆ ಹೆಚ್ಚಿತು. ವಿಕ್ಟೋರಿಯಾ ಮಹಾರಾಣಿಯ ಹುಟ್ಟು ಹಬ್ಬದ ಸಡಗರವು ಮೇ ೨೪ ರಂದು ಯಥಾಪ್ರಕಾರ ನಡೆಯಿತು. ೧೮೫೭ ನೆಯ ಮೇ ೩೧ನೆಯ ಆದಿತ್ಯವಾರ ಎಂದಿನಂತೆ ಕಾಯ್ದಿಟ್ಟ ಬ್ರಿಟಿಶ್ ಪಡೆಯು ಶಾಂತವಾಗಿಯೇ ಇದ್ದಿತು. ಚಿಂತೆಯನ್ನುಂಟುಮಾಡುವ ಯಾವ ಘಟನೆಯೂ ರೋಹಿಲಖಂಡದಲ್ಲಿ ಸಂಭವಿಸಿರಲಿಲ್ಲ. ಎಲ್ಲ ತೊಂದರೆ ತಪ್ಪಿರುವದೆಂದು ಬ್ರಿಟಿಶ ಅಧಿಕಾರಿಗಳು ನಂಬಿದ್ದರು.

ಕಾಯ್ದಿಟ್ಟ ಪಡೆ ಇದ್ದ ಸ್ಥಳದ ಬಳಿಯ ಪ್ರಾರ್ಥನಾ ಮಂದಿರದಲ್ಲಿ ಮುಂಜಾನೆ ಒಂಭತ್ತರ ವರೆಗೆ ಕಾರ್ಯಕ್ರಮಗಳು ಆರಂಭವಾದವು. ಅಭಿನಂದನೆ ಸಲ್ಲಿಸಲು ಅಸಂಖ್ಯಾತ ಜನ ನೆರೆದಿದ್ದರು. ಆ್ಯನಾ ಲಿಸ್ಟೈಟ್ ಪತಿಯೊಡನೆ ಜನಸಂದಣಿಯಲ್ಲಿದ್ದಳು. ಶುಭ್ರ ಪ್ರಕಾಶವು ಎಲ್ಲೆಡೆ ಆವರಿಸಿದ್ದಿತು.

ಒಮ್ಮಿಂದೊಮ್ಮೆಲೆ ಹೊರಗಿನ ಕೋಲಾಹಲದಿಂದ ಪ್ರಾರ್ಥನಾ ಮಂದಿರದ ಶಾಂತತೆ ಚೆಲ್ಲಾಪಿಲ್ಲಿಯಾಯ್ತು. ನೂರಾರು ಸಶಸ್ತ್ರ ಸಿಪಾಯಿಗಳು ಒಳನುಗ್ಗಿದ್ದರು. ಪ್ರಮುಖ ಪಾದ್ರಿಯು ಪ್ರಾರ್ಥನೆ ನಿಲ್ಲಿಸಿ ಬಾಗಿಲ ಬಳಿಗೆ ಹೋದನು. ವಸ್ತುಸ್ಥಿತಿಯನ್ನರಿಯುವ ತವಕ ಅವನಿಗೆ. ಆದರೇನು ಮರು ಕ್ಷಣದಲ್ಲೆ ಅವನ ರುಂಡ ನೆಲಕ್ಕೆ ಬಿದ್ದಿತ್ತು.

ಬಂಡಾಯವು ಶಹಜಾನಪುರಕ್ಕೆ ಹಾತಾ ಎನ್ನುವದರಲ್ಲಿ ತಲುಪಿತ್ತು. ಎಲ್ಲೆಡೆ ಸಿಪಾಯಿಗಳು ಝೇಂಕಾರ ಮಾಡುತ್ತ ಚರ್ಚಿನೊಳಗೆ ನುಗ್ಗಿದರು. ಬ್ರಿಟಿಶ್ ಸೈನಿಕರೂ ಕೆರಳಿ ಕಾದಿದರು. ರಕ್ತ ಸೂರೆ ಆಯ್ತು. ಮಡುಗಟ್ಟಿತು. ಗಾಯಾಳುಗಳ ಚೀತ್ಕಾರ ಆಕಾಶ ಭೇದಿಸುವಂತೆ ಕೇಳಿಸಿತು.

ಬೋನಸ್ ಪ್ರಮೋಷನ್

ಡಾ. ಸಿ. ಆರ್. ಪಾರ್ಥಸಾರಥಿ

ಹೆಡ್ ಆಫೀಸಿನ 'ಬಾಸ್' ರೂಂ ಪ್ರವೇಶಿಸಿ ವಿಜೃಂಭಿಸಲು ಇನ್ನೊಂದೇ ಮೆಟ್ಟಿಲು ಉಳಿದಿತ್ತು ಜಯಶಂಕರನಿಗೆ. ಆ ಸ್ಥಾನಕ್ಕೆ ಬೇಕಾದ ಸಕಲ ಅರ್ಹತೆಗಳನ್ನು ತಾನು ಪಡೆದಿದ್ದರೂ ಆ ಹುದ್ದೆ ದೊರೆತು ಗಗನಕುಸುಮವಾಗಿ ಕೊನೆಗೆ ಹೀಗೇ ರಿಟೈರ್ ಆಗಿಬಿಡುವೆನೋ ಎಂಬ ಚಿಂತೆ ಅವನನ್ನು ಆಗಾಗ ಕಾಡುತ್ತಿತ್ತು. ಬಹಳಷ್ಟು ಆಫೀಸಿನಲ್ಲಿ ಕೆಲಸದ ಒತ್ತಡದಿಂದಾಗಿ ಮನೆಗೆ ಬಂದು ಸತ್ತಂತೆ ಮಲಗಿದ್ದರೂ ಮಗಳು ಅನಿತಾ 'ಅಪ್ಪಾ, ಈ ದಿನ ನಮ್ಮ ಕಾಲೇಜ್ ಡಿಬೇಟಿನಲ್ಲಿ ನನಗೆ ಫಸ್ಟ್ ಪ್ರೈಸ್' ಎಂದು ಉತ್ಸಾಹದಿಂದ ಕಾಲೇಜಿನ ವರದಿ ಒಪ್ಪಿಸಿದಾಗಲೋ, ಪ್ರಯತ್ನಾಂತರ ಮಗ ಸುರೇಶನ ಅಪ್ಪಾಯಿಂಟ್‌ಮೆಂಟಾದರೂ ಸರಸ್ವತಿಯಿಂದ ತಿಳಿದರೋ ಸುಸ್ತೆಲ್ಲಾ ಮಾಯವಾಗುತ್ತದೆ. ಅವನಿನ್ನೂ ಎಚ್ಚರವಿದ್ದರೆ ಮಕ್ಕಳನ್ನು ಪಕ್ಕದ ರೂಮಿಗೆ ಓದಿಕೊಳ್ಳಲು ಕಳಿಸಿ ಸರಸ್ವತಿ ಅವನ ತಲೆಯನ್ನು ತೊಡೆಯ ಮೇಲಿರಿಸಿಕೊಂಡು 'ಏಕೆ ತುಂಬಾ ಬೇಜಾರಾದಂತೆ ಕಾಣುತ್ತೀರಿ. ಆಫೀಸ್ನಲ್ಲೇನಾದ್ರೂ ತೊಂದರೆ?' ಎನ್ನುತ್ತಾ ಕೂದಲಿನೊಳಗೆ ಬೆರಳಾಡಿಸುತ್ತಿದ್ದರೆ ಎಲ್ಲಾ ಬೇಜಾರೂ ಮಂಗಮಾಯ. 'ಏನೇನೂ ಇಲ್ಲ ಕಣೇ... ಏನೋ ಸ್ವಲ್ಪ ಟೆನ್ಶನ್ ಇತ್ತು ಅಷ್ಟೆ' ಎನ್ನುತ್ತಾ ಅವನ ಕೈ ಸಲೀಸಾಗಿ ಅವಳ ಸೊಂಟವನ್ನು ಬಳಸುತ್ತದೆ. ಅವಳಿಗೂ ಅದು ಬೇಕಾಗಿರುತ್ತದೆ. ಜಯಶಂಕರ ಬೆಳಗ್ಗೆ ಒಂಭತ್ತು ಗಂಟೆಗೆ ಮನೆ ಬಿಟ್ಟರೆ ಮನೆಯ ಚಿಂತೆ ಮರೆಯಾಗುತ್ತದೆ. ಸಂಜೆ ಮನೆಗೆ ಬಂದಾಗ ಮನ ಚಿಂತೆ ಚಿಗುರುತ್ತದೆ. ತನ್ನ ಚಿಂತೆ ತನ್ನ ಬಳಿಯಲ್ಲೇ... ತನ್ನ ತೊಡೆಯ ಮೇಲೆಯೇ ಸರಸ್ವತಿ ಮಮತೆಯಿಂದ ಪ್ರೀತಿ ಮರೆಯುತ್ತಾಳೆ. ಅವನ ಕೆನ್ನೆ, ಬೆನ್ನ ಮೇಲೆಲ್ಲ ಅಭಿಮಾನದಿಂದ ಕೈಯಾಡಿಸುತ್ತಾಳೆ.

*

ಆಫೀಸಿನಲ್ಲಿ ಹಲವಾರು ವರ್ಷಗಳಿಂದ ಹಲವಾರು ವಿಧದ ಕಾರ್ಯಗಳನ್ನು ನಿರ್ವಹಿಸಿದ್ದರೂ ಇತ್ತೀಚಿನ ವರ್ಷಗಳಲ್ಲಂತೂ ಒಂದೇ ತೆರನಾದ ಕಾರ್ಯ 'ಬೋರ್' ಎನಿಸಿತ್ತು ಜಯಶಂಕರನಿಗೆ. ಧಾರಾಳ ಅಧಿಕಾ

ಸೆಕೆಂಡ್ ಸಾಟರ್‌ಡೇಗಳಲ್ಲಿ ಹೆಂಡತಿ ಮಕ್ಕಳನ್ನು ಸಿಟಿಗೆ ಕರೆದುಕೊಂಡು ಹೋಗಿ ಯಾವುದಾದರೂ ಉತ್ತಮವಾದ ಹೋಟೆಲ್‌ನಲ್ಲಿ ಅವರಿಗಿಷ್ಟವಾದ ತಿಂಡಿತಿನಿಸುಗಳನ್ನು ತಿನ್ನಿಸುವುದು, ಒಂದು ಮೂವಿ ತೋರಿಸಿದರೆ ಮುಗಿಯಿತು. ಎಷ್ಟು ದಿನ ಈ ಯಾಂತ್ರಿಕ ಜೀವನ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ.

ಜಯಶಂಕರನಿಗೆ ಈ ಯಾಂತ್ರಿಕ ಜೀವನದ ಬಗ್ಗೆ ಬೇಸರ, ನಿರಾಸಕ್ತಿ ಇಣುಕು ನೋಡುವಷ್ಟರಲ್ಲಿ ಒಂದು ಮಹತ್ವದ ಘಟನೆ ನಡೆಯಿತು. ಸ್ವತಂತ್ರ ಅಧಿಕಾರಿಯಾಗಿ ಹೆಡ್‌ಆಫೀಸಿಗೆ ಪ್ರಮೋಶನ್ ಮೇಲೆ ವರ್ಗವಾಗಿತ್ತು. ಜೀವನದ ಬಹುದಿನದ ಕನಸು ನನಸಾಗಿತ್ತು.

ಸ್ವತಂತ್ರ ಅಧಿಕಾರಿಯಾಗಿ ಜಯಶಂಕರ ಅಧಿಕಾರ ವಹಿಸಿಕೊಂಡಂದಿನಿಂದ ಮನೆಯ ಎಲ್ಲಾ ಚಟುವಟಿಕೆಗಳೂ ಹೊಸ ತಿರುವನ್ನೇ ಕಂಡುವು. ಆಫೀಸಿನ ಜವಾನನೊಬ್ಬ ಮನೆಯ ಕೆಲಸಕ್ಕೆ ಹಾಜರಾದ. ಸಿಟಿಬಸ್‌ಗೆ ಪರದಾಡುವ ಅಗತ್ಯ ಈಗಿಲ್ಲ. ಆಫೀಸಿನ ಅಂಬಾಸಡರ್ ಮನೆ ಬಾಗಿಲಲ್ಲಿ ಬಂದು ನಿಲ್ಲುತ್ತದೆ. ಆಫೀಸಿನ ಫೈಲ್‌ಗಳನ್ನು ಹಿಡಿದುಕೊಂಡು ಓಡಾಡುವ ಪ್ರಮೇಯವಿಲ್ಲ. ಪದವಿಗೆ ಅಲಂಕಾರಪ್ರಾಯವಾದ ನೂತನ ಉಡುಪುಗಳು ಸಿದ್ಧವಾದುವು. ಐವತ್ತರ ಜಯಶಂಕರನಲ್ಲಿ ಇಪ್ಪತ್ತರ ಸ್ಫೂರ್ತಿ ತುಂಬಿತ್ತು. ಆರೇ ತಿಂಗಳಲ್ಲಿ ಐವತ್ತು ಕೆ.ಜಿ.ಯ ಸರಸ್ವತಿ ಎಪ್ಪತ್ತಕ್ಕೇರಿದ್ದಳು. ಅಧಿಕಾರಿಯ ಹೆಂಡತಿ ಎಂದರೆ ಮಜಬೂತವಾಗಿರಬೇಡವೆ?

*

ಜಯಶಂಕರನ ಅತ್ಯಂತ ಪ್ರಬಲ ದೌರ್ಬಲ್ಯವೆಂದರೆ ಅವನ ಬಗ್ಗೆ ಅವನ ತಪ್ಪು ಗ್ರಹಿಕೆ. ಕಾಲೇಜು ದಿನಗಳಿಂದಲೂ ಅವನು ಒಳ್ಳೆಯ ಫ್ಯಾಶನ್‌ಪ್ರಿಯ. ಅಕಸ್ಮಾತ್ ಯಾರಾದರೂ ಹುಡುಗಿಯರು ಟೈಂ ಕೇಳಿದರೆ ಅಥವಾ ಪಾಠದ ಬಗ್ಗೆ ಇನ್ನೇನಾದರೂ ವಿವರ ಕೇಳಿದರೂ ಸಾಕು... ನನ್ನನ್ನು ಬುಟ್ಟಿಗೆ ಹಾಕಿಕೊಳ್ಳಲಿಕ್ಕೆ ಇವರು ಈ ರೀತಿ ಪ್ಲಾನ್ ಮಾಡುತ್ತಿದ್ದಾರೆಂದೇ ಅವನ ಭಾವನೆ. ಪರಿಣಾಮವಾಗಿ ಬಿಗುಮಾನದ ವರ್ತನೆ. ಆದರೆ ಇವನ ಬಗ್ಗೆ ಅವರ ಮನೋಭಾವ ಯಾವ ರೀತಿ ಇರುತ್ತದೆಂದು ತಿಳಿದುಕೊಳ್ಳುವ ಗೋಜಿಗೇ ಹೋಗುತ್ತಿರಲಿಲ್ಲ.

ಅವೆಲ್ಲ ಕಾಲೇಜು ದಿನಗಳು. ಆದರೆ ನೌಕರಿ ಸೇರಿದಾಗಲೂ ಅವನ ಧೋರಣೆ ಬದಲಾಗಿರಲಿಲ್ಲ. ಲೇಡಿ 'ಕಲೀಗ್ಸ್' ಯಾರಾದರೂ ಆಫೀಸ್ ವಿಚಾರವಲ್ಲೇ ಮಾತನಾಡಿಸಿದರೂ ಹರಳೆಣ್ಣೆ ಕುಡಿದವನಂತೆ ಮುಖ ಮಾಡಿಕೊಂಡು ಮಾತನಾಡುತ್ತಿದ್ದ.

ವಯಸ್ಸು, ಅಧಿಕಾರಕ್ಕೆ ತಕ್ಕಂತೆ ಸೊಗಸಾದ ಬೊಜ್ಜುಹೊಟ್ಟೆ ಜಯಶಂಕರನಿಗೆ ಕೊಡುಗೆಯಾಗಿ ಬಂದಿತ್ತು. ಸೊಂಟದ ಮೇಲೆ ಪ್ಯಾಂಟ್ ನಿಲ್ಲಲು ಬೆಲ್ಟ್‌ನಿಂದ ಬಿಗಿಯಾಗಿ ಎಳೆದು ಕಟ್ಟಬೇಕಾಗಿತ್ತು. ಓದಲು ಕನ್ನಡಕ ಬೇಕು. ಬರೆಯುವಾಗ ಬಾಯಿ ತನ್ನಷ್ಟಕ್ಕೆ ತಾನೇ ಅರ್ಧ ತೆರೆದುಕೊಂಡಿರುತ್ತದೆ. ಊಟದಲ್ಲೂ ಅಷ್ಟೇ. ಮೊದಲು ಪೊಗದಸ್ತಾಗಿ ತಿನ್ನುತ್ತಿದ್ದ. ಸರಸ್ವತಿಗೆ ಈಗ ಅದೇ ಚಿಂತೆ. ಒಂದು ತುತ್ತು ಹೆಚ್ಚು ತಿಂದರೆ 'ಕಮರುದೇಗು ಬರುತ್ತೆ ಸಾಕುಕಣೆ' ಅನ್ನುತ್ತಾನೆ. ಡ್ರೆಸ್ ಮೇಲೂ ಅಷ್ಟಾಗಿ ಮೊದಲಿನಷ್ಟು ನಿಗಾ ಇಲ್ಲ.

ಸರಸ್ವತಿಗಂತೂ ಕಣ್ಣಿಗೆ ಕಂಡಂತೆ ಎಷ್ಟೊಂದು ಬದಲಾವಣೆಯಾಗಿದ್ದ ಜಯಶಂಕರ! ಮದುವೆಯಾದ ಮೊದಮೊದಲು ಭಾನುವಾರ ಸಾಲದೆಂಬಂತೆ ಒಮ್ಮೊಮ್ಮೆ ಇತರ ದಿನಗಳಲ್ಲೂ ರಜೆ ಹಾಕಿ ಅವಳ ಸಂಗಕ್ಕಾಗಿ ಹಾತೊರೆದು ಮನೆಗೆ ಬಂದುಬಿಡುತ್ತಿದ್ದ. ಆದರೆ ಈಗ ರಜವಿದ್ದರೂ ಆಫೀಸ್ ಫೈಲುಗಳ ಕಡೆಯೇ ಗಮನ. ಮನೆಯಲ್ಲೂ ಮಕ್ಕಳಿಲ್ಲದಿರುವಾಗ ಹೋಗಲಿ ರಾತ್ರಿ ಮಲಗುವ ವೇಳೆಯಲ್ಲೂ ಜತೆಯಲ್ಲೇ ಮಲಗಿದ್ದರೂ ನಿದ್ದೆಗಣ್ಣಲ್ಲೂ ತೋಳನ್ನು ತನ್ನ ಮೇಲೆ ಹಾಕುವುದಿಲ್ಲವಲ್ಲ! ಹೇಳುವ ಹಾಗೂ ಇಲ್ಲ. ಅನುಭವಿಸುವ ಹಾಗೂ ಇಲ್ಲ. ವಯೋಧರ್ಮವಿರಬಹುದೆಂದು ತನ್ನಷ್ಟಕ್ಕೆ ತಾನೇ ಸಮಾಧಾನ ಮಾಡಿಕೊಳ್ಳುವಳು. ಹಾಗೆಂದು ಹೇಳಿದರೂ ಅವನ ಕೋಪಕ್ಕೆ ಪಾತ್ರಳಾಗಬೇಕಿತ್ತು.

ಒಮ್ಮೆ 'ಸ್ಮಾರ್ಟ್' ಆಗಬೇಕೆಂದು ವ್ಯಾಯಾಮ

ಮಾಡಲು ಹೋಗಿ ಮೈಕೈಯೆಲ್ಲ ನೋವಾಗಿ ಮೂರು ದಿವಸ ರಜಾ ಹಾಕಿ ಸುಧಾರಿಸಿಕೊಂಡಿದ್ದ! ಮತ್ತೊಮ್ಮೆ ಹಾಗೇ ಮಾಡಲು ಪ್ರಯತ್ನಿಸಿದಾಗ ಸರಸ್ವತಿ "ಆ ಸಾರಿ ಮೂರು ದಿನ ರಜಾ ಹಾಕಿದ್ರಿ... ಈ ಬಾರಿ ಏನು ಒಂದು ತಿಂಗಳು ಬೇಕೋ..." ಎಂದು ಕೀಟಲೆ ಮಾಡಿದಳು. 'ಕೂತ್ಗಳೇ ಸಾಕು' ಎಂದು ರೇಗಿದ. ಅವನ ಧಾಟಿ ಅರ್ಥವಾಗದೆ ಸರಸ್ವತಿ "ಅಲ್ಲ ಮಾರಾಯ್ರೆ. ಇರೋ ವಿಷಯ ಹೇಳ್ತೀನಿ... ಈ ವಯಸ್ನಲ್ಲಿ ಚಿಕ್ಕ ಹುಡುಗರು ಆಡಿದ ಹಾಗೆ ಆಡಿದ್ರೆ ಶರೀರ ಕೇಳುತ್ತಾ... ಅದಕ್ಕೂ ಒಂದು ಲಿಮಿಟ್ ಇಲ್ವಾ?" ಅಂತ ಮತ್ತಷ್ಟು ಗೇಲಿ ಮಾಡಿದಳು. ಅವನಿಗೆ ಮತ್ತಷ್ಟು ರೇಗಿತು. 'ಸ್ವಲ್ಪ ವಯಸ್ಸಾಗ್ತಾ ಬಂತು ಅಂದ್ರೆ ಹೆಂಗಸ್ರೆಲ್ಲ ಇಷ್ಟೇ ಅಲ್ವೆ... ನಿಮ್ಗೆ... ನಿಮ್ಗೆ...' ಎನ್ನುತ್ತ ಧೋತಿಯನ್ನು ಸೊಂಟದಲ್ಲಿ ಸಿಕ್ಕಿಸಿಕೊಳ್ಳುತ್ತ ಒಳಗೆ ನಡೆದ.

ಅಂದು ಆಫೀಸಿನಲ್ಲಿ ಜಯಶಂಕರ ಎಂದಿನಂತಿರಲಿಲ್ಲ. ಸರಸ್ವತಿಯ ಹುಡುಗಾಟದ ಮಾತುಗಳು ಕಿವಿಯಲ್ಲಿ ಗುಂಯ್‌ಗುಟ್ಟುತ್ತಿದ್ದವು. ಹಾಗಾದರೆ ನಾನು ಅಶಕ್ತನೆಂದು ಅವಳು ಭಾವಿಸಿರಬಹುದೆ... ಮೊನ್ನೆ ಫಂಕ್ಶನ್‌ನಲ್ಲಿ (ಐವತ್ತು ವರ್ಷವಾಗಿದ್ದರೂ) ಯಂಗ್ ಅಂಡ್ ಎನರ್ಜಿಟಿಕ್ ಆಫೀಸರ್ ಅಂತ ಲೇಡಿ ಕ್ಲರ್ಕ್ ಶ್ಯಾಮಲ ನನ್ನನ್ನು ಹೊಗಳಿದ್ದು ಕೇವಲ ಮೇಲ್ಮಾತಿಗಿರಬಹುದೆ... ಜಯಶಂಕರನ ತಲೆಯಲ್ಲಿ ಸಲ್ಲದ ಸಂಶಯದಲೆಗಳು ಎದ್ದುವು.

•

ಜಯಶಂಕರನ ಚಟುವಟಿಕೆಗಳು ಈಚೀಚೆಗೆ ಸರಸ್ವತಿಗೆ ಆತಂಕವನ್ನು ತಂದೊಡ್ಡಿದ್ದುವು. ಊಟ, ತಿಂಡಿ, ಡ್ರೆಸ್ ಯಾವುದರಲ್ಲಿಯೂ ಅಷ್ಟಾಗಿ ಆಸಕ್ತಿ ತೋರುತ್ತಿರಲಿಲ್ಲ. ಮಕ್ಕಳ ಬಳಿಯೂ ಮಾತು ಅಷ್ಟಕ್ಕಷ್ಟೆ. ಏಕಾಂಗಿಯಾಗಿರುವವನಂತೆ ವರ್ತಿಸುತ್ತಾನೆ. ಮೈ ಸೋಕಿದರೆ ಬೆಂಕಿ ತಾಕಿದವನಂತೆ ಹಿಂದಕ್ಕೆ ಸರಿಯುತ್ತಾನೆ. ಮನೆ



ಯಲ್ಲಿ ಅನವಶ್ಯಕ ಮಾತೇ ಇಲ್ಲ. ಯಾರಾದರೂ ಹೊಸಬರು ಮನೆಗೆ ಬಂದರೆ ಇದೇನು ಮನೆಯೋ ಅಥವಾ ಸೆಂಟ್ರಲ್ ಗೌರ್ನಮೆಂಟಿನ ಆಫೀಸೋ ಎನ್ನುವುದೇ ತಿಳಿಯದೆ ಕಂಗಾಲಾಗಬೇಕಾಗುತ್ತಿತ್ತು!

ಮನೆಯಲ್ಲಿನ ಅನವಶ್ಯಕ ಬಿಗುಮಾನದ ವಾತಾವರಣ ತನ್ನ ಸ್ವಯಂಕೃತಾರ್ಥದ ಫಲ ಎಂದು ಜಯಶಂಕರನಿಗೆ ತಿಳಿದಿತ್ತು. ಕವಿದಿದ್ದ ಮೋಡವನ್ನು ಚದುರಿಸಲು ಯಾರಾದರೂ ಸೂಕ್ತ ಮೀಡಿಯೇಟರ್ ಬೇಕಾಗಿತ್ತು ಅಷ್ಟೆ.

ಸದ್ಯಕ್ಕೆ ಈ ಯಾವ ಹಿನ್ನೆಲೆಯೂ ಅವನ 'ಡ್ಯೂಟಿ ಸೆನ್ಸ್'ನ್ನು ಕೆಡಿಸಿರಲಿಲ್ಲ. ಹೊಸದಾಗಿ ವರ್ಗವಾಗಿ ಬಂದಿದ್ದ ಟೈಪಿಸ್ಟ್ ಪರಿಣಾಕ್ಷಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಲು ಅಂಜಿಕೊಂಡೇ ಛೇಂಬರ್‌ನೊಳಗೆ ಬಂದಳು. ಯಾರೆಂದು ಜಯಶಂಕರ ತಲೆ ಎತ್ತುವುದರೊಳಗೆ 'ಗುಡ್ ಮಾರ್ನಿಂಗ್ ಸರ್' ಎಂದಳು ಪರಿಣಾಕ್ಷಿ, ಎರಡು ಕೈಗಳನ್ನೂ ಜೋಡಿಸಿ.

"ಯೆಸ್... ಏನ್ಬೇಕಾಗಿತ್ತು?"

"ನಾನು ಟೈಪಿಸ್ಟ್ ಸರ್. ಸಿಟಿ ಆಫೀಸಿನಿಂದ ಇಲ್ಲಿಗೆ ಟ್ರಾನ್ಸ್‌ಫರ್ ಆಗಿದೆ. ರಿಪೋರ್ಟ್ ಮಾಡ್ಕೊಳ್ಳೋಕ್ಕೆ ಬಂದಿದೀನಿ ಸರ್."

–ಗಂಭೀರವಾಗಿ ಹೇಳುತ್ತ ಪರಿಣಾಕ್ಷಿ ಮೊದಲೇ ಬರೆದುಕೊಂಡು ತಂದಿದ್ದ ಕಾಗದವೊಂದನ್ನು ಅವನ ಟೇಬಲ್ ಮೇಲೆ ನಮ್ರತೆಯಿಂದ ಇಟ್ಟಳು.

"ವೆರಿ ಗುಡ್... ನಮಗೆ ಟೈಪಿಸ್ಟ್ ಕಡಿಮೆ ಇದ್ದು ತುಂಬಾ ತೊಂದರೆಯಾಗಿತ್ತು. ಕೂತ್ಕೊಳ್ಳಿ" ಎನ್ನುತ್ತ ಜಯಶಂಕರ ಟೇಬಲ್ ಮೇಲಿದ್ದ ಕಾಲಿಂಗ್ ಬೆಲ್ಲನ್ನು ಅದುಮಿದ.

*

ಎಲ್ಲ ಗಂಡಸರೇ ಇದ್ದ ಆಫೀಸಿನಲ್ಲಿ ಪರಿಣಾಕ್ಷಿ ಬಂದದ್ದು ಶ್ಯಾಮಲೆಗೆ ಒಂದು ಕಂಪನಿ ಸಿಕ್ಕ ಹಾಗಾಯಿತು. ಬಾಸ್ ಬಗ್ಗೆ ಪ್ರಸ್ತಾಪ ಬಂದಾಗ ಲಿಲ್ಲಿ ಶ್ಯಾಮಲ "ತುಂಬ ಒಳ್ಳೆಯವರು, ಒಬ್ಬರಿಗೂ ತೊಂದರೆ ಕೊಡೋಲ್ಲ" ಎನ್ನುತ್ತಿದ್ದುದು ಪರಿಣಾ

ಕ್ಷಿಗೆ ಏನೋ ಒಂದು ತರಪ ಧೈರ್ಯ ಬಂದಂತಾಗುತ್ತಿತ್ತು. ಅವನೇನಾದರೂ ಛೇಂಬರ್‌ಗೆ ಕರೆಸಿದರೆ ನಿರ್ಭಯವಾಗಿ ಒಳಗೆ ಹೋಗುವಳು. ಕೆಲವೊಮ್ಮೆ ಕಾನ್ಫಿಡೆನ್ಸಿಯಲ್ ರಿಪೋರ್ಟ್ ಟೈಪ್ ಮಾಡಬೇಕಾದರೆ ಛೇಂಬರಿನಲ್ಲೇ ಟೈಪ್ ರೈಟರನ್ನು ಹಾಕಿಸಿಕೊಂಡು ಪಕ್ಕದಲ್ಲೇ ಕುಳಿತು ಡಿಕ್ಟೇಟ್ ಮಾಡುವನು. ಅವಳ ಸೌಂದರ್ಯ ಸಾಧನಗಳ ಸುವಾಸನೆ ಹಲವಾರು ಬಾರಿ ಅಷ್ಟೊಂದು ಸನಿಹದಿಂದ ಸಹನೀಯವಾಗುತ್ತದೆ. ಹರಿಣಾಕ್ಷಿಗೆಅದು ಕಸಿವಿಸಿಯಾದರೂ ವಿಚಲಿತಳಾಗದೆ ಪದೆ ಪದೆ ಸೆರಗನ್ನು ಸರಿಪಡಿಸಿಕೊಳ್ಳುತ್ತ ಹೇಳಿದುದನ್ನೆಲ್ಲ ಅಚ್ಚುಕಟ್ಟಾಗಿ ಟೈಪ್ ಮಾಡುವಳು. ಅದಕ್ಕಾಗಿ ಅವನ ಮೆಚ್ಚುಗೆಯನ್ನು ಗಳಿಸುತ್ತಾಳೆ. "ವೆರಿ ಗುಡ್" ಎಂದು ಜಯಶಂಕರ ಶಹಭಾಸ್‌ಗಿರಿ ಕೊಟ್ಟಾಗ "ಥ್ಯಾಂಕ್ ಯೂ ಸರ್" ಎಂದು ವಿನಯದಿಂದ ಹೇಳುತ್ತಲೆ ಗಂಭೀರವಾಗಿ ರೂಮಿನಿಂದ ಹೊರಬರುವಳು.

ಒಮ್ಮೆ ಜಯಶಂಕರ ಬಿಜಿಯಾಗಿದ್ದ ವೇಳೆಯಲ್ಲಿ ಹರಿಣಾಕ್ಷಿ ಯಾವುದೋ ಫೈಲ್‌ಗೆ ಸಂಬಂಧಿಸಿದ ಪೇಪರೊಂದನ್ನು ಕೇಳಲು ಛೇಂಬರಿಗೆ ಬಂದಳು. "ಆ ಅಲ್ಮಿರಾದ ಎರಡನೇ ಷೆಲ್ಫ್‌ನಲ್ಲಿದೆ ತಗೋಮ್ಮ" ಎನ್ನುತ್ತ ಕೀಬಂಚನ್ನು ಅವಳ ಕೈಗಿತ್ತ. ಎಷ್ಟು ಹುಡುಕಿದರೂ ಆ ಪೇಪರನ್ನು ಪತ್ತೆಮಾಡಲು ವಿಫಲಳಾದ ಹರಿಣಾಕ್ಷಿ "ಎಕ್ಸ್‌ಕ್ಯೂಸ್ ಮಿ ಸರ್. ಅದು ಕಾಣ್ತಾ ಇಲ್ಲ" ಎಂದು ಮೃದುವಾಗಿ ಹೇಳಿದಳು. "ಅಲ್ಲೇ ಇದೆ. ಸರಿಯಾಗಿ ಹುಡ್ಕಮ್ಮಾ" ಎನ್ನುತ್ತ ಅವಳ ಕಡೆ ತಿರುಗಿದ. ಕ್ರೀಮ್ ಕಲರ್‌ನ ತೆಳು ಜಾರ್ಜೆಟ್ ಸೀರೆ ಅವಳ ಯೌವನಭರಿತ ದೇಹದ ಉಬ್ಬುತಗ್ಗುಗಳ ರೇಖಾಚಿತ್ರವನ್ನು ಬಿಡಿಸಿದಂತಿತ್ತು. ಕ್ಷಣಕಾಲ ಜಯಶಂಕರನಿಗೆ ತಾನೆಲ್ಲಿದ್ದೇನೆಂಬುದೇ ತಿಳಿಯದಾಯಿತು. ಬಾಗಿ ಕೆಳಗಡೆಯ ಷೆಲ್ಫನ್ನು ಹುಡುಕುತ್ತಿದ್ದ ಹರಿಣಾಕ್ಷಿಯ ಮುಟ್ಟಿದರೆ ಮುರಿಯುವಂತಿದ್ದ ಗೇಣುದ್ದದ ಬಿಳಿಯ ಸೊಂಟದ ಮೇಲೆ ಕೈಯಿಟ್ಟು "ಇನ್ನೂ ಸಿಕ್ಲಿಲ್ವಾ?" ಎಂದು ಕಂಪಿಸುವ ಧ್ವನಿಯಲ್ಲಿ ಕೇಳಿದ ಮತ್ತು ಅದನ್ನು ತೆಗೆದು ಅವಳ ಕೈಗಿತ್ತ. ಅವನ ಕೈ ಯಾವ ಕಾರಣವೂ ಇಲ್ಲದೆ ಇನ್ನೂ ಅವಳ ಸೊಂಟದ ಮೇಲಿದ್ದರೂ ಹರಿಣಾಕ್ಷಿ ವಿಚಲಿತಳಾಗಲಿಲ್ಲ. ಅಥವಾ ಯಾವ ವಿರೋಧವನ್ನೂ ತೋರಿಸಲಿಲ್ಲ. ಕೊಂಚ ಸಮಯ ಹಾಗೇ ನಿಂತಿದ್ದ ಜಯಶಂಕರ "ನನ್ನ ನಡವಳಿಕೆಯಿಂದ ಬೇಸರವಾಯ್ತಾ?" ಎಂದು ಅದೇ ಕಂಪಿಸುವ ಧ್ವನಿಯಲ್ಲಿ ಕೇಳಿದ. "ಇಲ್ಲ" ಎಂದಷ್ಟೇ ಹೇಳಿ ತಲೆ ತಗ್ಗಿಸಿದಳು ಹರಿಣಾಕ್ಷಿ. ಆ ಮಾತಿನಿಂದ ಉತ್ತೇಜಿತನಾದ ಜಯಶಂಕರ ದಪ್ಪನಾದ ಸವಿಲವಾಗಿ ಹೆಣೆದಿದ್ದ ಅವಳ ಕಪ್ಪು ಜಡೆಯನ್ನು ಮೃದುವಾಗಿ ಎಳೆಯುತ್ತ "ಹರಿಣಾಕ್ಷಿ..." ಎಂದು ಒಂದೇ ಉಸಿರಿಗೆ ಅವಳ ತುಟಿಗಳನ್ನು ತನ್ನ ತುಟಿಗಳಿಂದ ಮುಚ್ಚಿದ.

*

ಸರಸ್ವತಿಗಂತೂ ಜಯಶಂಕರನ ನವೋತ್ಸಾಹ ಕಂಡು ಆಶ್ಚರ್ಯ. ತಲೆಗೂದಲಿಗೆ ಡೈ ಉಪಯೋಗಿಸುತ್ತಾನೆ. ಆಫೀಸಿಗೆ ಹೊರಡುವ ಮುನ್ನ ಐದಾರು ಬಾರಿಯಾದರೂ ಕನ್ನಡಿ ನೋಡುತ್ತಾನೆ. ವೈಯಕ್ತಿಕವಾಗಿ ತಾನೇ ಅಸಂತುಷ್ಟಳಾಗಿದ್ದರೂ ಅವನ ಸಂತೋಷದಲ್ಲೇ ತನ್ನ ಸಂತೋಷವನ್ನು ಕಂಡುಕೊಳ್ಳುತ್ತಾಳೆ.

'ಈ ದಿನ ಭಾನುವಾರವಾದರೂ ನಾನು ಮನೆಯಲ್ಲೇ ಕೆಲಸದ ನಿಮಿತ್ತ ಉಳಿಯುತ್ತೇನೆ. ಸರಸ್ವತಿ, ಅಸಿತ ಸೂರಿಗೆ ಸಿಟಿಗೆ ಪಿಕ್ಚರ್ ಪ್ರೋಗ್ರಾಂ ಹಾಕಿ ಕೊಟ್ಟಾಗಿದೆ. ಹರಿಣಾಕ್ಷಿಗೆ ಮೂರು ಗಂಟೆಗೆ ಸರಿಯಾಗಿ ಫೈಲ್‌ಗಳನ್ನು ತೆಗೆದುಕೊಂಡು ಮನೆಗೆ ಬರಲು ಅಪಾಯಿಂಟ್‌ಮೆಂಟ್ ಕೊಟ್ಟಾಗಿದೆ.' ಜಯಶಂಕರ ಗಾಬರಿಗೊಂಡವನಂತೆ ಮನೆಯಲ್ಲಿ ಚಡಪಡಿಸುತ್ತಾನೆ. ನೂರು ಬಾರಿಯಾದರೂ ಕಿಟಕಿಯಿಂದಾಚೆ ನೋಡಿರಬಹುದು.

ಆ ಘಳಿಗೆಯೂ ಬಂತು. "ಅಬ್ಬಾ! ಅಂತೂ ಬಂದ್ಯಲ್ಲ... ನಿನಗೋಸ್ಕರ ಇಷ್ಟೆಲ್ಲ ಅರೇಂಜ್ ಮಾಡಬೇಕಾಯಿತು." ಜಯಶಂಕರ ದೊಡ್ಡದಾಗಿ ಉಸಿರು ಬಿಡುತ್ತಾ ಹೇಳಿದ, ಅವಳ ಹೆಗಲ ಮೇಲೆ ಕೈ ಹಾಕುತ್ತ...

"ನನಗೋಸ್ಕರ ಅಂಥದ್ದೇನು ಅರೇಂಜ್ ಮಾಡಿದ್ದೀರಿ ಸರ್!"

"ಮನೆಯವರನ್ನೆಲ್ಲ ಸಿಟಿಗೆ ಏನೋ ಪ್ಲಾನ್

ಮಾಡಿ ಕಳಿಸಿದ್ದಾಯಿತು."

"ಸದ್ಯ ಅಷ್ಟೆ ತಾನೆ! ಸಿಟಿಗೆ ಹೋದವರು ವಾಪಸ್ ಬರುತ್ತಾರೆ... ಸದ್ಯ ಮನೇನೆ ಬಿಟ್ಟು ಯಾರೂ ಹೋಗಿಲ್ವಲ್ಲ... ಅಲ್ವಾ ಸಾರ್!"

–ಹರಿಣಾಕ್ಷಿ ಜೋರಾಗಿ ನಗುತ್ತ ಕೀಟಲೆ ಮಾಡಿದಳು– ಅವನ ಕೈ ಕೆಳಗಿಡುತ್ತ...

"ನೋಡು ಹರಿಣಿ. ನೀನು ಯಾವಾಗ್ಲೂ ಹೀಗೇ ಲೈಟಾಗಿ ಮಾತಾಡ್ತಿರ್‍ತಿಯಾ......"

"ಲೈಟಾಗೇ ಇರ್ಬೇಕು ಸರ್... ಹವಿ ಆದ್ರೆ ವೈಟ್ ಜಾಸ್ತಿಯಾಗಿ ಭಾರ ತಡೆಯೋದು ಕಷ್ಟ."

–ಹುಸಿ ನಗೆ ಸೂಸುತ್ತ ಮನೆಯನ್ನೆಲ್ಲ ಒಮ್ಮೆ ವೀಕ್ಷಿಸಿದಳು. ಮನೆಯೊಡತಿಯ ಅಚ್ಚುಕಟ್ಟು ತನವನ್ನು ಹೆಣ್ಣಾದ ಹರಿಣಾಕ್ಷಿ ಸೂಕ್ಷ್ಮದಲ್ಲೇ ಗಮನಿಸಿ ಮೆಚ್ಚಿಕೊಂಡಳು. ಹಾಗೇ ಬೆಡ್‌ರೂಂ ನಲ್ಲಿ ಟೇಬಲ್ ಮೇಲಿದ್ದ ಫ್ಯಾಮಿಲಿ ಫೋಟೋ ನೋಡಿ ಸರಸ್ವತಿಯ ಸುಂದರ ಮುಗ್ಧ ಮುಖದ ಬಗ್ಗೆ ಅನುಕಂಪ ಉಂಟಾಯಿತು. ಹರಿಣಾಕ್ಷಿಯ ಹುಡುಗಾಟಕ್ಕೆ ವಿರಾಮ ಹಾಕುವ ಮುನ್ಸೂಚನೆ ಯಾಗಿ ಜಯಶಂಕರ "ಅದಿರ್‍ಲಿ... ಈಗ ಹುಡು ಗಾಟದ ಮಾತಿಗೆ ಟೈಂ ಇಲ್ಲ" ಎಂದು ಇನ್ನೂ ಏನೋ ಹೇಳುವ ಮೊದಲೇ ಅವಳು "ಅಮ್ಮಾವ್ರು ಬರೋ ಹೊತ್ತಾಯ್ತೇನೊ... ನಾನೂ ಸ್ವಲ್ಪ ನೋಡಬೇಕು.." ಎಂದು ಮತ್ತೂ ತಮಾಷೆ ಮಾಡಿ ದಳು.

"ನೋಡು ಹರಿಣಿ ನಿನ್ನನ್ನು ಸ್ಪರ್ಶಿಸಿದಾಗಿನಿಂದ ನಾನು ಮನುಷ್ಯನಾಗಿಲ್ಲ...!"

"ಮನುಷ್ಯರಾಗಲು ಯಾರೂ ಬೇಡ ಅಂದಿ ಲ್ವಲ್ಲ!"

–ತುಂಟ ಧ್ವನಿಯಲ್ಲೇ ನೇರವಾಗಿ ಹೇಳಿದಳು. ಅವಳು ಹೇಳಿದುದು ಸರಳವಾದ ಸತ್ಯವಾಗಿತ್ತು. ಜಯಶಂಕರನಿಗೆ ಗಂಟಲು ಒಣಗಿದಂತಾಗಿ ಪಕ್ಕ ದಲ್ಲಿದ್ದ ಒಂದು ಗ್ಲಾಸ್ ನೀರನ್ನು ಸ್ವಲ್ಪ ಕುಡಿದ. ಸ್ವಲ್ಪ ಚೇತರಿಸಿಕೊಂಡು "ನನ್ಮೇಲೆ ನಿನಗೆ ನಿಜ ವಾಗ್ಲೂ ಇಷ್ಟ ಇಲ್ವಾ?" ಎಂದು ತಡಪರಿಸುತ್ತ ತೊದಲಿದ.

"ಇಲ್ಲ!"

"ಹಾಗಾದ್ರೆ ನಾನು ನಿನ್ನನ್ನು ಚುಂಬಿಸಿದಾಗ ಲೆಲ್ಲ ನೀನು ಏನೂ ಮಾತನಾಡದೆ ಸುಮ್ಮನಿರು ತ್ತಿದ್ದುದು ನಿನ್ನ ಚಪಲ ತೀರಲೆಂದಾ..."

"ಅಲ್ಲಪ್ಪ... ನಿಮ್ಮ ಚಪಲ ತೀರಿಸಿಕೊಳ್ಳ ಲೆಂದು!"

"ಕಾರಣ?"

"ನೀವು ಬಾಸ್! ನಿಮ್ಮಿಷ್ಟಕ್ಕೆ ನಮ್ಮಂತಹ ಬಡ ಹೆಣ್ಣುಗಳು ವಿರುದ್ಧವಾದರೆ ಬೆಂಗಳೂರಿನಿಂ- ದಾಚೆಗೆ ಟ್ರಾನ್ಸ್‌ಫರ್ ಮಾಡಿಬಿಟ್ಟರೆ ನನ್ನನ್ನೇ ನಂಬಿಕೊಂಡಿರುವ ಅಪ್ಪ ಅಮ್ಮ ತಂಗಿ ತಮ್ಮಂದಿರ ಗತಿ ಮುಗೀತು!"

ಕಿಲಕಿಲನೆ ನಗುತ್ತ ಹರಿಣಾಕ್ಷಿ ತನ್ನ ಬ್ಯಾಗ್ ನಲ್ಲಿದ್ದ ಯಾವುದೋ ಪೇಪರನ್ನು ನೋಡುತ್ತ ಕುಳಿತಳು. ಜಯ ಶಂಕರ ತನ್ನ ಎರಡು ಬೆರಳು ಗಳಿಂದ ಎರಡು ಹುಬ್ಬುಗಳನ್ನೂ ಕೂಡಿಸುವವ ನಂತೆ ತೀಡುತ್ತಾ "ಅಷ್ಟೇನಾ ಹರಿಣಿ... ನಿನ್ನ ಮೌನ ವನ್ನು ನೋಡಿ ನೀನೊಬ್ಬ ಮಹಾ ಮುಗ್ಧೆ ...ಸರ್ವ ಸ್ವವನ್ನೂ ನನಗರ್ಪಿಸಿರಬಹುದೆಂದು ತಪ್ಪು ತಿಳಿ ದಿದ್ದೆ ಆಲ್‌ರೈಟ್...!" ಎಂದು ನಿಟ್ಟುಸಿರಿಟ್ಟ.

"ಛೇ ಛೇ... ನನ್ನ ಸರ್ವಸ್ವವನ್ನು ಎಲ್ಲ ಬಿಟ್ಟು ನಿಮಗೇಕೆ ಅರ್ಪಿಸಲಿ ಸರ್! ಅದಾಗಲೆ ಒಬ್ಬರಿಗೆ ಅರ್ಪಿಸಿಯಾಗಿದೆ... ಸದ್ಯದಲ್ಲೆ Invitation Card ನಾನೇ ತಂದ್ಕೊಡ್ತೀನಿ ಸರ್... ನೀವು ನಿಮ್ಮ ಮನೆಯವರೆಲ್ಲ ಬರ್‍ತಿದ್ರೆ ನಾನು ಸುಮ್ನೆ ಬಿಡೊಲ್ಲ!"

■

ಅಂದು ರಾತ್ರಿ ಬಹಳ ಹೊತ್ತಿನವರೆಗೆ ಹಾಸಿ ಗೆಯ ಮೇಲೆ ಆಲೋಚನಾಮಗ್ನನಾಗಿದ್ದ ಜಯಶಂಕರನಿಗೆ ಸರಸ್ವತಿ "ಯಾಕೆ ತುಂಬಾ ಬಳಲಿದಂತೆ ಕಾಣಿಸ್ತಾ ಇದೀರಿ... ಭಾನುವಾರ ಹೇಗೂ ಮನೇಲಿದ್ರಿ... ಚೆನ್ನಾಗಿ ಮಲಗಿ ರೆಸ್ಟ್ ತೆಗೆದುಕೊಳ್ಳಬೇಕಾಗಿತ್ತು..." ಎಂದಳು. ಜಯಶಂಕರ "ಹೌದು... ತಗೋಬೇಕಾಗಿತ್ತು" ಎನ್ನುತ್ತ ದೀಪ ಆರಿಸಿದ.

‘ವ್ಯಂಗ್ಯಚಿತ್ರಣ ಒಂದು ಚಿತ್ರಹಿಂಸೆ’

— ಆರ್. ಕೆ. ಲಕ್ಷ್ಮಣ

ಸಂದರ್ಶನ : ‘ಶ್ರೀ’ ಪಡ್ರೆ

ಡಾಕ್ಟರರು ಇಂಜನಿಯರರು ಬಡಗಿಗಳು ಮೊದಲಾದವರ ಬಗ್ಗೆ ಜನ ಅಷ್ಟೊಂದು ಆಸಕ್ತಿ ತೋರಿಸುವದಿಲ್ಲ. ಆದರೆ ವ್ಯಂಗ್ಯಚಿತ್ರಕಾರರ ಬಗ್ಗೆ ಇವರಿಗೆ ಬಹಳ ಆಸಕ್ತಿ. ಇದೂ ಉಳಿದ ವೃತ್ತಿಗಳಂತೆ ಒಂದು ವೃತ್ತಿ ಮಾತ್ರ ಎನ್ನುವ ಅಂತಾರಾಷ್ಟ್ರೀಯ ಖ್ಯಾತಿಯ ವ್ಯಂಗ್ಯ ಚಿತ್ರಕಾರ ಆರ್. ಕೆ. ಲಕ್ಷ್ಮಣ ವ್ಯಂಗ್ಯಚಿತ್ರರಂಗಕ್ಕೆ ಕನ್ನಡದ ಹೆಮ್ಮೆಯ ಕೊಡುಗೆ.

ಮಧ್ಯಮ ಎತ್ತರ. ವಿಶಾಲ ಹಣೆಯ ಇಕ್ಕೆಲಗಳಲ್ಲಿ ಬೆಳ್ಳಿಗೂದಲು. ಮುಖದ ಮೇಲೆ ಎದ್ದು ಕಾಣುವ ದಪ್ಪ ಫ್ರೇಮಿನ ಕನ್ನಡಕ. ಕಿಸೆಯಲ್ಲಿ ಇನ್ನೊಂದು. ಒಂದು ಓದಿ-ಬರೆಯುವುದಕ್ಕೆ. ಸಾಮಾನ್ಯ ಉಪಯೋಗಕ್ಕೆ ಇನ್ನೊಂದು.

ನಿಧಾನವಾಗಿ ಮಾತನಾಡುವ ಲಕ್ಷ್ಮಣ ಬಹಳ ಗಂಭೀರ ವ್ಯಕ್ತಿ. “ಮುಖಕ್ಷೌರ ಮಾಡುವಾಗ, ಸ್ನಾನ ಮುಂಜಾನೆಯ ಉಪಾಹಾರಗಳನ್ನು ತೀರಿಸುವಾಗ, ಆಫೀಸಿಗೆ ಸಿದ್ಧವಾಗುವಾಗಲೆಲ್ಲಾ ಒಬ್ಬ ಸಿಂಹ ಪಳಗಿಸುವವನೋ ಬಡಗಿಯೋ ಡಾಕ್ಟರರೋ ಆಗದೇ ವ್ಯಂಗ್ಯಚಿತ್ರಕಾರನಾದುದಕ್ಕೆ ನಾನು ನನ್ನನ್ನು ಶಪಿಸಿಕೊಳ್ಳುತ್ತೇನೆ” ಎನ್ನುತ್ತಾರೆ ಅವರು. ಈ ಒತ್ತಡ ಗಾಂಭೀರ್ಯಗಳು ಒಂದಾಗಿ ಮುಸುಕು ಹಾಕಿಬಿಟ್ಟರೆ ಸಂದರ್ಶನದಲ್ಲಿ ನಿಜವಾದ ವ್ಯಂಗ್ಯಚಿತ್ರಕಾರ ಲಕ್ಷ್ಮಣರನ್ನು ಹೊರಗೆಳೆಯಲು ಕಷ್ಟವೆನಿಸುತ್ತದೆ.

* ವ್ಯಂಗ್ಯಚಿತ್ರಣದ ವೃತ್ತಿ ಕೈಗೊಳ್ಳಲು ನಿಮಗೆ ಪ್ರಚೋದನೆಯೇನು ?

ಬಾಲ್ಯದಿಂದಲೇ. ನನಗೆ ನೆನಪಿಗೆ ಬರುವಷ್ಟು ಹಿಂದೆಯೇ, ನಾನು ವ್ಯಂಗ್ಯಚಿತ್ರಕಾರನಾಗಿದ್ದೆ. ಮೂರನೇ ವರ್ಷದಿಂದ ಈ ಕೆಲಸ ಆರಂಭಿಸಿದೆ. ಹತ್ತನೇ ವರ್ಷದಿಂದ ಗಳಿಸಲಾರಂಭಿಸಿ ಈ ವರೆಗೆ ಮುಂದುವರಿಯುತ್ತಾ ಬಂದಿದ್ದೇನೆ.

* ನಿಮ್ಮ ವ್ಯಂಗ್ಯಚಿತ್ರಗಳಲ್ಲಿ ನೀವು ಹಿನ್ನೆಲೆ ಮತ್ತು ಪರಿಸರದ ಎಷ್ಟೇ ವಿವರಗಳನ್ನು ತೋರಿಸಿದರೂ ಈ ವಿವರಗಳು ಚಿತ್ರದ ಒಟ್ಟಾರೆ ಪರಿಣಾಮವನ್ನು ಕುಂಠಿತಗೊಳಿಸುವುದಿಲ್ಲ. ಬದಲಾಗಿ ಆಸಕ್ತಿಯ ಕೇಂದ್ರಕ್ಕೆ ತಮ್ಮ ಪಾಲನ್ನು ಸೇರಿಸುತ್ತವೆ. ಈ ಸಮತೋಲನವನ್ನು ಹೇಗೆ ಕಾಪಾಡುತ್ತೀರಿ?

ಚಾಕ್ಷುಕ ಹಾಸ್ಯದ ಕ್ರಮ ಹೇಗೆಂದರೆ, ಅಲ್ಲಿ ನೀವು ವಿವರಿಸುವ ಸಂದರ್ಭದ ಅತಿ ಹೆಚ್ಚಿನ ವಿವರಗಳಿರಬೇಕು. ಇದನ್ನು ನೀವು ಮಾಡಿದಿರಾದರೆ ಹೆಚ್ಚು ಬರೆಯಬೇಕಾದ ಅವಶ್ಯವಿಲ್ಲ. ನಮ್ಮ ವ್ಯಂಗ್ಯಚಿತ್ರಕಾರರು ಮಾಡುವ ತಪ್ಪೆಂದರೆ ಅವರು ಕಾರ್ಟೂನಿನಲ್ಲಿ ಚಿತ್ರಕ್ಕೆ ಮಹತ್ವವಿಲ್ಲ ಎಂದು ಭಾವಿಸುತ್ತಾರೆ. ನಿಜ ಹೇಳಬೇಕೆಂದರೆ ಚಿತ್ರದ ಮಹತ್ವ ವ್ಯಂಗ್ಯಚಿತ್ರದ ೯೦%, ಶೀರ್ಷಿಕೆ ಕೇವಲ ೧೦%.



ಲಕ್ಷ್ಮಣ
—ವ್ಯಂಗ್ಯಚಿತ್ರಕಾರ ಪ್ರಕಾಶ ಕಂಡಂತೆ

* ನೀವು ವ್ಯಂಗ್ಯಚಿತ್ರವನ್ನು ಹೇಗೆ ವ್ಯಾಖ್ಯಾನಿಸುತ್ತೀರಿ ?

ನಾನು ಮಾಡುವ ಪ್ರತಿಯೊಂದನ್ನು ಹೇಗೆ ವ್ಯಾಖ್ಯಾನಿಸಲಿ ? ನೀವು ವ್ಯಂಗ್ಯಚಿತ್ರವನ್ನು ಹೇಗೆ ವ್ಯಾಖ್ಯಾನಿಸುತ್ತೀರಿ ? ವ್ಯಂಗ್ಯಚಿತ್ರಣ ಮನುಷ್ಯಾವಸ್ಥೆಯನ್ನು ಹಾಸ್ಯಮಾಡುವ ಕಲೆ ಅಂತಲೇ ಅದೇ ರೀತಿ. ವ್ಯಂಗ್ಯಚಿತ್ರ ಮನುಷ್ಯರ ಮುಖದ ಗುರುತು ಕಳೆಯುವಂತೆ ವಿರೂಪಗೊಳಿಸುವ ಕಲೆ ಎನ್ನಲೇ ನಾನು?

* ವ್ಯಂಗ್ಯಚಿತ್ರ ಮಾಡುವಾಗ ನೀವು ಗಣನೆಗೆ ತೆಗೆದುಕೊಳ್ಳುವ ಮುಖ್ಯ ಅಂಶಗಳಾವವು?

ವ್ಯಂಗ್ಯಚಿತ್ರಗಳನ್ನು ನಾನು ಗಣಿತದ ಸಮಸ್ಯೆಗಳಂತೆ ಬಿಡಿಸುವುದೇ ಇಲ್ಲ. ಯಾವುದು ಮುಖ್ಯ ಯಾವುದು ಅಮುಖ್ಯ ಎಂದು ನನಗೆ ಗೊತ್ತಿಲ್ಲ. ವಿಷಯಗಳ ಒಟ್ಟಾರೆ ಗುಣಮಟ್ಟ ಇಲ್ಲಿರುವುದು ಐಡಿಯಾ ಮುಖ್ಯ. ಭಾವವೂ ಅಷ್ಟೇ ಮುಖ್ಯ. ಮೇಳವಿಕೆಯಿರುವುದರ ಒಟ್ಟಾರೆ ಪರಿಣಾಮ ಏನೇನೂ ಅಮುಖ್ಯವಲ್ಲ.

* ನಿಮ್ಮ ಮತ್ತು ಓದುಗರ ಗ್ರಹಣ ಶಕ್ತಿಯಲ್ಲಿ ಒಂದು ಅಂತರ ಇರಲೇಬೇಕು. ಇದರಿಂದಾಗಿ ನಿಮ್ಮ ಐಡಿಯಾಗಳನ್ನೆಲ್ಲ ವ್ಯಂಗ್ಯಚಿತ್ರಗಳ ಮೂಲಕ ಹೊರ ಹೊಮ್ಮಿಸಲಾಗದೆ ನೀವು ಕೆಲವೊಮ್ಮೆ ನಿರಾಶರಾಗುವದುಂಟೇ ?

ನಿಜವಾಗಿ, ಅರ್ಥವಾಗದ ಓದುಗನ ಬಗ್ಗೆ ನಾನು ಯೋಚಿಸುವುದೇ ಇಲ್ಲ. ವ್ಯಂಗ್ಯಚಿತ್ರವೊಂದನ್ನು ನಾನು (ಓದುಗನಿಗೆ) ಸಂಯೋಧಿಸುವಾಗ, ಅದು ಎಲ್ಲರಿಗೂ ಅರ್ಥವಾಗುತ್ತದೆ ಎಂಬ ನಿರೀಕ್ಷೆಯಿಂದಲೇ ಹಾಗೆ ಮಾಡುತ್ತೇನೆ. ಕೆಲವರಿಗೆ ಅದು ಅರ್ಥವಾಗುವುದಿಲ್ಲ. ನಾನದನ್ನು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಒಬ್ಬ ಸಂಗೀತಕಾರನಂತೆ– ನನ್ನಿಂದ– ಎಲ್ಲರನ್ನು ಮೆಚ್ಚಿಸುವ ಕೆಲಸ ನಿರೀಕ್ಷಿಸಬಾರದು. ಕೆಲವರಿಗೆ ಕರ್ನಾಟಕ ಸಂಗೀತದಲ್ಲಿ ಆಸಕ್ತಿ ಇಲ್ಲ ಎಂದಾದರೆ, ಸರಿ, ಅವರಿಗೆ ಆಸಕ್ತಿ ಇಲ್ಲ.

* ಓದುಗರು ನಿಮ್ಮ ವ್ಯಂಗ್ಯಚಿತ್ರಗಳನ್ನು ದಿನನಿತ್ಯ ನಿರೀಕ್ಷಿಸುತ್ತಿರುತ್ತಾರೆ. ವಾರದಲ್ಲಿ ೧೪ ಬಾರಿ ಅವು ಬಂದರೂ ಅವರಿಗೆ ಸಂತೋಷವೇ. ಆದರೆ ನಿಮಗೆ ಒಮ್ಮೊಮ್ಮೆ ಕೆಲಸ ನಿಲ್ಲಿಸಿ ರಜೆ ತೆಗೆದುಕೊಳ್ಳಬೇಕೆನಿಸುವುದಿಲ್ಲವೇ?

ವರ್ಷಕ್ಕೊಮ್ಮೆ ೩, ೪, ೫ ವಾರಗಳ ಕಾಲ ನಾನು ರಜೆ ತೆಗೆದುಕೊಂಡು ಕೆಲಸ ನಿಲ್ಲಿಸುತ್ತೇನೆ. ಅಂದಮಾನ್-ನಿಕೊಬಾರ್ ದ್ವೀಪಗಳು, ಹಿಮಾಲಯ ಹೀಗೆ ದೂರ ದೂರ ಹೋಗುತ್ತೇನೆ ರಜಾದಿನಗಳಲ್ಲಿ ನಾನು ಕೆಲಸ ಮರೆಯುತ್ತೇನೆ. ಆಗ ರಾಜಕೀಯದ ಬಗ್ಗೆ ಯೋಚಿಸುವುದು ಬಿಡಿ, ಪತ್ರಿಕೆಗಳನ್ನೂ ಓದುವುದಿಲ್ಲ.

* ವಿಮರಾಲ್ಡ್ ರೂಟ್ ಪುಸ್ತಕಕ್ಕೆ ಸಂಬಂಧಿಸಿದ ಒಂದು ಪ್ರಶ್ನೆ ನೀವು ಹುಟ್ಟಿದ ರಾಜ್ಯದಲ್ಲಿ ಬಹಳ ವರ್ಷಗಳ ನಂತರ ಸಂಚರಿಸಿ ಚಿತ್ರಗಳನ್ನು ಬರೆಯುವ ಅನುಭವ ಹೇಗಿತ್ತು?

ಬಹಳ ಚೆನ್ನಾಗಿತ್ತು. ಖನಿಜಗಳು ಜನ ಪ್ರಾಣಿ ಪಕ್ಷಿಗಳು ಸಸ್ಯವರ್ಗ ಇವುಗಳಿಂದ ಸಂಪದ್ಭರಿತವಾದ ಭಾರತದ ಭಾಗವೊಂದನ್ನು ನೋಡುವ ಅವಕಾಶ ನನಗೆ ಒದಗಿತ್ತು. ನನಗೆ ಅತ್ಯುತ್ತಮ ಅನುಭವ ಇದು.

* ನಿಮ್ಮ ರೇಖೆಗಳಲ್ಲಿ ಗೇಲಿಮಾಡಿದ ರಾಜಕಾರಣಿಗಳನ್ನು ನೀವು ಭೇಟಿ ಮಾಡಿದ್ದೀರಾ?

ನಾನು ರಾಜಕಾರಣಿಗಳನ್ನು ಭೇಟಿ ಮಾಡುವುದಿಲ್ಲ. ಅವರಿಗೆ ನನ್ನ ಪರಿಚಯವಿಲ್ಲ. ಆದರೆ ನಾನು ಅವರನ್ನು ಬಲ್ಲೆ.

* ಭಾರತದಲ್ಲಿ ವ್ಯಂಗ್ಯಚಿತ್ರಗಳು ಸಮಾಜಕ್ಕೆ ಇನ್ನೂ ಮಚ್ಚಿನದನ್ನು ಮಾಡಬಲ್ಲವು ಅನಿಸುವುದಿಲ್ಲವೇ ನಿಮಗೆ? ಸಮಾಜಕ್ಕೆ ಮಚ್ಚಿನ... ಹಾನಿಯೇ ಅಥವಾ ಲಾಭವೇ?

ಸಹಾಯ ಎಂದಿತ್ತು ನನ್ನ ಅಭಿಪ್ರಾಯ...

ಹೌದು, ಅದನ್ನು ಮಾಡುತ್ತಿದೆ. ಬರವಣಿಗೆಯ ಶಬ್ದಗಳನ್ನು ಓದುವಷ್ಟು ಜನರು ಅಕ್ಷರಸ್ಥರಾಗಿಲ್ಲ. ಚಿತ್ರಗಳ ಮೂಲಕವಾದರೂ ಅವರು ಪರಿಸ್ಥಿತಿಯನ್ನು ಗ್ರಹಿಸಲು ಸಾಧ್ಯವಾಗಿರುವುದು ಒಳ್ಳೆಯ ಸಂಗತಿ.

* ವ್ಯಂಗ್ಯಚಿತ್ರಕಾರನ ಮಾನಸಿಕ ಒತ್ತಡವೆಷ್ಟು?

ಬಹಳ ಹೆಚ್ಚು. ನಿಜವಾಗಿ ಯಾರೊಬ್ಬರೂ ವ್ಯಂಗ್ಯಚಿತ್ರಕಾರರಾಗಲಿ ಎಂದು ನಾನು ಹಾರೈಸುವುದಿಲ್ಲ. ಜನರು ವ್ಯಂಗ್ಯಚಿತ್ರಗಳನ್ನು ಒಂದು ರೀತಿಯ ಸುಲಭದ ಸಂಗತಿಯೆಂದು ತಿಳಿದು ಕೊಂಡಂತೆ ಕಾಣುತ್ತದೆ. ನಿಜವಾಗಿ ಅದು ಸಂಕಟ, ನೋವು ಹಾಗೂ ಚಿತ್ರಹಿಂಸೆ. ನಮ್ಮ ಪತ್ರಿಕೆ ಅಹ್ಮದಾಬಾದ್, ದೆಹಲಿ ಮತ್ತು ಬೊಂಬಾಯಿಗಳಿಂದ ಪ್ರಕಾಶಿತವಾಗುತ್ತದೆ. ನನ್ನ ಡೆಡ್‌ಲೈನ್ ಮಧ್ಯಾಹ್ನ ೧೨-೩೦ಕ್ಕೆ. ಐಡಿಯಾ ಹೊಳೆದು ಅದನ್ನು ಚಿತ್ರಿಸಿ, ಶೀರ್ಷಿಕೆ ಬರೆದು ಡೆಡ್‌ಲೈನಿನೊಳಗೆ ಕಳಿಸಿ ಮನೆ ಸೇರಬೇಕು. ಒಂದೈದು ನಿಮಿಷ ಸಂತೋಷ, ಆಮೇಲೆ ಪುನಃ ನಾಳೆ ಎದುರು ಬಂದು ನಿಲ್ಲುತ್ತದೆ.



ಆರ್. ಕೆ. ಲಕ್ಷ್ಮಣ

ಇನ್ನೇನು ನಾಳೆ ಎಂಬ ಚಿಂತೆ. ಆದರೆ ಈ ಚಿಂತೆ ಸಂಕಟ, ಚಿತ್ರಹಿಂಸೆಗಳು ನಿಮ್ಮ ಕಲೆಯನ್ನು ಪಳಗಿಸುತ್ತವೆ.

* ಈ ಚಿತ್ರಹಿಂಸೆ, ಸಂಕಟಗಳು ನಿಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರಬೇಕಲ್ಲಾ?

ಇಲ್ಲ. ಬದಲಾಗಿ ಕೆಲಸ ಮಾಡದಿದ್ದರೆ ನನಗೆ ಅನಾರೋಗ್ಯವುಂಟಾಗುತ್ತದೆ. ವ್ಯಂಗ್ಯಚಿತ್ರಕಾರ ಒಂದು ಬೇರೆಯ ವಿಧದ ಪ್ರಾಣಿ, ಆತ ತಯಾರಾಗುವ ರೀತಿ ಆತನ ದೃಷ್ಟಿಕೋನ, ಆತನ ಬೆಳವಣಿಗೆ ಇವೆಲ್ಲಾ ಇತರರಿಗಿಂತ ಭಿನ್ನ. ✡

ರೈತರ ಸಮಸ್ಯೆಗಳ ಪರಿಹಾರ

ಕರ್ನಾಟಕ ಸರ್ಕಾರದ ದಿಟ್ಟ ಹೆಜ್ಜೆ

ನೀರಾವರಿ ಜಮೀನಿಗೆ ವಿಧಿಸಲಾಗುತ್ತಿದ್ದ

ಅಭಿವೃದ್ಧಿ ತೆರಿಗೆ ರದ್ದು (ಬೆಟರ್‌ಮೆಂಟ್ ಲೆವಿ)

ನೀರಾವರಿ ತೆರಿಗೆಯ ಗಣನೀಯ 'ಇಳಿಮುಖ

ಸಾಲ ನೀಡಿಕೆಗಾಗಿ ರೈತರಿಂದ ಬಂದ ಅರ್ಜಿಗಳನ್ನು ೪೫ ದಿನಗಳೊಳಗೆ ಇತ್ಯರ್ಥ ಮಾಡಲಾಗುವುದು.

೧೯೭೦ ರ ಬರಗಾಲದಲ್ಲಿ ಸಣ್ಣ ವ.ತ್ತು ಅತಿ ಸಣ್ಣ ರೈತರಿಗೆ ನೀಡಿದ್ದ ಮೂಲ ಸಾಲದ (ಸೀಡ್ ಲೋನ್) ಮರುಪಾವತಿ ರದ್ದು.

ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಸಹಕಾರಿ ಸಾಲದ ವಸೂಲಿಯ:ನ್ನು ೧೯೮೧ ರ ಜನವರಿ ಅಂತ್ಯದವರೆವಿಗೆ ತಡೆ-ಹಿಡಿಯಲಾಗಿದೆ.

ಒಂದು ಕೋಟಿ ರೂ. ವೆಚ್ಚದಲ್ಲಿ ನೀರಾವರಿ ಕಾಲುವೆಗಳ ಹಾಗೂ ಅಚ್ಚುಕಟ್ಟು ಪ್ರದೇಶದ ರಸ್ತೆಗಳ ದುರಸ್ತಿ.

ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ

ಡಿಐಪಿ/ಸಿಆರ್‌ಜಿ/೫೯೨/೮೦೮೧

ಇದುವೆ ಜೀವ ಇದು ಜೀವನ

ನನ್ನ ಕಿರಿಯ ಮಗಳ ಮದುವೆಗೆ ಕೆಲವು ಒಡವೆ ವಸ್ತ್ರಗಳನ್ನು ಬೆಂಗಳೂರಿನಿಂದಲೇ ತರುವುದಾಗಿ ನಿರ್ಣಯಿಸಿಕೊಂಡು ಅಲ್ಲಿಗೆ ಹೋಗಿದ್ದೆ. ಅಲ್ಲಿಯ ಒಂದು ಸರಾಫ ಅಂಗಡಿಯಲ್ಲಿ ಒಡವೆಗಳನ್ನು ನೋಡುತ್ತಿರುವಾಗ ಅಲ್ಲಿಗೆ ಕೈಯಲ್ಲಿ ಹ್ಯಾಂಡ್ ಬ್ಯಾಗನ್ನು ಹಿಡಿದು, ಗುಲಾಬಿ ಪತ್ತಲ ಉಟ್ಟ ಒಬ್ಬ ತರುಣಿ ಬಂದು ನಾನು ಖರೀದಿಸುವ ಎಲ್ಲ ವಸ್ತುಗಳನ್ನೂ ನೋಡ ಹತ್ತಿದಳು. ನಾನು ಅದಕ್ಕಾಗಿ ಹತ್ತು ಸಾವಿರ ಕೊಟ್ಟು ಪಾವತಿ ಪಡೆದುಕೊಂಡು ಚಿಕ್ಕಪೇಟೆಯಲ್ಲಿರುವ ಜವಳಿ ಅಂಗಡಿಗೆ ಹೋಗಿ ಮದುವೆಯ ಬಟ್ಟೆಗಳನ್ನು ಕೊಂಡು ಕೊಳ್ಳುತ್ತಿರುವಾಗ, ಅಲ್ಲಿಯೂ ಅದೇ ಗುಲಾಬಿ ಪತ್ತಲದ ಯುವತಿ ಬಂದು ಸೀರೆಯನ್ನು ಆರಿಸಹತ್ತಿದ್ದಳು. ನಾನು ಅಲ್ಲಿಯೂ ಹಣ ಕೊಟ್ಟು ಪಾವತಿ ಪಡೆದುಕೊಂಡು ರಾತ್ರಿಯ ರೈಲಿಗೆ ಹುಬ್ಬಳ್ಳಿಗೆ ಬರಲು ರೈಲು ಹತ್ತಿ ನನ್ನಲ್ಲಿರುವ ಶಾಲನ್ನು ಹೊತ್ತುಕೊಂಡು ಅಂದಿನ ಪತ್ರಿಕೆಯನ್ನು ಬಿಡಿಸಿ ನೋಡುತ್ತ ಕುಳಿತೆ. ಇನ್ನೇನು ರೈಲು ಹೊರಡುತ್ತದೆ ಎನ್ನುವಾಗ ಅದೇ ಯುವತಿ ನನ್ನ ಪಕ್ಕದಲ್ಲಿಯೇ ಬಂದು ಕುಳಿತಳು ನಾನೊಮ್ಮೆ ಅವಳನ್ನು ನೋಡಿ ನನ್ನ ಪತ್ರಿಕೆಯನ್ನು ನೋಡಹತ್ತಿದೆ. ನಮ್ಮಿಬ್ಬರ ಹೊರತು ಬೇರೆ ಯಾರೂ ಆ ಕಂಪಾರ್ಟ್‌ಮೆಂಟನಲ್ಲಿ ಇರಲಿಲ್ಲ. ಹದಿನೈದು ನಿಮಿಷ ಕಳೆದಿರಬಹುದು. ಯುವತಿ, "ಸರ್, ನಿನ್ನಲ್ಲಿರುವ ಆ ಒಡವೆಗಳನ್ನೆಲ್ಲ ನನಗೆ ಕೊಡು" ಎಂದಳು

ನಾನು ಅವಳನ್ನೊಮ್ಮೆ ನೋಡಿ ಮತ್ತೆ ನನ್ನ ಪತ್ರಿಕೆಯನ್ನು ನೋಡಹತ್ತಿದೆ. ಮತ್ತೆ ಅವಳು, "ಸರ್, ನಿನ್ನಲ್ಲಿರುವ ಒಡವೆಗಳನ್ನೆಲ್ಲ ನನಗೆ ಕೊಡು. ಇಲ್ಲದಿದ್ದರೆ ನೀನು ನನ್ನ ಮೇಲೆ ಅತ್ಯಾಚಾರವೆಸಗಿ ನನ್ನ ಒಡವೆಗಳನ್ನೆಲ್ಲ ಕಸಿದುಕೊಂಡು ತನ್ನ ಪರ್ಸಿನಲ್ಲಿ ಇಟ್ಟುಕೊಂಡಿದ್ದಾನೆ" ಎಂದು ಪೋಲೀಸರಿಗೆ ಹೇಳುತ್ತೇನೆ ಎಂದಳು.

ನಾನು ಮತ್ತೊಮ್ಮೆ ಅವಳನ್ನು ನೋಡಿ, ಮತ್ತೆ ನನ್ನ ಪತ್ರಿಕೆಯನ್ನು ನೋಡುತ್ತ ಕುಳಿತೆ. ಪುನಃ ಅವಳು "ನಾನು ಹೇಳುತ್ತಿರುವುದು ಕೇಳಿಸುವುದಿಲ್ಲವೆ?" ಎಂದಳು ಗಡುಸಾಗಿ.

"ನಾನು ನಿನ್ನ ಮೇಲೆ ಅತ್ಯಾಚಾರವೆಸಗಿದ್ದಕ್ಕೆ ಸಾಕ್ಷಿ ಏನು?" ಎಂದೆ.

"ಚೀಟಿ ಬರೆದುಕೊಡುತ್ತೇನೆ" ಎಂದಳು.

"ಆಗಲಿ, ಬರೆದುಕೊಡು ನೋಡುವಾ" ಎಂದೆ.

ತನ್ನ ಬ್ಯಾಗಿನಿಂದಲೇ ಒಂದು ಹಾಳೆಯನ್ನು ತೆಗೆದು ಏನನ್ನೊ ಬರೆದು, "ಇದೋ ನೋಡು" ಎಂದು ನನ್ನ ಕೈಯಲ್ಲಿ ಕೊಟ್ಟಳು.

ಅಶ್ಲೀಲವಾಗಿ ಅತ್ಯಾಚಾರವೆಸಗಿದ್ದೆನೆಂದು ಹೊಲಸು ಹೊಲಸಾಗಿಯೇ ಬರೆದಿದ್ದಳು. ಚೀಟಿಯನ್ನು ಮಡಚಿ ನನ್ನ ಕೋಟಿನ ಕಿಸೆಯೊಳಗೆ ಇಟ್ಟುಕೊಂಡೆ.

"ಹುಟ್ಟ ಸರಿಯಾಗಿ ಮೂವತ್ತು ವರ್ಷವಾಗಿಲ್ಲ. ನೀನೇ ಇಷ್ಟು ಜೋರಾಗಿರುವಾಗ! ಮೂವತ್ತು ವರ್ಷಗಳನ್ನು ವಕೀಲ ವೃತ್ತಿ

ಯಲ್ಲಿಯೇ ಕಳೆದಿರುವ ನಾನು ಹೇಗಿರುವೆ ನಿನಗೆ ಗೊತ್ತಿದೆಯೆ?" ಎಂದೆ.

ನಾನು ವಕೀಲನೆಂಬ ಶಬ್ದ ಕಿವಿಗೆ ಬಿದ್ದೊಡನೆಯೇ ತರುಣಿಯ ಧೈರ್ಯವೇ ಉಡುಗಿ ಹೋಯಿತು. "ಸಾರ್ ನನ್ನದು ತಪ್ಪಾಯಿತು. ಆ ಚೀಟಿಯನ್ನು ಹರಿದು ಒಗೆಯಿರಿ" ಎಂದು ಕೈ ಮುಗಿದು ಮುಂದಿನ ಸ್ಟೇಷನ್ನಿನಲ್ಲಿ ಇಳಿದುಹೋದಳು.

—ವೈಷಿ

ಅಂದು ನಾನು ಕಾಲೇಜಿನಿಂದ ಮನೆಗೆ ಅಲ್ಲಿಯ ದೃಶ್ಯವನ್ನು ಕಂಡು ದಿಙ್ಮೂಢನಾದೆ. ದಟ್ಟ ಶೋಕದ ಆವರಣವೇ ಮನೆಯನ್ನು ಮುಸುಕಿದಂತಿತ್ತು. ನನ್ನ ತಾಯಿ, ಅಜ್ಜಿ ಇಬ್ಬರೂ ಗೊಳೋ ಎಂದು ಅಳುತ್ತಿದ್ದರು. "ಅಯ್ಯೋ ಮಗು ಹೀಗಾಗಬಾರದಿತ್ತು!" ಎಂದು ನೆರೆದವರಲ್ಲಿ ಕೆಲವರು ನನ್ನನ್ನು ನೋಡಿ ಕಣ್ಣೊರೆಸಿಕೊಂಡರು. ಏನೋ ಅನಾಹುತವಾಗಿದೆಯೆಂದುಕೊಂಡೆ. ಅದೇನೋ ಅವ್ಯಕ್ತ ಭಯ ಮನಸ್ಸನ್ನು ಮುತ್ತಿತು. ಏನಾಗಿದೆಯೆಂದು ಯಾರನ್ನೂ ಕೇಳುವ ಧೈರ್ಯವೂ ಆಗಲಿಲ್ಲ. ಅಷ್ಟರಲ್ಲೇ ನಮ್ಮಣ್ಣನೂ ಉಡುಪಿಯಿಂದ ಬಂದ. ಉರಿಯುವ ಗಾಯಕ್ಕೆ ಉಪ್ಪು ಸುರಿದಂತೆ ರೋದನದ ಆರ್ಭಟ ಇನ್ನೂ ಒಂದು ಮಜಲನ್ನೇರಿತು. ಅಣ್ಣ ಏನೋ ಹುಡುಕುವವನಂತೆ ನೋಡುತ್ತ ಮಂಕನಂತೆ ನಿಂತುಬಿಟ್ಟ. ಅವನ ಮುಖವನ್ನು ಇತರರೂ ಉಳಿದವರೆಲ್ಲರ ಮುಖವನ್ನು ಅವನೂ ನೋಡುತ್ತ ಕ್ಷಣಕಾಲ ಕಾಲವೇ ನಿಂತುಹೋಯಿತೇನೋ ಎಂಬಂಥ ವಿಚಿತ್ರ ಸನ್ನಿವೇಶವನ್ನು ನಾನು ಅನುಭವಿಸಬೇಕಾಯಿತು. ನನಗಂತೂ ಏನೂ ಅರ್ಥವಾಗದಂತಾಗಿತ್ತು. ಅಷ್ಟರಲ್ಲೇ ಕೈಯಲ್ಲಿ ಹಾರ ತುರಾಯಿ ಹಿಡಿದು ಇಲ್ಲೇನು ನಡೆದಿದೆಯೊ ತಿಳಿಯದೇ ಅಳುಕುತ್ತಲೇ ನಮ್ಮ ತಂದೆ ಮನೆಯೊಳಗೆ ಕಾಲಿಡುತ್ತ, "ಏನಿದೆಲ್ಲ?" ಎಂದು ಕೇಳಿದರು. ಒಮ್ಮೆಲೆ ದೃಶ್ಯವೇ ಬದಲಾಯಿತು. "ನೀವು! ನೀವು..." ಎಂದು ಅಣ್ಣ ತಡವರಿಸುತ್ತಿದ್ದಂತೆಯೆ "ಶೆಟ್ಟರು ಬಂದು ಏನೋ ಹೇಳಿದರಲ್ಲ?" ಎಂದು ಅಜ್ಜಿ ಮಾತಾಡುತ್ತಿದ್ದಂತೆ ನನಗೆ ಒಂದೊಂದೇ ಅರ್ಥವಾಗತೊಡಗಿತು.

ನಮ್ಮ ತಂದೆಯ ಮಿತ್ರ ಅಜ್ಜಪ್ಪನವರೊಂದಿಗೆ ನಮ್ಮಣ್ಣ ತುಂಬ ವಿಶ್ವಾಸದಿಂದ ಇದ್ದವನು. ಅಜ್ಜಪ್ಪ ತೀರಿಕೊಂಡಾಗ ಅವರ ಮಗ ಚಂದ್ರು ತನಗೆ ಬೇಕಾದವರಿಗೆಲ್ಲ ತಾರು ಕಳಿಸಿ 'ತಂದೆ ತೀರಿ ಹೋದರು, ತಕ್ಷಣ ಹೊರಡಿ' ಎಂದು ತಿಳಿಸಿದ. ನಮ್ಮಣ್ಣನಿಗೂ ಒಂದು ತಂತಿ ಹೋಯಿತು. ನಮ್ಮ ತಂದೆಯೇ ಹೋಗಿರಬೇಕೆಂದೂ ಚಂದ್ರು ನನ್ನ ಗೆಳೆಯನಾದ್ದರಿಂದ ತಾರು ಕಳಿಸಿರಬೇಕೆಂದೂ ಭಾವಿಸಿ ತಾನು ಉಡುಪಿಯಿಂದ ಟ್ಯಾಕ್ಸಿ ಮಾಡಿಕೊಂಡು ಹೊರಡುವ ಮುನ್ನ ನಮ್ಮ ಮನೆಯೆದುರಿನ ಶೆಟ್ಟರಿಗೆ ಫೋನ್ ಮಾಡಿ ವಿಷಯ ತಿಳಿಸಿ ತಾನು ಬರುವವರೆಗೆ ಕಾಯಬೇಕೆಂದು ಮನೆಯಲ್ಲಿ ತಿಳಿಸುವಂತೆ ಹೇಳಿದ್ದನಂತೆ. ಅವರು ಬಂದು "ನಿಮ್ ಜಮಾನ್ರು ಹೋದ್ರಂತೆ. ಮಾಸು ಕಾರು ಮಾಡಿಕೊಂಡಾದ್ರೂ ಬೇಗ ಬರ್ತಾನಂತೆ. ಅಲ್ಲೀವರೆಗೆ ಮುಂದಿನ ಕೆಲಸ ಕೂಡದಂತೆ" ಎಂದು ಹೇಳಿ ಹೋಗಿದ್ದೇ ಇಷ್ಟೆಲ್ಲ ರಂಜಾಟಕ್ಕೆ ಕಾರಣವಾಗಿತ್ತು. ಆದರೆ ತಂದೆಯವರು ಅಂದೇ ಬಡತಿ ಸಿಕ್ಕ ಮೇಲಾಧಿಕಾರಿಯೆಂದು ಅಧಿಕಾರ ಸ್ವೀಕರಿಸಲು ಮಂಡ್ಯಕ್ಕೆ ಹೋಗಿದ್ದರು!

— ನಾರಾಯಣಮೂರ್ತಿ

‘ನೆನಪಿನ ದೋಣಿಯಲ್ಲಿ’ ರಸಯಾನ

ಜಿ. ಟಿ. ನಾರಾಯಣರಾವ್

ಮಲೆನಾಡಿನ ಕೊಂಪೆ. ಜಡಿಮಳೆ ಸುಡು ಬಿಸಿಲುಗಳ ಎಡೆಬಿಡದ ಹಿಡಿವಾಟ. ಮಲೇರಿಯ ವಿಷಮ ಶೀತಜ್ವರಗಳೊಡನೆ ಸಹಜೀವನ. ಜೀವನದ ಅವಿಭಾಜ್ಯ ಅಂಗವಾಗಿ ಬೆಂಬತ್ತಿದ್ದ ಅಂಧಶ್ರದ್ಧೆಯಿಂದ ಪೀಡನೆ. ಪೌಷ್ಟಿಕಾಹಾರ, ಶುಚಿ, ನೈರ್ಮಲ್ಯ, ಆರೋಗ್ಯ, ಯೋಗ್ಯ ಶಿಕ್ಷಣ ಮುಂತಾದವು ಪುಸ್ತಕಗಳಲ್ಲಿ ಕೂಡ ಕಾಣದಿದ್ದ ದಿನಗಳು. ಇಂಗ್ಲಿಷಿನ ದೂರನಕ್ಷತ್ರವಿರಲಿ, ಕನ್ನಡದ ಸಮೀಪ ಸೂರ್ಯ ಕೂಡ ಪ್ರವೇಶಿಸಿರದಿದ್ದ ದಂಡಕಾರಣ್ಯ. ಇಂಥ ಪರಿಸರದಲ್ಲಿ ಹುಟ್ಟಿದ ಶಿಶುವಿನ ಭವಿಷ್ಯವೇನು? ಆ ಬೃಹದಾರಣ್ಯಕ ಚೇತನದ ಅನಂತ ದೇಶಕಾಲದಲ್ಲಿ ಅನಂತಾಲ್ಪಾಂಶ ಘಟನೆಯಾಗಿ ಮತ್ತು ಅಪತ್ರಿಕಾ ವಾರ್ತೆಯಾಗಿ ಬಾಳಿ ಅದರಲ್ಲಿ ಲೀನವಾಗಿ ಹೋಗುವುದು ಮಾತ್ರ. ಹೀಗಲ್ಲದೆ ಅದರ ದೈತ್ಯಸಾರವನ್ನು ಮೈಗೂಡಿಸಿಕೊಂಡು ಸಕಲ ಪ್ರಾಪಂಚಿಕ ಸಂಬಂಧ ಬಂಧನಗಳಿಂದ ಬಿಡುಗಡೆಗೊಂಡು ಹನುಮಂತಭವ್ಯವಾಗಿ ಪ್ರವರ್ಧಿಸಿದುದಾದರೆ ಅದು ವಿಶೇಷ ಗಮನಕ್ಕೂ ಉಲ್ಲೇಖಕ್ಕೂ ಪಾತ್ರವಾಗುತ್ತದೆ. ಮಲೆನಾಡಿನ ಕೂಸು ಕುಪ್ಪಳ್ಳಿ ವೆಂಕಟಪ್ಪಗೌಡ ಪುಟ್ಟಪ್ಪ ಸಾರಸ್ವತ ಪ್ರಪಂಚದ ಪರ್ವಪುರುಷ – ಪರ್ವತೋಪಮ ಪುರುಷ ಕೂಡ – ಕುವೆಂಪುವಾಗಿ ವಿಕಸಿಸಿದುದರ ವೈಜ್ಞಾನಿಕ ಮತ್ತು ಕಲಾತ್ಮಕ ಚಿತ್ರದೌತಣವೇ ‘ನೆನಪಿನ ದೋಣಿಯಲ್ಲಿ.’

ಆತ್ಮವೃತ್ತವನ್ನು ಬರೆದುಕೊಡಲೇಬೇಕೆಂದು ಪಾಲ್ ಆರ್ಥರ್ ಶಿಲ್ಪ್ ಎಂಬವರು ಆಲ್ಬರ್ಟ್ ಐನ್‌ಸ್ಟೈನರನ್ನು ದುಂಬಾಲು ಬಿದ್ದು ಪೀಡಿಸಿದಾಗ ಇವರು ಬರೆವ ಆತ್ಮವೃತ್ತದ ಪೀಠಿಕಾ ಪರಿಚ್ಛೇದ ಇಲ್ಲಿ ಉಲ್ಲೇಖಾರ್ಹವಾಗಿದೆ. ಏಕೆಂದರೆ ಐನ್‌ಸ್ಟೈನ್ ಮತ್ತು ಕುವೆಂಪು, ಇವರುಗಳ ಬಾಲ್ಯ, ವಿದ್ಯಾಭ್ಯಾಸ ಮತ್ತು ಜೀವನದೃಷ್ಟಿಗಳಲ್ಲಿ ಸಾಕಷ್ಟು ಸಾಮ್ಯ ಉಂಟು. ಅಧಿಕಾರದ ಅಟ್ಟಳಿಗೆಯ ಒತ್ತುಗಂಬಗಳ ನೆರವಿನಿಂದ ನಿಂತಿರುವ ಪಳೆಯುಳಿಕೆ ಸಂಪ್ರದಾ

---

* ಕುವೆಂಪು ಅವರ ಎಪ್ಪತ್ತೇಳನೆಯ ಹುಟ್ಟು ಹಬ್ಬದಂದು ಮೈಸೂರಿನಲ್ಲಿ ಏರ್ಪಡಿಸಿದ್ದ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ.

ಯುಗಳ ವಿಷಯ ಒಕ್ಕೂಟಕ್ಕೆ ಎಸ್ಟಾಬ್ಲಿಷ್‌ಮೆಂಟ್ ಎಂಬ ಹೆಸರುಂಟು. ಐನ್‌ಸ್ಟೈನ್ ಹೇಗೋ ಕುವೆಂಪು ಹಾಗೆ ಈ ಎಸ್ಟಾಬ್ಲಿಷ್‌ಮೆಂಟನ್ನು ಪೂರ್ಣವಾಗಿ ತಿರಸ್ಕರಿಸಿದರು. "ವಾಸ್ತವತೆಯ ಅಥವಾ ಅಸ್ತಿತ್ವದ (ಸೃಷ್ಟಿಯ) ಕ್ರಮಬದ್ಧ ಸುಸಾಂಗತ್ಯದಲ್ಲಿ ಪ್ರಕಾಶಿತನಾಗುತ್ತಿರುವ ಸ್ಪಿನೋಝಾನ ದೇವರನ್ನು ನಂಬುತ್ತೇನೆ; ಜನರ ಅದೃಷ್ಟದ ಬಗ್ಗೆ ಚಿಂತಿಸುವ ದೇವರನ್ನಲ್ಲ," ಎಂದು ಐನ್‌ಸ್ಟೈನ್ ಘೋಷಿಸಿದರೆ

ಸುಂದರವಾಗಿರು: ಈ ಸೌಂದರ್ಯ,
ನಿನಗದೆ ಬಾಳಿನ ಸರ್ವೋತ್ತಮ ಕಾರ್ಯ
ಸೌಂದರ್ಯವೆ ಶಿವ ಕರ್ತವ್ಯ;
ಸೌಂದರ್ಯವೆ ಸರ್ವೋತ್ತಮ ಗಂತವ್ಯ:
ಸೌಂದರ್ಯವೆ ಸತ್,
ಸೌಂದರ್ಯವೆ ಚಿತ್,
ಸೌಂದರ್ಯವೆ ಆನಂದ:
ಆ ಸಾಧನೆಗಾಗಿಯೆ ಈ ಸೃಷ್ಟಿಯ ಬಂಧ,
ಆ ಸಿದ್ಧಿಗೆ ಮೀಸಲು ಮುಕ್ತಿಯ ನಿತ್ಯಾನಂದ;

–ಎಂದು ಕುವೆಂಪು ಹಾಡಿದರು. ಇಂಥವರು, ಲೌಕಿಕ ಪ್ರಪಂಚದ ವ್ಯಾಪಾರಗಳನ್ನು ನಿರಾಕರಿಸಿ ಭಾವನಾಲೋಕಗಾಮಿಗಳಾದದ್ದು ನಿರೀಕ್ಷಿತವೇ. ಅವರು ನ್ಯೂಟನ್ನನನ್ನು ಪ್ರಶ್ನಿಸಿ; ಹೊಸ ಜಾಡು ತುಳಿದರು. ಇವರು ಕೇಶಿರಾಜನನ್ನು ಎದುರಿಸಿ ಹೊಸ ಹಾಡು ಹಾಡಿದರು:

ಶಬ್ದಮಣಿದರ್ಪಣವ ನಿದ್ದೆಪೋಗುವ ಮುನ್ನ
ನಾನಿನ್ನು ಮುಂದೆಂದು ನೋಡುವುದೆ
ಇಲ್ಲೆಂದು
ಭೀಮನಂದದಿ ಪೊಣ್ದೊದರಿ
ಶಯನದಿಂದೆದ್ದೆ!

ಆತ್ಮವೃತ್ತದ ಪೀಠಿಕೆಯಲ್ಲಿ ಐನ್‌ಸ್ಟೈನ್ ಹೀಗೆ ಬರೆದಿದ್ದಾರೆ (೧೯೪೬) "ಇಲ್ಲಿ ನಾನು ನನ್ನ ಅರುವತ್ತೇಳನೆಯ ವಯಸ್ಸಿನಲ್ಲಿ ನನ್ನದೇ ಮರಣವಾರ್ತೆಯಂಥ ಒಂದು ಲೇಖನವನ್ನು ಬರೆಯಲು ಕುಳಿತಿದ್ದೇನೆ. ಡಾಕ್ಟರ್ ಶಿಲ್ಪ್ ನನ್ನನ್ನು ಹೀಗೆ ಮಾಡಲು ಒಪ್ಪಿಸಿದರೆಂಬ ಒಂದೇ ಕಾರಣಕ್ಕಾಗಿ ಇದನ್ನು ಮಾಡುತ್ತಿರುವುದಲ್ಲ; ಒಬ್ಬಾತನ ಕಾರ್ಯ ಮತ್ತು ಶೋಧನೆಗಳನ್ನು ಸಿಂಹಾವಲೋಕಿಸಿದಾಗ ಅವು ಆತನಿಗೆ ಹೇಗೆ ಕಾಣುತ್ತವೆಂಬುದನ್ನು ಆತನೊಡನೆ ದುಡಿಯುತ್ತಿದ್ದವರಿಗೆ ತೋರಿಸಿಕೊಳ್ಳುವುದು ಒಳ್ಳೆಯದೆಂಬ ಕಾರಣಕ್ಕಾಗಿಯೂ ಈ ಕೆಲಸಕ್ಕೆ ಕೈಹಾಕಿದ್ದೇನೆ. ಇಂಥ ಯಾವುದೇ ಪ್ರಯತ್ನ ಎಷ್ಟು ಅಪರಿಪೂರ್ಣವೆಂಬುದನ್ನು ಸ್ವಲ್ಪ ಆತ್ಮಶೋಧನಾನಂತರ ಅರಿತೆ. ಏಕೆಂದರೆ ಒಬ್ಬನ ಪ್ರವೃತ್ತ ಜೀವನ ಎಷ್ಟೇ ಸಂಕ್ಷೇಪ ಮತ್ತು ಸೀಮಿತವಾಗಿದ್ದರೂ ಅದರಲ್ಲಿ ದೋಷಮಾರ್ಗಗಳು ಎಷ್ಟೇ ಎದ್ದು ತೋರುವಂತಿದ್ದರೂ ನಿರೂಪಣಾರ್ಹ ಅಂಶ ಅಷ್ಟೇನೂ ಸಲೀಸಾಗಿ ಬರುವುದಂತೂ ಇಲ್ಲ—ಇಂದು ಅರುವತ್ತೇಳರಲ್ಲಿರುವ ವ್ಯಕ್ತಿ ಐವತ್ತರಲ್ಲಿ, ಮೂವತ್ತರಲ್ಲಿ ಅಥವಾ ಇಪ್ಪತ್ತರಲ್ಲಿ ಇದ್ದವನ ಹಾಗೆ ಖಂಡಿತ ಇರುವುದಿಲ್ಲ. ಒಂದೊಂದು ಹಳೆಯ ನೆನಪೂ ಇಂದಿನ ಪರಿಸ್ಥಿತಿಯಿಂದ ಬಣ್ಣ ಪಡೆದಿರುತ್ತದೆ. ಎಂದೇ ಇದೊಂದು ಮಿಥ್ಯಾದೃಷ್ಟಿಕೋನ. ಈ ಒಂದು ಪರಿಗಣನೆಯೇ ನಮ್ಮನ್ನು ಕಾರ್ಯವಿಮುಖರನ್ನಾಗಿಸಬಹುದು. ಹೀಗಿದ್ದಾಗ್ಯೂ ಬೇರೆ ಒಂದು ಪ್ರಜ್ಞೆಗೆ ಗಮ್ಯವಾಗದ ಅನೇಕ ಸಂಗತಿಗಳನ್ನು ಸ್ವಂತಾನುಭವದ ಮೂಸೆಯಿಂದ ಹೊರತೆಗೆಯುವುದು ಸಾಧ್ಯವಿದೆ."

ಇಲ್ಲಿ ಗಮನಿಸಬೇಕಾದ ಅಂಶ, "ಬೇರೆ ಒಂದು ಪ್ರಜ್ಞೆಗೆ ಗಮ್ಯವಾಗದ ಅನೇಕ ಸಂಗತಿಗಳನ್ನು ಸ್ವಂತಾನುಭವದ ಮೂಸೆಯಿಂದ ಹೊರತೆಗೆಯುವುದು ಸಾಧ್ಯವಿದೆ." ಈ ಮೂಸೆಯಿಂದ ಉದ್ಭವಿಸಿರುವ ಪುತ್ಥಳಿಯೇ 'ನೆನಪಿನ ದೋಣಿಯಲ್ಲಿ.'

ಪ್ರಸಕ್ತ ಗ್ರಂಥದಲ್ಲಿ ಈ "ಅನೇಕ ಸಂಗತಿಗಳನ್ನು" ಕೇವಲ ಅಧ್ಯಯನ ಸೌಕರ್ಯ ದೃಷ್ಟಿಯಿಂದ ಮೂರು ವಿಶಾಲ ವಿಭಾಗಗಳಲ್ಲಿ ಗುರುತಿಸಬಹುದು: ಲೌಕಿಕ ವ್ಯಕ್ತಿ ಕುವೆಂಪು, ಸಾಹಿತಿ ಕುವೆಂಪು, ಆಧ್ಯಾತ್ಮಿಕ ವ್ಯಕ್ತಿ ಕುವೆಂಪು.

ಲೌಕಿಕ ವ್ಯಕ್ತಿ ಕುವೆಂಪು

ಅವಿಭಕ್ತ ಕುಟುಂಬದಲ್ಲಿ ಹುಟ್ಟಿದ ಈ ತಾವರೆ ಚಿಕ್ಕಂದಿನಿಂದಲೇ ಸಾಂಸಾರಿಕ ವಿಚಾರಗಳ ಬಗ್ಗೆ [illegible] ದೃಷ್ಟಿ [illegible]. [illegible] [illegible] ಗಂಡನನ್ನು ಕಳೆದುಕೊಂಡು ಒಬ್ಬನೇ ಒಬ್ಬ ಮಗನ ಬಗ್ಗೆ ಕೊನೆಯಿಲ್ಲದ ಮಮತೆಯನ್ನು

ಗರ್ಭೀಕರಿಸಿಕೊಂಡಿದ್ದ ತಾಯಿ ಸೀತಮ್ಮನವರ ಮಾತೃವಾತ್ಸಲ್ಯ ಆಗ ಪುಟ್ಟಪ್ಪನವರಿಗೆ ಭಾವಗಮ್ಯವಾಗಿದ್ದರೂ ತಮ್ಮ ಪ್ರತಿಕ್ರಿಯೆಯನ್ನು ಅಥವಾ ಪ್ರತಿಸ್ಪಂದನವನ್ನು ಆ ಮಹಾತಾಯಿಗೆ ಅರ್ಥವಾಗುವ ರೀತಿಯಲ್ಲಿ – ಅಂದರೆ ಲೌಕಿಕ ಸಮತಲದಲ್ಲಿ – ಪ್ರಕಟಿಸಲಾರದವರಾಗಿದ್ದರು. ಅವರು ಬರೆಯುತ್ತಾರೆ (ಪುಟ ೬೪) "ಆದರೆ ಅವ್ವ ಮಾತ್ರ ಅಪ್ಪಯ್ಯನ ಸಾವಿನ ಘಾತದಿಂದ ತತ್ತರಿಸಿದವರು ಸಂಪೂರ್ಣವಾಗಿ ಚೇತರಿಸಿಕೊಳ್ಳಲೆ ಇಲ್ಲವೆಂದು ತೋರುತ್ತದೆ. ಹುಡುಗನಾಗಿದ್ದು, ಓದುವುದಕ್ಕೆಂದು ಮನೆ ಬಿಟ್ಟು ವರ್ಷದ ಬಹುಪಾಲೆಲ್ಲ ಹೊರಗಿದ್ದು, ರಜೆಗೆ ಮಾತ್ರ ಮನೆಗೆ ಬಂದರೂ, ವಿಶೇಷವಾಗಿ ಇತರ ಮನೆಮಕ್ಕಳೊಡನೆ ತೋಟ ಗದ್ದೆ ಕಾಡು ಬೇಟೆ ನಂಟರ ಮನೆ ಮೊದಲಾದ ಹವ್ಯಾಸಗಳಲ್ಲಿಯೆ ಆಸಕ್ತನಾಗಿರುತ್ತಿದ್ದ ಅಲಕ್ಷ್ಯ ಮನೋಭಾವದ ನನಗೆ ಅವ್ವನ ಸಂಗಡ ವೈಯಕ್ತಿಕ ವಿಷಯಗಳನ್ನು ಕುರಿತು ಮಾತಾಡುವ ಅವಕಾಶವೂ ಇರುತ್ತಿರಲಿಲ್ಲ; ಆಸಕ್ತಿಯೂ ಇರಲಿಲ್ಲ. ಹೀಗಾಗಿ ಅವರ ಹೃದಯದ ಬೇಗೆಯಲ್ಲಿ ನಾನು ಸಹಾನುಭೂತಿಯಿಂದ ಪಾಲುಗೊಳ್ಳಲೇ ಇಲ್ಲ. ಅವರನ್ನು ದಹಿಸುತ್ತಿದ್ದ ಅಪ್ಪಯ್ಯನ ಮರಣದ ಬೇಗೆಯ ಜೊತೆಗೆ ಸಂಸಾರದ ಈರ್ಷ್ಯಾದ್ವೇಷ ಅಸೂಯೆ ಕಾರ್ಪಣ್ಯಗಳ ಬೇಗೆಯೂ, ಇದ್ದ ಒಬ್ಬ ಮಗನ ಅಲಕ್ಷ್ಯದ ಬೇಗೆಯೂ ಸೇರಿ, ಅಪ್ಪಯ್ಯ ತೀರಿಕೊಂಡ ಎಂಟೇ ವರ್ಷಗಳಲ್ಲಿ ಅವರೂ ಸ್ವಾಮಿಯ ಪಾದಾರವಿಂದಕ್ಕೆ ಸೇರಿದರು."

ವೈಯಕ್ತಿಕ ಹಿತಾಸಕ್ತಿಗಳು ಎದುರಾದಾಗಲೆಲ್ಲ ಇದೇ "ಅಲಕ್ಷ್ಯ ಮನೋಭಾವ" ಮತ್ತೆ ಮತ್ತೆ ಪ್ರಕಟವಾಗುವುದನ್ನು ಕಾಣುತ್ತೇವೆ. ಪ್ರೀತಿಯ ತಂಗಿಯಂದಿರ ಅಕಾಲ ಮರಣವೇ ಆಗಲಿ, ಕಜ್ಜಿ ಜ್ವರ ಕೊನೆಗೆ ಘೋರ ಸಿಡುಬಿನಿಂದ ನರಳುತ್ತಿದ್ದ ತನ್ನ ಒಡಲಿನ ಪರಿವೆಯೇ ಆಗಲಿ, ವಿಶ್ವವಿದ್ಯಾನಿಲಯದ ನೌಕರಿಗೆ ದಾಖಲಾಗುವ ಸಂದರ್ಭವೇ ಆಗಲಿ, ಬಾಳ ಸಂಗಾತಿಯನ್ನು ಆಯುವ ಸುಮುಹೂರ್ತವೇ ಆಗಲಿ ಕುವೆಂಪು ಜೀವನಶ್ರುತಿ ಅದೇ – ತೋರ್ಕೆಗೆ ಸ್ಥಾವರ ಪ್ರಕೃತಿ, ನಿಜಕ್ಕೂ ವಿಶ್ವ



ಕುವೆಂಪು

ಗಾನಕ್ಕೆ ಮಿಡಿಸಿದ ಶ್ರುತಿ.

ಜೀವನಯಾಪನೆ ಸುಲಭವಲ್ಲದ ದಿನಗಳವು. ಎಲ್ಲ ಅಭ್ಯರ್ಥಿಗಳೂ ಹುದ್ದೆಯರಸಿ ಬಿದ್ದೆ ಎದ್ದೆ ಪರಿವೆ ಇಲ್ಲದೆ ಓಡುತ್ತಿರಬೇಕಾಗಿತ್ತು. ಆದರೆ ಭಾವಲೋಕವಿಹಾರಿ ಕುವೆಂಪು ಅವರನ್ನು ತತ್ಪೂರ್ವ ಮೈಸೂರಿನ ಸಂತೆಪೇಟೆಯ 'ಆನಂದ ಮಂದಿರ'ದ ರೌರವನರಕದಿಂದ ಶ್ರೀರಾಮಕೃಷ್ಣಾಶ್ರಮದ ಪ್ರಶಾಂತ ಮಂದಿರದ ಆಧ್ಯಾತ್ಮಿಕ ಸ್ವರ್ಗಕ್ಕೆ ಕೈಹಿಡಿದು ಮೇಲೆತ್ತಿದ್ದ ಪರಮಪೂಜ್ಯ ಸ್ವಾಮಿ ಸಿದ್ಧೇಶ್ವರಾನಂದರು ಮರ್ತ್ಯಲೋಕಕ್ಕೆ ಇಳಿಸಿದರು. ವಿಶ್ವವಿದ್ಯಾನಿಲಯದ ಕನ್ನಡ ಲೆಕ್ಚರರ್ ಹುದ್ದೆಗೆ ತಾವೇ ಅರ್ಜಿ ತರಿಸಿ ಪುಟ್ಟಪ್ಪನವರಿಂದ ಅದನ್ನು ಭರ್ತಿ ಮಾಡಿಸಿ ರವಾನಿಸಿದರು (೧೯೩೬) "ಆ ಸ್ಥಾನಕ್ಕೆ ಆ ವರ್ಷ ಕನ್ನಡ ಎಂ.ಎ. ಪಾಸು ಮಾಡಿದ್ದ ಯಾರು ಯಾರು ಅರ್ಜಿ ಸಲ್ಲಿಸಿದ್ದರೊ ನನಗೆ ತಿಳಿಯದು. ನಾನಂತೂ ಆ ವಿಚಾರವಾಗಿ ಯಾರ ಮನೆ ಮೆಟ್ಟಿಲನ್ನೂ ಹತ್ತಲಿಲ್ಲ; ಯಾರಿಂದಲೂ ಸಿಫಾರಸು ಮಾಡಿಸುವ ಗೋಜಿಗೆ ಹೋಗಲಿಲ್ಲ. ಫಲಿತಾಂಶದ ಕಡೆಗೆ ಇನಿತೂ ಗಮನವಿಲ್ಲದೆ

‘ದಿವ್ಯ ನಿರ್ಲಕ್ಷತೆ’ಯಿಂದಿದ್ದುಬಿಟ್ಟಿದ್ದೆ. ಆದರೂ ಇಂಟರ್‌ಮೀಡಿಯೆಟ್ ಕಾಲೇಜಿನ (ಈಗಿನ ಯುವರಾಜಾ ಕಾಲೇಜು) ಕನ್ನಡ ಲೆಕ್ಚರರ್ ಆಗಿ ಅಪಾಯಿಂಟ್‌ಮೆಂಟ್ ಆರ್ಡರ್ ನನ್ನ ಕೈಸೇರಿತು, ತಿಂಗಳಿಗೆ ೧೦೦ ರೂ. ಸಂಬಳದ ಮೇಲೆ.”

ಶ್ರೀ ದೇವಂಗಿ ರಾಮಣ್ಣಗೌಡರ ಮಗಳು ಕುಮಾರಿ ಹೇಮಾವತಿಯವರೊಡನೆ – ಹದಿನಾರು ವರ್ಷಗಳ ಹಿಂದೆ ಹುಟ್ಟಿದ ಈ ಶಿಶುವಿಗೆ ಆಗ ಹದಿನಾರರ ಹರೆಯದ ಕುವೆಂಪುವೇ ಈ ಹೆಸರನ್ನು ಸೂಚಿಸಿದವರು – ಕುವೆಂಪು ಅವರ ಮದುವೆ ನಿಶ್ಚಯವಾದುದರ ಬಗ್ಗೆ ಹೀಗೆ ಬರೆದಿದ್ದಾರೆ (೧೦೨೦) “ನನ್ನ ಮತ್ತು ಹೇಮಾವತಿಯ ಮದುವೆಗಿಂತಲೂ ಅರಂಜಿತವೂ ನೀರಸವೂ ಸಂಪ್ರದಾಯಸಾಮಾನ್ಯವೂ ಆಗಿರುವ ಘಟನೆ ಮತ್ತೊಂದಿರಲಾರದು ಎಂದು ಹೇಳಿ ಒಮ್ಮೆಗೇ ನಮ್ಮ ವಿಷಯಕವಾದ ರೊಮಾನ್ಸ್ ಭ್ರಾಂತಿಯನ್ನು ಸರ್ವರ ಮನಸ್ಸಿನಿಂದಲೂ ನಿರಸನಗೊಳಿಸಲು ಬಯಸುತ್ತೇನೆ.”

ಸಾಹಿತಿ ಕುವೆಂಪು

ಸಾಹಿತಿ ಕುವೆಂಪು ಹೇಗೆ ಮಲೆನಾಡಿನ ಸರ್ವ ಬೃಹತ್ತುಗಳನ್ನೂ ಸ್ವಾಂಗೀಕರಿಸಿಕೊಂಡು ಶ್ರದ್ಧಾಪೂರ್ವಕ ದುಡಿಮೆ, ನಿಷ್ಠಾಪೂರ್ವಕ ತಪಸ್ಸು, ಮತ್ತು ಸತತ ವಾಚನ ಚಿಂತನ ಮಂಥನಗಳಿಂದ ಅಂಬೆಗಾಲೂರಿ ತಿಪ್ಪತಿಪ್ಪ ನಡೆದು ಕೊನೆಗೆ ‘ಶ್ರೀರಾಮಾಯಣದರ್ಶನಂ’ ಮಹಾಕಾವ್ಯದ ಮೂಲಕ ಹನುಮಂತ ನೆಗೆತ ಸಾಧಿಸಲು ಸಮರ್ಥರಾದರು ಎನ್ನುವ ಬಹುಜನ ಅವೇದ್ಯ ಆದರೆ ಸರ್ವಜನ ಕುತೂಹಲಕಾರಿ ಸಂಗತಿಗಳಿಗೆ ‘ನೆನಪಿನ ದೋಣಿಯಲ್ಲಿ’ ಆಕರ ಗ್ರಂಥ.

ಆಧುನಿಕ ಕನ್ನಡದ ಈ ಮಹಾಚೇತನ ಇಂಗ್ಲಿಷ್‌ನ ಸಂಪದ್ಭರಿತ ರಂಗದಲ್ಲಿ ಕವನ ರಚನೆ ಮಾಡಿ ಸಿದ್ಧಿ ಗಳಿಸುತ್ತಿದ್ದ ಉಚ್ಛ್ರಾಯ ಕಾಲದಲ್ಲೇ ರಿಕ್ತ ಕನ್ನಡ ರಂಗವನ್ನು ಪ್ರವೇಶಿಸಬೇಕಾದದ್ದು ಇತಿಹಾಸದ ಸಂಕಲ್ಪವೆಂದು ಈಗ ಸ್ಪಷ್ಟವಾಗುತ್ತದೆ. ಇಂಗ್ಲಿಷ್ ಕವನ ರಚನೆಗೆ ಇವರು ಹೇಗೆ ಸೆಳೆಯಲ್ಪಟ್ಟರು ಎನ್ನುವುದು ಸ್ವಾರಸ್ಯಕರವಾಗಿದೆ (೧೪೩) “ನನಗೆ ನೆನಪಿರುವಂತೆ ನನ್ನ ಮೊದಲ ಇಂಗ್ಲಿಷ್ ಪದ್ಯ ಅತ್ಯಂತ ಆಕಸ್ಮಿಕ ಪ್ರೇರಣೆಯಿಂದ ತಯಾರಾದದ್ದು: ನನ್ನ ಗೆಳೆಯನೊಬ್ಬ ಚರಿತ್ರೆಯ ವಿದ್ಯಾರ್ಥಿ... ಅಕ್ಬರನ ವಿಷಯವನ್ನೋ ಔರಂಗಜೇಬನ ವಿಚಾರವನ್ನೋ ಪರೀಕ್ಷೆಗಾಗಿ ಬಾಯಿಪಾಠ ಮಾಡುತ್ತಿದ್ದ. ಮತ್ತೆ ಮತ್ತೆ ಮರೆತುಹೋಗುತ್ತಿತ್ತು. ನಾನು ಅವನಿಗೆ ಹೇಳಿದೆ: ಆ ಚರಿತ್ರೆಯ ಸಂಗತಿಗಳನ್ನು ನಾನು ಇಂಗ್ಲಿಷಿನಲ್ಲಿ ಪದ್ಯದಂತೆ ರಚಿಸಿಕೊಡುತ್ತೇನೆ, ಛಂದಸ್ಸು ಪ್ರಾಸಬದ್ಧವಾಗಿ. ಆಗ ಬಾಯಿಪಾಠ ಮಾಡಲು ಸುಲಭವಾಗುತ್ತದೆ. ಪರೀಕ್ಷೆಯಲ್ಲಿ ಆ ವಿಷಯಗಳನ್ನು ಬಾಯಿಪಾಠ ಮಾಡಿದ ಪದ್ಯವನ್ನು ಹೇಳಿಕೊಂಡು ತಿಳಿದರೆ, ಬರೆಯಲು ಸುಲಭವಾಗುತ್ತದೆ – ಎಂದು. ಅವನು ಸಂತಸದಿಂದ ಒಪ್ಪಿದ. ನಾನು ‘ಅಕ್ಬರ್ಸ್ ಟೂಂಬ್’ ಎಂದೊ ‘ಔರಂಗಜೇಬ್ಸ್ ಟೂಂಬ್’ ಎಂದೊ ಹೆಸರಿಟ್ಟುಕೊಂಡು ಒಂದಷ್ಟು ಪಂಕ್ತಿ ಪದ್ಯ ತಯಾರಿಸಿದೆ. ಆ ಪುಣ್ಯಾತ್ಮ ಅದನ್ನು ಸುಲಭದಲ್ಲಿ ಬಾಯಿಪಾಠ ಮಾಡಿ, ಬೇರೆ ವಿಷಯಗಳ ಮೇಲೂ ಇನ್ನಷ್ಟು ಪದ್ಯ ಬರೆದುಕೊಡಲು ಅಂಗಲಾಚಿದ. ವರ ಅನುಗ್ರಹಿಸುವ ದೇವತೆಯಂತೆ ನಾನೂ ಹೆಮ್ಮೆಯಿಂದಲೆ ಇನ್ನಷ್ಟು ಪದ್ಯ ತಯಾರಿಸಿಕೊಟ್ಟೆ. ಅದರಿಂದ ಅವನ ಪರೀಕ್ಷೆಗೆ ತುಂಬ ಅನುಕೂಲವಾಯಿತಂತೆ! ಹೇಗೋ ಅಂತೂ ಇಂಗ್ಲಿಷ್‌ನಲ್ಲಿ ಪದ್ಯ ರಚಿಸುವುದಕ್ಕೆ ಪ್ರಾರಂಭದ ಗುದ್ದಲಿಪೂಜೆಯಾಯಿತು ಆ ಘಟನೆ.”

ಕನ್ನಡ ಕುವರ ಪುಟ್ಟಪ್ಪ ಬೆಳೆದು ಬಂದ ದೇಶಕಾಲ ಪರಿಸರದಲ್ಲಿ ಕನ್ನಡ ಬೆಳೆಯುವುದೂ ಬೆಳೆದು ವರ್ಧಿಸುವುದೂ ಕನಸಾಗಿತ್ತು (೧೪೧) “ಆಗ ಪಾಠಗಳೆಲ್ಲ ಇಂಗ್ಲಿಷ್ ಮಾಧ್ಯಮದಲ್ಲಿಯೇ ನಡೆಯುತ್ತಿದ್ದುವು. ಕನ್ನಡ ಮಾಧ್ಯಮದಲ್ಲಿ ಅವು ನಡೆಯಲು ಸಾಧ್ಯವೆಂಬ ಅತ್ಯಂತ ದೂರದ ಊಹೆಯೂ ಯಾರೊಬ್ಬರಿಗೂ ಇದ್ದಿಲ್ಲ... (ಇಂಗ್ಲಿಷ್ ಅಧ್ಯಾಪಕರು ಇಂಗ್ಲಿಷ್ ಪಾಠ ಮಾಡುವಾಗ ಕನ್ನಡದ ಪ್ರಯೋಗ ನಿಷಿದ್ಧವಾಗಿತ್ತು.

ಹಾಗೇನಾದರೂ ಮಾಡಿದರೆ ಬೋಧನೆಯ ಪವಿತ್ರತೆಗೇ ಭಂಗವೆಂದು ಭಾವಿಸಲಾಗುತ್ತಿತ್ತು. ಕನ್ನಡದಲ್ಲಿ ಮಾತಾಡುವುದು ಅವಮಾನಕರವೆಂದೂ ಸರ್ವರೂ ಒಪ್ಪಿಕೊಂಡ ವಿಷಯವಾಗಿತ್ತು.)" ಇಂದಾದರೂ (೧೯೮೦) ಪರಿಸ್ಥಿತಿ ಸುಧಾರಿಸಿರುವಂತೆ ತೋರುವುದಿಲ್ಲ.

ಮುಂದೆ ಆಂಗ್ಲ ಕವಿ ಜೇಮ್ಸ್ ಎಚ್. ಕಸಿನ್ಸ್ ಮಹಾಶಯರಿಂದ ತರುಣ ಇಂಗ್ಲಿಷ್ ಕವಿ ಪುಟ್ಟಪ್ಪನವರ "ತೇಜೋವಧೆಯಾದಂತಾಗಿ ಸಿರಾಶೆ"ಯಾಗುವ ತನಕ ಇವರ ಕನ್ನಡ ಕೃತಿ ಮುಖ್ಯತಃ 'ಅಮಲನ ಕಥೆ' ಮತ್ತು ಇತರ ಒಂದೆರಡು ಕವನ ಬರೆಯುವಷ್ಟಕ್ಕೆ ಮಾತ್ರ ಸೀಮಿತವಾಗಿತ್ತು (೩೬೯). "ಕನ್ನಡದಲ್ಲಿ, ಇಂಗ್ಲಿಷಿನಲ್ಲಿ ಸಾಧ್ಯವಾಗುವಂತೆ ಉದಾತ್ತ ಭಾವನೆಗಳನ್ನು ಉನ್ನತ ಆಲೋಚನೆಗಳನ್ನು ಹೇಳಲು ಸಾಧ್ಯವಾಗುವುದಿಲ್ಲ. ಆ ಭಾಷೆಯ ಮಟ್ಟ ಬಹಳ ಕೀಳು. ಅಲ್ಲದೆ ಅದರಲ್ಲಿರುವ ಛಂದಸ್ಸು ಹಳೆಯ ಕಂದಾಚಾರದ ಛಂದಸ್ಸು. ವೃತ್ತ, ಕಂದ ಇತ್ಯಾದಿ. ಇಂಗ್ಲಿಷಿನಲ್ಲಿರುವ ಛಂದೋವೈವಿಧ್ಯ ಇಲ್ಲವೇ ಇಲ್ಲ." ಇದು ಕಾಲೇಜ್ ವಿದ್ಯಾರ್ಥಿ ಪುಟ್ಟಪ್ಪನವರ ಖಚಿತ ನಿಲವು. ಕಸಿನ್ಸ್ ನೀಡಿದ ಸಕಾಲಿಕ ಎಚ್ಚರಿಕೆಯ ನುಡಿ ಪ್ರವಾದಿ ವಾಣಿ ಸದೃಶವಾಯಿತು (೩೬೫). "ಈಗ ನೋಡಿ ಬಂಗಾಳಿ ಭಾಷೆ. ನೀವು ನಿಮ್ಮ ಭಾಷೆಯನ್ನು ಕುರಿತು ಹೇಳಿದಂತೆಯೆ ಅದೂ ಇತ್ತು. ರವೀಂದ್ರನಾಥ ಠಾಕೂರರು ಬಂದರು. ಹೊಸ ರೀತಿಯಲ್ಲಿ ಬರೆದರು. ಹೊಸ ಛಂದಸ್ಸುಗಳನ್ನು ಕಂಡು ಹಿಡಿದರು. ಅವರಿಗೆ ನೋಬೆಲ್ ಬಹುಮಾನವೂ ಬಂದಿತು! ಹಾಗೆಯೆ ನೀವು ಹೊಸ ಹೊಸ ಛಂದಸ್ಸುಗಳನ್ನು ಕಂಡುಹಿಡಿದು, ಹೊಸ ಹೊಸ ಪ್ರಯೋಗಗಳನ್ನು ಪದಪ್ರಯೋಗಗಳನ್ನು ಸಾಧಿಸಿ, ಹೊಸ ರೀತಿಯ ಸಾಹಿತ್ಯ ಸೃಷ್ಟಿ ಮಾಡಬೇಕು... ನೀವು ಇಂಗ್ಲಿಷಿನಲ್ಲಿ ಸೃಜನಸಾಹಿತ್ಯ ಸೃಷ್ಟಿ ಮಾಡಲಾರಿರಿ."

ಸ್ವಕೀಯ ಪರಿಸರದಿಂದ ಹೀರಿಕೊಂಡ ಪೋಷಕಗಳನ್ನು ಪರಕೀಯ ಕಾವ್ಯಮಾಧ್ಯಮದ ಮೂಲಕ ವೈವಿಧ್ಯಪೂರ್ಣವಾಗಿಯೂ ಆಕರ್ಷಕವಾಗಿಯೂ ಆ ತನಕ ಅಭಿವ್ಯಕ್ತಿಸಿದ್ದ ಈ ಕವಿಚೇತನ ಕನ್ನಡದಲ್ಲಿ ಬರೆದ ಮೊದಲ ಕವನ 'ಪೂವು'ವನ್ನು ಕುರಿತು ಅವರೇ ಮಾಡಿರುವ ಟೀಕೆ (೩೭೧) "ಈ ಮೊದಲ ತೊದಲ ಕವನವು ಉತ್ತಮ ಕವಿತೆಗೆ ಭಾಷಾಪ್ರಭುತ್ವ ಎಷ್ಟರ ಮಟ್ಟಿಗೆ ಅವಶ್ಯಕ ಎಂಬುದನ್ನು ತೋರಿಸುತ್ತದೆ." ಇಂಗ್ಲಿಷನ್ನು ಅರಗಿಸಿಕೊಂಡಿದ್ದ ಕುವೆಂಪು ಅವರಿಗೆ ಕನ್ನಡದಲ್ಲಿ ಪ್ರಾವೀಣ್ಯ ಗಳಿಸುವುದು ಏನೂ ಕಷ್ಟವಾಗಲಿಲ್ಲ. ಯಮ ಸಾಧನೆ ಮಾಡಿ ಅಭಿಜಾತ ಸಾಹಿತ್ಯ, ವ್ಯಾಕರಣ, ಶಬ್ದಮಣಿದರ್ಪಣ ಎಲ್ಲವನ್ನೂ ತಳಸ್ಪರ್ಶಿಯಾಗಿ ಅಭ್ಯಸಿಸಿದರು. ಇವುಗಳ ಗಂಭೀರ ಅಧ್ಯಯನದ ಬಗ್ಗೆ ತಿರೋಮುಖಿಗಳಾಗಿರುವ ಇಂದಿನ ಬಹುಮಂದಿ ಹೊಸವ ಲೇಖಕರಿಗೆ – ಅವರು ಸಾಹಿತ್ಯ ಕೃಷಿಕರಾಗಿರಬಹುದು. ಮಾನವಿಕ ಕೃಷಿಕರಾಗಿರಬಹುದು. ವಿಜ್ಞಾನ ಕೃಷಿಕರಾಗಿರಬಹುದು – ಪುಟ್ಟಪ್ಪನವರ ಈ ಶಾಸ್ತ್ರ ಕವಾಯತಿ ನಿಜಕ್ಕೂ ಮಾರ್ಗದರ್ಶಕ. ಇವರ ಪದ ಪ್ರಯೋಗಗಳು, ಉಪಮೆಗಳು, ಕಿರಿದರಲ್ಲಿ ಹಿರಿದರ್ಥವನ್ನು ಹಿಡಿದಿಡುವ ಚಾಕಚಕ್ಯ. ಪದ್ಯದಲ್ಲಿ ಹೇಗೊ ಗದ್ಯದಲ್ಲಿ ಹಾಗೆ ಅನುರಣಿಸುವ ಲಯ ವಿನ್ಯಾಸ ಒಂದೊಂದೂ ಗಮನಾರ್ಹ. ಪ್ರತಿಭೆಯ ಜೀವಸ್ಪರ್ಶವಾಗದ ಶಾಸ್ತ್ರ ಬರಿದೆ ಶವ. ಶಾಸ್ತ್ರದ ಕಂಕಾಲವಿರದ ಪ್ರತಿಭೆ ಬರಿದೆ ಗೊಸಂಬಟ್ಟೆ. ಪ್ರತಿಭೆ ಶಾಸ್ತ್ರಗಳ ಮಧುರ ಸಂಗಮವೇ ಜ್ವಲಂತ ಸಾಹಿತ್ಯದ ಆಧಾರ. 'ನೆನಪಿನ ದೋಣಿಯಲ್ಲಿ.' ಇದಕ್ಕೊಂದು ಉಜ್ವಲ ನಿದರ್ಶನ.

ಆಧ್ಯಾತ್ಮಿಕ ವ್ಯಕ್ತಿ ಕುವೆಂಪು

ಪುಟ್ಟಪ್ಪನವರ ಬದುಕಿನಲ್ಲಿ ಅಧ್ಯಾತ್ಮ-ಕಾವ್ಯ ಸಂಬಂಧ ಸಯಾಮಿ ಅವಳಿಗಂಥ ಉಸಿರು ಆಸುವಿನಂಥ, ನೇಸರು ಬೆಳಕಿನಂಥ ಅವಿನಾ ಸಂಬಂಧ. ಜೈನ ಪರಂಪರೆಯ ಛಾಯೆ, ಮನೆಯಲ್ಲಿ ಜರುಗುತ್ತಿದ್ದ ಸಾಂಪ್ರದಾಯಿಕ ದೇವ ಗಣಾರಾಧನೆ, ಮುಂದೆ ಮೋಸಸ್ ಮೇಷ್ಟರು ಬೋಧಿಸಿದ ಮಾರ್ಕನ ಸುವಾರ್ತೆ ಇವೆಲ್ಲವೂ ಎರಕಗೊಂಡು ಬಾಲಕ ಪುಟ್ಟಪ್ಪ ಮಾಂಸಾಹಾರ ವರ್ಜಿಸಲು ಶಪಥಮಾಡಿದರು. ಅದೇನು ಸಾಧಾರಣವಾದದ್ದೇ! (೭೮) "ಆ ಸಿರ್ಧಾರ ಬುದ್ಧನ

ಪತ್ನೀ ಪುತ್ರ ರಾಜ್ಯ ಪರಿತ್ಯಾಗಕ್ಕಿಂತಲೂ ಕಡಿಮೆ ಯಾಗಿರಲಿಲ್ಲವೆಂದು ಮಾಂಸಾಹಾರದ ರುಚಿಯರಿತ ನಾಲಗೆಗಳಿಲ್ಲದೆ ಉಳಿದವರಿಗೆ ಗೊತ್ತಾಗುವುದಿಲ್ಲ!" ಇದರಲ್ಲಿಯ ಲಘು ಪರಿಹಾಸ ಹಾಗಿರಲಿ, ಇವರ ಅಂತಃಪ್ರಜ್ಞೆ ಯಾವುದರತ್ತ ತುಡಿಯುತ್ತಿತ್ತೆಂಬುದನ್ನು ಇಲ್ಲಿ ಚೆನ್ನಾಗಿ ಗುರುತಿಸಬಹುದು. ಅವರೇ ಬರೆದಿರುವಂತೆ

ಮನ್ಮನೋಮಂದಿರಕೆ, ಓ
ಲೋಕಗುರುಗಳೆಲ್ಲ ಬನ್ನಿ!
 ಬನ್ನಿ, ಬನ್ನಿ, ಬನ್ನಿ!
 ತುಳಿಯೆ ನಿಮ್ಮ ಪದತಲ
ದಲ ದಲ ದಲ ಅರಳ್ವುದೆನ್ನ
 ಶಿರಃಕಮಲಕುಟ್ಮಲ!
ತಮೋತಿಮಿರವಳಿಯಲಲ್ಲಿ.
 ಪರಂಜ್ಯೋತಿ ಬೆಳಗಲಿ;
ಋತದ ಶಿವದ ಆನಂದದ
 ಚಿದ್‌ವಿಭೂತಿ ತೊಳಗಲಿ.

ಅದ್ವೈತ, ಭಗವದ್ಗೀತೆ, ಅನುಭಾವ ಮುಂತಾದ ಹಾದಿಗಳಿಂದ ಅವಸ್ಯದೆಡೆಗೆ ಗಮಿಸುತ್ತಿದ್ದ ಇವರ ಚೇತನ ಅರ್ಥರಹಿತ ವಿಧಿಗಳನ್ನೂ ಅಂಧಧರ್ಮಾಚರಣೆಗಳನ್ನೂ ಪೂರ್ಣವಾಗಿ ತಿರಸ್ಕರಿಸಿತು. ಬಾಲಕೃಷ್ಣ ಇವರ ಸಂಗಾತಿಯಾಗಿ ವೆನ್ನದೋಸೆ ತಿಂದ. ಸಿಡುಬಿನಿಂದ ನರಳಿ ಕೊನೆ ಉಸಿರೆಳೆಯುವುದರಲ್ಲಿದ್ದ ಎಲುಬಿನ ಗೂಡಿಗೆ ಸ್ವಾಮಿ ವಿವೇಕಾನಂದರ ಶಕ್ತಿ ಆವಾಹಿತವಾಗಿ ಪುನರ್ಜನ್ಮ ಪಡೆದರು (೭೪೭) "ಬಹಿರಂಗದ ಈ ರೋಗನಾಟಕದ ತೆರೆಯ ಹಿಂದೆ ಅಂತರಂಗದ ಒಂದು ಯೋಗನಾಟಕವೇ ನಡೆದುಹೋಯಿತು."

ಮುಂದೆ ೧೯೫೫ ಅಕ್ಟೋಬರ್ ೮ರಂದು ಕುವೆಂಪು ಅವರು ಶ್ರೀರಾಮಕೃಷ್ಣಾಶ್ರಮದ ಶ್ರೀಮತ್ ಸ್ವಾಮಿ ಶಿವಾನಂದಜಿಯವರಿಂದ ಮಂತ್ರದೀಕ್ಷೆ ಪಡೆದರು. ಅಂದಮೇಲೆ ಇವರೊಂದು ಜಪಮಾಲೆ ಇರಿಸಿಕೊಳ್ಳಲೇಬೇಕಷ್ಟೆ (೮೭೮) "ಸಾಮಾನ್ಯವಾಗಿ ಮಂತ್ರದೀಕ್ಷೆ ಪಡೆದವರೆಲ್ಲ ಜಪಮಾಲೆಯಿಡುವುದು ವಾಡಿಕೆ. ಆದರೆ ನನ್ನ ಕವಿಚೇತನಕ್ಕೆ ಅಂತಹ ಸಂಪ್ರದಾಯದ ಸಂಕೋಲೆಯ ಶಿಸ್ತು ಒಡಿಸುವುದಿಲ್ಲವಾದ್ದರಿಂದ ಒಲ್ಲೆ ಎಂದುಬಿಟ್ಟೆ. ಕವಿಯ ಸಾಧನಮಾರ್ಗವೇ ಬೇರೆ, ಸಂನ್ಯಾಸಿಯ ಸಾಧನಮಾರ್ಗವೇ ಬೇರೆ." ಆಗ ಇವರು ಬರೆದ ಕವನದ ಒಂದು ನುಡಿ ಇವರ ಆಧ್ಯಾತ್ಮಿಕ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ:

ಜೀವನವನಿತುಂ ಜಪವೆನಗಾಗಿರೆ
ಜಪಗಿಪ ಮಣಿಗಣ ಮಾಲೆಯದೇಕೆ?
ಸುಂದರ ಜಗ ಶಿವಮಂದಿರವಾಗಿರೆ
ಅಂಥತೆ ಕವಿದಿಹ ದೇಗುಲವೇಕೆ?

ಯಾನ ವಿರಾಮ

'ನೆನಪಿನ ದೋಣಿಯಲ್ಲಿ' ಗ್ರಂಥ ಪೂರ್ತಿ ಬರೆದು ಮುಗಿದಿಲ್ಲ. ಆದ್ದರಿಂದ ನನ್ನ ಲೇಖನದ ಈ ಪರಿಚ್ಛೇದಕ್ಕೆ 'ಯಾನ ವಿರಾಮ'ವೆಂಬ ಶೀರ್ಷಿಕೆ ನೀಡಿದ್ದೇನೆ.

ಕುವೆಂಪು ಅವರ ಕಾವ್ಯಮಯ ಗದ್ಯದಸತ್ತ್ವ 'ನೆನಪಿನ ದೋಣಿಯಲ್ಲಿ' ಕೂಡ ಮತ್ತೆ ಮತ್ತೆ ಪ್ರಕಟಗೊಂಡು ವಿಶೇಷ ಅನುಭವವನ್ನು ಕೊಡುತ್ತದೆ. ಪುಸ್ತಕವನ್ನು ಓದಲು ಕೈಗೆತ್ತಿಕೊಂಡರೆ ಸಾಕು: ಘಟನೆಗಳ ಸಾಲೇ ಸಾಲು ತ್ವರಿತಗತಿಯಿಂದ ದೃಕ್ಪಟಲದ ಮುಂದೆ ಸರಿಯತೊಡಗುತ್ತದೆ. ಭಾಷೆಯು ಪಾತ್ರ ಓದುಗನ ಮನಸ್ಸಿಗೂ ಘಟನೆಗಳ ಸರಣಿಗೂ ನಡುವಿನ ಮಾಧ್ಯಮವಾಗಿ ಸಾರ್ಥಕಗೊಳ್ಳುವುದರಲ್ಲಿ ಮಾತ್ರ. ಯಾವ ಶಾಸ್ತ್ರಗ್ರಂಥ ಅಥವಾ ನಿಘಂಟು ಓದಿದಾಗ ಲಭಿಸದ ಭಾಷಾಪ್ರಾವೀಣ್ಯ ಪದಾರ್ಥ ಜ್ಞಾನ ಓದುಗನಿಗೆ ಇಲ್ಲಿ ಅಪ್ರಯತ್ನಿತವಾಗಿ ಮೈಗೂಡಿರುತ್ತದೆ. ಆದ್ದರಿಂದಲೇ ಪ್ರಸಕ್ತ ಲೇಖನಕ್ಕೆ 'ರಸಯಾನ' ಎಂಬ ಹೆಸರಿಟ್ಟಿರುವುದಾಗಿದೆ. ಕುವೆಂಪು ಅವರ ಜೊತೆ "ವಾಗ್ದೇವಿಯಮೃತ ರಸನೆಯ ಲಸನ್ ನಾವೆಯಂ" ಏರಿ ಅವರ ಸಹ ಪ್ರಯಾಣಿಕರಾಗಿ ಸಾಗುವ ಸಹೃದಯರಿಗೆ ಇದರಲ್ಲಿ ಅನೇಕ ಆಕರ್ಷಕ ರಸಪ್ರಸಂಗಗಳು ಬಹುಮಾನಗಳಾಗಿ ಲಭಿಸುತ್ತವೆ. ಅವುಗಳಲ್ಲಿ ಪ್ರಕಟವಾಗುವ ವರ್ಣನಾವೈಖರಿ, ಸೂಕ್ಷ್ಮ ಮತ್ತು ದೂರದೃಷ್ಟಿ, ಕೋಮಲ ಪರಿಹಾಸ, ಮತ್ತು ಎಲ್ಲಕ್ಕೂ ಮಿಗಿಲಾಗಿ ಜೀವನದ ಸಕಲ ವ್ಯಾಪಾರಗಳ ಬಗ್ಗೆ ಇರುವ ಆರೋಗ್ಯಕರ ಶ್ರದ್ಧೆ ಆಸ್ವಾದ್ಯಕರವಾದವು.

ಬಾಲ್ಯದಿನಗಳ ಸ್ನೇಹಿ ಅಪ್ಪುವಿನ ಮಧುರ ಸ್ಮರಣೆ ಇಳಿಹರೆಯದ ದಿನಗಳಲ್ಲಿ ಇಂಗು ತಿಂದ

ಸಿಂಗಲೀಕತನಕ್ಕೆ ಎಡೆಮಾಡಿಕೊಟ್ಟವರ ಮರ್ನಾಸೆ ಹೆಮ್ಮಿಂಗ್‌ವೇಯ 'ಓಲ್ಡ್ ಮ್ಯಾನ್ ಅಂಡ್ ಸೀ'ಯಲ್ಲಿಯ ಮುದುಕನಂತೆ ನೀರಿಗೆ ಗಾಳ ಹಾಕಿ ಎಳೆದೂ ಎಳೆದೂ ಕೊನೆಗೂ ಬಂದ ಆದಿಮತ್ಸ್ಯಾವತಾರದ ಪೂರ್ವಜ ಹೆಮ್ಮಲಗದ ಸುವಾಸನೆ, ಮಲೆನಾಡಿನ ಡರ್ಶುನ್ ಬಕಾಸುರ ರೊಟ್ಟಿಗಳ ಭೀಮ ಸಂಹಾರದ ಮಹಾನಿರ್ಯಾಣ, ಕದಿನಿ ಪ್ರಯೋಗದ ಮೂಕ ಶೋಕ, ಶಿವಮೊಗ್ಗಕ್ಕೆ ಗಾಡಿ ಪಯಣದ ಸರಸಯಾತ್ರೆ, ಕಿಲಸ್ತ್ರರ ಡಿಸೋಜ ಶಂಕರ ಭಟ್ಟರ ಬ್ರಹ್ಮ ತೇಜಸ್ಸಿನೆದುರು ಬಿದರಳ್ಳಿ ಸುಬ್ಬೇಗೌಡರ ಮಗನಾಗಿ ಜನ್ಮಾಂತರಿಸಿದ್ದು, 'ಆನಂದ ಮಂದಿರ' ಹೋಟೆಲಿನ ಕೊಠಡಿಯಲ್ಲಿ ತಿಗಣೆ ಹನನ ಮತ್ತು ನಸ್ಯ ಚಿತ್ರಕಲೆ, ಪಂಚೆಯ ತ್ರಿವಿಕ್ರಮಾವತಾರ, ನೈಘರಿಸ ಸುತ್ತ ಎದ್ದ ರಾದ್ಧಾಂತ ನಿಸರ್ಗ ವರ್ಣನೆಯ ವೈಖರಿ, ಮೃಗಯಾವಿಹಾರ ವಿನೋದಗಳ ಕೌಶಲ ಮತ್ತು ದಿಟ್ಟತನ ಇವು ಒಂದೊಂದು ಘಟನೆಯನ್ನೂ ಬಾಯಿ ಚಪ್ಪರಿಸಿಕೊಂಡು ಓದಬೇಕಾಗುತ್ತದೆ.

ಇವರ ನಿತ್ಯಹರಿದ್ವರ್ಣದ ಹಾಸ್ಯಪ್ರಜ್ಞೆ ವಿಶಿಷ್ಟವಾದದ್ದು. ಸನ್ನಿವೇಶ ಎಷ್ಟೆಷ್ಟು ಕ್ಷುಲ್ಲಕವಾಗುವುದೋ ಅದನ್ನು ಕುಂಚಿಸುವ ಇವರ ಭಾಷೆ ಅಷ್ಟಷ್ಟು ಶ್ರೀಮದ್ಗಂಭೀರವಾಗುವುದು. ಸರಿ, ಓದುಗ ಏನೋ ಮಹತ್ತು ಆಗಮಿಸಲಿದೆ ಎಂದು ಜಾಬೂಸವಾರಿಯ ಪ್ರತೀಕ್ಷೆಯಲ್ಲಿ ಬಟ್ಟೆ ತಯಾರಿಸುತ್ತಾನೆ; ಕೆಂಬಟ್ಟೆಯನ್ನೂ ಹಾಸುತ್ತಾನೆ. ಅಷ್ಟರಲ್ಲೇ ಅಗೊ ಬಂತು, ಬಂತು; ಏನು ಬಂತು? ಒಂದು ಸುಂಡಿಲಿ! ಹಿಮಾಲಯದ ಮಹೋನ್ನತಾಗ್ರದಿಂದ ಶಾಂತಸಾಗರದ ಅತಿನಿಮ್ನ ತಳಕ್ಕೆ ಹಠಾತ್ತಾಗಿ ಕಡೆಯಲ್ಪಟ್ಟ ವಾಚಕನ ನಗೆಯ ಹೊನಲಿಗೆ ಅದೇ ಶಾಂತಸಾಗರದ ಭೋರ್ಗರೆವ ತರಂಗಾಟ್ಟಹಾಸ ಮಾತ್ರ ಸಮತೂಕವಾಗಬಹುದೋ ಏನೋ! ಪುಟ ೪೭–೪೮ ರಲ್ಲಿ ಬರುವ ನಾಯೂನು ಆಖ್ಯಾನಕ, ಪುಟ ೭೩–೭೪ರಲ್ಲಿ ಬರುವ ಅರೆಕೊಪ್ಪನ ಹೆಮ್ಮಲಗ ಪ್ರಕರಣ, ಪುಟ೧೬೭ರಲ್ಲಿ ಬರುವ ತೋಪಿಮುಜ್ಞ ಮುಂತಾದ ರಸಪ್ರಸಂಗಗಳ ಸ್ವಾರಸ್ಯವನ್ನು ಮೂಲದಲ್ಲಿ ಓದಿಯೇ ಸವಿಯಬೇಕು.

ಅನೇಕ ಮಂದಿ ನಿಷ್ಕ್ರಿಯಾವಂತರು ಮತ್ತು ನಿಷ್ಪ್ರಾರಂಭಿಗಳು (ನಾನ್‌ಡೂಅರ್ಸ್ ಅಂಡ್ ನಾನ್‌ಸ್ಟಾರ್ಟರ್ಸ್) ಇಂದು ಒಂದು ತೆರನಾದ ಭ್ರಾಂತಿಜನ್ಯವಾದದಿಂದ ತಮ್ಮ ನಿಷ್ಕ್ರಿಯತೆಯನ್ನು ಸಮರ್ಥಿಸಿಕೊಳ್ಳುವುದು ಅಪರೂಪವಲ್ಲ. ಅವರ ವಾದರಸಣಿ ಹೀಗಿರುತ್ತದೆ: ಪುಟ್ಟಪ್ಪನವರ ಪ್ರತಿಭೆ ಜನ್ಮತಃ ಪ್ರಾಪ್ತವಾದದ್ದು. ವಾಲ್ಮೀಕಿಯ ಹಾಗೆ. ಅವರು ಹಾಡಿದ್ದು ಪದ್ಯವಾಯಿತು ಬರೆದದ್ದು ಗದ್ಯವಾಯಿತು. ಎರಡೂ ಮಾದರಿಗಳಾದವು. ಆ ಪ್ರತಿಭೆ ಇರದ ನಾವು ಅವರಂತಾಗುವುದು ಸಾಧ್ಯವೇ ? ನಿಜ, ನಾವು ಕುವೆಂಪು ಎತ್ತರ ಏರಲಾರೆವು. ಆದರೆ ಅವರ ಪ್ರಯತ್ನ? ಅವರು ಎತ್ತರ ಏರಿರುವುದರ ಹಿನ್ನೆಲೆಯ ಸಾಧನೆ ಯಾವ ಮಟ್ಟದ್ದು ಎನ್ನುವುದನ್ನು 'ನೆನಪಿನ ದೋಣಿಯಲ್ಲಿ' ಚೆನ್ನಾಗಿ ಓದಿ ತಿಳಿಯಬಹುದು, ತಿಳಿದು ಭರವಸೆ ತಳೆಯಬಹುದು. ಹುಟ್ಟಿನಿಂದ ಇತರರಂತೆಯೇ ಸಾಮಾನ್ಯ ಬಾಲಕ ಆಗಿದ್ದು, ಶಿಕ್ಷಣದ ಬಗ್ಗೆ ಆಗಲಿ ಭವಿಷ್ಯದ ಬಗ್ಗೆ ಆಗಲಿ ಯಾವ ನಿಶ್ಚಿತ ಧೋರಣೆ ಪ್ರಕಟವಾಗಿ ಇರದೆ ಬಾಳ ಹೊನಲಿನಲ್ಲಿ ತೇಲುತ್ತ ಮುಳುಗುತ್ತ ಮುಂದುವರಿದ ಪುಟ್ಟಪ್ಪನವರು ಹೇಗೆ 'ವಸಂತ ಕಾಲೇ ಸಂಪ್ರಾಪ್ತೇ ಪಿಕಃ ಪಿಕಃ' ಆಗಿ ರೂಪಪರಿವರ್ತನೆಗೊಂಡು ಕನ್ನಡದ ಕೋಗಿಲೆ ಆದರು ಎನ್ನುವುದನ್ನು ಇಲ್ಲಿ ಹಂತ ಹಂತವಾಗಿ ಕಾಣುತ್ತೇವೆ. ಕುವೆಂಪು ಕನ್ನಡದ ಮಹಾಚೇತನವಾದದ್ದು ಆಕಸ್ಮಿಕತೆಯ ಘಾತವಲ್ಲ, ಅನಿವಾರ್ಯತೆಯ ಪಕ್ವ ಫಲ.

'ನೆನಪಿನ ದೋಣಿಯಲ್ಲಿ' ಗ್ರಂಥವನ್ನು ಓದುತ್ತಿರುವಾಗ ಕ್ರಿಯಾಶೀಲ ಕರುಣಾರ್ದ್ರ ಹಾಗೂ ಧೀಮಂತ ವ್ಯಕ್ತಿತ್ವದ ಜೊತೆ ಒದಗುವ ಸಾಹಚರ್ಯದಿಂದ ಮನಸ್ಸು ಪ್ರಫುಲ್ಲವಾಗುತ್ತದೆ. ಉದಾತ್ತವಾಗುತ್ತದೆ. ಹೃದಯ ಅಧಿಕ ಸೂಕ್ಷ್ಮ ಸಂವೇದನಾಶೀಲವಾಗುತ್ತದೆ, ಮೃದುವಾಗುತ್ತದೆ, ಜೀವ ಉತ್ಕರ್ಷಿತವಾಗುತ್ತದೆ, ಉಲ್ಲಸಿತವಾಗುತ್ತದೆ. ✡

ಕಾಲಿಲ್ಲದಾ ಅಶ್ವ ಊನಾದರೇನು
ನಾನಿಲ್ಲದಾ ವಿಶ್ವ ಏನಾದರೇನು


–ಕುವೆಂಪು

ಸುವಾಸಿತ ಹಾಗೂ ಸ್ವಾದಿಷ್ಟ ಮುಖಶುದ್ಧಿಗಾಗಿ



ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.

ಚಮನದಲ್ಲಿ ಏನೆಲ್ಲ ಇದೆ?



ಈ ಚಮನದಲ್ಲಿ ಜೇಷ್ಠಮಧು, ಕೇಶರ, ಏಲಕ್ಕಿ. ಲವಂಗ, ಪತ್ರಿ, ಜಾಜಿಕಾಯಿ, ಬಡೆಸೋಪ್, ಮೆಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮುಕ್ಕಳಿಂದ ವೃದ್ಧರವರಗೆ ಎಲ್ಲರಿಗೂ ಅಚ್ಚುಮೆಚ್ಚು.

ಸ್ಟಾರ್ ಕಂಪನಿ, ಬೆಳಗಾಂವ್

M.K. Publicity

ಸಮಯಾಸಮಯದ ಅರಿವು

ಧನಂಜಯ

ಬಹಳ ಹಿಂದಿನ ಮಾತು. ಗಂಗಾ ತಟಾಕದ ಮೇಲಿದ್ದ ಮಾವಿನ ತೋಪೊಂದರಲ್ಲಿ ಒಂದು ಕಪಿ ದಂಪತಿ ವಾಸವಾಗಿತ್ತು. ತೊಸೆದಾಡುತ್ತಿದ್ದ ಮಾವನ್ನುಂಡು ಮಜವಾಗಿತ್ತು ಆ ಜೋಡಿ. ಒಂದು ದಿನ ಗಂಡು ಮಂಗ ತುತ್ತತುದಿಯ ತೆಳು ರೆಂಬೆಗೆ ಅಂಟಿಕೊಂಡಿದ್ದ ಈಡುಗಾತ್ರದ ಹಣ್ಣನ್ನು ಕಿತ್ತು ತಿನ್ನಲು ಹೋಗಿ ಮುರಿದ ರೆಂಬೆಯ ಸಮೇತ ಧೊಪ್ಪೆಂದು ಗಂಗೆಯ ನೀರಿನಲ್ಲಿ ಬಿತ್ತು. ಹೆಣ್ಣು ಮಂಗ ಅದನ್ನು ನೋಡುತ್ತಿದ್ದಂತೆಯೇ ಗಂಗೆಯ ಪುಣ್ಯಸ್ಪರ್ಶ ಮತ್ತು ಗತಜನ್ಮದ ಗುಣ ವಿಶೇಷಗಳಿಂದಾಗಿ ಆ ಮಂಗ ಒಬ್ಬ ಸುಂದರ ಯುವಕನಾಗಿ ಮಾರ್ಪಟ್ಟಿತು. 'ಅರೆ ಆತ ಬಿದ್ದು ಮನುಷ್ಯನಾದ; ಸುಂದರ ಯುವಕನಾದ. ನಾನೂ ಬಿದ್ದರೆ ಗಂಗೆ ನನ್ನನ್ನು ಸುಂದರ ಯುವತಿಯನ್ನಾಗಿ ಮಾಡಬಹುದಲ್ಲವೆ?' ಎಂದು ಯೋಚಿಸಿ ಆ ಹೆಣ್ಣು ಮಂಗ ನೀರಿಗೆ ಹಾರಿತು. ಎಣಿಸಿದಂತೆ ಸುಂದರ ಯುವತಿಯಾಗಿ ಮಾರ್ಪಟ್ಟಿತು. ಸರಿ, ಇಬ್ಬರೂ ಖುಷಿಯಿಂದಿರತೊಡಗಿದರು.

ಒಂದೊಮ್ಮೆ ಆ ಮನುಷ್ಯರೂಪಿ ಮಂಗನ ಮನದಲ್ಲಿ ಯೋಚನೆಯೊಂದು ಸುಳಿಯಿತು, ಬೆಳೆಯಿತು; ಒಂದೊಮ್ಮೆ ಮಂಗನಾಗಿದ್ದವ, ಈಗ ಮನುಷ್ಯನಾಗಿರುವ, ತಾನು ಮತ್ತೊಮ್ಮೆ ಗಂಗೆಯಲ್ಲಿ ಮುಳುಗಿ ದೇವನಾಗಬಾರದೇಕೆ?

ಆ ಯೋಚನೆಯಿಂದ ಆತನಿಗೆ ನಿಂತರೂ ಸಮಾಧಾನವಾಗಲಿಲ್ಲ; ಕುಳಿತರೂ ಸಮಾಧಾನವಾಗಲಿಲ್ಲ. ಕೂಡಲೇ ಮತ್ತೊಮ್ಮೆ ಮರವೇರಿ ಗಂಗೆಯ ನೀರಿನಲ್ಲಿ ಬಿದ್ದ. ಆದರೆ ಆತ ದೇವನಾಗುವ ಬದಲು ಮತ್ತೆ ಮಂಗನ ರೂಪಕ್ಕೆ ಬಂದ. ನೀರಿನಿಂದ ಹೊರಬಂದು ಮೈ ಜಾಡಿಸಿಕೊಂಡು ನೆಗೆಯುತ್ತ ಮರವೇರಿ ಕುಳಿತು ಇಂಗು ತಿಂದ ಮಂಗನಂತೆ ಕುಳಿತುಕೊಂಡ. ಆದದ್ದಕ್ಕೆ ಪಶ್ಚಾತ್ತಾಪ ಪಟ್ಟರೂ ಮರಳಿ ಯತ್ನವನ್ನು ಮಾಡತೊಡಗಿದ. ಮರದಿಂದ ನೀರಿಗೆ ಹಾರಿ ಮನುಷ್ಯನಾಗ ಲೆತ್ನಿಸಿದ. ಆದರೆ ಯತ್ನ ವ್ಯರ್ಥವಾಯಿತು.

ಈಗ ಮಂಗ ಒಬ್ಬಂಟಿ. ತಿರುಗಾಡಲು ಚೇಷ್ಟೆ ಮಾಡಲು ಜತೆ ಇಲ್ಲ. ಏನು ಮಾಡಬೇಕು? ಎತ್ತ ಹೋಗಬೇಕು? ಕೊನೆಗೊಮ್ಮೆ ತನ್ನ ಸಂಗಾತಿಯನ್ನೇ ಕೇಳಿಬಿಡಲು ನಿರ್ಧರಿಸಿತು. ಆ ಸುಂದರ ಸ್ತ್ರೀಯನ್ನು ಸಂಧಿಸಿ, "ಪ್ರಿಯೆ ನನ್ನ ಸ್ಥಿತಿ ನೋಡಿ ನಿನಗೇನೂ ಅನ್ನಿಸುವುದಿಲ್ಲವೆ?" ಎಂದು ಕೇಳಿತು.

"ಬಹಳ ದುಃಖವೆನಿಸುತ್ತದೆ. ಆದರೇನು ಮಾಡ ಬಲ್ಲೆ?"

"ಒಂದು ಉಪಕಾರ ಮಾಡಬಲ್ಲೆ ನೀನು. ಮತ್ತೆ ನೀರಿನಲ್ಲಿ ಹಾರಿ ನನ್ನ ಹಾಗೆ ಮಂಗನಾಗಿ ಬಿಡು. ಇಬ್ಬರೂ ಮೊದಲಿನಂತೆ ದಂಪತಿಗಳಾಗಿರೋಣ."

"ಯಾವ ಜನುಮದ ಪುಣ್ಯ ಫಲವೋ ನಾನು ಮನುಷ್ಯಳಾಗಿ ಮಾರ್ಪಟ್ಟಿದ್ದೇನೆ. ಈ ಜನ್ಮವು ದೊಡ್ಡದು. ಮತ್ತೆ ಮಂಗನಾಗಿ ಮರದಿಂದ ಮರಕ್ಕೆ ಹಾರಲು ನಾನು ಸಿದ್ಧಳಿಲ್ಲ." ಎಂದು ಸುಂದ

ಖಂಡಿತವಾಗಿ ಹೇಳಿ ಅಲ್ಲಿಂದ ದೂರ ಹೋಗಿಬಿಟ್ಟಳಾಕೆ.

ದಿನಗಳು ಉರುಳಿದವು. ಆಕೆ ಆ ಪ್ರದೇಶದಲ್ಲಿ ಒಬ್ಬಂಟಿಯಾಗಿಯೇ ತಿರುಗಾಡುತ್ತಿದ್ದ ಸುದ್ದಿ ಆ ದೇಶದ ರಾಜನಿಗೆ ಮುಟ್ಟಿತು. ಆಕೆ ಸುರ ಸುಂದರಿ. ಅಂಥ ರೂಪ ಅಪರೂಪ ಎಂದು ಬೇರೆ ಹೊಗಳಿದ್ದರು ನೋಡಿ ಬಂದವರು. ರಾಜ ಒಮ್ಮೆ ಪ್ರದೇಶಕ್ಕೆ ಬಂದ. ಆಕೆಯನ್ನು ನೋಡಿದ "ಆ ವೈಭೋಗದಲ್ಲಿರಬೇಕಾದವಳು ವನದಲ್ಲೇಕೆ ಒಬ್ಬಂಟಿಯಾಗಿರುವಿ? ಬಾ ನನ್ನೊಂದಿಗೆ. ರಾಣಿಯನ್ನಾಗಿ ಮಾಡುತ್ತೇನೆ" ಅಂದ. ಆಕೆ ಆತನೊಂದಿಗೆ ಹೋಗಿಬಿಟ್ಟಳು.

ಪಾಪ, ಈಗ ಮಂಗನ ಸ್ಥಿತಿ ಬೇಡವೇ ಬೇಡ. ಒಂದು ದಿನ ಬಲೆಯಲ್ಲಿ ಸಿಕ್ಕು ಒದ್ದಾಡತೊಡಗಿದ ಮಂಗನನ್ನು ಬಲೆ ಹಾಕಿದಾತ ಹಿಡಿದು ಮಂಗನಾಟ ಆಡಿಸುವವನಿಗೆ ಮಾರಿಬಿಟ್ಟ.

ಆತ ಕರೆದೊಯ್ದಲ್ಲಿ ಹೋಗಿ, ಆತ ಹೇಳಿದಂತೆ ಕುಣಿದು ಜನರನ್ನು ರಂಜಿಸಬೇಕಾಯಿತು ಮಂಗ.

ಆ ರಾಣಿಗೊಮ್ಮೆ ಮಂಗನಾಟ ನೋಡಬೇಕೆಂಬ ಇಚ್ಛೆಯಾಯಿತು. ರಾಜನೆದುರು ಹೇಳಿಕೊಂಡಳು. ಮಂಗನಾಟ ಆಡಿಸುವಾತನನ್ನು ಅರಮನೆಯ ಅಂಗಳಕ್ಕೆ ಕರೆಯಿಸಲಾಯಿತು. ಅರಮನೆಗೆ ಬಂದ ಮಂಗನಿಗೆ ಏನೋ ಕಸಿವಿಸಿ. ರಾಣಿ ರಾಜನೊಂದಿಗೆ ಮಂಗನಾಟ ನೋಡಲು ಕುಳಿತಳು. ಆದರೆ ರಾಣಿಯನ್ನು ನೋಡಿದ ಮಂಗ ತಾನೆಲ್ಲಿರುವೆನೆಂಬುದನ್ನೇ ಮರೆಯಿತು. ತನ್ನ ಪೂರ್ವಜನ್ಮದ ಪತ್ನಿಯನ್ನು ಕಂಡು ಕಣ್ಣೀರುಗರೆಯಿತು. ಮಂಗನಾಟ ಆಡಿಸುವಾತ, "ಹೋಗು ದೊರೆ ದಂಪತಿಯ ಕಾಲು ಹಿಡಿದು ನಮಸ್ಕರಿಸಿ ಬಾ. ಬಂದು ಕುಣಿತ ಆರಂಭಿಸು" ಎಂದ. ಕಣ್ಣೀರು ಸುರಿಸುತ್ತಲೇ ರಾಜದಂಪತಿಯ ಬಳಿ ಹೋಯಿತು ಮಂಗ. ತನ್ನ ಪೂರ್ವಜನ್ಮದ ಪತಿಯ ಸ್ಥಿತಿ ನೋಡಿ ರಾಣಿ, "ಈಗ ಅತ್ತರೇನು ಬಂತು? ಹೋಗು, ಕುಣಿ. ಸಮಯಾಸಮಯವನ್ನರಿತುಕೊಂಡು ವರ್ತಿಸುವವನೇ ಬುದ್ಧಿವಂತ. ಆ ದಿನ ದೇವನಾಗುವ ಲೋಭವನ್ನು ತಂದುಕೊಂಡಿರದೇ ಇದ್ದರೆ ನಾನೂ ನೀನು ಜೊತೆಯಾಗಿಯೇ ಇರಬಹುದಿತ್ತು. ಇಂಥ ಪ್ರಸಂಗವೆಲ್ಲಿ ಬರುತ್ತಿತ್ತು? ಹೋಗು ಕುಣಿ" ಎಂದು ಮೆಲ್ಲನೆ ಮಂಗನ ಕಿವಿಯಲ್ಲಿ ಉಸುರಿದಳು.


ಅಲ್ಲಿಂದ ಬಂದ ಮಂಗ ಎಂದಿಲ್ಲದ ಚೆಂದದಿಂದ ಕುಣಿಯಿತು. ಕುಣಿದು ಎಲ್ಲರನ್ನೂ ಖುಷಿಪಡಿಸಿತು. ರಾಜ ಬಲು ಸಂತೋಷದಿಂದ ಮಂಗನಾಟ ಆಡಿಸುವಾತನಿಗೆ ಕೈತುಂಬ ಭಕ್ಷೀಸು ಕೊಟ್ಟ. ✡

ನೀವು ಈ ವಿಚಿತ್ರ ಸ್ಥಿತಿಯನ್ನು ಎಂದಾದರೂ ಚಿಂತಿಸಿದ್ದೀರಾ?
ಇದಿಗೋ ಇಲ್ಲಿದೆ ಆ ವಿಚಿತ್ರ ಸ್ಥಿತಿ:
ಒಂದು ಪಕ್ಷ ಈ ಭೂಮಿ ಸ್ವರ್ಗವಾಗಿದ್ದರೆ ನಾವೆಲ್ಲ ಸ್ವರ್ಗವಾಸಿಗಳಾಗಿ ಹೋಗುತ್ತಿದ್ದೆವು!

* * *

"ಅಪ್ಪಾ; ಈ ಸಾರಿ ನಾನು ಪಾಸಾಗದೇ ಹೋದರೆ ಆತ್ಮಹತ್ಯೆ ಮಾಡ್ಕೋತೀನಿ."
"ಹುಶಾರ್! ಇನ್ನೊಂದು ಸಾರಿ ಆತ್ಮಹತ್ಯೆ ಸುದ್ದಿಗಿದ್ದಿ ಎತ್ತೀಯೆ ಜೋಕೆ! ಎತ್ತಿದರೆ ನಿನ್ನನ್ನು ಕೊಂದು ಹಾಕಿಬಿಡ್ತೇನೆ"

— ಎಸ್. ವಿಶ್ವನಾಥ



Shilpi DM 13A/80 Kan

ಹೆಣ್ಣಿನ ಎರಡು ಮುಖ

ರೇಣುಕ

೧೯೬೫ರ ಸಪ್ಟೆಂಬರ್ ತಿಂಗಳು. ಭಾರತ ಪಾಕಿಸ್ತಾನಗಳ ನಡುವಿನ ಸಮರಕಾಲ. ಜಮ್ಮು ವಿಭಾಗದಲ್ಲಿನ ಚೌಂಬ್‌ನಲ್ಲಿ ಪಾಕ್ ಸೇನೆ ಅನಿರೀಕ್ಷಿತವಾಗಿ ಆಕ್ರಮಣವೆಸಗಿತು. ಅನಕ್ಕೆ ಉತ್ತರವೆಂಬಂತೆ ಭಾರತೀಯ ಸೇನಾಪಡೆಗಳು ಪಂಜಾಬಿನ ಬಿಕಿವಿಂಡ್, ಕಾಲ್ರ, ಖೇಮ್‌ಕರನ್, ಹಟಾರಿ ಮೊದಲಾದ ಸ್ಥಳಗಳಲ್ಲಿ ಭಾರತದ ಗಡಿಯನ್ನು ದಾಟಿ, ಪಾಕಿಸ್ತಾನಿ ಪ್ರದೇಶವನ್ನು ಪ್ರವೇಶಿಸಿ ಇಚೋಗಲ್ ಕಾಲುವೆಯ ವರೆಗೂ ಮುನ್ನುಗ್ಗಿ ಹೋದವು. ಇಚೋಗಲ್ ಕಾಲುವೆಯಿಂದ ಲಾಹೋರ್ ನಗರಕ್ಕೆ ಕೇವಲ ಹನ್ನೆರಡು ಮೈಲುಗಳ ಅಂತರ.

ಸೆಪ್ಟೆಂಬರ್ ೨೩ರಂದು ಕದನ ವಿರಾಮ ಜಾರಿಗೆ ಬಂದು ಉಭಯ ರಾಷ್ಟ್ರಗಳ ನಡುವೆ ಯುದ್ಧ ಸ್ಥಗಿತಗೊಂಡಾಗ, ಭಾರತ–ಪಾಕಿಸ್ತಾನದ ಮೇಲೆ ಅದ್ಭುತ ವಿಜಯವನ್ನು ಗಳಿಸಿತ್ತು. ಪಾಕಿಸ್ತಾನಕ್ಕೆ ಸೇರಿದ ಪಂಜಾಬ್ ಪ್ರಾಂತದ ವಿಸ್ತಾರವಾದ ಭೂಪ್ರದೇಶ ಭಾರತೀಯ ಸೇನಾ ಪಡೆಗಳ ವಶವಾಗಿತ್ತು. ಈ ಸೈನಿಕ ಕಾರ್ಯಾಚರಣೆಯ ವಿಜಯೋತ್ಸವವನ್ನು ಜನರು ನಾಡಿನಾದ್ಯಂತ ಅದ್ದೂರಿಯಿಂದ ಆಚರಿಸಿದರು. ಆದರೆ ಈ ವಿಜಯೋತ್ಸವಕ್ಕೆ ಕಾರಣೀಭೂತರಾಗಿ ಯುದ್ಧ ಭೂಮಿಯಲ್ಲಿ ಪ್ರಾಣಾರ್ಪಣೆ ಮಾಡಿ ಮಹಾತ್ಮರಾದ ಸಹಸ್ರಾವಧಿ ಭಾರತೀಯ ಸೈನಿಕರ ಮನೆಮಂದಿಯ ಮನದಲ್ಲಿ ಮಾತ್ರ ಅಳಿಸಲಾರದಂಥ ಗಾಢಾಂಧಕಾರ ಕವಿದಿತ್ತು. ಅವರ ಮನೆದೇವರ ಮುಂದೆ ಬೆಳಗುತ್ತಿದ್ದ ನಂದಾದೀಪಗಳು ನಂದಿಹೋಗಿದ್ದವು.

ಯುದ್ಧದ ಸಮಯದಲ್ಲಿ ನಾನು ಸಿಯಾಲ್‌ಕೋಟ್ ಬಳಿಯಲ್ಲಿದ್ದ ಹದಿನೆಂಟನೇ ಮದ್ರಾಸ್ ಬಟಾಲಿಯನ್ನಿನಲ್ಲಿ ನಾಯಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಯುದ್ಧ ನಿಲುಗಡೆಯಾದಾಗ ನನ್ನನ್ನು ನೀಲಗಿರಿ ಜಿಲ್ಲೆಯ ವೆಲ್ಲಿಂಗ್‌ಟನ್ನಿನಲ್ಲಿನ ಮದ್ರಾಸ್ ರೆಂಜಿಮೆಂಟಲ್ ಸೆಂಟರಿಗೆ ವರ್ಗಾಯಿಸಿದರು.

ದಕ್ಷಿಣ ಭಾರತದಲ್ಲಿಯೇ ಮದ್ರಾಸ್ ರೆಜಿಮೆಂಟ್ ಏಕೈಕ ದೊಡ್ಡ ಸೈನಿಕ ತರಬೇತಿ ಕೇಂದ್ರ. ದಕ್ಷಿಣದ ರಾಜ್ಯಗಳಾದ ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳಗಳಿಂದ ಸೇನೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಇಲ್ಲಿ ಸೈನಿಕ ತರಬೇತಿಯನ್ನು ಕೊಡಲಾಗುತ್ತದೆ. ಇಲ್ಲಿ ತರಬೇತಿ ಪಡೆದ

ಸೈನಿಕರನ್ನು ಗಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಮದ್ರಾಸ್ ಬಟಾಲಿಯನ್ನುಗಳಿಗೆ ಕಳುಹಿಸಿ ಕೊಡಲಾಗುತ್ತದೆ. ಇಲ್ಲಿನ ಕೇಂದ್ರವಲ್ಲಿಯೇ ಗಡಿನಾಡಿನಲ್ಲಿ ಸೇವೆ ಸಲ್ಲಿಸುವ ರೆಜಿಮೆಂಟಿನ ಸೈನಿಕರ ಸೇವಾ ವಿವರಗಳ ದಾಖಲೆ ಮತ್ತು ಸಂಬಳ ಸಾರಿಗೆಗಳ ಲೆಖ್ಖವನ್ನಿಡುವ ಕಚೇರಿಯಿರುವುದು.

ಸಿಯಾಲ್‌ಕೋಟಿನಿಂದ ವರ್ಗವಾಗಿ ಬಂದ ನಾನು ರೆಕಾರ್ಡ್ ಆಫೀಸಿನ ಯುದ್ಧದ ಸಾವು ನೋವುಗಳಿಗೆ ಸಂಬಂಧಿಸಿದ ವಿಭಾಗದಲ್ಲಿ ಕೆಲಸ ಮಾಡತೊಡಗಿದೆ. ಯುದ್ಧದಲ್ಲಿ ಸತ್ತ, ಗಾಯಗೊಂಡ, ಕಾಣೆಯಾದ ಸೈನಿಕರ ಸುದ್ದಿಯನ್ನು ಅವರ ಸಂಬಂಧಿಗಳಿಗೆ ತುರ್ತಾಗಿ ತಂತಿಯ ಮೂಲಕ ತಿಳಿಸುವುದು, ಹತ್ತಿರದ ವಾರಸುದಾರನಿಗೆ ಸತ್ತ ಸೈನಿಕನ ಲೆಖ್ಖದಲ್ಲಿ ಜಮೆಯಿರುವ ಪಗಾರದ ಹಣ ಮತ್ತು ವಿಶ್ರಾಂತಿ ವೇತನಗಳನ್ನು ಕಳುಹಿಸುವ ವ್ಯವಸ್ಥೆಯನ್ನು ಮಾಡುವ ಹೊಣೆ ಈ ವಿಭಾಗವು.

ಈ ವಿಭಾಗಕ್ಕೆ ಸತ್ತ ಸೈನಿಕರ ಸಂಬಂಧಿಗಳಿಂದ ಬಂದ ಕಾಗದ ಪತ್ರಗಳಿಗೆ ಉತ್ತರಿಸುವ ಹೊಣೆಗಾರಿಕೆ ನನ್ನದಾಗಿತ್ತು. ಅಲ್ಲದೆ ರಣರಂಗದಿಂದ ತಂದ ಮಡಿದ ಸೈನಿಕರ ವೈಯಕ್ತಿಕ ಸಾಮಗ್ರಿಗಳನ್ನು ವಾರಸುದಾರರಿಗೆ ತಲುಪಿಸುವ ಕಾರ್ಯವನ್ನೂ ನಾನು ಮಾಡಬೇಕಿತ್ತು.

ಪ್ರತಿ ದಿನ ನೂರಾರು ಪತ್ರಗಳು ಯುದ್ಧದಲ್ಲಿ ಸತ್ತ, ಗಾಯಗೊಂಡ ಮತ್ತು ಕಾಣೆಯಾದ ಸೈನಿಕರ ಸಂಬಂಧಿಗಳಿಂದ ಬರುತ್ತಿದ್ದವು. ಹಗಲು ರಾತ್ರಿ ಸಮಯದ ಪರಿವೆಯಿಲ್ಲದೆ ಅಂದು ಬಂದ ಪತ್ರಕ್ಕೆ ಅಂದೇ ಉತ್ತರವನ್ನು ಸಿದ್ಧಪಡಿಸಿ ಕಳುಹಿಸಿ ಕೊಡಬೇಕಿತ್ತು. ಅವಿರತವಾದ ಈ ಕೆಲಸ ಎಷ್ಟೇ ಶ್ರಮದಾಯಕವಾಗಿದ್ದರೂ, ಅದರಲ್ಲಿ ಒಂದು ವಿಧವಾದ ತೃಪ್ತಿಯನ್ನು ನಾವು ಪಡೆಯುತ್ತಿದ್ದೆವು. ಒಂದೊಂದು ಪತ್ರವನ್ನು ಉತ್ತರಿಸಲು ಕೈಗೆ ತೆಗೆದುಕೊಂಡಾಗಲೂ, ಮಗನನ್ನು ಕಳೆದುಕೊಂಡ ತಾಯಿ, ತಂದೆ, ಗಂಡನನ್ನು ಕಳೆದುಕೊಂಡ ಹೆಂಡತಿಯ ದುಃಖತಪ್ತ ಮುಖಗಳು ಪತ್ರದ ಮೇಲೆ ಮೂಡುತ್ತಿದ್ದವು. ಆ ಕಾಗದ ಪತ್ರಗಳನ್ನು ಓದುವಾಗ, ನೊಂದ ಜೀವದ ತುಮಿತ ಮಿಡಿತಗಳ ನಿಚ್ಚಳವಾದ ಸ್ಪಂದನದ ಅರಿವಾಗುತ್ತಿತ್ತು. ಅಂಥ ಪತ್ರಗಳಿಗೆ ನಾವು ನೀಡುತ್ತಿದ್ದ ರೂಢಿಬದ್ಧ ಸಾಂತ್ವನ ಎಷ್ಟರ ಮಟ್ಟಿಗೆ ಆ ದುಃಖತಪ್ತ ಜೀವಗಳಿಗೆ ಸಮಾಧಾನ ನೀಡಬಹುದಿತ್ತು!

ಆದರೂ ಅದೊಂದು ಪವಿತ್ರ ಕಾರ್ಯವೆಂಬ ಭಾವನೆ ನಮ್ಮ ಮನದಲ್ಲಿ ಮೂಡಿ, ಎಷ್ಟೇ ಬಳಲಿದ್ದರೂ ನಮ್ಮ ವಿರಾಮದ ಸಮಯದಲ್ಲಿಯೂ ಕಾರ್ಯ ಪ್ರವೃತ್ತರನ್ನಾಗಿಸುತ್ತಿತ್ತು. ಈ ಸಮಯದಲ್ಲಿಯೇ ವಿಚಿತ್ರವಾದ ವಿರೋಧಾಭಾಸದ ಪ್ರಸಂಗಗಳೆರಡು ನಮ್ಮ ಗಮನಕ್ಕೆ ಬಂದವು.

ತಮಿಳುನಾಡಿನ ಶ್ರೀವಳ್ಳಿ ಪುತ್ತೂರಿನವನಾದ ಕುಪ್ಪ ಮಾಂಡಿ ಥೇವರ್ ಎಂಬ ಸಿಪಾಯಿಯೊಬ್ಬ ಭಾರತ ಪಾಕ್ ಗಡಿಯಲ್ಲಿನ ಸಮರದಲ್ಲಿ ಸತ್ತಿದ್ದ. ಅವನ ತಾಯಿಗೆ ರೂಢಿಯಂತೆ ಸಂತಾಪ ಸೂಚಕ ತಂತಿಯನ್ನು ಕಳುಹಿಸಿದೆವು. ರೆಜಿಮೆಂಟಿನ ಸಂತ್ರಸ್ತರ ನಿಧಿಯಿಂದ ಸ್ವಲ್ಪ ಹಣವನ್ನೂ ಕಳುಹಿಸಿದೆವಲ್ಲದೆ. ಶೀಘ್ರವಾಗಿ ವಿಶ್ರಾಂತಿ ವೇತನದ ವ್ಯವಸ್ಥೆ ಮಾಡುವ ಆಶ್ವಾಸನೆಯ ಒಕ್ಕಣೆಯುಳ್ಳ ಪತ್ರವನ್ನೂ ಕಳುಹಿಸಿಕೊಟ್ಟೆವು.

ನಾಲ್ಕಾರು ದಿನಗಳ ತರುವಾಯ ಮಗನ ಮರಣದ ಸುದ್ದಿಯಿಂದ ದುಃಖ ವಿಹ್ವಲಳಾದ ಕುಪ್ಪ ಮಾಂಡಿಯ ತಾಯಿಯಿಂದ ಪತ್ರವೊಂದು ನಮ್ಮ ಕಚೇರಿಗೆ ಬಂದಿತು. ಪತ್ರದ ಒಕ್ಕಣೆ ಈ ರೀತಿಯಿತ್ತು. "ನನ್ನ ಮಗ ಸತ್ತಿಲ್ಲ. ನೀವು ಸುಳ್ಳು ಪತ್ರ ಬರೆದಿದ್ದೀರಿ. ಅದನ್ನು ನಾನು ನಂಬುವುದಿಲ್ಲ. ಯಾರದೋ ಚಿತಾವಣೆಯಿಂದ ಈ ಪತ್ರವನ್ನು ನೀವು ಬರೆದಿದ್ದೀರಿ. ತಡ ಮಾಡದೆ ನನ್ನ ಮಗ ಕುಪ್ಪಮಾಂಡಿಯನ್ನು ಮನೆಗೆ ಕಳುಹಿಸಿ ಕೊಡಿ." ಆ ಪತ್ರವನ್ನು ಓದಿದ ಕಚೇರಿಯ ಸಿಬ್ಬಂದಿಯವರೆಲ್ಲಾ ಕಣ್ಣೀರು ಹಾಕಿದರು. ಆಕೆಗೆ ಬುದ್ಧಿ ಭ್ರಮಣೆಯಾಗಿರಬಹುದೇನು ಅವರೆಲ್ಲಾ ಊಹಿಸಿದರು. ಆ ಪತ್ರವನ್ನು ನನ್ನ ಮೇಲಿನ ಅಧಿಕಾರಿಯ ಮುಂದಿಟ್ಟೆ. ಅವರು ಪತ್ರವನ್ನು ಓದಿ ನಿರ್ವಿಕಾರವಾಗಿ 'ಫೈಲ್' ಎಂಬ ಒಕ್ಕಣೆಯನ್ನು ಪತ್ರದ ಅಂಚಿನಲ್ಲಿ ಬರೆದರು.

ಮೂರನೆಯ ದಿನ ಗಡಿಯ ಬಟಾಲಿಯನ್ನಿನಿಂದ ಕುಪ್ಪ ಮಾಂಡಿಯ ಬಟ್ಟೆಗಳು, ಪೆನ್ನು ನಗದುಹಾರ ಮೊದಲಾದ ಸಾಮಗ್ರಿಗಳನ್ನು ಭಾಗಿ

ಯೊಂದು ಅಂಚೆಯ ಮೂಲಕ ನಮ್ಮ ಕಚೇರಿಗೆ ಬಂದಿತು. ಅದನ್ನು ಮತ್ತೆ ಅಂಚೆಯ ಮೂಲಕ ಕುಪ್ಪ ಮಾಡಿಯ ತಾಯಿಯ ವಿಳಾಸಕ್ಕೆ ಕಳುಹಿಸಿ ಕೊಡಲಾಯಿತು.

ಪಾಕ್-ಕಾಶ್ಮೀರ್ ಗಡಿಯಲ್ಲಿ ನಡೆದ ಸೈನಿಕ ಕಾರ್ಯಾಚರಣೆಯಲ್ಲಿ ಕೊಲ್ಲಲ್ಪಟ್ಟ ಸಿಪಾಯಿ ಸಿಂಹಾಚಲ ರೆಡ್ಡಿಯ ಊರು ಆಂಧ್ರದ ರಾಜಮಹೇಂದ್ರಿ. ರೆಜಿಮೆಂಟನಿಂದ ಸತ್ತ ಸೈನಿಕರ ಹತ್ತಿರದ ವಾರಸುದಾರರಿಗೆ ಸಲ್ಲತಕ್ಕ ಹಣ ಮತ್ತು ವಿಶ್ರಾಂತಿ ವೇತನವೆಲ್ಲಾ ರೆಡ್ಡಿಯ ಸೇವಾ ದಾಖಲೆಗಳ ಪ್ರಕಾರ ಆತನ ಹೆಂಡತಿಗೆ ಸಲ್ಲಬೇಕಾಗಿತ್ತು. ಅದರಂತೆ ರೆಡ್ಡಿಯ ಮರಣ ವಾರ್ತೆಯೊಂದಿಗೆ ಸಂತ್ರಸ್ತರ ನಿಧಿಯಿಂದ ಹಣವನ್ನು ಆತನ ಹೆಂಡತಿಯ ಹೆಸರಿಗೆ ಕಳುಹಿಸಿ ಕೊಡಲಾಯಿತು. ಆದರೆ ಕೆಲವಾರು ದಿನಗಳಲ್ಲಿ ವಿಳಾಸದಾರರು ಸ್ಥಳದಲ್ಲಿಲ್ಲವೆಂಬ ಅಂಚೆಯ ಒಕ್ಕಣೆಯೊಂದಿಗೆ ಅವೆರಡೂ ಮರಳಿ ಬಂದವು.

ಕೆಲವಾರು ದಿನಗಳ ತರುವಾಯ ಸಿಂಹಾಚಲ ರೆಡ್ಡಿಯ ಹೆಂಡತಿಯಿಂದ ಪತ್ರವೊಂದು ನಮ್ಮ ಕಚೇರಿಗೆ ಬಂದಿತು. ನಾವು ಕಳುಹಿಸಿದ್ದ ರೆಡ್ಡಿಯ ಮರಣವಾರ್ತೆಯ ತಂತಿ ಮರಳಿ ಬಂದಿದ್ದರೂ, ಹೇಗೋ ಅದರ ಸುದ್ದಿ ಅಂಚೆಯಾಳಿನಿಂದ ತಿಳಿದಿದ್ದ ಅಕ್ಕ ಪಕ್ಕದವರು ಆಕೆಗೆ ಮುಟ್ಟಿಸಿದ್ದರು. ಸಿಂಹಾಚಲರೆಡ್ಡಿಯ ಹೆಂಡತಿ ಬರೆದ ಪತ್ರದ ಒಕ್ಕಣೆ ಈ ರೀತಿಯಿತ್ತು: "ನಾನು ಸಿಂಹಾಚಲ ರೆಡ್ಡಿಯ ಹೆಂಡತಿ. ಬೇರೆ ವಿಳಾಸದಲ್ಲಿ ಸಂಬಂಧಿಯೊಬ್ಬರೊಂದಿಗೆ ವಾಸಿಸುತ್ತಿರುತ್ತೇನೆ. ನನ್ನ ಗತಿಸಿದ ಪತಿ ಸಿಂಹಾಚಲ ರೆಡ್ಡಿಯ ಹಣಕಾಸಿಗೆ ನಾನೇ ಬಾಧ್ಯಸ್ಥಳಾಗಿದ್ದೇನೆ. ಆತನ ಲೆಕ್ಕದಲ್ಲಿ ಜಮೆಯಿರುವ ಹಣವನ್ನು ನನಗೆ ಬೇಗ ಕಳುಹಿಸಿ ಕೊಡಿ. ವಿಶ್ರಾಂತಿ ವೇತನದ ವ್ಯವಸ್ಥೆಯನ್ನು ತುರ್ತಾಗಿ ಮಾಡಬೇಕಾಗಿ ಬೇಡುತ್ತೇನೆ."

ನನ್ನ ಮೇಲಿನ ಅಧಿಕಾರಿಯ ಆದೇಶದ ಮೇರೆಗೆ, ಪತ್ರದಲ್ಲಿನ ಅಂಶಗಳ ಬಗ್ಗೆ ತನಿಖೆ ನಡೆಸಿ

ವರದಿ ಮಾಡುವಂತೆ ಕೋರಿ ಸಿಂಹಾಚಲ ರೆಡ್ಡಿಯ ಹೆಂಡತಿಯಿಂದ ಬಂದ ಪತ್ರವನ್ನು ರಾಜ ಮಹೇಂದ್ರಿಯ ಪೋಲೀಸ್ ಅಧಿಕಾರಿಗಳಿಗೆ ಕಳುಹಿಸಿ ಕೊಡಲಾಯಿತು.

ಎರಡು ವಾರಗಳ ನಂತರ ನಮ್ಮ ಕೈಸೇರಿದ ಪೋಲೀಸ್ ವರದಿಯ ಸಾರಾಂಶ ಈ ರೀತಿಯಿತ್ತು: 'ಸಿಂಹಾಚಲ ರೆಡ್ಡಿಗೆ ತಾಯಿ ತಂದೆ ಹತ್ತಿರದ ಸಂಬಂಧಿಗಳಾರೂ ಇಲ್ಲ. ಎರಡು ವರ್ಷಗಳ ಹಿಂದೆ ಸಿಂಹಾಚಲ ರೆಡ್ಡಿ ಗಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅವಧಿಯಲ್ಲಿಯೇ ಆತನ ಹೆಂಡತಿ ಬೇರೊಬ್ಬನೊಡನೆ ಸಂಬಂಧವಿರಿಸಿಕೊಂಡು ಅಂದಿನಿಂದ ಇಂದಿನವರೆಗೂ ಆತನೊಂದಿಗೆ ಸಂಸಾರ ನಡೆಸುತ್ತಿದ್ದಾಳೆ. ಹೊಸ ಸಂಬಂಧದಿಂದ ಆಕೆಗೆ ಹೆಣ್ಣು ಮಗುವೊಂದಿದೆ. ಕಳೆದ ಎರಡು ವರ್ಷಗಳಿಂದ ಸಿಂಹಾಚಲ ರೆಡ್ಡಿಯೊಂದಿಗೆ ಆಕೆ ಯಾವ ಸಂಬಂಧವನ್ನೂ ಇಟ್ಟು ಕೊಂಡಿರುವುದಿಲ್ಲ. ಪೋಲೀಸ್ ವರದಿಯನ್ನು ಪುಷ್ಟೀಕರಿಸಲು ಅಕ್ಕ ಪಕ್ಕದ ಜನರ ಸಹಿಯಿದ್ದ ಹೇಳಿಕೆಗಳನ್ನು ಸಹ ವರದಿಗೆ ಲಗತ್ತಿಸಲಾಗಿತ್ತು.

ಸಿಂಹಾಚಲ ರೆಡ್ಡಿ ಕಾನೂನಿನ ಪ್ರಕಾರ ನ್ಯಾಯಾಲಯದಿಂದ ವಿವಾಹ ವಿಚ್ಛೇದನವನ್ನು ಪಡೆದು, ರೆಜಿಮೆಂಟಿನಿಂದ ಪ್ರಕಟವಾಗುವ **Part II Orders**ನಲ್ಲಿ ವಿವಾಹ ರದ್ದತಿಯನ್ನು ಪ್ರಕಟಿಸಿ ಹೊಸ ವಾರಸುದಾರನ ಹೆಸರನ್ನು ಪ್ರಕಟಿಸಬೇಕಿತ್ತು. ಆತ ಹಾಗೆ ಮಾಡಿದ್ದರೆ, ಆತನ ಸೇವಾದಾಖಲೆಯಲ್ಲಿನ ಆತನ ಹೆಂಡತಿಯ ಹೆಸರನ್ನು ತೆಗೆದು ಹಾಕಲಾಗುತ್ತಿತ್ತು. ರೆಡ್ಡಿ ಬದುಕಿದ್ದಾಗ ಇದಾವುದನ್ನೂ ಮಾಡುವುದರತ್ತ ಗಮನಹರಿಸಿರಲಿಲ್ಲವೆಂದು ಕಾಣುತ್ತದೆ. ಆತನ ಈ ಉಪೇಕ್ಷೆಯಿಂದಾಗಿಯೇ ವಿವಾದ ಉದ್ಭವಗೊಳ್ಳಲು ಕಾರಣವಾಯಿತು.

ಸಿಂಹಾಚಲ ರೆಡ್ಡಿಯು ಸೇವೆ ಸಲ್ಲಿಸುತ್ತಿದ್ದ ಬಟಾಲಿಯನ್ನಿನಲ್ಲಿನ ಆತನ ಸಂಗಡಿಗರನ್ನು ವಿಚಾರಿಸಿದಾಗ, ರೆಡ್ಡಿಯು ಹೆಂಡತಿಯೊಂದಿಗಿನ ಸಂಪರ್ಕವನ್ನು ಕಡಿದುಕೊಂಡ ವಿಷಯವನ್ನು ತಮ್ಮ ಬಳಿ ಹೇಳುತ್ತಿದ್ದುದಾಗಿ ಅವರೆಲ್ಲಾ ಹೇಳಿದರು. ರೆಜಿಮೆಂಟಿನ ಕಚೇರಿಯಿಂದ ಅವನ ಸಂಬಳದಿಂದ ಪ್ರತಿ ತಿಂಗಳೂ ಹೆಂಡತಿಗೆ ಸಂದಾಯವಾಗುತ್ತಿದ್ದ ಹಣ(**Family Allotment**)ವನ್ನು ಅವನು ನಿಲ್ಲಿಸಿ ಎರಡು ವರ್ಷಗಳಾಗಿದ್ದುದು ಕಂಡು ಬಂದಿತು. ಪೋಲೀಸ್ ವರದಿ ಮತ್ತು ಮೇಲೆ ವಿವರಿಸಿದ ಕೆಲವು ಅಂಶಗಳ ಆಧಾರದ ಮೇಲೆ ಸಿಂಹಾಚಲ ರೆಡ್ಡಿಯ ಹೆಂಡತಿಯಿಂದ ವಿಶ್ರಾಂತಿ ವೇತನವನ್ನು ಕೋರಿ ಬಂದ ಅರ್ಜಿಯನ್ನು ತಿರಸ್ಕರಿಸಲಾಯಿತು.

ಗತಿಸಿದ ಮಾಜಿ ಪತಿಗೆ ಸಂಬಂಧ ಪಟ್ಟ ಹಣಕಾಸನ್ನು ಪಡೆಯುವ ಸಲುವಾಗಿ ರೆಡ್ಡಿಯ ಹೆಂಡತಿ ಕೋರ್ಟಿನ ಕಟ್ಟೆಯನ್ನು ಹತ್ತಿದಳೆಂದು ಕೇಳಿದೆ. ಅಷ್ಟರಲ್ಲಿಯೇ ನಾನು ಸೇನೆಯಿಂದ ನಿವೃತ್ತನಾದುದರಿಂದ ಮುಂದೆ ಈ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯ ತಿಳಿದುಬರಲಿಲ್ಲ.

ಮಗನ ಸಾವಿನ ವಾರ್ತೆಯಿಂದ ಬುದ್ಧಿ ಭ್ರಮಣಗೊಂಡು ಅವನಿಗಾಗಿ ಪರಿತಪಿಸುವ ಶೋಕ ವಿಹ್ವಲಳಾದ ಮಾತೆಯ ಮಮತೆಯೊಂದೆಡೆ, ಗಂಡನನ್ನು ಬಿಟ್ಟರೂ ಆತನ ಹಣಕ್ಕಾಗಿ ತಹತಹಿಸುವ ಹೆಣ್ಣಿನ ವಾಂಛೆ ಮತ್ತೊಂದೆಡೆ! ನಾನು ಸೇನೆಯಿಂದ ನಿವೃತ್ತನಾಗಿ ಹದಿನಾಲ್ಕು ವರ್ಷಗಳು ಕಳೆದರೂ, ಹೆಣ್ಣಿನ ಈ ಎರಡು ವಿಭಿನ್ನ ಮುಖಗಳ ನೆನಪು ಇನ್ನೂ ನನ್ನ ಮನಸ್ಸಿನಲ್ಲಿ ಆಗಾಗ ಕಾಡುತ್ತಿರುತ್ತದೆ. ★

"ದೇಶದಲ್ಲಿಯ ಎಲ್ಲ ಹೆಂಡಂದಿರಿಗೂ ಮುಖ್ಯವಾದ ಒಂದು ಸಂದೇಶ ಮುಟ್ಟಿಸಲು ಏನು ಮಾಡಬೇಕು? ಈ ಬಗ್ಗೆ ಒಳ್ಳೆಯ ಸಲಹೆ ಬೇಕು," ಎಂದರು ಮಹಿಳಾ ಉದ್ಧಾರ ಸಮಿತಿಯ ಅಧ್ಯಕ್ಷೆ.

"ಅವರವರ ಗಂಡಂದಿರ ವಿಳಾಸಕ್ಕೆ 'ಪರ್ಸನಲ್' ಎಂದು ಬರೆದ ಕಾಗದ ಹಾಕಬೇಕು," ಎಂದೊಬ್ಬ ಸದಸ್ಯ.

ಕೂದಲನ್ನು ರೇಷ್ಮೆಯಂತೆ ಮೃದುವಾಗಿಡುವ ನೈಸರ್ಗಿಕ ಉಪಾಯ...



ಶುದ್ಧ ಶೀಗೆಕಾಯಿಯು ನೈಸರ್ಗಿಕ ಉತ್ತಮಿಕೆಯೆಲ್ಲ ಸ್ವಸ್ತಿಕ್ ಶಿಕಾಕಾಯಿ ಸಾಬೂನಿನಲ್ಲಿ ಅಡಕವಾಗಿದೆ. ಉಪಯೋಗಿಸಲು ಬಲು ಸುಲಭ. ಅಲ್ಲದೆ, ದ್ರವರೂಪೀ ಶಾಂಪೂವಿಗಿಂತ ಬಹಳಷ್ಟು ಹೆಚ್ಚು ಮಿತವ್ಯಯಕರವಾಗಿದೆ.



ಸಮೃದ್ಧವಾದ, ಕೆನೆಕೆನೆಯಾದ ನೊರೆ. ನಿಮ್ಮ ಕೂದಲನ್ನು ಸೌಮ್ಯವಾಗಿ, ಸಂಪೂರ್ಣವಾಗಿ ನಿರ್ಮಲಗೊಳಿಸುತ್ತದೆ, ಮತ್ತು ಅದು ಆರೋಗ್ಯಪೂರ್ಣ, ಸುಗಂಧಿತ ಹಾಗೂ ಕಾಂತಿಯುಕ್ತವಾಗಿ ಇರುವಂತೆ ಮಾಡಿ, ನಿಮಗೆ ಉಲ್ಲಾಸವನ್ನೀಯುತ್ತದೆ. ಮತ್ತು ಎಷ್ಟೊಂದು ಕೋಮಲವಾಗಿರುತ್ತದೆ!



ಸ್ವಸ್ತಿಕ್
ಶಿಕಾಕಾಯಿ ಸಾಬೂನು

ಇದರಲ್ಲಿ ಶೀಗೆಕಾಯಿಯಿದೆ—ಭಾರತೀಯ ಮಹಿಳೆಯ ಅಂದವಾದ ತಲೆಗೂದಲಿನ ಪರಂಪರಾಗತ ರಹಸ್ಯ.

shilpi dm 25/79 kan



ಡಾಕ್ಟರ್ ಇನ್ನೂ ಹಾಸಿಗೆ ಬಿಟ್ಟಿದ್ದಿರಲಿಲ್ಲ. ಅಷ್ಟರಲ್ಲೇ ರೋಗಿಯೊಬ್ಬನಿಂದ ತುರ್ತು ಕರೆ ಬಂತು. ಕೊಂಚವೂ ತಡವಾಗಬಾರದೆಂಬ ಆಗ್ರಹ ಬೇರೆ. ಏನೋ ಪ್ರಾಣಾಪಾಯದ ಕೇಸಿರಬಹುದೆಂದು ಸರ್ಜನರು ಲಗುಬಗೆಯಿಂದ ಬಟ್ಟೆ ಧರಿಸಿ ಕೈದಾಳಿಗೆ ರಿಂಗ್ ಮಾಡಿದರು.

"ರೋಗಿ ಒಳಬರಬಹುದು" ಡಾಕ್ಟರ್ ಹೇಳಿದರು. ಠಾಕುಠೀಕಾದ ವ್ಯಕ್ತಿಯೊಬ್ಬ ಒಳಬಂದ. ಅವನು ಬರುತ್ತಿರುವ ರೀತಿಯನ್ನು ಗಮನಿಸಿದ ಯಾರೂ ಅವನೊಬ್ಬ ಸಮಾಜದ ಗಣ್ಯ ವ್ಯಕ್ತಿಯೆಂದು ಹೇಳಬಹುದು. ದಣಿದ ಮುಖ ಚರ್ಯೆಯು ಅವನು ಖಾಯಿಲೆಯಿಂದ ನರಳುತ್ತಿರುವವನೆಂದು ಸಾರುತ್ತದೆ. ಅವನ ಬಲಗೈ ಮಣಿಕಟ್ಟಿನಲ್ಲಿ ಅರ್ಧ ಬಗ್ಗಿದೆ. ಕುತ್ತಿಗೆಗೆ ತೂಗು ಕಟ್ಟಿದೆ. ಅವನ ತುಟಿಗಳಿಂದ ಆಗಾಗ ಹೊರಟ ಶಬ್ದಗಳೇ, ಅವನು ಯಾತನೆಯಿಂದ ನರಳುತ್ತಿರುವನೆಂಬುದಕ್ಕೆ ಸಾಕ್ಷಿ.

"ದಯವಿಟ್ಟು, ಕುಳಿತುಕೊಳ್ಳಿ ನಾನೇನು ಸಹಾಯ ಮಾಡಬಲ್ಲೆ ತಮಗೆ?"

"ಒಂದು ವಾರದಿಂದ ನನಗೆ ನಿದ್ದೆ ಸುಳಿಯುತ್ತಿಲ್ಲ. ನನ್ನ ಬಲಗೈಗೆ ಏನೋ ಆಗಿದೆ. ಇಂಥದೇ ಎಂದು ಹೇಳಲು ಆಗುತ್ತಿಲ್ಲ. ಅದು ಕ್ಯಾನ್ಸರ್ ಅಥವಾ ಯಾವುದೋ ಭಯಂಕರ ಖಾಯಿಲೆ ಇರಬಹುದು. ಮೊದಮೊದಲು ಇದರಿಂದ ತೊಂದರೆ ಎನಿಸಿರಲಿಲ್ಲ. ಆದರೆ ಬರಬರುತ್ತ ಉರಿಯು ಹತ್ತಿದೆ. ಡಾಕ್ಟರ್ ಇದರಿಂದಾಗಿ ಒಂದು



ಮೂಲ: **ಕರೋಲಿ ಕಸ್ಸಾಲುಡಿ.**

ಕನ್ನಡಕ್ಕೆ: **ಎಚ್. ಎಸ್. ಶ್ರೀಪಾದಭಟ್ಟ**

ಕ್ಷಣವೂ ನನಗೆ ವಿಶ್ರಾಂತಿ ಇಲ್ಲ. ಭಯಂಕರ ನೋವು; ಗಂಟೆ ಗಂಟೆಗೂ ಉಲ್ಬಣಿಸುತ್ತದೆ. ನೀವು ಚಿಕಿತ್ಸೆ ನೀಡಿ. ಇನ್ನು ಒಂದು ಗಂಟೆ ಹೀಗೆ ನೋವಿದ್ದರೆ ಖಂಡಿತ ನಾನು ಹುಚ್ಚನಾಗಿ ಬಿಡುತ್ತೇನೆ. ಅದನ್ನು ಕತ್ತರಿಸಿ ಬಿಡಿ; ಇಲ್ಲ ಸುಟ್ಟು ಬಿಡಿ ಡಾಕ್ಟರ್......"

"ಇಷ್ಟಕ್ಕೆಲ್ಲಾ ಕೈಯನ್ನೇ ಕತ್ತರಿಸಿ ಬಿಡುವುದೇ ಛೀ......ಛೆ......"

"ಇಲ್ಲ ಶಸ್ತ್ರಚಿಕಿತ್ಸೆ ಮಾಡಲೇ ಬೇಕು. ನೋವಿರುವ ಆ ಭಾಗವನ್ನು ಕತ್ತರಿಸಿ ತೆಗೆಸಬೇಕೆಂಬ ಉದ್ದೇಶದಿಂದಲೇ ಇಲ್ಲಿವರೆಗೆ ಬಂದಿದ್ದೇನೆ. ಬೇರೆ ಯಾವ ಸಲಹೆಯೂ ಪ್ರಯೋಜನವಿಲ್ಲ..." ರೋಗಿ ಆಗ್ರಹಪಡಿಸಿದ. ಅರೆ......ರೋಗಿಯೇ ಡಾಕ್ಟರನಾದನಲ್ಲ! ನೋವಿನ ಪ್ರಭಾವ ಹಾಗೆ ಮಾಡಿಸಿರಬಹುದು.

ಇದ್ದಬಿದ್ದ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ ಕೈಯನ್ನು ಮೇಲಕ್ಕೆತ್ತಿ ಮತ್ತೆ ಮುಂದುವರೆಸಿದ. "ನನ್ನ ಕೈಯಲ್ಲಿ ಇಷ್ಟೊಂದು ನೋವಿಗೆ ಕಾರಣವಾಗುವಂಥ ಯಾವ ಗಾಯಗಳೂ ಕಾಣದಿದ್ದರೆ ಆಶ್ಚರ್ಯಪಡಬೇಡಿ." ಡಾಕ್ಟರ್ ಅವನ ಕೈಯನ್ನು ಪರೀಕ್ಷಿಸಿದರು. ಚಕಿತರಾಗಿ ಒಮ್ಮೆಲೆ ಕೈಬಿಟ್ಟರು. ಕಾರಣ ಅಲ್ಲಿ ಯಾವ ಬಾಯಿಲೆಯ ಸೂಚನೆಯೂ ಗಾಯವೂ ಕಂಡುಬರಲಿಲ್ಲ. ಅದು ಅವನ ಎಡಗೈಯಷ್ಟೇ ಆರೋಗ್ಯವಾಗಿದ್ದು, ಬಣ್ಣವನ್ನೂ ಕಳೆದುಕೊಂಡಿರಲಿಲ್ಲ. ಡಾಕ್ಟರು ಪರೀಕ್ಷಿಸಿ, ಒಮ್ಮೆಲೇ ಕೆಳಕ್ಕೆ ಹಾಕಿದ ಕೈಯನ್ನು ಎಡಗೈಯಿಂದ ತಟ್ಟನೆ ಹಿಡಿದುಕೊಂಡ ಅವನ ವರ್ತನೆಯೇ ಸಾಕಾಗಿತ್ತು, ಅವನು ಭಯಂಕರ ನೋವ

ನ್ನನುಭವಿಸುತ್ತಿರುವನೆಂಬುದಕ್ಕೆ.

"ಯಾವ ಸ್ಥಳದಲ್ಲಿ ಹೆಚ್ಚಾಗಿ ನೋವಿದೆ?" ಡಾಕ್ಟರು ಕೇಳಿದರು ಆಶ್ಚರ್ಯದಿಂದ. ಮಣಿಕಟ್ಟಿನ ಸ್ವಲ್ಪ ಪಕಕ್ಕೆ ಇರುವ ಒಂದು ದುಂಡನೆಯ ಚುಕ್ಕೆಯನ್ನು ಅವನ ಎಡಗೈ ತೋರಿಸಿತು. ಆ ಜಾಗವನ್ನು ಸರ್ಜನರು ಮುಟ್ಟುತ್ತಿದ್ದಂತೆಯೇ ಆತ ತಟಕನೆ ಕೈಯನ್ನು ಹಿಂತೆಗೆದುಕೊಂಡ.

"ಅಲ್ಲಿ ಏನಾದರೂ ಒತ್ತಡವಿದ್ದಂತೆ ತೋರುವುದೇ?"

ಅವನ ಕಣ್ಣೀರೇ ಕತೆಯನ್ನು ಹೇಳಿತು.

"ಅಸಾಧ್ಯ…ಅಸಾಧ್ಯ…ನನಗೇನೂ ತೋಚುವುದಿಲ್ಲ?"

"ನನಗೆ ಕೂಡಾ. ಆದರೆ ಅಲ್ಲಿ ನೋವಿರುವುದು ಸತ್ಯ. ಹೀಗೆ ಭಯಂಕರ ಯಾತನೆಯನ್ನು ಅನುಭವಿಸುವುದಕ್ಕಿಂತ ಸಾಯುವುದೇ ಲೇಸೆಂದು ನನಗನ್ನಿಸುತ್ತಾ ಇದೆ."

ಡಾಕ್ಟರ್ ಮತ್ತೊಮ್ಮೆ ಕೂಲಂಕಷವಾಗಿ ಪರೀಕ್ಷಿಸಿದರು. ದೇಹದ ಉಷ್ಣಾಂಶ ಅಳೆದರು. ನಂತರ ತಲೆ ಅಲ್ಲಾಡಿಸುತ್ತ.

"ಇಲ್ಲ, ಚರ್ಮ ಆರೋಗ್ಯವಾಗಿದೆ. ಧಮನಿಗಳು ಸರಿಯಾಗಿವೆ. ಉರಿಯೂತ ಅಥವಾ ಬುಗುಟಿಯೆಂತೂ ಕಾಣಬರುವುದಿಲ್ಲ. ಆರೋಗ್ಯವಂತ ಕೈಗಳು ಹೇಗೆ ಇರುತ್ತವೋ ಹಾಗೆ ಇದೆಯಲ್ಲಾ?"

ಎರಡು ಷಿಲಿಂಗ್ ಬೆಲೆಯ ಇಂಗ್ಲೀಷ್ ನಾಣ್ಯದ ಅಳತೆಯ ವೃತ್ತವೊಂದನ್ನು ಆ ಭಾಗದಲ್ಲಿ ಮಾಡಿ "ಇಲ್ಲಿರುವಷ್ಟು ಗಟ್ಟಿ ಭಾಗವಿದೆಯಲ್ಲಾ; ಇಲ್ಲಿ" …ಡಾಕ್ಟರರು ಅವನ ಕಡೆ ತದೇಕಚಿತ್ತದಿಂದ ನೋಡುತ್ತಿದ್ದರು. ಅವರ ದೃಷ್ಟಿಯಲ್ಲಿ ಅವನೊಬ್ಬ ಅವಿವೇಕಿಯಂತೆ ಕಂಡ.

"ನೀವು ಇಲ್ಲೇ ಉಳಿಯುವ ಹಾಗಿದ್ದರೆ ಕೆಲವು ದಿನಗಳಲ್ಲಿ ನಿಮಗೆ ನಾನು ಸಹಾಯ ಮಾಡಬಲ್ಲೆ." ಸರ್ಜನರು ಮಾತು ನಿಲ್ಲಿಸಿದರು.

"ನಾನು ಒಂದು ನಿಮಿಷವೂ ಕಾಯಲಾರೆ, ತಪ್ಪು ತಿಳಿಯಬೇಡಿ ಡಾಕ್ಟರ್, ನನಗೆ ಮತಿಭ್ರಮಣೆಯಾಗಿಲ್ಲ; ಈ ಕಾಣದ ಗಾಯ ನನ್ನನ್ನು ಕಿತ್ತು ತಿನ್ನುತ್ತಿದೆ. ಆದಷ್ಟು ಬೇಗ ಆ ಭಾಗವನ್ನು ಕತ್ತರಿಸಿ ತೆಗೆದು ಬಿಡಿ ಡಾಕ್ಟರ್."

"ಅದನ್ನು ಮಾತ್ರ ನಾನು ಮಾಡಲಾರೆ ಮಿಸ್ಟರ್".

"ಏಕೆ?"

"ಕೈಯಲ್ಲಿ ಏನೊಂದೂ ಗಾಯ ಕಾಣಬರುವದಿಲ್ಲ ನನ್ನ ಸ್ವಂತ ಕೈಯಷ್ಟೇ ಆರೋಗ್ಯವಾಗಿದೆ."

"ನೀವು ನನ್ನನ್ನು ಹುಚ್ಚನೆಂದು ಭಾವಿಸಿರುವ ಹಾಗೆ ತೋರುತ್ತದೆ." ಎಂದು ತನ್ನ ಹಸಬೆಯಿಂದ ಎರಡು ಸಾವಿರ ಷಿಲಿಂಗ್ ನಾಣ್ಯಗಳ ಬೆಲೆಯ ಬ್ಯಾಂಕ್ ನೋಟುಗಳನ್ನು ಹೊರತೆಗೆದು ಮೇಜಿನ ಮೇಲಿಟ್ಟು,

"ನೋಡಿ ಡಾಕ್ಟರ್ ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೇನೆ. ಈ ವಿಚಾರದ ಮಟ್ಟಿಗೆ ನಾನು ಗಂಭೀರ. ಅದಕ್ಕಾಗಿ ಇಷ್ಟು ಖರ್ಚು ಮಾಡಲೂ ತಯಾರಿದ್ದೇನೆ. ದಯವಿಟ್ಟು ಆಪರೇಷನ್ ಮಾಡಿ."

"ನೀವು ಇಡೀ ಪ್ರಪಂಚದ ಹಣವನ್ನೆಲ್ಲಾ ತಂದು ಸುರಿದರೂ, ನಾನು ಆರೋಗ್ಯವಂತ ಅವಯವಕ್ಕೆ ಈ ಕತ್ತರಿಯನ್ನು ತಾಗಿಸಲಾರೆ."

"ಏಕೆ?"

"ನಾನು ವೇದಾಂತವನ್ನು ಹೇಳುತ್ತಿಲ್ಲ. ಆದರೆ ಸಮಾಜ ನಿಮ್ಮ ದೌರ್ಬಲ್ಯ, ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಂಡೆನೆಂದು ನನ್ನನ್ನು ದೂರುವುದಿಲ್ಲವೇ?"

"ಹೋಗಲಿ, ಇನ್ನೊಂದು ಮಾಡೋಣ; ನಾನೇ ಸ್ವತಃ ನನ್ನ ಎಡಗೈಯಿಂದ ಆಪರೇಷನ್ ಮಾಡಿಕೊಳ್ಳುತ್ತೇನೆ. ನಂತರ ಔಷಧಿ ಹಾಕಿ ಹಾಸಿ ಮಾಡುವ ಕೆಲಸ ನೀವು ಮಾಡಬೇಕು." ಸರ್ಜನರು ದಿಗ್ಮೂಢರಾದರು. ಸೀರಿಯಸ್ಸಾಗೇ ಹೇಳುತ್ತಿರುವುದನ್ನು ಗಮನಿಸಿ ಹಾಕಿದ್ದ ಕೋಟನ್ನು ತೆಗೆಸಿ, ಅಂಗಿಯ ತೋಳನ್ನು ಸರಿಸಿದರು. ಡಾಕ್ಟರಲ್ಲಿರುವ ಉಪಕರಣಗಳು ಸಾಲದೇನೋ ಎಂಬಂತೆ ತನ್ನ ಜೇಬು ಚೂರಿಯನ್ನು ಹೊರತೆಗೆದು ಕೆತ್ತುವುದರಲ್ಲಿದ್ದ. ಡಾಕ್ಟರ್ ಅಡ್ಡ ಬಾರದೇ ಇದ್ದಿದ್ದರೆ ಚಾಕುವಿನಿಂದ ಕೈಯ ಭಾಗವನ್ನು ಆಳವಾಗಿ ಕೆತ್ತಿ ಬಿಡುತ್ತಿದ್ದನೋ ಏನೋ.

"ನಿಲ್ಲಿ!" ಡಾಕ್ಟರ್ ಅರಚಿದರು. "ಅದು ಆಗಲೇ ಬೇಕಿದ್ದರೆ ನಾನು ಮಾಡುತ್ತೇನೆ ಬಿಡಿ"

ಆಪರೇಷನ್ನಿಗೆ ತಯಾರಿ ನಡೆಯಿತು. ಅವನು ಹೇಳಿದ ಭಾಗವನ್ನು ಕತ್ತರಿಸಿ ತೆಗೆಯುವಾಗ ಅವನ ತಲೆಯನ್ನು ಪಕ್ಕಕ್ಕೆ ತಿರುಗಿಸಿ ಅವನ್ನು

ನೋಡದಂತೆ ಎಚ್ಚರಿಕೆ ವಹಿಸಿದರು. ತನ್ನದೇ ರಕ್ತವನ್ನು ನೋಡಿ ಭಯದಿಂದ ಎಚ್ಚರದಪ್ಪುವ ರೋಗಿಗಳಿಗೇನೂ ಕೊರತೆಯಿಲ್ಲ.

ಯಾವ ಆತಂಕವಿಲ್ಲದೇ ಆಪರೇಷನ್ ಆಯಿತು. ಅವನು ಸರ್ಜನರೊಂದಿಗೆ ಸಂಪೂರ್ಣ ಸಹಕರಿಸಿದ. ಕೈಯನ್ನು ಸ್ವಲ್ಪವೂ ಕಂಪಿಸಲಿಲ್ಲ. ಭುಜದ ಮೇಲಿಂದ ಒಂದು ದೊಡ್ಡ ಹೊರೆ ಇಳಿಸಿದಷ್ಟು ದೀರ್ಘ ನಿಟ್ಟುಸಿರುಬಿಟ್ಟ ಅಷ್ಟೇ.

"ಈಗ ನೋವಿದೆಯೇ?"

"ಇಲ್ಲ; ಸುಡುತ್ತಿರುವ ಗಾಳಿ ತಟ್ಟನೆ ನಿಂತು ತಂಪಾದ ಕುಳಿರ್ಗಾಳಿ ಬೀಸಿದರೆ ಹೇಗೋ ಹಾಗೆ ನೋವು ಇದ್ದಕ್ಕಿದ್ದಂತೆ ಮಾಯವಾಯಿತು. ರಕ್ತ ಹಾಗೆಯೇ ಸಂಚರಿಸುತ್ತಿದ್ದರೆ ಹಾಯೆನಿಸುತ್ತದೆ ಡಾಕ್ಟರ್." ಅವನು ಮುಗುಳು ನಗುತ್ತಿದ್ದ. ಗಾಯವನ್ನು ಬ್ಯಾಂಡೇಜ್ ಮಾಡಿದರು. ರೋಗಿ ಈಗ ಪೂರ್ಣ ತೃಪ್ತ. ಇಲ್ಲಿಗೆ ಬರುವಾಗಿನ ಅವನ ಚರ್ಯೆಗೂ ಈಗಿನ ಚರ್ಯೆಗೂ ಅಜಗಜಾಂತರ. ಎಡಗೈಯಿಂದ ಸರ್ಜನರ ಕೈಗಳನ್ನು ಆತ್ಮೀಯವಾಗಿ ಹಿಡಿದುಕೊಂಡು "ನಾನು ನಿಮಗೆ ತುಂಬಾ ಕೃತಜ್ಞ ಡಾಕ್ಟರ್" ಎಂದು ಕೈಕುಲುಕಿದ.

ಆತ ಇಳಿದುಕೊಂಡಿದ್ದ ಹಾಸ್ಟೆಲಿಗೆ ಆಗಾಗ ಹೋಗಿ ಬರುತ್ತಿದ್ದರು ಡಾಕ್ಟರು. ಅವನೊಬ್ಬ ಗೌರವಾನ್ವಿತ, ವ್ಯಕ್ತಿ, ಸುಸಂಸ್ಕೃತ, ವಿದ್ಯಾವಂತನೆಂಬುದು ನಂತರ ಅವರಿಗೆ ತಿಳಿಯಿತು. ಗಾಯ ಪೂರ್ಣ ಮಾಗಿದ ನಂತರ ಆ ವ್ಯಕ್ತಿ ಸಂತಸದಿಂದ ಊರಿಗೆ ಹಿಂತಿರುಗಿದ.

ಇದಾಗಿ ಮೂರು ವಾರಗಳು ಕಳೆದಿರಬಹುದು. ಒಂದು. ದಿನ ಅದೇ ವ್ಯಕ್ತಿ ಮತ್ತೆ, ಸರ್ಜನರ ಎದುರು ಪ್ರತ್ಯಕ್ಷನಾದ. ಮೊದಲಿನಂತೆ ಪುನಃ ಕೈ ಕುತ್ತಿಗೆಗೆ ತೂಗುಬಿದ್ದಿತ್ತು. ಕತ್ತರಿಸಿದ ಅದೇ ಜಾಗದಲ್ಲಿ ಯಮಬಾಧೆಯುಂಟಾಗುತ್ತಿದೆಯೆಂದು ಆತ ಬೊಬ್ಬಿಟ್ಟ. ಡಾಕ್ಟರರ ಕಣ್ಣು ಅಲ್ಲಿ ನೆಟ್ಟಿತು. ಕೆಲವು ದಿನಗಳ ಹಿಂದೆ ಅಲ್ಲಿ ಆಪರೇಶನ್ ಆಗಿದೆಯೆಂದು ಯಾರೂ ಹೇಳುವ ಹಾಗಿರಲಿಲ್ಲ. ಅವನ ಮುಖ ಅಂಟಿಸಂತೆ ಜಿಗುಟಿಕೊಂಡಿತ್ತು. ಹಣೆಯಲ್ಲಿ ಚಿಂತೆಯ ಗೆರೆಗಳು. ಆ ಗೆರೆಗಳ ತುಂಬ ಬೆವರಿನ ಸಾಲುಗಳು. ಬದಿಯಲ್ಲಿದ್ದ ಈಸೀ ಛೇರಿನಲ್ಲಿ ಕುಳಿತೊಡನೆಯೇ ಬಲಗೈಯನ್ನು ಡಾಕ್ಟರರ ಮುಖಕ್ಕೆ ಹಿಡಿದ.

"ಏನು ಯಜಮಾನರೇ, ಏನಾಯಿತು?"

"ನೀವು ಆ ಭಾಗವನ್ನು ಪೂರ್ಣ ಕತ್ತರಿಸಲಿಲ್ಲ ನೋವು ಮತ್ತೆ ಕಾಣಿಸಿಕೊಂಡಿದೆ. ಕಳೆದ ಬಾರಿಗಿಂತ ಅಸಾಧ್ಯ ನೋವು, ಡಾಕ್ಟರ್ ನೀವು ನನ್ನನ್ನು ಇದೆಲ್ಲಿಯ ಪೀಡೆ ಎನ್ನಿರಿ ಬೇಕಾದರೆ, ಬೈಯಿರಿ, ಸಹಿಸಿಕೊಳ್ಳಬಲ್ಲೆ; ಆದರೆ ಈ ನೋವನ್ನು ಮಾತ್ರ ತಡೆಯಲಾರೆ. ನೀವು ಮತ್ತೆ ಆಪರೇಷನ್ ಮಾಡಲೇಬೇಕು,"

ಸರ್ಜನರು ಕೈಯನ್ನು ಪರೀಕ್ಷಿಸಿದರು. ಕತ್ತರಿಸಿದ ಜಾಗ ಪೂರ್ಣ ಗುಣವಾಗಿತ್ತು. ಕೆಂಪು ಚರ್ಮ ಎದ್ದು ಕಾಣುತ್ತಿತ್ತು. ಮೂಳೆಗಳೆಲ್ಲ ಸ್ವಸ್ಥಾನದಲ್ಲೇ ಇದ್ದವು. ನಾಡಿ ಬಡಿತ ಎಂದಿನಂತೆ ಇತ್ತು. ಜ್ವರವೂ ಇರಲಿಲ್ಲ. ಆದರೆ ಅವನ ಸರ್ವಾಂಗಗಳೂ ಥರಥರನೆ ಕಂಪಿಸುತ್ತಿದ್ದವು. ಸರ್ಜನರಿಗೆ ಯೋಚನೆಗಿಟ್ಟುಕೊಂಡಿತು.

"ಈವರೆಗೆ ಇಂಥ ಅನುಭವ ನನಗೆ ಆಗಿರಲಿಲ್ಲ ಎಲ್ಲಿಯೂ ಕೇಳಲಿಲ್ಲ!" ಎಂದರು ಡಾಕ್ಟರ್ ಹತಾಶರಾಗಿ.

ಪುನಃ ಅವನು ಹೇಳುವ ಭಾಗವನ್ನು ಕತ್ತರಿಸುವುದೊಂದನ್ನು ಬಿಟ್ಟರೆ ಬೇರೇನೂ ತೋಚಲಿಲ್ಲ ಸರ್ಜನರಿಗೆ. ನೀರಿನಲ್ಲಿ ಇಳಿದಾಗಿದೆ. ಇನ್ನು ಛಳಿಗೇಕೆ ಹಿಂದೇಟು ಹಾಕಬೇಕು? ಮತ್ತೆ ಆಪರೇಷನ್ ನಡೆಯಿತು. ಮುಂಚಿನಂತೆಯೇ ರೋಗಿ ಸಹಕರಿಸಿದ. ಕಾಡುತ್ತಿರುವ ನೋವು ಮಾಯವಾಯಿತು. ರೋಗಿ ತೃಪ್ತಿಯ ಭಾವ ಹೊಮ್ಮಿಸಿದ. ಆದರೆ ವ್ಯಕ್ತಿಯ ಮುಖದಲ್ಲೀಗ ಏನೋ ಬದಲಾವಣೆ ಆಗಿತ್ತು. ನಗೆಯಿಲ್ಲ, ಮಾತುಕತೆಯಿಲ್ಲ. ಸರ್ಜನರಿಗೆ ವಂದಿಸುವಾಗ ಅವನು ಖಿನ್ನನಾಗಿದ್ದ. ಆಜಾನುಬಾಹು ದೇಹ ಕುಗ್ಗಿ ಮೂರಡಿಯಾಗಿತ್ತು. ಇದೇನು ಮೋಡಿಯೋ? ಯಕ್ಷಿಣಿಯ ಕಾಟವೋ? ಮಾನಸಿಕ ವೇದನೆಯೋ?

"ಮತ್ತೆ ಒಂದು ತಿಂಗಳಿಗೆ ನಾನು ಇಲ್ಲಿಗೆ ಬಂದರೆ ಆಶ್ಚರ್ಯ ಪಡಬೇಕಾಗಿಲ್ಲ ಡಾಕ್ಟರ್" ಯಾತನೆಯಲ್ಲೂ ಆತ ಗೊಣಗಿದ.

"ಹಾಗೆ ಯೋಚಿಸಲೂ ಬಾರದು!"

"ಸ್ವರ್ಗದಲ್ಲಿರುವ ದೇವರಷ್ಟೇ ಅದು ಸತ್ಯ!" ನೋವಿನಿಂದ ಕಾರ್ಪಣ್ಯಕ್ಕೆ ತಿರುಗಿತ್ತು ಧ್ವನಿ.

ಸರ್ಜನರು ಸಹೋದ್ಯೋಗಿಗಳೊಡನೆ ಆ ಕೇಸಿನ ಬಗ್ಗೆ ಚರ್ಚಿಸಿದರು. ತೃಪ್ತಿಕರವಾದ ಸಲಹೆ ಯಾರಿಂದಲೂ ಬರಲಿಲ್ಲ.

ಒಂದು ತಿಂಗಳು ಕಳೆಯಿತು. ಸದ್ಯ ರೋಗಿಯ ಸುಳಿವಿಲ್ಲ. ಆದರೆ ಕೆಲವು ದಿನಗಳ ನಂತರ ಸರ್ಜನರಿಗೆ ಪತ್ರ ಬಂತು. ಆ ರೋಗಿಯ ಸ್ವಸ್ಥಾನದ ಮೊಹರು ಅದರ ಮೇಲಿತ್ತು. ಇಮ್ಮಡಿ ಉತ್ಸಾಹದಿಂದ ಕಾಗದ ಒಡೆದರು.

"ಪ್ರಿಯ ಡಾಕ್ಟರರೇ, ನಿಮ್ಮನ್ನು ಇನ್ನು ಸತಾಯಿಸಲಾರೆ. ನನ್ನ ರೋಗದ ಮೂಲವನ್ನು ಬಚ್ಚಿಟ್ಟು ನಿಮ್ಮ ಅನುಮಾನದ ದಳ್ಳುರಿಯನ್ನು ಹೆಚ್ಚಿಸಲಾರೆ. ಆ ರಹಸ್ಯ ನನ್ನ ಗೋರಿಯೊಂದಿಗೆ ಮಣ್ಣಾಗಬೇಕೆಂಬ ಇಚ್ಛೆ ಒಂದು ಕಾಲದಲ್ಲಿ ನನ್ನಲ್ಲಿತ್ತು. ಆ ವಿಚಿತ್ರ ಖಾಯಿಲೆಯ ಬಗ್ಗೆ ನಿಮಗೆ ಮಾತ್ರ ಹೇಳಲೇಬೇಕೆಂದು ನನ್ನ ಮನ ನಿರ್ಧರಿಸಿತು. ನಿಮ್ಮಲ್ಲಿಂದ ಬಂದ ನಂತರ ಆ ನೋವು ಮೂರು ಬಾರಿ ನನ್ನನ್ನು ಕಾಡಿತ್ತು.



"ರ್‍ಯಾಂಕುಗಳು ಬರೋ ಕಾಲೇಜಿಗೆ ಸೇರಿಸೀಂತ ಬಡ್ಕೊಂಡೇ....ಈಗ ನೋಡಿ ಫೇಲಾಯ್ತು."

ಈಗ ಅವರ ವಿರುದ್ಧ ಹೋರಾಡುವ ಶಕ್ತಿಯನ್ನು ನಾನು ಕಳೆದುಕೊಂಡಿದ್ದೇನೆ. ಅದೊಂದು ಅಮಾನುಷ ಶಕ್ತಿ. ಆ ಭಾಗದ ಮೇಲೆ ಕೆಂಡವನ್ನಿಟ್ಟು ನಿಮಗೆ ಕಾಗದ ಬರೆಯಲು ಶಕ್ತನಾಗಿದ್ದೇನೆ. ಆ ನರಕ ಸದೃಶ ಯಾತನೆಯ ಕಿಡಿಗಳಿಗೆ ಪ್ರತಿರೋಧಕ ಶಕ್ತಿ ಈ ಬೆಂಕಿ ಮಾತ್ರ. ನನ್ನನ್ನು ಹುಚ್ಚನೆಂದುಕೊಳ್ಳಬೇಡಿ. ನಿಮಗೆ ಸತ್ಯ ತಿಳಿಸುವುದೇ ನನ್ನ ಉದ್ದೇಶ.

"ಈಗ ಆರು ತಿಂಗಳ ಹಿಂದೆ ನಾನು ಅತ್ಯಂತ ಸುಖೀ ಮನುಷ್ಯ. ಒಬ್ಬ ಸುಖೀ ವ್ಯಕ್ತಿ ತನ್ನ ಮೂವತ್ತೈದನೇ ವಯಸ್ಸಿನಲ್ಲಿ ಪಡಬಹುದಾದ ಆನಂದ", ವೈಭವ ನನ್ನಲ್ಲಿತ್ತು. ಸರಿಯಾಗಿ ಒಂದು ವರ್ಷದ ಹಿಂದೆ ಗೃಹಸ್ಥನಾದೆ. ನಮ್ಮಿಬ್ಬರದು ಪ್ರೀತಿಯ ಬೆಸುಗೆ. ಅತ್ಯಂತ ಸುಂದರಿ, ದಯಾಳು, ಮಿತಭಾಷಿ, ಮತ್ತು ಸುಸಂಸ್ಕೃತಳಾಗಿದ್ದಳು ನನ್ನ ಹೆಂಡತಿ. ನನ್ನ ಎಸ್ಟೇಟಿಗೆ ಸ್ವಲ್ಪ ದೂರದಲ್ಲಿದ್ದ ಒಬ್ಬ ಬ್ರಿಟೀಷ್ ಜಮೀನುದಾರನ ಹೆಂಡತಿಯೊಂದಿಗೆ ನನ್ನಾಕೆಯ ಗೆಳೆತನವಿತ್ತು. ನಿಷ್ಕಲ್ಮಷ ಹೃದಯದ ಅವಳು ನನ್ನನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು. ಕಳೆದ ಆರು ತಿಂಗಳ ದಾಂಪತ್ಯ ಜೀವನ ಸ್ವರ್ಗಸುಖಕ್ಕಿಂತ ಮಿಗಿಲೆನಿಸಿತ್ತು. ಕಳೆದ ಒಂದೊಂದು ದಿನಗಳೂ ರಸಗಳಿಗೆಯ ಸವಿನೆನಪಿನ ಆಗರ. ನಾನು ಪಟ್ಟಣಕ್ಕೆ ಹೋಗುವಾಗ ಒಂದು ಮೈಲಿವರೆಗೂ ನನ್ನೊಡನೆ ಹೆದ್ದಾರಿಯಲ್ಲಿ ಹೆಜ್ಜೆ ಹಾಕುವಳು. ತನ್ನ ತವರಿನಲ್ಲೂ ಹೆಚ್ಚೆಂದರೆ ಒಂದೆರಡು ಘಂಟೆಗಳನ್ನು ಬಿಟ್ಟರೆ ಹೆಚ್ಚು ಕಾಲ ಉಳಿಯಲಾರದಷ್ಟು ಅಪರಿಮಿತ ಪ್ರೀತಿ ನನ್ನ ಮೇಲೆ. ಅವಳು ನನಗಾಗಿ ಹಂಬಲಿಸುತ್ತಿರುವುದನ್ನು ಕಂಡವರೆಲ್ಲ ಕರುಬುವಂತಾಗಿತ್ತು. ಅಬ್ಬಾ, ಇವನ ಅದೃಷ್ಟವೇ ಎಂದು ನೋಡಿದವರು ಅಸೂಯೆ ಪಡುವಂತಾಯಿತು. ಹಲ್ಲಿದ್ದರೆ ಕಡಲೆ ಇಲ್ಲ. ಕಡಲೆ ಇದ್ದರೆ ಹಲ್ಲಿಲ್ಲ ಎನ್ನುವ ಹಾಗೆ ನಾನು ಪಡೆದುಕೊಂಡು ಬರಲಿಲ್ಲ ಅಷ್ಟೇ.

"ಪುರುಷರೊಡನೆ ಕ್ಲಬ್ಬಿನಲ್ಲಿ ನೃತ್ಯಮಾಡುವುದೆಂದರೆ ಒಂದು ಮೈಲಿ ದೂರ ನಿಲ್ಲುತ್ತಿದ್ದಳು. ಯಾರನ್ನಾದರೂ ಕನಸಿನಲ್ಲಿ ಕಾಣುವುದೇ ಅವಳ ಪ್ರಕಾರ ಒಂದು ಮಹಾಪರಾಧ. ಮಗುವಿನ ಮುಗ್ಧ ಮನಸ್ಸು. ಕಲಿಯುಗದ ಪತಿವ್ರತೆ. ಇಷ್ಟೆಲ್ಲ ಏಕೆ

ಹೇಳುತ್ತಿದ್ದೇನೆಂದರೆ ಅವಳ ಪಾತಿವ್ರತ್ಯವನ್ನು ನಾನು ಶಂಕಿಸಿದೆನೆಂದು ನೀವು ಭಾವಿಸಬಾರದು.

"ನನ್ನಲ್ಲುಂಟಿಸಿದ ಅಪನಂಬಿಕೆಗೆ ನಾನೇಕೆ ಬಲಿಪಶುವಾದೆನೆಂದು ಈಗಲೂ ನನಗೆ ಅರ್ಥವಾಗಿಲ್ಲ. ಅತ್ಯಂತ ಸಂತೋಷದ ಕ್ಷಣಗಳನ್ನು ತನ್ನದಾಗಿಸಿಕೊಂಡು ಅನುಭವಿಸಲಾರದ ಮನುಷ್ಯ ನಾನಾದೆ.

"ಅವಳಲ್ಲಿ ಒಂದು ಸಣ್ಣ ಹೊಲಿಯುವ ಮೇಜಿತ್ತು. ಅದರ ಡ್ರಾವನ್ನು ಯಾವಾಗಲೂ ಬೀಗ ಹಾಕಿ ಇಡುತ್ತಿದ್ದಳು. ಇದು ನನ್ನ ಮೆದುಳನ್ನು ಕೊರೆಯತೊಡಗಿತು. ಒಂದು ದಿನವೂ ಬೀಗಹಾಕಲು ಮರೆಯುತ್ತಿರಲಿಲ್ಲ. ಇಷ್ಟು ಕಾಳಜಿಯಿಂದಿರಲು ಅದರಲ್ಲಿ ಅಂಥ ವಸ್ತು ಏನಿದೆ? ನಾನು ಸಂಶಯದಿಂದ ಹುಚ್ಚನಾದೆ. ಅವಳ ಮುಗ್ಧ ಕಂಗಳ, ಸಿಹಿ ಮುತ್ತುಗಳ, ಬಿಸಿ ಅಪ್ಪುಗೆಗಳ ಮೇಲಿನ ನನ್ನ ನಂಬಿಕೆಯ ಬುಡ ಅಲ್ಲಾಡತೊಡಗಿತು. ಇವೆಲ್ಲ ಬರೀ ನಟನೆ, ದಗಲ್ಬಾಜಿತನ, ಒಲ್ಲದ ಗಂಡನಿಗೆ ದ್ರೋಹ ಎಂದು ನನ್ನ ಮನ ಚೀರಿತು.

"ಇತಿಹಾಸ ಪ್ರಸಿದ್ಧ ಕೋಟೆಯಲ್ಲಿ ಒಂದು ದಿನ ಸಂತೋಷವಾಗಿ ಕಳೆಯಲು ಕೌಂಟೆಸ್ ಬಂದು ನನ್ನವಳನ್ನು ಕರೆದುಕೊಂಡುಹೋದಳು. ಈ ಸದವಕಾಶಕ್ಕಾಗಿ ಹಾತೊರೆಯುತ್ತಿದ್ದ ನಾನು ಮಧ್ಯಾಹ್ನದ ಮೇಲೆ ಬರುತ್ತೇನೆಂದು ಹೇಳಿದೆ.

"ಮೇಜಿನ ಡ್ರಾವನ್ನು ತೆಗೆಯಲು ಪ್ರಯತ್ನಪಟ್ಟಾಗ ಅದು ಒಂದು ಅಡಿಯಷ್ಟು ಹೊರಗೆ ಜಾರಿತು. ಕೀಲಿಕೈಗಳ ಗೊಂಚಲಿನಲ್ಲಿ ಒಂದು ಉಪಯೋಗಕ್ಕೆ ಬಂತು. ಡ್ರಾ ತೆರೆದೆ. ಹುಡುಕಾಡಿದ ಮೇಲೆ ರೇಷ್ಮೆ ವಸ್ತ್ರದೊಳಗೆ ಇಟ್ಟಿದ್ದ ಒಂದು ಕಾಗದಗಳ ಕಟ್ಟು ಕಂಡಿತು. ಬೂದಿ ಬಣ್ಣದ ರಿಬ್ಬನ್ನಿನಿಂದ ಕಟ್ಟಲ್ಪಟ್ಟ ಅವು ನಾನೆಣಿಸಿದಂತೆ ಪ್ರೇಮಪತ್ರಗಳಾಗಿದ್ದವೆ? ಒಂದಲ್ಲ ಎರಡಲ್ಲ; ಹಲವಾರು ಪತ್ರಗಳು. ಸಭ್ಯಾಸಭ್ಯ, ವಿವೇಕಗಳ ಬಗ್ಗೆ ಯೋಚಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ಅಲ್ಲದೇ ಇದು ಅವಿವೇಕತನವೆಂದೂ ನನಗೆ ಅನ್ನಿಸಲಿಲ್ಲ. ನನ್ನ ಹೆಂಡತಿಯ ಕೌಮಾರ್ಯದ ರಹಸ್ಯ! ಯಾವುದೋ ಶಕ್ತಿ ನನ್ನನ್ನು ಪ್ರೇರೇಪಿಸಿತು. ರಿಬ್ಬನ್ ಬಿಚ್ಚಿದೆ. ಒಂದಾದ ಮೇಲೊಂದರಂತೆ ಪತ್ರಗಳನ್ನು ಓದತೊಡಗಿದೆ. ನನ್ನ ಜೀವಮಾನದಲ್ಲಿಯೇ ಅತ್ಯಂತ ವಿಷಮ ಘಳಿಗೆ ಅದು.

"ಅಕ್ಷಮ್ಯ ಅಪರಾಧ, ವಿಶ್ವಾಸಘಾತುಕತನ" ನಂಬಿಕೆದ್ರೋಹದಂಥ ಪದಗಳು ಅಲ್ಲಲ್ಲಿ ಗೋಚರಿಸಿದವು. ಅಂದರೆ ನನ್ನ ಹೆಂಡತಿ ಅರ್ಥಾತ್ ಅವಳ ಪ್ರಿಯತಮ ತನ್ನ ಪ್ರೇಮಿಗೆ ನಯವಂಚನೆ ಮಾಡಿದಂತೆ... ಓದಲಾರದೆ ಓದಿದೆ. ವಿಷಾದದ ಸಂಗತಿ ಎಂದರೆ ಇವೆಲ್ಲ ನನ್ನ ಆತ್ಮೀಯ ಮಿತ್ರರೆನಿಸಿಕೊಂಡವರಿಂದ ಬರೆಯಲ್ಪಟ್ಟವುಗಳು! ಅವರದೇ ಧ್ವನಿ...ಭಾವೋದ್ರೇಕ, ಕಾಮವಿಕಾರ, ಆತ್ಮೀಯತೆಯ ಪರಮಾವಧಿಗಳ ಭಾವನೆಗಳು ಎಲ್ಲೆಲ್ಲೂ. ತಮ್ಮ ಸಂಬಂಧವನ್ನು ಹೇಗೆ ಗುಟ್ಟಾಗಿಡಬೇಕೆಂದು ಬರೆದಿದ್ದ. ಮೂರ್ಖ ಗಂಡಂದಿರ ಬಗ್ಗೆ ಅವಹೇಳನಗಳು! ಗಂಡನೆಂಬ ಪ್ರಾಣಿಯನ್ನು ಹೇಗೆ ವಂಚಿಸಬೇಕೆಂದೂ ಅವನ ಮುಗ್ಧತೆಯನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಪ್ರಿಯತಮೆಗೆ ಉಪದೇಶಗಳು!

"ವಿಶೇಷವೆಂದರೆ ನಮ್ಮ ಮದುವೆಯ ನಂತರವೇ ಈ ಪತ್ರಗಳೆಲ್ಲ ಬರೆಯಲ್ಪಟ್ಟವು. ಡಾಕ್ಟರ್, ಆಗ ನಾನು ವಿಚಿತ್ರ ಭಯಂಕರ ವೇದನೆಯನ್ನು ಅನುಭವಿಸಿದೆ. ಆಗ ಉಂಟಾದ ಅನಿಸಿಕೆಗಳನ್ನೆಲ್ಲಾ ಇಲ್ಲಿ ಬರೆಯಲಾರೆ. ನನ್ನಲ್ಲಿ ಹುಟ್ಟಿದ ವಿಷವನ್ನು ಕೊನೆಯ ತೊಟ್ಟು ಬಿಡದೆ ಕುಡಿದೆ. ಪತ್ರಗಳನ್ನು ಮಡಚಿ ಅವುಗಳನ್ನು ಸ್ಥಾನದಲ್ಲಿಟ್ಟೆ. ಡ್ರಾಕ್ಕೆ ಬೀಗ ಹಾಕಿದೆ. ನನಗೆ ಗೊತ್ತಿತ್ತು, ನಾನು ಮಧ್ಯಾಹ್ನ ಕೋಟೆಗೆ ಹೋಗದಿದ್ದರೂ ಅವಳು ಸಾಯಂಕಾಲ ಹಿಂದಿರುಗುವಳೆಂದು. ಹಾಗೇ ಆಯಿತು. ಅವಳು ಉತ್ಸಾಹದ ಚಿಲುಮೆಯಂತೆ ಗಾಡಿಯಿಂದ ಕೆಳಗೆ ಹಾರಿ ದೇವಡಿಯಲ್ಲಿದ್ದ ನನ್ನತ್ತ ಜಿಂಕೆಯಂತೆ ಜಿಗಿದು, ಬರಸೆಳೆದು ಉನ್ಮಾದದಿಂದ ಮುತ್ತಿಟ್ಟಳು. ಅಂದಿನ ಅವಳ ರೀತಿ ಎಂಥ ಷಂಢರನ್ನೂ ಉದ್ರೇಕಗೊಳಿಸುವಂತಿತ್ತು. ನಾನು ಏನೊಂದು ಆಗದವನಂತೆ ಸಹಿಸಿಕೊಂಡೆ.

"ನಾವು ಹರಟಿದೆವು. ರಾತ್ರಿಯೂಟ ಒಟ್ಟಿಗೇ ಮಾಡಿದೆವು. ನಿತ್ಯದಂತೆ ನಮ್ಮ ನಮ್ಮ ಕೊಠಡಿಗಳಿಗೆ ತೆರಳಿದೆವು. ಏನು ಮಾಡಬೇಕೆಂದು ನಾನು ಆಗಲೇ ನಿರ್ಧರಿಸಿಯಾಗಿತ್ತು. ಹುಚ್ಚನಂತೆ ಜಗಮೊಂಡನಂತೆ ನನ್ನ ಮೆದುಳು ಕೆಲಸ ಮಾಡುತ್ತಿತ್ತು. ಇಂಥ ಸ್ಥಿತಿಯಲ್ಲಿ ನೀವಿ

ದ್ದಿದ್ದರೆ ಏನು ಮಾಡುತ್ತಿದ್ದಿರಿ ಡಾಕ್ಟರ್? ಅದು ನನ್ನ ತಪ್ಪೇ?...ನನ್ನ ತಪ್ಪೇ? ಹೌದು. ಅದು ನನ್ನ ತಪ್ಪೇ. ಒಮ್ಮೆ ಅವಳನ್ನು ಆ ಪತ್ರಗಳ ಬಗ್ಗೆ ವಿಚಾರಿಸಬೇಕಾಗಿತ್ತು. ಕಾಲ ಮಿಂಚಿಹೋಯಿತು! ಅದಿರಲಿ... ನಾನು ಏನು ಹೇಳುತ್ತಿದ್ದೆ?... ಹ್ಞಾ, ಸರಿ...ಅವಳ ಕೊಠಡಿಗೆ ಮಧ್ಯರಾತ್ರಿಗೆ ಸರಿಯಾಗಿ ಹೋದೆ. ಸುಖನಿದ್ರೆಯಲ್ಲಿದ್ದ ಅವಳ ಸುಂದರ ಮುಗ್ಧ ಮುಖವನ್ನೊಮ್ಮೆ ದಿಟ್ಟಿಸಿದೆ. ನೋಡುತ್ತಿದ್ದಂತೆ ತೆರೆದ ಈ ಸುಂದರ ಮುಖದ ಅಕ್ಷಮ್ಯ ಅಪರಾಧವನ್ನು ನಿಸರ್ಗವೇಕೆ ಮನ್ನಿಸಿದೆ. ಎಂಥ ನಯವಂಚನೆ ಎಂದು ನನ್ನಲ್ಲೇ ಹೇಳಿಕೊಂಡಿದ್ದೆ. ಹೆಣ್ಣಿನ ಸುಂದರ ಮುಖ ಪ್ರಪಂಚವನ್ನೆಲ್ಲ ಪ್ರೀತಿಯ ಒರತೆಯಿಂದ ತುಂಬಿಸಿದೆ. ಆದರೆ ನನ್ನ ಹೆಂಡತಿಯ ಸುಂದರ ಮುಖ ಯಾರಿಗೆ... ನನ್ನೊಳಗಿನ ವಿಷ ನನ್ನಾತ್ಮವನ್ನು ನನ್ನೆಲ್ಲ ಅಂಗಾಂಗಗಳನ್ನು ಆವರಿಸಿಕೊಂಡುಬಿಟ್ಟಿತ್ತು. ಆಗ ನನ್ನನ್ನು ಯಾರಾದರೂ ಮುಟ್ಟಿದ್ದರೆ ಅವರು ವಿಷವೇ ಸತ್ತು ಹೋಗುತ್ತಿದ್ದರು. ಸುಂದರ ಮುಖದ ಒಡತಿಯನ್ನು ಮುಟ್ಟಿದೆ. ಮುಟ್ಟಿದೆ ಅಂದರೆ ನನ್ನ ಕೈಯನ್ನು ಅವಳ ನೀಳ ಕತ್ತಿನಲ್ಲಿಟ್ಟು ಅಮುಕಿದೆ. ನನ್ನೆಲ್ಲ ಶಕ್ತಿಯನ್ನೂ ಒಗ್ಗೂಡಿಸಿ ಅಮುಕಿದೆ. ಒಂದು ಕ್ಷಣ ಕಣ್ಣುಗಳನ್ನು ತೆರೆದು ಅವಳು ನನ್ನನ್ನು ನೋಡಿದಳು. ಆಶ್ಚರ್ಯದ ನೋಟ! ಒಂದೇ ಕ್ಷಣ. ಹಾಗೇ ಕಣ್ಣು ಮುಚ್ಚಿದವಳು ಮತ್ತೆ ತೆರೆಯಲಿಲ್ಲ. ಆತ್ಮರಕ್ಷಣೆಗಾಗಿ ಅವಳು ಸ್ವಲ್ಪವೂ ಮಿಸುಕಾಡಲಿಲ್ಲ. ಎಷ್ಟು ನಿಶ್ಶಬ್ದವಾಗಿ ಸತ್ತಳೆಂದರೆ ಅವಳಿನ್ನೂ ಕನಸಿನಲ್ಲಿದ್ದಂತಿದ್ದಳು. ನಾನು ಅವಳ ಕತ್ತು ಹಿಸುಕುತ್ತಿದ್ದೆನೆಂದು ತಿಳಿದರೂ ಆಕೆ ಭಯಭೀತಳಾಗಲಿಲ್ಲ. ಅವಳ ತುಟಿಗಳಿಂದ ಹೊರಟ ಒಂದು ತೊಟ್ಟು ರಕ್ತ ನನ್ನ ಕೈಮೇಲೆ ಸೋರಿತು. ಅದೇ ಜಾಗ ನೀವು ನೋಡಿದ್ದು. ಅದು ನನಗೆ ತಿಳಿದಿದ್ದು ಮರುದಿನ ಬೆಳಿಗ್ಗೆ. ಅಷ್ಟರಲ್ಲಿ ಅದು ಅಲ್ಲೇ ಒಣಗಿತ್ತು! ಸದ್ದಿಲ್ಲದೆ ಅವಳ ದೇಹವನ್ನು ಮಣ್ಣಿನಲ್ಲಿ ಹೂತೆ. ಆನಂತರ ಪಟ್ಟಣದ ಹೊರವಲಯದಲ್ಲಿ ನನ್ನದೇ ಖಾಸಗೀ ಎಸ್ಟೇಟೊಂದರಲ್ಲಿ ವಾಸಿಸತೊಡಗಿದೆ. ನನ್ನ ಹೆಂಡತಿಯ ಗತಿ ಹೀಗಾಯಿತೆಂದು ನನ್ನೊಬ್ಬನ ಹೊರತು ಯಾರಿಗೂ ಗೊತ್ತಿಲ್ಲ. ಅವಳಿಗೆ ಸ್ನೇಹಿತರು ಸಂಬಂಧಿಗಳು ಯಾರೂ ಇರದ್ದರಿಂದ ಅದು ಹಾಗೇ ಅಡಗಿಹೋಯಿತು. ಅವಳದು ಸಹಜ ಸಾವೆಂದು ಪತ್ರಿಕೆಗಳಲ್ಲಿ ವರದಿ ಹಾಕಿಸಿದೆ.

“ನನ್ನ ಮನಸ್ಸಾಕ್ಷಿಯಾಗಿ ನಾನು ವೇದನೆ ಪಡಲಿಲ್ಲ. ನಾನೂ ಕ್ರೂರಿಯಾಗಿದ್ದೆ, ಅವಳ ದೆಸೆಯಿಂದ. ಆದರೆ, ಅವಳನ್ನು ದ್ವೇಷಿಸಲಿಲ್ಲ. ಇಂದಿಗೂ ಅವಳ ನೆನಪು ನನ್ನನ್ನು ಕಾಡುತ್ತಲೇ ಇದೆ. ನನ್ನಷ್ಟು ನಿಸ್ಸಂಕೋಚವಾಗಿ ನಿರ್ಭಯವಾಗಿ ಯಾವ ಕೊಲೆಗಾರನನೂ ಕೊಲೆಮಾಡಲಾರ. ಕೊಲೆಗಾರನಿಗೆ ಯಾವುದಾದರೂ ಒಂದು ಭೀತಿ ಕಾಡುತ್ತಲೇ ಇರುತ್ತದೆ. ನಾನು ಮಾತ್ರ ಅದರಿಂದ ಮುಕ್ತ.

“ಅವಳ ಶವಸಂಸ್ಕಾರ ಮುಗಿಸಿ ಮನೆಗೆ ಬರುತ್ತಿದ್ದ ಹಾಗೆ ಅಲ್ಲಿ ಕೌಂಟೆಸ್ ಕಂಡಳು. ಅವಳು ತುಂಬ ತಡವಾಗಿ ಬಂದಳು. ನೀವೊಬ್ಬರಾದರೂ ಇರಬೇಕಿತ್ತೆಂದು ಅವಳಿಗೆ ಹೇಳಿದೆ. ಭಯಂಕರ ಸಾವ ಅಸಹ್ಯವಾದ ಸುದ್ದಿಯಿಂದ ಅವಳ ಮುಖ ಬಿಳಿಚಿಕೊಂಡಿತ್ತು. ಅವಳು ಏನೇನೋ ವಿಲಕ್ಷಣವಾಗಿ ಹೇಳುತ್ತಿದ್ದಳು. ಏನಾದರೂ ಅವರು ಹೇಳುವದಿದ್ದರೆ ಅದು ನನ್ನನ್ನು ಸಮಾಧಾನಿಸುವುದಕ್ಕಾಗಿ ಮಾತ್ರ ಎಂದು ನಾನು ಅವಳ ಮಾತಿಗೆ ಲಕ್ಷ್ಯ ಕೊಡಲಿಲ್ಲ, ಯಾರು ಸಂತೈಸುವುದೂ ನನಗೆ ಬೇಡವಾಗಿತ್ತು.

“ಒಂದು ಕಾಗದದ ಕಟ್ಟನ್ನು ಸುರಕ್ಷಿತವಾಗಿ ಕಾದಿಡಲು ನನ್ನ ಹೆಂಡತಿಯ ಹತ್ತಿರ ಆಕೆ ಕೊಟ್ಟಿದ್ದಳಂತೆ. ವೈಯಕ್ತಿಕ ಕಾರಣಗಳಿಂದಾಗಿ ಅದನ್ನು ತನ್ನ ಬಳಿಯಲ್ಲಿಟ್ಟುಕೊಳ್ಳಲಾಗಲಿಲ್ಲವೆಂದೂ, ಅದನ್ನು ಈಗ ತಿರುಗಿ ಕೊಡಬೇಕೆಂದೂ ಕೇಳಿಕೊಂಡಳು. ಅವಳ ಮಾತುಗಳನ್ನು ಕೇಳುತ್ತಿದ್ದಂತೆ ನನ್ನ ಬೆನ್ನೆಲುಬಿನಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಅಷ್ಟರಲ್ಲಿ ಸಾವರಿಸಿಕೊಂಡು, ಅದರಲ್ಲೇನಿದೆ ಎಂದು ಕೇಳಿದೆ. ಈ ಪ್ರಶ್ನೆಯನ್ನು ಅವಳು ನಿರೀಕ್ಷಿಸಿರಲಿಲ್ಲ. ಆದರೆ ನನಗೆ ಅದು ಅವಶ್ಯವಿತ್ತು.”

ಭಾರತೀಯರು ಆತ್ಮವಿಮರ್ಶೆಯಲ್ಲಿ ಎತ್ತಿದ ಕೈ. ಆದರೆ ಅದಕ್ಕೂ ಒಂದು ಮಿತಿ ಬೇಕು.



ನಾವು ಅಷ್ಟು ಕೆಟ್ಟವರೆ?

ರಾಧಾಕೃಷ್ಣರಾವ್

ಆತ್ಮನಿಂದೆಯಲ್ಲಿ ಭಾರತವನ್ನು ಮೀರಿಸುವ ದೇಶ ಇನ್ನೊಂದಿರಲಾರದು. ನಾವು ನಮ್ಮ ಸರಕಾರವನ್ನು ನಿಂದಿಸುತ್ತೇವೆ, ಮಂತ್ರಿಗಳನ್ನು ನಿಂದಿಸುತ್ತೇವೆ, ನ್ಯಾಯಾಧೀಶರನ್ನು ನಿಂದಿಸುತ್ತೇವೆ, ಪೋಲೀಸರನ್ನು ನಿಂದಿಸುತ್ತೇವೆ, ವ್ಯಾಪಾರಿಗಳನ್ನು ನಿಂದಿಸುತ್ತೇವೆ, ನಮ್ಮ ಚುನಾಯಿತ ಪ್ರತಿನಿಧಿಗಳನ್ನು ನಿಂದಿಸುತ್ತೇವೆ, ಕಾರ್ಮಿಕರನ್ನು ನಿಂದಿಸುತ್ತೇವೆ, ಜನರನ್ನು ನಿಂದಿಸುತ್ತೇವೆ. ಇಂಗ್ಲಂಡಿನಲ್ಲಿ ಹಾಗಿದೆ, ಅಮೇರಿಕದಲ್ಲಿ ಹೀಗಿದೆ ಎಂದು ಪ್ರತಿಯೊಂದು ದೇಶದೊಡನೆ ನಮ್ಮ ದೇಶವನ್ನು ಹೋಲಿಸಿಕೊಂಡು ನಮ್ಮನ್ನು ಕೀಳುಗರೆಂದುಕೊಳ್ಳುತ್ತೇವೆ.

ನಮ್ಮ ಆತ್ಮನಿಂದೆ ಇಲ್ಲಿ ಬರುವ ವಿದೇಶಿಯರನ್ನು ಕೂಡ ಚಕಿತಗೊಳಿಸಿದೆ. ವಿದೇಶಿಯರ ಮುಂದೆ ಕೂಡ ನಮ್ಮ ಜನರ ಕುಂದುಕೊರತೆಗಳನ್ನು ಚರ್ಚಿಸಲು ನಾವು ಸದಾಸಿದ್ಧರಿರುತ್ತೇವೆಂದು ಅವರು ಗಮನಿಸಿದ್ದಾರೆ. ನಮ್ಮ ಮಂತ್ರಿಗಳು ಲಂಚಬಡಕರೆಂದು ಅತಿಥಿಗಳ ಮುಂದೆ ನಿರ್ಲಜ್ಜತೆಯಿಂದ ಹೇಳುವವರಿದ್ದಾರೆ. ಒಬ್ಬ ಮಂತ್ರಿ ಇನ್ನೊಬ್ಬ ಸಹಮಂತ್ರಿಯನ್ನು ವಿದೇಶಿಯರೆದುರು ಟೀಕಿಸುವುದೂ ಉಂಟು. ನಮ್ಮ ದೇಶವು ಅತ್ಯಂತ ಭ್ರಷ್ಟಾಚಾರಿಯೆಂಬ ಭಾವನೆ ವಿದೇಶಿಯರಲ್ಲಿ ಉಂಟಾದರೆ ಏನಾಶ್ಚರ್ಯ?

ನಮ್ಮ ರಾಷ್ಟ್ರೀಯ ಜೀವನದಲ್ಲಿ ಬೇಕಾದಷ್ಟು ಕುಂದುಕೊರತೆಗಳೂ ಅವ್ಯಾಪಾರಗಳೂ ಉಂಟೆಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ನಾವು ಮಾಡಿಕೊಳ್ಳುವ ಆತ್ಮನಿಂದೆಯನ್ನು ನೋಡಿದರೆ ಈ ದೇಶವನ್ನು ಉದ್ಧರಿಸುವ ಉಪಾ



ಯುವೇ ಇಲ್ಲ, ಅದು ಅಂಧತಮಸ್ಸಿಗೆ ಹೋಗುವುದು ಖಂಡಿತ ಎಂದು ಯಾರಿಗಾದರೂ ಅನಿಸಬಹುದು.

ಆದರೆ ಇದು ನಿಜವೇ? ನಮ್ಮ ದೇಶದ ಹೊರತು ಮತ್ತೆಲ್ಲವೂ ಅತ್ಯಂತ ಸಂಭಾವಿತರಿಂದ ತುಂಬಿವೆಯೋ? ತುಂಬಿದ್ದವೆ?

ನಾವು ಪರಕೀಯರೊಡನೆ ನಮ್ಮನ್ನು ಹೋಲಿಸಿಕೊಳ್ಳುವುದರಲ್ಲಿ ಒಂದು ತಾಮಸ ಸಂತೋಷವನ್ನು ಅನುಭವಿಸುತ್ತೇವೆ. ವಿಶೇಷವಾಗಿ ರಾಜಕೀಯ ದೃಷ್ಟಿಯಲ್ಲಿ ಅತ್ಯಂತ ಮುಂದುವರಿದ ಇಂಗ್ಲಂಡಿನ ಆಳಿಕೆಯನ್ನು ಕಂಡವರಾದ ನಾವು ಆ ದೇಶದೊಡನೆ ನಮ್ಮನ್ನು ಹೋಲಿಸಿಕೊಳ್ಳುತ್ತೇವೆ.

ಆಗಲಿ, ಹೋಲಿಸಿಕೊಳ್ಳೋಣ. ಇಂಗ್ಲಂಡು ನಿಜವಾಗಿ ನಾವೆಣಿಸಿದಷ್ಟು ಸಂಭಾವಿತವಾಗಿದೆಯೆ? ಇತ್ತೇ?

ಇಂಗ್ಲಂಡಿನ ಮೊದಲನೇ ಎಲಿಜಬೆತಳ ಕಾಲ ಸ್ವರ್ಣಯುಗದ ಆರಂಭವೆಂದು ಭಾವಿಸಲ್ಪಟ್ಟಿದೆ. ಮಹಾಕವಿ ಶೇಕ್ಸ್ಪಿಯರನ ಕಾಲ ಅದು. ಪುಟ್ಟ ಇಂಗ್ಲಂಡು ಪ್ರಬಲ ಸ್ಪೇನಿನ ನೌಕಾಬಲವನ್ನು ಧ್ವಂಸಮಾಡಿ ಸಾಗರಗಳ ರಾಣಿಯಾದದ್ದು ಆಗಲೇ. ಆಗ ಸರ್ ಫ್ರಾನ್ಸಿಸ್ ಬೇಕನ್ ಎಂಬ ಮಹಾಶಯ ಇದ್ದ. ಅವನು ಆ ಕಾಲದ ಶ್ರೇಷ್ಠ ತಮ ವಿದ್ವಾಂಸರಲ್ಲಿ ಒಬ್ಬನಾಗಿದ್ದ. ಅವನು ಪಾರ್ಲಿಮೆಂಟ್ ಸದಸ್ಯನೂ ಇಂಗ್ಲಂಡಿನಲ್ಲಿ ಉಚ್ಚ ನ್ಯಾಯಾಧೀಶನೂ ಆಗಿದ್ದ. ಅವನ ಜೀವನದ ಕೊನೆಯ ವರ್ಷಗಳಲ್ಲಿ, ಅವನು ಭಾರೀ ಲಂಚ ಹೊಡೆದು ನ್ಯಾಯದಾನ ಮಾಡುತ್ತಿದ್ದನೆಂದು ಸಿದ್ಧವಾಯಿತು. ಅವನನ್ನು ನಿವೃತ್ತಿಗೊಳಿಸಲಾಯಿತು. ಅವನ ಮುಪ್ಪನ್ನೂ ವಿದ್ವತ್ತೆಯನ್ನೂ ಗಮನಿಸಿ ಅವನನ್ನು ಸೆರೆಮನೆಗೆ ಕಳಿಸಲಿಲ್ಲ ಅಷ್ಟೇ.

ಇನ್ನು ಮಂತ್ರಿಮಟ್ಟದ ಭ್ರಷ್ಟಾಚಾರ, ಇಂಗ್ಲಂಡಿನಲ್ಲಿ ೧೮ನೇ ಶತಮಾನದ ಕೊನೆಯಲ್ಲಿ ಪ್ರಧಾನಮಂತ್ರಿಯಾದ ವಿಲಿಯಂ ಪಿಟ್ ಬಹಳ ಹೆಸರಾದವನು. ಅವನು ತನ್ನ ಹಿಂದಿನ ಪ್ರಧಾನ ಮಂತ್ರಿಯ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸಿದವನು. (ಲಾರ್ಡ್ ನಾರ್ತ್ "ಲೇಖನಿ ಸಾಮಗ್ರಿ" ಎಂಬ ಖಾತೆಯಲ್ಲಿ "ಚಬುಕಿನದಾರ"ಕ್ಕಾಗಿ ೩೪೦ ಪೌಂಡ್ ಖರ್ಚು ಹಾಕಿ ಬೊಕ್ಕಸದಿಂದ ತೆಗೆದುಕೊಂಡಿದ್ದನು). ಪಿಟ್ ತನ್ನ ಅಧಿಕಾರ ಕಾಲದಲ್ಲಿ ಅನೇಕ ಆಡಳಿತ ಸುಧಾರಣೆಗಳನ್ನು ಮಾಡಿ ಭ್ರಷ್ಟಾಚಾರಗಳನ್ನು ನಿಲ್ಲಿಸಿದನು. ಆದರೆ ಸ್ವತಃ ಪಿಟ್ "ಹ್ಯಾಟು"ಗಳ ಲೆಕ್ಕಕ್ಕೆ ೬೦೦ ಪೌಂಡು ಸುಳ್ಳು ಖರ್ಚು ಹಾಕಿಸಿ ಬೊಕ್ಕಸದಿಂದ ಹಣ ಎತ್ತಿ ಹಾಕಿದನೆಂದು ಆಮೇಲೆ ಬೆಳಕಿಗೆ ಬಂತು.

ಬ್ರಿಟನ್ನಿನಿಂದ ನಮ್ಮನ್ನು ಆಳಲು ಈ ದೇಶಕ್ಕೆ ಬಂದ ಅಧಿಕಾರಿಗಳು ಆಡಳಿತ ವಿಷಯದಲ್ಲಿ ತುಂಬ ನಿಷ್ಠುರರೂ ಪ್ರಾಮಾಣಿಕರೂ ಆಗಿದ್ದರೆಂಬುದನ್ನು ನೋಡಿ ನಾವೀಗ ಅವರೊಡನೆ ನಮ್ಮ ದೇಶಿ ಅಧಿಕಾರಿಗಳನ್ನು ಹೋಲಿಸಿ ಇವರನ್ನು ಹೀಗಳೆಯುತ್ತೇವೆ. ಆದರೆ ಇಲ್ಲಿ ಬಂದ ಅಧಿಕಾರಿಗಳು ಎಲ್ಲ ಕಾಲದಲ್ಲಿ ಇಷ್ಟು ಶುದ್ಧರಾಗಿರಲಿಲ್ಲ ಎಂಬುದು ಇತಿಹಾಸ ಓದಿದರೆ ಗೊತ್ತಾಗುತ್ತದೆ. ಭಾರತದಲ್ಲಿ ಬ್ರಿಟಿಶ್ ಸಾಮ್ರಾಜ್ಯದ ಸ್ಥಾಪಕ ಪೋಷಕರೆಂದು ಹೆಸರಾದ ರಾಬರ್ಟ್ ಕ್ಲೈವ್ ಮತ್ತು ವಾರನ್ ಹೇಸ್ಟಿಂಗ್ಸ್‌ರ ಹೆಸರುಗಳು ಯಾರಿಗೆ ಗೊತ್ತಿಲ್ಲ? ಈ ಇಬ್ಬರೂ ಗವರ್ನರ್ ಜನರಲ್ಲರು ಲಂಚ, ರುಷವತ್ತು, ಭ್ರಷ್ಟಾಚಾರಗಳಿಂದ ಹಣ ಮಾಡಿದರೆಂದು ಅವರನ್ನು ಬ್ರಿಟಿಶ್ ಪಾರ್ಲಿಮೆಂಟಿನ ಮುಂದೆ ವಿಚಾರಣೆಗೊಳಪಡಿಸಲಾಯಿತು. ಇಬ್ಬರೂ ಅಪರಾಧಿಗಳೆಂದು ಸಿದ್ಧವಾಯಿತು. ಸಾಮ್ರಾಜ್ಯಕ್ಕೆ ಬಹಳ ಸೇವೆ ಮಾಡಿದವರೆಂದು ಪಾರ್ಲಿಮೆಂಟು ಅವರನ್ನು ಕ್ಷಮಿಸಿತಷ್ಟೇ.

ಇವೆಲ್ಲ ಬಹಳ ಹಳೇ ಕಥೆ, ಅದನ್ನು ತೆಗೆದುಕೊಂಡು ಈಗೇನು ಮಾಡುವುದು ಎಂದು ನೀವು ಕೇಳಬಹುದು. ಆದರೆ ಪ್ರಜಾಸತ್ತೆಯ ಅನುಭವದಲ್ಲಿ ಭಾರತವು ಇಂದು ಇರುವ ಮಟ್ಟವು ಬ್ರಿಟನ್ನಿನ ಅಂದಿನ ಮಟ್ಟಕ್ಕಿಂತ ಬಹಳ ಭಿನ್ನವಾಗಿಲ್ಲ. ನಾವೀಗ ಇಪ್ಪತ್ತನೇ ಶತಮಾನದಲ್ಲಿದ್ದೇವೆಂದಾಕ್ಷಣ ನಮ್ಮ ಪ್ರಜಾಸತ್ತೆ, ಆಡಳಿತದ ಮಟ್ಟ ಇಪ್ಪತ್ತನೇ ಶತಮಾನದ ಬ್ರಿಟನ್, ಅಮೇರಿಕಗಳ ಸಮಾನವಾಗಿರಬೇಕೆಂದು ನಿರೀಕ್ಷಿಸುವುದು ಅತಿಯಾದ ನಿರೀಕ್ಷೆಯಾಗುತ್ತದೆ.

ಜಗತ್ತಿನ ಅತಿ ಸಂಪನ್ನ ರಾಷ್ಟ್ರವಾದ ಅಮೇರಿಕದಲ್ಲಿ ಬ್ರಿಟನ್ನಿಗಿಂತಲೂ ಹೆಚ್ಚು ಭ್ರಷ್ಟಾಚಾರವಿದೆ. ಅಲ್ಲಿ ಕೆಳಗಿನ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರನ್ನು ಚುನಾವಣೆಯಿಂದ ಆರಿಸಲಾಗುತ್ತದೆ. ಆದ್ದರಿಂದ ಅನೇಕ ನ್ಯಾಯಾಧೀಶರು ತಮ್ಮ ಬೆಂಬಲಿಗರು ಸಿಕ್ಕಿಕೊಂಡ ಪ್ರಕರಣಗಳಲ್ಲಿ ಅವರಿಗನುಕೂಲವಾಗಿ ನ್ಯಾಯತೀರ್ಪು ಕೊಡುತ್ತಾರೆ. ಕೌಂಟಿ ಸಮಿತಿಗಳ ಸದಸ್ಯರಿಂದಾರಂಭಿಸಿ ದೇಶದ ಸರ್ವೋಚ್ಚ ವಿಧಾನ ಸಭೆಯ ವರೆಗೆ ಎಲ್ಲವುಗಳ ಚುನಾಯಿತ ಸದಸ್ಯರೂ ಈ ಸ್ವಜನಾನುಗ್ರಹದ ಆರೋಪಗಳಿಗೆ ಒಳಗಾಗಿದ್ದಾರೆ.

ಪ್ರಬಲ ರಾಜಕಾರಣಿಗಳು ಮತ್ತು ಅಧಿಕಾರಸ್ಥ ಪಕ್ಷದ ಬೆಂಬಲ ಹೊಂದಿದ ವ್ಯಕ್ತಿಗಳು ಅಲ್ಲಿಯೂ ಬೇಕಾದ ಅತ್ಯಾಚಾರಗಳನ್ನು ಮಾಡಿದರೂ ಪೋಲೀಸರ ಕೈಯಿಂದ ಸುರಕ್ಷಿತರಾಗಿರುತ್ತಾರೆ. ಇಲ್ಲಿ ಚಿನ್ನದ ಕಳ್ಳ ಸಾಗಾಟ, ದರೋಡೆ ಮೊದಲಾದವುಗಳಲ್ಲಿ ಪ್ರಬಲ ರಾಜಕಾರಣಿಗಳ ಕೈವಾಡವಿದೆಯೆಂಬ ಆರೋಪವಿರುವ ಹಾಗೆ ಅಲ್ಲಿಯೂ ಅಫು ಸಾಗಾಟ ಮೊದಲಾದ ಅವ್ಯಾಪಾರಗಳಲ್ಲಿ ನಿರತರಾದವರಿಗೆ ರಾಜಕಾರಣಿಗಳ ಅಭಯ ಹಸ್ತವಿರುವುದುಂಟು.

ಅಮೇರಿಕದ ಪಾಪಪೂರಿತ ಪಟ್ಟಣವೆನಿಸಿದ ಚಿಕ್ಯಾಗೋವಿನಲ್ಲಿ ಅಲ್ ಕಪೋನ್ ಮೊದಲಾದ ಅಂತಾರಾಷ್ಟ್ರೀಯ ದುರ್ವ್ಯಾಪಾರ ತಂಡದವರು ರಾಜಕೀಯ ಪಕ್ಷಗಳಿಗೆ ಧಾರಾಳ ಹಣ ಕೊಟ್ಟು ತಮ್ಮ ಕಾಯಕ ನಡೆಸಿದ್ದರು. ಅವರನ್ನು ಹಿಡಿಯುವ ಧೈರ್ಯ ಯಾವ ಪೋಲೀಸನಿಗೂ ಇರಲಿಲ್ಲ. ಕನ್ಸಾಸ್ ಪಟ್ಟಣದಲ್ಲಿ ಡೆಮಾಕ್ರೆಟಿಕ್ ಪಕ್ಷದ ಪೋಷಕ ಟಾಮ್ ಪೆಂಡರ್‌ಗಾಸ್ಟ್ ಇದೇ ಬಗೆಯ ತಂಡದ ಒಡೆಯನಾಗಿದ್ದ. ಕೊನೆಗೆ ಮಾರಿಸ್ ಮಿಲಿಗಾನ್ ಎಂಬೊಬ್ಬ ಪಬ್ಲಿಕ್ ಪ್ರಾಸಿಕ್ಯೂಟರ್ ಪೆಂಡರ್‌ಗಾಸ್ಟನ ಮೇಲೆ ಹಟದಿಂದ ಬೆನ್ನು ಹತ್ತಿ ಅವನ ವಿರುದ್ಧ ಉಕ್ಕಿನ ಸಂಕೋಲೆಯಂಥ ಪುರಾವೆಗಳನ್ನು ಕಲೆ ಹಾಕಿದ. ಯಾವ ರಾಜಕೀಯ

ಒತ್ತಾಯಕ್ಕೂ ಜಪ್ಪೆನ್ನಲಿಲ್ಲ. ಪೆಂಡರಗಾಸ್ಟನಿಗೆ ಶಿಕ್ಷೆಯಾಯಿತು. ಆಗ ಫ್ರಾಂಕ್ಲಿನ್ ರೂಜವೆಲ್ಟರು ಅಧ್ಯಕ್ಷರಾಗಿದ್ದರು. ಟ್ರೂಮನ್ ಉಪಾಧ್ಯಕ್ಷರಾಗಿದ್ದರು. ಪೆಂಡರ್‌ಗಾಸ್ಟ್ ಅವರ ಬೆಂಬಲಿಗನಾಗಿದ್ದ. ಪಕ್ಷಕ್ಕೆ ದೊಡ್ಡ ಹಾನಿಯಾಗಿದ್ದ ಈ ದುರ್ಜನನನ್ನು ಜೈಲಿಗಟ್ಟಿದ ಫಲ ಟ್ರೂಮನ್ ಅಧ್ಯಕ್ಷತೆಗೇರಿದಾಗ ತಿಳಿಯಿತು. ಅವರು ಮಿಲಿಗಾನನನ್ನು ಕೆಲಸದಿಂದ ಕಿತ್ತು ಹಾಕಿದರು ! ಸದ್ಯ ಭಾರತದಲ್ಲಿ ಇಂಥ ಉದಾಹರಣೆಗಳಿಲ್ಲ.

ನ್ಯೂಯಾರ್ಕ್ ಮುನಸಿಪಾಲಿಟಿಯ ಕಥೆ ಇಂಗ್ಲೀಷ್ ಭಾಷೆಗೆ "ತಾಮಣಿ ಹಾಲ್" ಎಂಬ ಒಂದು ಶಬ್ದವನ್ನೇ ಕೊಡುವಷ್ಟು ಪ್ರಸಿದ್ಧವಾಗಿದೆ. "ತಾಮಣಿ ಹಾಲ್" ಎಂದರೆ ಮುನಸಿಪಾಲಟಿಯ ಅಕ್ರಮ – ಅವ್ಯಾಪಾರಗಳು ಎಂದರ್ಥ–ವಾಗಿಬಿಟ್ಟಿದೆ. ತಾಮಣಿ ಹಾಲ್‌ನ ಆಡಳಿತದಲ್ಲಿ ಅಲ್ಲಿ ಲಂಚ, ವಂಚನೆ, ವಶೀಲಿಬಾಜಿ, ಅಪರಾತಫರಾ ಎಲ್ಲವೂ ನಾಟ್ಯವಾಡಿದವು. ನಗರದ ಪ್ರಬಲರೆಲ್ಲ ಹಾಲ್‌ನ ಬುಟ್ಟಿಯಲ್ಲಿದ್ದುದರಿಂದ ಅವನ ಅಧಿಕಾರ ಅವ್ಯಾಹತವಾಗಿ ಸಾಗುತ್ತಿತ್ತು. ಅವನನ್ನು ಕಿತ್ತಿ ಹಾಕಲು ಫ್ರಾಂಕ್ಲಿನ್ ರೂಜವೆಲ್ಟರಂಥ ಅಸಾಧಾರಣ ಪ್ರತಿಷ್ಠೆಯ ರಾಜಕಾರಣಿಗೇ ಸಾಧ್ಯವಾಯಿತು.

ಅಮೇರಿಕದ ಅಧ್ಯಕ್ಷರ ಸಮೀಪವರ್ತಿಗಳು ಕೂಡ ಭ್ರಷ್ಟಾಚಾರಗಳಿಂದ ಮುಕ್ತರಾಗಿಲ್ಲ. ಐಸೆನ್ ಹಾವರರ ಕಾರ್ಯದರ್ಶಿಯಾಗಿದ್ದ ಆಡಾಮ್ಸ್ ನ್ಯಾಯಬಾಹಿರ "ಕಾಣಿಕೆ"ಗಳನ್ನು ಸಂಪಾದಿಸಿದ್ದು ಬೆಳಕಿಗೆ ಬಂದು ಹಗರಣವಾಗಿ ಹೋಯಿತು. ಇದರಿಂದ ಕೆಲ ಕಾಲ ಅಧ್ಯಕ್ಷ ಐಸೆನ್‌ಹಾವರರ ಪ್ರತಿಷ್ಠೆಗೂ ಮಸಿ ಹತ್ತಿತ್ತು.

ಉದಾಹರಣೆಗಳನ್ನು ಎಷ್ಟು ಬೇಕಾದರೂ ವಿಸ್ತರಿಸಬಹುದು. ಅಮೇರಿಕದ ಮದ್ಯದ ಭಟ್ಟಿಗಳಲ್ಲಿ ಶೇಕಡಾ ೩೩ ರಷ್ಟು ಕಳ್ಳಭಟ್ಟಿಗಳೆಂದು ಅಂದಾಜು ಮಾಡಲಾಗಿದೆ. (ಅಲ್ಲಿ ಮದ್ಯ ನಿಷೇಧವಿಲ್ಲದಿದ್ದರೂ ಮದ್ಯದ ಮೇಲೆ ಹೇರಿರುವ ತೆರಿಗೆಯನ್ನು ತಪ್ಪಿಸುವುದಕ್ಕಾಗಿ! ಕಳ್ಳಭಟ್ಟಿ ವ್ಯವಸಾಯ ನಡೆಯುತ್ತಿದೆ!) ಪೋಲೀಸರು ಕಣ್ಣು ಮುಚ್ಚಿಕೊಳ್ಳದಿದ್ದರೆ ಇದು ಹೇಗೆ ಸಾಧ್ಯ? ಪೋಲಿಸರಿಗೆ ಮೌನದಕ್ಷಿಣೆ ಇಲ್ಲದಿದ್ದರೆ ಅವರು ಸುಮ್ಮನಿರಬಹುದೇ? ಅಮೇರಿಕದಲ್ಲಿ ಆದಾಯಕರ ತಪ್ಪಿಸುವವರನ್ನು ಕಂಡುಹಿಡಿಯಲು ಭಾರಿ ಇಲಾಖೆಯೇ ಇದೆ. ಆದರೆ ಅಲ್ಲಿ ಸರಕಾರಕ್ಕೆ ಬರಬೇಕಾದ ಪ್ರತಿ ಮೂರು ಡಾಲರ್ ಕರದಲ್ಲಿ ಒಂದು ಡಾಲರ್ ಕಣ್ಣು ತಪ್ಪಿಸಿಕೊಳ್ಳುತ್ತದೆ. ಆದಾಯಕರದ ಅಧಿಕಾರಿಗಳಲ್ಲಿ ಭ್ರಷ್ಟಾಚಾರವಿಲ್ಲದಿದ್ದರೆ ಇದು ಸಾಧ್ಯವೇ?

ನಮ್ಮ ದೇಶದಲ್ಲಿ ಕರ ತಪ್ಪಿಸುವದು, ಸುಳ್ಳು ಲೆಕ್ಕ ಬರೆಯುವುದು ಎಲ್ಲೆಲ್ಲೂ ಪ್ರಚಲಿತವಾಗಿದೆಯೆಂಬ ಕೂಗು ಕೇಳಿಬರುತ್ತದೆ ತಾನೆ. ಆದರೆ ನಮ್ಮ ವ್ಯಾಪಾರಿಗಳು ಕೂಡ ಸುಳ್ಳು ಲೆಕ್ಕ, ಕರ ತಪ್ಪಿಸುವಿಕೆಗಳಲ್ಲಿ ಫ್ರಾನ್ಸಿನವರನ್ನು ಮೀರಲಾರರು. ಇಲ್ಲಿ ಕರ ತಪ್ಪಿಸುವುದು ಒಂದು ಜನ್ಮಸಿದ್ಧ ಹಕ್ಕು ಎಂದು ಬಗೆಯಲಾಗುತ್ತದೆ. ಈ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕಾಗಿ ಸರಕಾರ ಕೆಲ ವರ್ಷಗಳ ಹಿಂದೆ ತೀವ್ರ ಕ್ರಮಗಳನ್ನು ಕೈಕೊಳ್ಳಬಯಸಿ ಇನಸ್ಪೆಕ್ಟರುಗಳನ್ನು ಅಂಗಡಿಗಳಿಗೆ ಕಳಿಸಲು ಪ್ರಾರಂಭಿಸಿತು.

ಆಗ ಫೌಜಾದ್ ಎಂಬೊಬ್ಬನು ವ್ಯಾಪಾರಿಗಳ "ಜನ್ಮಸಿದ್ಧ ಹಕ್ಕಿನ" ರಕ್ಷಣೆಗಾಗಿ ಕಣಕ್ಕಿಳಿದನು. ಅವನು ಅಂಗಡಿಕಾರರನ್ನು ಸಂಘಟಿಸಿ, ತೆರಿಗೆ ಇನಸ್ಪೆಕ್ಟರನ ತಲೆ ಕಂಡೊಡನೆ ಇಡೀ ರಸ್ತೆಯ ಅಂಗಡಿಗಳೆಲ್ಲದರ ಮಾಲಕರು ಬಡಬಡನೆ ಬಾಗಿಲು ಮುಚ್ಚಿ ಬೀಗ ಹಾಕಿ ಹೊರಟು ಹೋಗುವಂತೆ ಅವರಿಗೆ ಉಪಾಯ ಹೇಳಿದನು. ಪರಿಣಾಮವಾಗಿ ಇನಸ್ಪೆಕ್ಟರುಗಳು ನಿರುಪಾಯರಾದರು. ಫೌಜಾದ್

ಎಷ್ಟು ಜನಪ್ರಿಯನಾದನೆಂದರೆ ಮುಂದಿನ ಚುನಾವಣೆಗಳಲ್ಲಿ ಆತನು ಮಾತ್ರವಲ್ಲ, ಆತನ ಬೆಂಬಲಿಗರಲ್ಲಿ ಅನೇಕರು ಆರಿಸಿ ಬಂದರು.

ಅತ್ಯಂತ ಕಠೋರ ಶಿಸ್ತು ಮತ್ತು ಸಾಮಾಜಿಕ ಅಪರಾಧಗಳಿಗೆ ಮರಣದಂಡನೆಯಂಥ ಉಗ್ರ ಶಿಕ್ಷೆ ಇವುಗಳಿಗಾಗಿ ಸೋವಿಯಟ್ ರಶಿಯ ಹೆಸರಾಗಿದೆ. ಆಡಳಿತದ ಜೊತೆ ಮತ್ತು ಪಕ್ಷದ ಏಕನಿಷ್ಠೆ, ಸಚ್ಚಾರಿತ್ರ್ಯಗಳಿಂದ ಕೂಡಿದ ಸ್ಫೂರ್ತಿವಂತ ವ್ಯಕ್ತಿಗಳ ತಂಡವಾಗಿದೆ. ವಿದೇಶ ವಿನಿಮಯದಲ್ಲಿ ಕಳ್ಳ ವ್ಯಾಪಾರ ನಡೆಸಿದ ಆರೋಪಕ್ಕಾಗಿ ಕೆಲ ವರ್ಷಗಳ ಹಿಂದೆ ಅಲ್ಲಿ ಅನೇಕರನ್ನು ಗುಂಡಿನ ಬಾಯಿಗೆ ಕೊಡಲಾಯಿತು.

ಆದರೆ ವಾಮಮಾರ್ಗದಿಂದ ಹಣ ಗಳಿಸುವ ಪ್ರವೃತ್ತಿ ಅಲ್ಲಿಯೂ ಧಾರಾಳವಾಗಿದೆ. ಲಂಚ ಮತ್ತು ಇತರ ಅವ್ಯಾಪಾರಗಳಿಂದ ಆಸ್ತಿ ಸಾಕಷ್ಟು ಜನ ಸರಕಾರಿ ನೌಕರರೂ ಇತರರೂ ಹಣ ಶೇಖರಿಸಿದ್ದಾರೆ. ಸರಕಾರವೇ ಎಲ್ಲ ವ್ಯಾಪಾರೋದ್ಯಮಗಳನ್ನು ನಡೆಸುತ್ತಿರುವ ಆ ದೇಶದಲ್ಲಿ ಈ ದುರ್ಧನವನ್ನು ಬೇರೆ ರೀತಿಯಿಂದ ಉಪಯೋಗಕ್ಕೆ ತರಲು ಅವಕಾಶವಿಲ್ಲ. ಸ್ವಂತಕ್ಕಾಗಿ ಮನೆ, ಕೈತೋಟ ಇಷ್ಟನ್ನು ಮಾತ್ರ ವ್ಯಕ್ತಿಗಳು ಕೊಳ್ಳಬಹುದಾಗಿದೆ. ದುರ್ಧನವನ್ನು ಗಳಿಸಿದವರು ಶಹರುಗಳಲ್ಲಿ ಮನೆಗಳನ್ನು ಕೊಂಡು ಅದರಲ್ಲಿ ಐಷಾರಾಮದ ಸಾಧನಗಳನ್ನು ಜೋಡಿಸಿಕೊಳ್ಳುವುದರಲ್ಲಿ ತಮ್ಮ ಹಣವನ್ನು ವಿನಿಯೋಗಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಕೂಡ ಶಹರದಲ್ಲಿ ಭೂಮಿ ಮನೆ ಕೊಳ್ಳುವುದು, ಕಟ್ಟಿಸುವುದು ಮತ್ತು ಅವುಗಳ ಬೆಲೆ ಇಪ್ಪತ್ತು ಸಾವಿರವಾದರೆ ಹತ್ತು ಸಾವಿರವೆಂದು ತೋರಿಸುವುದು ನಿರಂತರವಾಗಿ ನಡೆದಿದೆಯಲ್ಲ. (ಮಾನವ ಸ್ವಭಾವ ಎಲ್ಲೆಡೆಗೂ ಒಂದೇ!)

ಈ ಉಪಟಳ ಮಿತಿ ಮೀರಿದ್ದರಿಂದ ಈಗ ಸೋವಿಯಟ್ ಸರಕಾರ ಬಿರುಸಿನ ಉಪಾಯಗಳನ್ನು ಕೈಗೊಳ್ಳುತ್ತಿದೆ. ಯುದ್ಧೋತ್ತರ ಕಾಲದಲ್ಲಿ ಮನೆಮಾರು ಕೊಂಡವರ ಲೆಕ್ಕತೆಗೆದು, ಅವರ ಆಸ್ತಿಗಳಿಗೆ ಕೊಳ್ಳುವಾಗ ಪೇಟೆಯಲ್ಲಿ ಪ್ರಚಲಿತ ಬೆಲೆಗಳನ್ನು ಮುನಸಿಪಲ್ ಮತ್ತು ಇತರ ದಾಖಲೆಗಳ ಆಧಾರದಿಂದ ನಿರ್ಧರಿಸಿ, "ಇಷ್ಟು ಹಣ ಎಲ್ಲಿಂದ ಬಂತು, ನಿನ್ನ ಸಂಬಳ ಇಷ್ಟು, ನಿನ್ನ ಸಂಸಾರದ ವೆಚ್ಚಕ್ಕೆ ಇಷ್ಟು ಬೇಕು, ಇಷ್ಟು ಹಣ ನಿನ್ನಲ್ಲಿ ಹೇಗೆ ಬಂತು" ಎಂದು ಕೇಳುತ್ತಾರೆ. ಈ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡಲು ಸಮರ್ಥರಾದವರು ವಿರಳ. ಕೊಡಲಾರದವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿ ಸರಕಾರ ಈ ಸಟ್ಟಾ ಬಡಕರನ್ನು ಮೆಟ್ಟಿ ಹಾಕುತ್ತಿದೆ.

ಭಾರತದಲ್ಲಿ ಜಾತೀಯತೆ ತುಂಬಿ ತುಳುಕುತ್ತಿದೆಯೆಂದು ನಾವು ಕೂಗುತ್ತೇವೆ. ಆದರೆ ಪ್ರತಿಯೊಂದು ದೇಶದಲ್ಲಿ ಇಂದು ಒಂದಲ್ಲ ಒಂದು ರೂಪದಲ್ಲಿ ಇದೆಯೆಂದು ನಾವು ಗಮನಿಸುವುದಿಲ್ಲ. ಅಮೇರಿಕದಲ್ಲಿ ಬಹುಸಂಖ್ಯಾತ ವರ್ಗವಾದ ಪ್ರಾಟೆಸ್ಟಂಟ್ ಕ್ರೈಸ್ತ ಪಂಥಕ್ಕೆ ಸೇರಿದವರೇ ಅಧ್ಯಕ್ಷರಾಗುತ್ತ ಬಂದಿದ್ದಾರೆ.

ಈ ಪಂಥಕ್ಕೆ ಸೇರದವರು ಅಧ್ಯಕ್ಷರಾದ ಏಕಮಾತ್ರ ಉದಾಹರಣೆಯೆಂದರೆ ಜಾನ್ ಕೆನಡಿಯವರು. ಫ್ರಾಂಕ್ಲಿನ್ ರೂಜವೆಲ್ಟರು ಅತ್ಯಂತ ಪ್ರಗತಿಪರ ವಿಚಾರದ ರಾಜಕಾರಣಿಯಾಗಿದ್ದರು. ಆದರೆ ಅವರ ಮಿತ್ರರೂ ಅವರ ಚುನಾವಣೆ ಸತ್ರವನ್ನು ಸಂಘಟಿಸಿದವರೂ ಆದ ಜಿಮ್ ಫಾರ್ಲೆ ತಾನು ಮುಂದಿನ ಸಲ ಅಧ್ಯಕ್ಷಪದದ ಚುನಾವಣೆಗೆ ನಿಲ್ಲಲೇ ಎಂದು ಕೇಳಿದಾಗ ರೂಜವೆಲ್ಟ್, "ನೋಡಯ್ಯಾ ನೀನು ಕೆಥೋಲಿಕ್. ಈವರೆಗೆ ಕೆಥೋಲಿಕರು ಅಧ್ಯಕ್ಷರಾದ ಉದಾಹರಣೆ ಇಲ್ಲವಲ್ಲ!" ಎಂದರಂತೆ.

ಆದರ್ಶ ವರ್ತನೆಗೆ ಹೆಸರಾದ ಇಂಗ್ಲಂಡಿನಲ್ಲಿ ವರ್ಣದ್ವೇಷವು ಉಚ್ಚ ವರ್ಗದಲ್ಲಿರುವುದಕ್ಕಿಂತಲೂ ಶ್ರಮಜೀವಿಗಳಲ್ಲಿ ಹೆಚ್ಚಾಗಿದೆ! ಜಾತಿ ಪಂಥ ಮತಗಳನ್ನು ಪೂರ್ತಿ ನಿರಾಕರಿಸುವ ರಶಿಯದಲ್ಲಿ ಯಹೂದ್ಯರು ನಾನಾ ತರಹದ ಉಪದ್ರವಗಳನ್ನು ಅನುಭವಿಸುತ್ತಿದ್ದಾರೆ. ಈ ವಿಷಯ ಕ್ರುಶ್ಚೆವರಲ್ಲಿ ದೂರಿಕೊಂಡಾಗ ಅವರು "ನಾನೇನು ಮಾಡಲಿ ಹೇಳಿ? ನಾನು ರಾಜಕಾರಣಿ. ಜನಸಾಮಾನ್ಯರ ಭಾವನೆಗಳನ್ನು ತೀರ ಧಿಕ್ಕರಿಸಿ ನಾನು ಆಳಲಾರೆ" ಎಂದುಬಿಟ್ಟರಂತೆ. ಖಾಸಗಿಯಾಗಿ ಕೇಳಿದರೆ ನಮ್ಮ ರಾಜ್ಯಗಳ ಮುಖ್ಯಮಂತ್ರಿಗಳೂ ಹೀಗೆಯೆ ಹೇಳಬಹುದು.

ಇದೆಲ್ಲವನ್ನು ಹೇಳಲು ಕಾರಣ, ಅವರೂ ನಮ್ಮ ಹಾಗೆಯೆ ಇದ್ದಾರೆ ಬಿಡು ಎಂದು ನಮ್ಮ ಲೋಪದೋಷಗಳನ್ನು ಸಮರ್ಥಿಸಿಕೊಳ್ಳುವುದಲ್ಲ. ನಮ್ಮಲ್ಲಿ ಸ್ವಾರ್ಥ, ಸಂಧಿಸಾಧಕತೆ, ದುರ್ವ್ಯಾಪಾರ, ದೌರ್ಜನ್ಯಗಳು ಧಾರಾಳವಾಗಿಯೆಂಬುದನ್ನು ಒಪ್ಪಿಕೊಳ್ಳಲೇಬೇಕು. ಆದರೆ ನಮ್ಮ ಆತ್ಮವಿಮರ್ಶೆಗೂ ಒಂದು ಮಿತಿ ಬೇಕು. ಮಿತಿಯನ್ನು ಮೀರಿದ ಆತ್ಮವಿಮರ್ಶೆ ಆತ್ಮತಿರಸ್ಕಾರವೇ ಸೈ. ಪ್ರಪಂಚದಲ್ಲಿ ನಾವು ಶತಪಾಪಿಗಳು ಎಂದು ಬಗೆದರೆ ನಮ್ಮನ್ನು ಸುಧಾರಿಸಿಕೊಳ್ಳುವ ಮಾರ್ಗವೇ ಸಿಗಲಾರದು. "ಬಗೆದಂತೆ ಬಾಳು" ಎಂಬ ಮಾತು ಇದಕ್ಕೆ ಸರಿಯಾಗಿ ಅನ್ವಯಿಸುತ್ತದೆ. ತಾನು ಸುತರಾಂ ಪಾಪಿ ಎಂದು ನಂಬಿದವನಿಗೆ ತನ್ನ ಪಾಪನಿವೃತ್ತಿಯಲ್ಲಿ ಆಸಕ್ತಿಯೇ ಉಳಿಯಲಾರದು. ತನ್ನಲ್ಲಿ ಒಂದಿಷ್ಟಾದರೂ ದೈವೀ ಸ್ಫುಲಿಂಗವಿದೆ ಎಂದು ನಂಬಿದವನು ಮಾತ್ರ ತನ್ನನ್ನು ತಿದ್ದಿಕೊಳ್ಳಬಲ್ಲನು.

ನಾವು ತಿದ್ದಿಕೊಳ್ಳಬೇಕಾದ ಪ್ರಥಮ ದೋಷ ಎಂದರೆ ಸಡಿಲಾಗಿ ಮಾತಾಡುವ ಚಟ. ಪ್ರತಿಯೊಬ್ಬ ಅಧಿಕಾರಿ, ಪ್ರತಿಯೊಬ್ಬ ಮಂತ್ರಿ, ಪ್ರತಿಯೊಬ್ಬ ರಾಜಕಾರಣಿಯ ವಿಷಯದಲ್ಲೂ ನಾವು ಹಗುರವಾಗಿ, ಆಧಾರವಿಲ್ಲದೆ ಲಂಚಪಂಚಗಳ, ದುರ್ವ್ಯಾಪಾರಗಳ ಮಾತಾಡುತ್ತೇವೆ. ಅತ್ಯಂತ ನಿರ್ದುಷ್ಟವಾದ ಚರಿತ್ರವುಳ್ಳವನ ಮೇಲೂ ಏನಾದರೊಂದು ಕಾಲಿಲ್ಲದ ಅಪವಾದವನ್ನು ಸಂಬಲು, ಪ್ರಚುರ ಪಡಿಸಲು ಹಿಂಜರಿಯುವುದಿಲ್ಲ. ದಿವಂಗತ ನೆಹರೂ ಅವರ ಬಗ್ಗೆ ಕೂಡ ಇಂಥ ಮಾತುಗಳನ್ನಾಡುತ್ತಿದ್ದ ಸುಶಿಕ್ಷಿತರನ್ನು ನಾನು ಕಂಡಿದ್ದೇನೆ. ನಮ್ಮ ದೇಶದಲ್ಲಿ ಕೆಲವೇ ಜನ ಕೂಡ ಸಂಭಾವಿತರು ಇಲ್ಲದಿದ್ದ ಪಕ್ಷದಲ್ಲಿ ಇದನ್ನು ಸುಧಾರಿಸುವ ಬಗೆ ಹೇಗೆ? ಎಲ್ಲರೂ ಕೇಡಿಗಳು ಎಂದು ಹೇಳುವುದು ಅರ್ಧಮರ್ಧ ಒಳ್ಳೆಯವರನ್ನೂ ಕೇಡಿಗಳಾಗಿ ಮಾಡುವ ಖಂಡಿತೋಪಾಯವಾಗಿದೆ.

ನಮ್ಮಲ್ಲಿ ಹಬ್ಬಿರುವ ಅನೇಕ ಭ್ರಷ್ಟಾಚಾರಗಳು ಪರಿಸ್ಥಿತಿಯಿಂದ ಉದ್ಭೂತವಾದವುಗಳೇ ಹೊರತು ನಮ್ಮ ಜನರ ಹೃದಯದ ಮೂಲಭೂತ ದೌರ್ಜನ್ಯದಿಂದಲ್ಲ. ನಮಗೆ ಅನಿರೀಕ್ಷಿತವಾಗಿ ಸ್ವಾತಂತ್ರ್ಯ ಬಂತು. ಆರೇಳು ಶತಮಾನಗಳಿಂದ ಪರಾಧೀನವಾಗಿದ್ದ ದೇಶಕ್ಕೆ ಒಮ್ಮೆಲೇ ಸ್ವಾತಂತ್ರ್ಯ ಬಂದಾಗ ಅಧಿಕಾರಸ್ಥಾನದಲ್ಲಿರುವವರಿಗೆ ತಮ್ಮ ಅಧಿಕಾರವನ್ನು ಚಲಾಯಿಸುವ ಚಪಲ ತಡೆಯುವುದು ಕಷ್ಟ. ಹೊಸ ಅಗಸ ಎತ್ತೆತ್ತಿ ಒಗೆದ ಅನ್ನುತ್ತಾರಲ್ಲ. ಅಧಿಕಾರವನ್ನು ಸಂಯಮದಿಂದ ಚಲಾಯಿಸುವುದು ದೀರ್ಘಕಾಲದ ಅನುಭವದಿಂದ ಬರುವ ಗುಣ.

ಬ್ರಿಟಿಶ್ ಅಧಿಕಾರಿಗಳು ಹೆಚ್ಚು ನಿಷ್ಠಾವಂತರೂ ಪ್ರಾಮಾಣಿಕರೂ ಆಗಿರಲು ಅವರಿಗೆ ಜನಸಂಪರ್ಕ ವಿಶೇಷ ಬರುತ್ತಿರಲಿಲ್ಲ ಎಂಬುದೊಂದು ಕಾರಣ. ಸಂಪರ್ಕವಿಲ್ಲದಲ್ಲಿ ವಶೀಲಿಗೆ ಸಂದರ್ಭ

ಸಿಗುವದಿಲ್ಲ. ಎರಡನೆಯದಾಗಿ ಅಧಿಕಾರಿಗಳ ಮೇಲೆ ಪ್ರಜಾನಾಯಕರ ಒತ್ತಾಯ ನಡೆಯುತ್ತಿರಲಿಲ್ಲ. ಏಕೆಂದರೆ ಸರಕಾರದ ಮೇಲೆ ಪ್ರಜಾಪ್ರತಿನಿಧಿಗಳ ಹತೋಟಿ ಇದ್ದಿಲ್ಲ. ಈಗ ಅಧಿಕಾರಿಗಳಿಗೆ ಜನರ ಸಂಪರ್ಕವೂ ನಿತ್ಯ ಬರುತ್ತದೆ, ಪ್ರಭಾವಶಾಲಿಗಳಿಗೆ ಅವರ ಮೇಲೆ ಒತ್ತಾಯ ತರಲು ರಾಜಕೀಯ ಅನುಕೂಲಗಳೂ ಪ್ರಜಾತಂತ್ರದ ದೆಸೆಯಿಂದ ಇವೆ. ಪ್ರಭಾವಶಾಲಿಗಳ ಒತ್ತಾಯಕ್ಕೆ ಮಣಿಯದ ಅಧಿಕಾರಿಗೆ ಕಿರುಕಳ ಬರುತ್ತವೆ, ಪ್ರಾಮಾಣಿಕತೆ ಕಷ್ಟವಾಗುತ್ತದೆ.

ಪ್ರಜಾತಂತ್ರ ಮತ್ತು ಸಾರ್ವತ್ರಿಕ ಮತಾಧಿಕಾರದ ಒಳ್ಳೇ ಫಲಗಳೆಂದರೆ ಈವರೆಗೆ ತುಳಿಯಲ್ಪಟ್ಟಿದ್ದ ವರ್ಗಗಳಿಗೆ ಸ್ವೋನ್ನತಿಯ ಮಾರ್ಗ ಸಿಗುವದು. ಆದರೆ ಇದಕ್ಕಾಗಿ ತೆರಬೇಕಾದ ಬೆಲೆಯೂ ಸಣ್ಣದಲ್ಲ. ಈ ವರ್ಗಗಳಿಗೆ ರಾಜಕೀಯ ಅನುಭವ ಕಡಿಮೆ. ಹೆಚ್ಚಾಗಿ ಬಡತನದಲ್ಲಿದ್ದುದರಿಂದ ಅವರು ಒಳ್ಳೇ ಮಟ್ಟದ ಜೀವನವನ್ನೂ ಕಂಡವರಲ್ಲ. ಇಂಥವರ ಕೈಲಿ ಅಧಿಕಾರ ಬಂದರೆ ಹೇಗಾದರೂ ಹಣ ಗಳಿಸಿ ಸುಖಪಡುವ ಹಂಬಲ ಸಹಜವಾಗಿಯೇ ಪ್ರಬಲಿಸುತ್ತದೆ. ನಮ್ಮ ಅನೇಕ ರಾಜಕಾರಣಿಗಳಿಗೂ ಸರಕಾರಿ ನೌಕರರಿಗೂ ಇದು ಅನ್ವಯಿಸುತ್ತದೆ. ವ್ಯಾಪಾರಿಗಳು ಇದನ್ನು ಸಹಜವಾಗಿ ತಮ್ಮ ಲಾಭಕ್ಕೆ ಉಪಯೋಗಿಸಿಕೊಳ್ಳುತ್ತಾರೆ.

ಇದು ಭಾರತೀಯರಿಗೆ ವಿಶಿಷ್ಟವಾದ ಮಾತಲ್ಲ. ಬ್ರಿಟನ್ನಿನಲ್ಲಿ ಪ್ರಥಮತಃ ೧೯೪೫ರಲ್ಲಿ ಕೂಲಿಕಾರ ಪಕ್ಷಕ್ಕೆ ಬಹುಮತ ದೊರೆತು ಅಟ್ಲೀ ಸರಕಾರ ರಚಿತವಾದಾಗ ಇಬ್ಬರು ಕಿರಿಯ ಮಂತ್ರಿಗಳ ಮೇಲೆ ಅನುಚಿತ ಕಾಣಿಕೆಗಳನ್ನು ಪಡೆದ ಆರೋಪ ಬಂತು. ಪ್ರಧಾನಮಂತ್ರಿ ಅಟ್ಲೀಯವರು ಕೂಡಲೆ ವಿಚಾರಣೆ ನಡೆಸಿ ಆರೋಪ ಸತ್ಯವೆಂದು ಮನಗಂಡು ಆ ಇಬ್ಬರು ಮಂತ್ರಿಗಳಿಂದ ರಾಜೀನಾಮೆ ತೆಗೆದುಕೊಂಡರು.


ಈ ಮಂತ್ರಿಗಳ ಪ್ರಕರಣ ತುಂಬ ಕರುಣಾಜನಕವೇ ಆಗಿತ್ತು. ಅವರು ಮೂಲತಃ ಗಣಿ ಕೆಲಸಗಾರರು. ದೀರ್ಘಪರಿಶ್ರಮದಿಂದ ಕೂಲಿಕಾರ ಚಳವಳಿಯಲ್ಲಿ ಪ್ರಾಧಾನ್ಯ ಪಡೆದು (ನಮ್ಮ ರಾಜಕಾರಣಿಗಳು ಸ್ವಾತಂತ್ರ್ಯ ಸತ್ಯಾಗ್ರಹ ಮೂಲಕ ಪಡೆದಂತೆ) ಈಗ ಪಕ್ಷಕ್ಕೆ ಬಹುಮತ ದೊರೆತಿದ್ದರಿಂದ ಮಂತ್ರಿಪದಕ್ಕೆ ಬಂದವರು. ಆದರೆ ಅವರೆಂದೂ ಶ್ರೀಮಂತರಾಗಿದ್ದಿಲ್ಲ. ಅವರು ಎಂದೂ ಒಳ್ಳೇ ಸಿಂಗರಿಸಿದ ಮನೆಗಳಲ್ಲಿ ಇದ್ದವರಲ್ಲ, ಅವರ ಹೆಂಡಂದಿರು ಆಭರಣಗಳನ್ನು ಧರಿಸಿದವರೂ ಅಲ್ಲ. ಇಂಥವರಿಗೆ ಅಧಿಕಾರ ಬಂದಿತ್ತು. ಅವರ ಅನುಗ್ರಹ ಸಂಪಾದಿಸಲು ವ್ಯಾಪಾರಿಗಳು ಅವರ ಹೆಂಡಂದಿರಿಗೆ ಮುತ್ತಿನ ಹಾರಗಳನ್ನೋ ಮನೆಗೆ ಶೃಂಗಾರ ಸಾಧನಗಳನ್ನೊ ಕೊಡಲು ಬಂದಾಗ ಪ್ರಲೋಭನೆವನ್ನು ತಡೆದುಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಇದರ ಫಲವಾಗಿ ಅವರ ಗಂಡಂದಿರು ಮೂವತ್ತು ನಲವತ್ತು ವರ್ಷಗಳ ಶ್ರಮದಿಂದ ಸಂಪಾದಿಸಿದ ರಾಜಕೀಯ ಸ್ಥಾನವನ್ನು ಶಾಶ್ವತವಾಗಿ ಕಳೆದುಕೊಳ್ಳಬೇಕಾಯಿತು. ಅವರ ರಾಜಕೀಯ ಮರಣವೇ ಆಯಿತದು.

ಭಾರತದಲ್ಲಿಯೂ ಹೀಗೇ ಆಗುತ್ತಿದೆ. ಈ ಮಂತ್ರಿಗಳಿಗಾದ ಗತಿ ನಮಗೊಂದು ಪಾಠವನ್ನು ಕಲಿಸುತ್ತದೆ. ಅದೆಂದರೆ ರಾಜಕಾರ್ಯದಲ್ಲಿ ಪಾವಿತ್ರ್ಯ ಉಳಿಯಬೇಕಾದರೆ ಕ್ರೂರ ಕ್ರಮಗಳೂ ಬೇಕು ಎನ್ನುವದು. ಪಕ್ಷಕ್ಕೆ ಸುದೀರ್ಘ ಸೇವೆ ಸಲ್ಲಿಸಿದವರೆಂಬುದರಿಂದ ಅವರನ್ನು ಪಾರುಮಾಡಲು ಅಟ್ಲೀಯವರು ಯತ್ನಿಸಲಿಲ್ಲ. ನಾವೂ ಈ ಹಾದಿ ಹಿಡಿದರೆ ಸಾವಕಾಶವಾಗಿ ಇಲ್ಲಿಯೂ ಪರಿಸ್ಥಿತಿ ಸುಧಾರಿಸುವುದು.

ಇದಕ್ಕೆ ವಿಚಾರಶೀಲ ಮತ್ತು ಸುಜಾಗೃತ ಸಾರ್ವಜನಿಕಾಭಿಪ್ರಾಯ ಬೇಕು. ಭ್ರಷ್ಟಾಚಾರ ನಡೆದಿದೆಯೆಂದು ಖಂಡಿತವಾದರೆ ಅದರ ವಿರುದ್ಧ ತೀವ್ರವಾದ ಕೂಗೇಳಬೇಕು. ತೀವ್ರ ಕೂಗೆಂದರೆ ಹೊಣೆಗೆಟ್ಟ ಟೀಕೆಗಳಲ್ಲ. ಕ್ಷುಲ್ಲಕ ವಿಚಾರಗಳನ್ನು ಅತಿಯಾಗಿ ಜಗಿಯುವುದೂ ಒಳ್ಳೆಯದಲ್ಲ. ಆಧಾರವಿಲ್ಲದೆ ಆರೋಪ ಹೊರಿಸುವದು ಇನ್ನೂ ಕೆಟ್ಟದ್ದು. ಮಂತ್ರಿಯ ಸಂಬಂಧಿಕನೊಬ್ಬನಿಗೆ ಉಚ್ಚ ಹುದ್ದೆ ಸಿಕ್ಕಿದರೆ ಅವನಿಗೆ ಯೋಗ್ಯತೆ ಇದ್ದರೂ ನಾವು 'ವಶೀಲಿ' ಎಂದು ಕೂಗುತ್ತೇವೆ. ಇದು ಸರಿಯಲ್ಲ. ಚರ್ಚಿಲ್ಲರ ಅಳಿಯ ಡಂಕನ್ ಸ್ಯಾಂಡ್ಸ್ ಒಬ್ಬ ಪ್ರಮುಖ ಮಂತ್ರಿಯಾದಾಗ ಇಂಗ್ಲಂಡಿನಲ್ಲಿ, ಅಧ್ಯಕ್ಷ ಕೆನಡಿಯ ತಮ್ಮ ರಾಬರ್ಟ್ ಕೆನಡಿ ಅಟಾರ್ನಿ ಜನರಲ್ಲನಾದಾಗ ಅಮೇರಿಕದಲ್ಲಿ ನಾಲಿಗೆಗಳು ನಲಿಯಲಿಲ್ಲ. ಸಾರ್ವಜನಿಕ ಭಾವನೆ ಒಂದು ಕತ್ತಿ. ಕ್ಷುಲ್ಲಕ ವಿಷಯಗಳನ್ನು ದೊಡ್ಡದು ಮಾಡಿ ದಿನವೂ ಆಡಿಕೊಳ್ಳುವುದರಿಂದ ಆ ಕತ್ತಿಯ ಬಾಯಿ ತೇದು ತೇದು ಮೊಂಡಾಗುತ್ತದೆ. ಮುಂದೆ ದೊಡ್ಡ ತಪ್ಪಾದಾಗಲೂ ಆ ಕತ್ತಿ ಅಭ್ಯಾಸಬಲದಿಂದ ತಿರುಗೀತೇ ಹೊರತು ಅದರ ಅಲಗು ಕತ್ತರಿಸಲಾರದು. ಭ್ರಷ್ಟಾಚಾರದ ಸುದ್ದಿ ಸಾರ್ವಜನಿಕರಲ್ಲಿ ಕ್ರೋಧವನ್ನೆಬ್ಬಿಸುವ ಬದಲು ಅದೊಂದು ತಮಾಷೆಯೋಯೆಂಬಂತೆ ನಗುವೆಬ್ಬಿಸಿದರೆ ಮುಗಿದೇ ಹೋಯಿತು. ಒಮ್ಮೆ ಆರೋಪಕ್ಕೆ ಬಲವಾದ ಆಧಾರ ಕಂಡರೆ ತಪ್ಪುಗಾರನ ರುಂಡ ಉರುಳುವವರೆಗೆ ವಿಶ್ರಾಂತಿ ಪಡೆಯಬಾರದು.

ನಮ್ಮ ದೇಶ ನಾವು ಅಂದುಕೊಳ್ಳುವಷ್ಟು ಕೆಟ್ಟಿಲ್ಲ. ಮುಂಧ್ರಾ–ಕೃಷ್ಣಮಾಚಾರಿ ಪ್ರಕರಣ, ಕೇಶವದೇವ ಮಾಲವೀಯ ಪ್ರಕರಣ, ತಾರಕೇಶ್ವರಿ ಸಿಂಹ ಪ್ರಕರಣ, ಪಾಟನಾಯಕ–ಬೀರೇನ ಮಿತ್ರ ಪ್ರಕರಣ, ಕೈರಾನ್ ಪ್ರಕರಣ ಇವೆಲ್ಲವೂ ತೀವ್ರವಾದ ಸಾರ್ವಜನಿಕ ಅಸಂತೋಷವು ದೊಡ್ಡವರ ತಲೆಗಳನ್ನೂ ಉರುಳಿಸಬಲ್ಲದೆಂದು ತೋರಿಸುತ್ತದೆ.

ನಮ್ಮ ದೇಶದ ಹೃದಯ ಸುಸ್ಥಾನದಲ್ಲಿದೆ. ನಾವು ಸ್ವಲ್ಪ ಕಡಿಮೆ ಮಾತಾಡಿ ಹೆಚ್ಚು ವಿವೇಕದಿಂದ ವರ್ತಿಸಿದರೆ, ಸಾರ್ವಜನಿಕ ಭ್ರಷ್ಟಾಚಾರವನ್ನು ಗಂಭೀರವಾಗಿ ಪರಿಗಣಿಸಿದರೆ ಹೆಚ್ಚು ಅನುಭವದಿಂದ ನಾವು ಸುಧಾರಿಸಬಲ್ಲೆವು. ಈ ನಂಬಿಕೆ ಇಲ್ಲದಿದ್ದವರು ಈ ದೇಶದಲ್ಲಿ ಉಳಿಯುವುದಕ್ಕೆ ವಿಶೇಷ ಅರ್ಥವಿಲ್ಲ. ✡



ವಿಟಮಿನ್ — ಕ್ಯೂ

ಅಮೇರಿಕದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಕ್ವಿಕ್ ಎಂಬ ವಿಜ್ಞಾನಿಯ ಹೊಸ ಶೋಧನೆಯೆಂದರೆ—ವಿಟಮಿನ್ 'ಕ್ಯೂ'. ಇದು ರಂಜಕಾಮ್ಲಯುಕ್ತ ಕೊಬ್ಬು ಎಂಬ ಅಭಿಪ್ರಾಯವುಂಟು. ಸೋಯಾ ಅವರೆಯಿಂದ ಇದನ್ನು ಪಡೆಯಬಹುದು. ನಮ್ಮ ರಕ್ತ ಬೇಗ ಹೆಪ್ಪುಗಟ್ಟಲು ವಿಟಮಿನ್ ಕ್ಯೂ ಅವಶ್ಯವೆನ್ನಲಾಗಿದೆ. ವಿಟಮಿನ್ ಕ್ಯೂ ಇನ್ನೂ ಸಾಧಾರಣವಾಗಿ ಪ್ರಮಾಣೀಕೃತವಾಗಬೇಕಿದೆ.

ಮಿಗಿಲಾದುದುಂಟೆ?

ಸುಳ್ಳು ಮಾತ್ರೆ

ನೈಜ ಪರಿಣಾಮ

ಜಿ. ಎಸ್. ಶಿವಪ್ರಕಾಶ

ಫ್ರಾನ್ಸ್ ದೇಶದ ಲೂರ್ಡ್ಸ್ ಎಂಬ ಯಾತ್ರಾ ಸ್ಥಳವು ಕ್ರಿಶ್ಚಿಯನ್ನರಿಗೆ ಅತ್ಯಂತ ಪವಿತ್ರ ಕ್ಷೇತ್ರವಾಗಿದೆ. ಇಲ್ಲಿಗೆ ಪ್ರತಿ ವರ್ಷವೂ ಜಗತ್ತಿನ ನಾನಾ ಭಾಗಗಳಿಂದ ಕ್ರಿಶ್ಚಿಯನ್ನರು ಮಾತ್ರವಲ್ಲ ಇತರ ಧರ್ಮಗಳನ್ನು ಅನುಸರಿಸುವ ಸಾವಿರಾರು ಮಂದಿ ಯಾತ್ರಿಕರು ಭೇಟಿ ನೀಡುತ್ತಾರೆ. ಯಾಕೆಂದರೆ ಲೂರ್ಡ್ಸ್ ಶತಮಾನಗಳಿಂದಲೂ ಪವಾಡ ಸ್ಥಳವೆಂದು ಜಗತ್ಪ್ರಸಿದ್ಧವಾಗಿದೆ. ಇಲ್ಲಿರುವ ಸಣ್ಣ ಕೊಳದಲ್ಲಿ ಮಿಂದು, ಭಕ್ತಿಯಿಂದ ದೇವರನ್ನು ಪ್ರಾರ್ಥಿಸಿದಲ್ಲಿ, ಸಕಲ ರೋಗಗಳು ನಿವಾರಣೆಯಾಗುವುದೆಂಬ ನಂಬಿಕೆಯಿಂದ ನಾನಾ ವ್ಯಾಧಿಗಳಿಂದ ನರಳುತ್ತಿರುವವರು ಇಲ್ಲಿಗೆ

...ಹತಾಶ ಮನುಷ್ಯರ ನಂಬಿಕೆ ಎಂದು ವಿದ್ಯಾವಂತರೆನ್ನಿಸಿಕೊಳ್ಳುವವರು ಮೂಗು ಮುರಿಯಬಹುದು.

ಆದರೆ ಮೂಕನು ಮಾತಾಡುವ, ಕುರುಡನು ಕಾಣುವ, ಹೆಳವನು ಬೆಟ್ಟವನ್ನು ಏರುವ ಮಹಾ ಪವಾಡಸದೃಶ ಪ್ರಸಂಗಗಳು ಲೂರ್ಡ್ಸ್‌ನಲ್ಲಿ ನಡೆದುಹೋಗಿವೆ. ಅಲ್ಲಿನ ಕೊಳದಲ್ಲಿ ಮಿಂದು ಆಜನ್ಮಪರ್ಯಂತ ಇದ್ದ ರೋಗಗಳನ್ನು ಗುಣಪಡಿಸಿ ಸಾವಿರಾರು ಮಂದಿಯು ಕುರಿತು ಅಧಿಕೃತ ದಾಖಲೆಗಳನ್ನು ಸ್ಥಳೀಯ ಚರ್ಚ್ ಬರೆದಿಟ್ಟುಕೊಂಡಿದೆ. ಯಾವ ಔಷಧ ಚಿಕಿತ್ಸೆಗೂ ಬಗ್ಗದ ಬಹುತೇಕ ಎಲ್ಲ ಬಗೆಯ ರೋಗಗಳು ಲೂರ್ಡ್ಸ್‌ನಲ್ಲಿ ಗುಣವಾಗಿವೆ ಎಂಬುದಕ್ಕೆ ನಿಸ್ಸಂದಿಗ್ಧವಾದ ಪುರಾವೆ ದೊರೆಯುತ್ತದೆ. ಹಾಗೆ ನೋಡಿದರೆ ಲೂರ್ಡ್ಸ್‌ನ 'ದೈವಿಕ ಕೊಳ' ನೀರಿನಲ್ಲಿ ಔಷಧದ ಗುಣಗಳೇನಿಲ್ಲ. ಪರೀಕ್ಷೆಗೊಳಪಡಿಸಿದಾಗ ಅದರಲ್ಲಿ ಕ್ಷಯ, ಕುಷ್ಠ, ಟೈಫಾಯ್ಡ್ ಮೊದಲಾದ ಭಯಂಕರ ರೋಗಗಳನ್ನು ಉಂಟುಮಾಡುವ ಕೀಟಾಣುಗಳು ತೇಲುತ್ತಿದ್ದುದು ಪತ್ತೆಯಾಯಿತು. ಆದರೂ ಅದೇ ನೀರಿನಲ್ಲಿ ಅಸಂಖ್ಯ ರೋಗಿಗಳು ದಿನನಿತ್ಯವೂ ಮುಳುಗು ಹಾಕುತ್ತಾರೆ. ಅವರಿಗೆ ಸೋಂಕು ತಗಲುವುದು ಹಾಗಿರಲಿ, ಹಿಡಿದಿದ್ದ ಹಳೇ ವ್ಯಾಧಿಗಳು ಅವರನ್ನು ಬಿಟ್ಟು ಓಡಿಹೋಗುತ್ತವೆ. ಈ ರೀತಿ ಗುಣ ಕಂಡ ಪ್ರತಿಯೊಬ್ಬನನ್ನೂ ಸಂಪೂರ್ಣ ಪರೀಕ್ಷೆಗೆ ಒಳಪಡಿಸಿ, ಆತನು ಗುಣ ಹೊಂದಲು ಬೇರಿನ್ನಾವ ವೈದ್ಯಕೀಯ ಕಾರಣವೂ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡೇ ಲೂರ್ಡ್ಸ್‌ನಲ್ಲಿರುವ ಚರ್ಚ್ ಆತನ ಪ್ರಕರಣವನ್ನು ಪವಾಡವೆಂದು ದಾಖಲು ಮಾಡಿಕೊಳ್ಳುತ್ತದೆ. ಈ ಪವಾಡಕ್ಕೆ ಏನು ಕಾರಣ?

ನಮ್ಮ ದೇಶಕ್ಕೆ ಬಂದರೆ ಇಲ್ಲಿ ತಮ್ಮ ರೋಗ ನಿವಾರಕ ಶಕ್ತಿಗಾಗಿ ಪ್ರಸಿದ್ಧಿ ಪಡೆದಿರುವ ಅಸಂಖ್ಯ ಪುಣ್ಯಕ್ಷೇತ್ರಗಳಿವೆ. ಎಲ್ಲಕ್ಕಿಂತ ಮಿಗಿಲಾಗಿ ತಮ್ಮ ಪವಾಡಸದೃಶ್ಯ ಚಿಕಿತ್ಸೆಗಳಿಗೆ ಹೆಸರಾದ ಬಾಬಾಗಳು, ಯೋಗಿಗಳು, ಸಿದ್ಧಿಪುರುಷರು, ದೈವೀಕ ವ್ಯಕ್ತಿಗಳು—ಆಧುನಿಕ ವೈದ್ಯ ವಿಜ್ಞಾನದ ಪರಿಚಯವಿರದ ಸಾಧುಗಳು—ಕೇವಲ ಸ್ಪರ್ಶ ಮಾತ್ರದಿಂದ ತೀರ್ಥ ಪ್ರಸಾದಗಳನ್ನು ನೀಡುವ ಮೂಲಕ ಅನೇಕ ರೋಗಗಳನ್ನು ಗುಣಪಡಿಸಿದ ಉದಾಹರಣೆಗಳು ಇಂದೂ ಪದೇ ಪದೇ ಕೇಳಿ ಬರುತ್ತಿವೆ.

294-9

ಉದಾಹರಣೆಗೆ, ತಮ್ಮ ಜೀವಮಾನದ ಮೊದಲ ೫೦ ವರ್ಷಗಳ ಕಾಲವೂ ಶನಿಯು ಹಾಗೆ ಅಂಟಿಕೊಂಡ ಅಸ್ತಮಾದಿಂದ ಪೀಡಿತರಾಗಿ ಉಡುಗಿ ಹೋಗಿದ್ದ ನನ್ನ ಪರಿಚಯದವರು ಒಬ್ಬರು, ಕೆಲವು ವರ್ಷಗಳ ಹಿಂದೆ ಪವಾಡ ಪುರುಷರೆಂದು ಹೆಸರು ಗಳಿಸಿ ಇಂದು ಕೋಟ್ಯಂತರ ಮಂದಿ ಅನುಯಾಯಿಗಳನ್ನು ಪಡೆದಿರುವ-ಒಬ್ಬ ದೈವಿಕ ಪುರುಷರು ಕೊಟ್ಟ ವಿಭೂತಿಯನ್ನು ತಿಂದು ಸಂಪೂರ್ಣ ರೋಗ ವಿಮುಕ್ತರಾಗಿದ್ದಾರೆ. ಈ ಪವಾಡಸದೃಶ ರೋಗ ನಿದಾನ ಪ್ರಕರಣಗಳಲ್ಲಿ ಅನೇಕವು ಉತ್ಪ್ರೇಕ್ಷೆಯಿಂದ ಕೂಡಿರಬಹುದಾದರೂ, ಕಣ್ಣಾರೆ ಕಂಡ ಅನೇಕ ಪ್ರಕರಣಗಳನ್ನು ಅಲ್ಲಗಳೆಯಲಾಗದು. ಇದಕ್ಕೇನೆನ್ನೋಣ?

ನಾವು ಇನ್ನೂ ಮುಂದೆ ಹೋಗಿ, ಒಂದು ಆಧುನಿಕ ವೈದ್ಯ ಪ್ರಯೋಗವನ್ನು ಗಮನಿಸೋಣ. ವೈದ್ಯರೊಬ್ಬರು ಇಪ್ಪತ್ತು ಮಂದಿ ಸ್ವಯಂಸೇವಕರನ್ನು ಆರಿಸಿಕೊಂಡು ಅವರನ್ನು ಹತ್ತು ಮಂದಿಯ ಎರಡು ತಂಡಗಳಾಗಿ ವಿಂಗಡಿಸುತ್ತಾರೆ. ಈ ವೈದ್ಯಕೀಯ ಪ್ರಯೋಗಕ್ಕೆ ಒಪ್ಪಿ ಮುಂದೆ ಬಂದ ಇವರೆಲ್ಲರಿಗೂ ನೆಗಡಿಯ ಬಾಧೆ ಇರುತ್ತದೆ. ವೈದ್ಯರು ಹತ್ತು ಜನರ ಒಂದು ತಂಡಕ್ಕೆ ದಿನಕ್ಕೆ ತಲಾ ಮೂರರಂತೆ ಮೂರು ದಿನಗಳ ಕಾಲ ಒಂಬತ್ತು ಗುಳಿಗೆಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿ ಪ್ರತಿಯೊಬ್ಬನಿಗೂ ಆ ಗುಳಿಗೆಗಳನ್ನೂ ಕೊಡುತ್ತಾರೆ. ಈ ಗುಳಿಗೆಗಳು ಅತ್ಯಾಧುನಿಕ ಸಂಶೋಧನೆಯ ಪರಿಣಾಮವಾಗಿ ತಯಾರಾದವೆಂದೂ ಅವು ನೆಗಡಿಗೆ ರಾಮಬಾಣವೆಂದೂ ವೈದ್ಯರು ಹೇಳುತ್ತಾರೆ.

ಇನ್ನು ಹತ್ತು ಮಂದಿಗೂ ವೈದ್ಯರು ಇಂಥದೇ ಗುಳಿಗೆಗಳನ್ನು ಇಷ್ಟೇ ಪ್ರಮಾಣದಲ್ಲಿ ನೀಡುತ್ತಾತ್ತಾರೆ. ಆದರೆ, ನೆಗಡಿಗೆ ಇನ್ನೂ ಪರಿಣಾಮಕಾರಿಯಾದ ಔಷಧಿ ಕಂಡುಹಿಡಿಯಲ್ಪಟ್ಟಿಲ್ಲವೆಂದೂ ತಾವು ಕೊಡುತ್ತಿರುವ ಗುಳಿಗೆಗಳು ಪ್ರಯೋಗಾತ್ಮಕವೆಂದೂ, ಅವುಗಳ ಸೇವನೆಯಿಂದ ಮೈ ಛಳಕು, ತಲೆ ತಿರುಗುವ ಲಕ್ಷಣಗಳು ಆಹಾರದಲ್ಲಿ ನಿರಾಸಕ್ತಿ ಮುಂತಾದ ಉಪ ಪರಿಣಾಮಗಳು ತಲೆದೋರಲೂಬಹುದೆಂದು ವೈದ್ಯರು ಎಚ್ಚರಿಸುತ್ತಾರೆ. ಈ ಬಳಿಕ ಮೂರನೆಯ ದಿನ ಇತ್ತಂಡದವರು ವೈದ್ಯರ ಚಿಕಿತ್ಸಾಲಯದಲ್ಲಿ ಹಾಜರಾಗುತ್ತಾರೆ. ಮೊದಲ ತಂಡದ ಹತ್ತು ಮಂದಿಯಲ್ಲಿ ಎಂಟು ಮಂದಿ ನೆಗಡಿಯಿಂದ ಸಂಪೂರ್ಣ ಗುಣಮುಖರಾಗುತ್ತಾರೆ. ಉಳಿದಿಬ್ಬರು ನೆಗಡಿ ಗುಣವಾಗದಿದ್ದರೂ ಕಣ್ಣು ರಿ ಮೂಗಿನಿಂದ ನೀರು ಸುರಿಯುವದು ಮೊದಲಾದ ತೀವ್ರ ಉಪದ್ರವಗಳು ನಿಂತಿರುವುದಾಗಿ ಹೇಳುತ್ತಾರೆ.

ಇತ್ತ ಎರಡನೇ ತಂಡದ ಹತ್ತು ಮಂದಿಯಲ್ಲಿ ಒಬ್ಬನಿಗೂ ಗುಣವಾಗಿರುವುದಿಲ್ಲ. ಬದಲಾಗಿ, ಆರು ಮಂದಿಗೆ ವ್ಯಾಧಿ ಉಲ್ಬಣಿಸಿ, ಅವರಿಗೆ ಚಿಕಿತ್ಸಾಲಯಕ್ಕೆ ಬರುವುದೇ ಮಹಾ ಪ್ರಯಾಸವೆನಿಸಿರುತ್ತದೆ. ಕೇವಲ ಒಬ್ಬನಿಗೆ ಮಾತ್ರ ನೆಗಡಿಯ ಲಕ್ಷಣಗಳು ಮಾಯವಾಗಿರುತ್ತವೆ. ಉಳಿದ ಮೂವರಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ; ಅಂದರೆ ಅವರ ನೆಗಡಿಯಲ್ಲಿ ಹೆಚ್ಚು ಕಡಿಮೆ ಆಗಿರುವುದಿಲ್ಲ. ಆದರೆ ಎಲ್ಲರೂ ಔಷಧದ ಸೇವನೆಯಿಂದ ತಮಗೆ ಆಗಾಗ್ಗೆ ತಲೆ ತಿರುಗಿದಂತಾಯಿತೆಂದೂ, ಆಗಾಗ್ಗೆ ಛಳಕು ಹೊಡೆಯಿತೆಂದೂ ಮತ್ತು ಹಸಿವೇ ಆಗಲಿಲ್ಲವೆಂದೂ ವರದಿ ಮಾಡುತ್ತಾರೆ. ಇಲ್ಲಿ ಆಶ್ಚರ್ಯದ ಮಾತೆಂದರೆ ವೈದ್ಯರು ಎರಡೂ ತಂಡಗಳಿಗೆ ಯಾವ ಔಷಧಿಯನ್ನೂ ಕೊಟ್ಟಿರಲಿಲ್ಲ ಎಂಬುದು. ಅವರು ಕೊಟ್ಟಿದ್ದು ನಿರುಪದ್ರವಿಯಾದ ಸಕ್ಕರೆಯ ಗುಳಿಗೆಗಳು. ಆದರೆ ಎರಡು ತಂಡದವರ ಮೇಲೆ ಪರಿಣಾಮ ಮಾತ್ರ ತದ್ವಿರುದ್ಧವಾಗಿದ್ದವು. ವಾಸ್ತವವಾಗಿ, ರೋಗಿಗಳ ನಿದಾನದಲ್ಲಿ ಈ ಗುಳಿಗೆಯ ಪಾತ್ರ ಅತ್ಯಲ್ಪವಾಗಿತ್ತು. ವೈದ್ಯರು ಗುಳಿಗೆಗಳನ್ನು ಕೊಡುವಾಗ ಕೊಟ್ಟ ಸೂಚನೆಗಳೇ ಎರಡು ತಂಡಗಳ ರೋಗ ನಿದಾನದಲ್ಲಿ ಅಪಾರ ವ್ಯತ್ಯಾಸಕ್ಕೆ ಕಾರಣವಾಗಿದ್ದವು. ಇಂತಹ ನಿರುಪದ್ರವಿ ಹಾಗೂ ನಿರುಪಯುಕ್ತವೆನಿಸಬಹುದಾದ ಗುಳಿಗೆಗಳನ್ನು ಅಥವ ಚುಚ್ಚುಮದ್ದುಗಳನ್ನು, ದ್ರಾವಕ ಔಷಧಿಗಳನ್ನು ಬಳಸಿ ನಡೆಸುವ ಚಿಕಿತ್ಸೆಯನ್ನು ಆಧುನಿಕ ವೈದ್ಯ-ವಿಜ್ಞಾನವು ಪ್ಲಾಸಿಬೊ ಅಥವ ಶ್ರದ್ಧಾ ಚಿಕಿತ್ಸೆ ಎಂದು ಎಂದು ಕರೆಯುತ್ತದೆ.

ರಕ್ತದೊತ್ತಡ, ಸಂಧಿವಾತ, ಕ್ಯಾನ್ಸರ್ ಮುಂತಾದ ಭಯಂಕರ ರೋಗಗಳನ್ನು ಗುಣಪಡಿ

ವಲ್ಲಿ ಆಧುನಿಕ ವೈದ್ಯವಿಜ್ಞಾನವು ಅಪಾರ ಯಶಸ್ಸು ಗಳಿಸಿದೆ. ಕೇವಲ ಕೆಲವು ದಶಕಗಳ ಹಿಂದೆ ಪ್ರಾಣಾಂತಿಕವಾಗಿದ್ದ ಕ್ಷಯ, ಟೈಫಾಯ್ಡ್ ಮೊದಲಾದ ಭೀಕರ ರೋಗಗಳನ್ನು ಗುಣಪಡಿಸಲು ಪೆನಿಸಿಲಿನ್, ಕ್ಲೋರೋಮೈಸಿಟಿನ್, ಸ್ಟ್ರೆಪ್ಟೋಮೈಸಿನ್ ಮೊದಲಾದ ಆಧುನಿಕ ಔಷಧಗಳು ಇಂದು ಲಭ್ಯವಾಗಿವೆ. ಆದರೆ ಇದೀಗ ಇವೆಲ್ಲಕ್ಕೆ ಮಿಗಿಲಾಗಿ 'ಪ್ಲಾಸಿಬೋ' ಅತ್ಯಾಧುನಿಕ ವೈದ್ಯಕೀಯ ಆಸಕ್ತಿಯ ರೋಗ ನಿದಾನವಾಗಿದ್ದು, ಈ ಕುರಿತು ಜಗತ್ತಿನ ನಾನಾ ದೇಶಗಳಲ್ಲಿ ಪ್ರಯೋಗಗಳು ನಡೆಯುತ್ತಿವೆ. ಈಗಾಗಲೇ ಈ ದಿಶೆಯಲ್ಲಿ ನಡೆದ ಪ್ರಯೋಗಗಳಿಂದ ಕುತೂಹಲಕರ ಹಾಗೂ ಆಶಾದಾಯಕ ಫಲಿತಾಂಶಗಳು ಹೊರಬಿದ್ದಿವೆ.

'ಪ್ಲಾಸಿಬೋ'ವನ್ನು ಕೇವಲ 'ಶ್ರದ್ಧಾ ಚಿಕಿತ್ಸೆ' ಯೆಂದೂ ರೋಗಿಗೆ ಮಾನಸಿಕವಾಗಿ ವೈದ್ಯನು ನೀಡುವ ಸಾಂತ್ವನವೇ ಈ ಚಿಕಿತ್ಸೆಯ ಪರಿಣಾಮಕರ ತತ್ತ್ವವೆಂದೂ ಹೇಳುವುದು ಕೆಲ ಮಟ್ಟಿಗೆ ಸರಿ; ಆದರೆ ಇದು ಪೂರ್ತಿ ವಿವರಣೆಯಾಗುವುದಿಲ್ಲ. ವೈದ್ಯನು ಕೇವಲ ಸಲಹೆ ಸೂಚನೆಗಳಿಂದ ರೋಗವನ್ನು ಗುಣಪಡಿಸಬಲ್ಲವನಾದರೆ ಆಗ ಗುಳಿಗೆ, ಚುಚ್ಚು ಮದ್ದು ಮೊದಲಾದ ವಿಧಾನಗಳ ಅಗತ್ಯವಿರುತ್ತಿರಲಿಲ್ಲ. (ಸಕ್ಕರೆಯ ಗುಳಿಗೆಗಳನ್ನು ಔಷಧದ ಗುಳಿಗೆಗಳೆಂದು ಹೇಳಿ ಕೊಡುವ ಹಾಗೆ, ಶುದ್ಧವಾದ ನೀರನ್ನು ಚುಚ್ಚುಮದ್ದೆಂದು ಕೊಡಬಹುದು. ಇದರಂತೆ ಬಣ್ಣಕಟ್ಟಿದ ನೀರನ್ನು ಔಷಧ ಮಿಶ್ರಣವಾಗಿ ಕುಡಿಯಲು ಕೊಡಬಹುದು.) ಆದ್ದರಿಂದ 'ಪ್ಲಾಸಿಬೋ' ದೇಹದಲ್ಲಿ ಸಹಜವಾಗಿ ಇರುವ ರೋಗ ನಿರೋಧಕ ವ್ಯವಸ್ಥೆಯನ್ನು ಉತ್ತೇಜಿಸಿ, ರೋಗದ ವಿರುದ್ಧ ಹೋರಾಡುವಂತೆ ಪ್ರಚೋದನೆ ನೀಡುವ ಕ್ರಮವೆಂದು ಹೇಳಬಹುದು. ಇಲ್ಲಿ ವೈದ್ಯನ ಸಲಹೆ ಕೇವಲ ರೋಗ ಗುಣವಾಗುತ್ತದೆ ಎಂಬ ಅಭಯದಾನವಲ್ಲ. ತಾನು ನೀಡಿದ ಮದ್ದು ಗುಣಪಡಿಸುತ್ತದೆ ಎಂದು ಆತ ರೋಗಿಗೆ ಆಶ್ವಾಸನೆ ನೀಡಿ, ರೋಗಿಯಲ್ಲಿ ಭರವಸೆ ಹುಟ್ಟಿಸುತ್ತಾನೆ. ಈ ಮದ್ದು ಕೇವಲ 'ಪ್ಲಾಸಿಬೋ' ಆಗಿದ್ದರೂ ಅದು ನಿಜವಾದ ಔಷಧದಂತೆಯೇ ಕೆಲಸ ಮಾಡುತ್ತದೆ. ಅಂದರೆ ಮಂತ್ರಕ್ಕೆ ಮಾವಿನಕಾಯಿ ಉದುರುತ್ತದೆ.

'ಪ್ಲಾಸಿಬೋ' ಎಂದರೆ ಲ್ಯಾಟಿನ್ ಭಾಷೆಯಲ್ಲಿ ನಾನು ಸಂತೋಷಪಡಿಸಿಯೇ ತೀರುತ್ತೇನೆ ಎಂಬ ಅರ್ಥ ಬರುತ್ತದೆ. ಈ ಮೂಲಕ ವೈದ್ಯರು ಸಲಹಾ ಚಿಕಿತ್ಸೆ ನೀಡುತ್ತಾರೆ ಎಂದು ಹೇಳುವುದು ತಪ್ಪಾಗುತ್ತದೆ. ಬದಲಾಗಿ, ಅವರು ಮನುಷ್ಯ ದೇಹವು ತನ್ನನ್ನು ತಾನೇ ಗುಣಪಡಿಸಿಕೊಳ್ಳಲು ಹೊಂದಿರುವ ಅದ್ಭುತಸಾಮರ್ಥ್ಯದ ಪರಿಚಯವನ್ನು ಈಗಷ್ಟೇ ಪಡೆದು, ಅದನ್ನು ರೋಗ ನಿದಾನಕ್ಕಾಗಿ ಬಳಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎನ್ನಬಹುದು. ದೇಹವು ವ್ಯಾಧಿಗ್ರಸ್ತವಾದಾಗ ಅದನ್ನು ಗುಣಪಡಿಸಲು ಅಗತ್ಯವಾದ ಜೀವ ರಾಸಾಯನಿಕ ಬದಲಾವಣೆಗಳನ್ನು ದೇಹದಲ್ಲಿ ಉಂಟುಮಾಡಲು ಮೆದುಳು ಸಂದೇಶವನ್ನು ಕಳುಹಿಸುತ್ತದೆ ಎಂದು ನಂಬಲಾಗಿದೆ. ಇನ್ನೂ ರಹಸ್ಯವಾಗಿರುವ ದೇಹದ ಸ್ವಯಂ ವೈದ್ಯ ಚಿಕಿತ್ಸೆಯು ಮೊದಲಾಗುವ ಹಾಗೆ ಮಾಡುವಂತೆ ಮೆದುಳಿಗೆ ಗುಳಿಗೆ, ಸೂಚಿಮದ್ದು ಮೊದಲಾದ ವಿಧಾನಗಳ ಮೂಲಕ ಸೂಚನೆ ಕೊಡುವ ಕ್ರಮವನ್ನೇ 'ಪ್ಲಾಸಿಬೋ' ಎಂದು ಸ್ಥೂಲವಾಗಿ ಹೇಳಬಹುದು. ಇಂದು 'ಪ್ಲಾಸಿಬೋ'ವನ್ನು ಅನೇಕ ಕಡೆಗಳಲ್ಲಿ ಸಣ್ಣ ಪುಟ್ಟ ದೇಹಬಾಧೆಗಳನ್ನು



"ಇನ್ನೊಂದು ೩೦—೪೦ ವರ್ಷನಾದ್ರೂ ಜನಸೇವೆ ಮಾಡೋ ಆಸೆ ಇದೆ !"


ನಿವಾರಿಸಲು ಯಶಸ್ವಿಯಾಗಿ ಬಳಸಲಾಗುತ್ತಿದೆ ಮಾತ್ರವಲ್ಲದೆ, ಹೊಸ ನಿಜವಾದ ಔಷಧಿಗಳು ಎಷ್ಟು ಪರಿಣಾಮಕಾರಿ ಎಂಬುದನ್ನು ಪರೀಕ್ಷಿಸಲೂ ವ್ಯಾಪಕವಾಗಿ ಬಳಸಲಾಗುತ್ತಿದೆ. ಹೊಸ ಹೊಸ ಔಷಧದ ಪರಿಣಾಮಗಳನ್ನು ಅಳೆಯುವಾಗ ಅದೇ ಔಷಧವನ್ನು ಹೋಲುವ 'ಪ್ಲಾಸಿಬೊ'ವಿನ ಸೇವನೆಯಿಂದ ಉಂಟಾಗುವ ಫಲಿತಾಂಶದೊಂದಿಗೆ ಅದನ್ನು ಹೋಲಿಸಲಾಗುತ್ತದೆ.

ಆದರೆ ವೈದ್ಯವಿಜ್ಞಾನವು 'ಪ್ಲಾಸಿಬೋ' ನಿಜವಾದ ಔಷಧದಂತೆಯೇ ಕೆಲಸ ಮಾಡುತ್ತದೆ ಎಂಬ ಕಾರಣದಿಂದ ಅದರ ಬಗ್ಗೆ ಅಪಾರ ಆಸಕ್ತಿಯನ್ನು ತೋರ್ಪಡಿಸಿದ್ದಾರೆ. ಅದರ ಪರಿಣಾಮವು ವಾಸ್ತವವಾಗಿ ನಿಜವಾದ ಔಷಧದ ಪರಿಣಾಮಕ್ಕೆ ಸಮನಾಗಿರುತ್ತದೆ ಎಂಬ ಅಂಶವು ಪ್ರಯೋಗಗಳಿಂದ ದೃಢಪಟ್ಟಿರುವುದು, 'ಪ್ಲಾಸಿಬೋ' ಬಗ್ಗೆ ವೈದ್ಯಕೀಯ ಜಗತ್ತಿನ ಲಕ್ಷ್ಯವನ್ನು ಇಮ್ಮಡಿಗೊಳಿಸಿದೆ. 'ಪ್ಲಾಸಿಬೋ' ಹೇಗೆ ಕೆಲಸ ಮಾಡುತ್ತದೆ ಎಂಬುದು ಇನ್ನೂ ನಿಖರವಾಗಿ ತಿಳಿಯದಿದ್ದರೂ ಅದು ಮೆದುಳನ್ನು ಉತ್ತೇಜಿಸಿ, ಮೆದುಳು ನಿರ್ನಾಳ ಗ್ರಂಥಿಗಳನ್ನು ಉತ್ತೇಜಿಸಿ, ಅಗತ್ಯವಾದ ಜೀವ ರಾಸಾಯನಿಕ ಬದಲಾವಣೆಗಳನ್ನು ದೇಹದಲ್ಲಿ ಉಂಟುಮಾಡಲು ಪ್ರೇರಕವಾಗುತ್ತದೆಂದೂ ಊಹಿಸಲಾಗಿದೆ. 'ಪ್ಲಾಸಿಬೋ'ನ ದೈಹಿಕ ಮಾನಸಿಕ ರೋಗ ನಿದಾನವೇನೇ ಇರಲಿ, ಈ ಚಿಕಿತ್ಸೆಯು ನಿಜವಾದ ಔಷಧ ಚಿಕಿತ್ಸೆಗಿಂತ ಕೆಲವು ವೇಳೆ ಹೆಚ್ಚು ಪರಿಣಾಮಕಾರಿಯಾದುದು ಕಂಡುಬಂದಿದೆ ಎಂದ ಮಾತ್ರಕ್ಕೆ 'ಪ್ಲಾಸಿಬೋ' ನಿಜವಾದ ಔಷಧಿಗಳಿಗೆ ಸಂಪೂರ್ಣವಾಗಿ ಬದಲಿಯಾಗುತ್ತದೆ ಎಂದಲ್ಲ. ಅನೇಕ ಸಂದರ್ಭಗಳಲ್ಲಿ ನಿಜವಾಗಿ ರೋಗದ ವಿರುದ್ಧ ಹೋರಾಡಬಲ್ಲ ಪರಿಣಾಮಕಾರಿಯಾದ ಔಷಧಗಳು ಅತ್ಯಗತ್ಯ. ಆದರೆ 'ಪ್ಲಾಸಿಬೋ' ವೈದ್ಯರು ಬಳಸುವ ನಿಜವಾದ ಔಷಧಿಗಳಿಗೆ ಸಹಾಯಕವಾಗಿ ಕೆಲಸಮಾಡುತ್ತದೆ. ಉದಾಹರಣೆಗೆ ಅನೇಕ ವೇಳೆ ಜೀವಿರೋಧಿ ಔಷಧಿಗಳು, ಮನೋವ್ಯಾ

ಕುಲತೆಯ ನಿಯಂತ್ರಣಕ್ಕೆ ರಕ್ತದೊತ್ತಡ ನಿವಾರಣೆಗೆ, ಸ್ನಾಯುಗಳು ಸೆಳೆತದ ಶಮನಕ್ಕೆ ಬಳಸುವ ಔಷಧಿಗಳು ಅತ್ಯಂತ ತೀವ್ರವಾದ ಉಪಪರಿಣಾಮಗಳನ್ನು ಉಂಟುಮಾಡುತ್ತವೆ. ಇಂತಹ ಸಂದರ್ಭದಲ್ಲಿ 'ಪ್ಲಾಸಿಬೋ'ವನ್ನು ಸಮಯವರಿತು ಬಳಸಿದಾಗ ಈ ರೋಗಗಳು ಸಂಪೂರ್ಣವಾಗಿ ಗುಣವಾಗುವುದೇ ಅಲ್ಲದೇ, ಇವುಗಳ ಉಪ ಪರಿಣಾಮಗಳ ಉಪದ್ರವದ ಭಯ ಎಳ್ಳಷ್ಟೂ ಇರುವುದಿಲ್ಲ. ರೋಗ ನಿದಾನದ ದೃಷ್ಟಿಯಿಂದ 'ಪ್ಲಾಸಿಬೋ' ನಿಜವಾದ ಔಷಧಿಗಿಂತ ಪರಿಣಾಮಕಾರಿ ಎನ್ನಬಹುದು. ಅಲ್ಲದೆ, ವೈದ್ಯಕೀಯ ಪರೀಕ್ಷೆಗಳು ತೋರಿಸುವಂತೆ ವೈದ್ಯ ಸಹಾಯಕ್ಕಾಗಿ ಧಾವಿಸಿ ಬರುವ ಬಹುತೇಕ ರೋಗಿಗಳ ಸಂಕಟದ ನಿವಾರಣೆ ದೇಹದ ಸ್ವಂತ ರೋಗ ನಿದಾನ ಸಾಮರ್ಥ್ಯದ ಅಳವಿನಲ್ಲೇ ಇರುತ್ತದೆ. ಆಗ ವೈದ್ಯರು ಪ್ರತಿಯೊಬ್ಬ ರೋಗಿಯ ದೈಹಿಕ, ಮಾನಸಿಕ ಸ್ಥಿತಿಯನ್ನು ಗಮನಿಸಿ ಅಗತ್ಯವಾದಾಗ 'ಪ್ಲಾಸಿಬೋ' ಔಷಧವನ್ನು ಸೂಚಿಸಬಹುದು. ಇಂತಹ ಪ್ರಸಂಗಗಳಲ್ಲಿ 'ಪ್ಲಾಸಿಬೋ' ಉಂಟುಮಾಡುವ ಒಳ್ಳೇ ಪರಿಣಾಮದ ಕಾರಣ ನಿಜವಾದ ಚಿಕಿತ್ಸೆಯೇ ಆಗುತ್ತದೆ.

ಹೀಗೆ ಶತಮಾನಗಳ ಕಾಲದಿಂದ ಅಳಲೇಕಾಯಿ ಪಂಡಿತರಿಂದ ಹಿಡಿದು ಮಂತ್ರವಾದಿ, ಸಿದ್ಧಪುರುಷನವರೆಗೆ ವಿವಿಧ ಚಿಕಿತ್ಸಕರು ಬಳಸಿಕೊಳ್ಳುತ್ತಿದ್ದ 'ಪ್ಲಾಸಿಬೋ' ಒಂದು ಮದ್ದು ಎನ್ನುವುದಕ್ಕಿಂತ ಹೆಚ್ಚಾಗಿ, ಒಂದು ಚಿಕಿತ್ಸಾ ವಿಧಾನವೇ ಆಗಿದೆ. 'ಪ್ಲಾಸಿಬೋಚಿಕಿತ್ಸೆ'ಯು ಮನಸ್ಸು ಮತ್ತು ದೇಹದ ಸಂಬಂಧ ಎಷ್ಟು ಅನ್ಯೋನ್ಯವಾದುದು ಎಂಬುದನ್ನು ಎತ್ತಿ ತೋರುತ್ತದೆ. ಅಂದರೆ ಮನಸ್ಸು ಮತ್ತು ದೇಹದ ನಡುವಣ ಅಂತರ ನಿಜವಾದುದಲ್ಲ ಎಂಬುದನ್ನು 'ಪ್ಲಾಸಿಬೋ' ದೃಢಪಡಿಸುತ್ತದೆ. ಯಾವುದೇ ರೋಗ ಬದಲಾಗುವುದು ದೇಹ ಮತ್ತು ಮನಸ್ಸುಗಳ ನಡುವಣ ತಾಕಲಾಟದಿಂದಲೇ. ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ಒಂದು ಇನ್ನೊಂದರ ಮೇಲೆ ಕೆಲವು ವೇಳೆ ಅಹಿತಕರ ಪರಿಣಾಮವನ್ನು ಬೀರುವುದೂ ಉಂಟು. ಇಂತಹ ಸಂದರ್ಭದಲ್ಲಿ ದೇಹ ಮತ್ತು ಮನಸ್ಸಿನ ನಡುವಣ ಸಂಬಂಧವನ್ನು ಉತ್ತಮಪಡಿಸಿ, ರೋಗವನ್ನು ಗುಣಪಡಿಸುವ ಚಿಕಿತ್ಸಾ ಕ್ರಮ 'ಪ್ಲಾಸಿಬೋ' ಎನ್ನಬಹುದು. ಆದ್ದರಿಂದ 'ಪ್ಲಾಸಿಬೋ' ಕೃತಕ ಚಿಕಿತ್ಸಾ ವಿಧಾನವಲ್ಲ. ಅನೇಕರು ತಪ್ಪಾಗಿ ಭಾವಿಸಿರುವಂತೆ ಅದು ದೇಹವನ್ನು 'ಮೋಸ'ಗೊಳಿಸಿ, ರೋಗವನ್ನು ಗುಣಪಡಿಸಲು ಯತ್ನಿಸುವುದಿಲ್ಲ; ಅದು ಬದುಕುವ ಇಚ್ಛೆಯನ್ನು, ದೇಹದ ಜೀವ ರಾಸಾಯನಿಕ ಬದಲಾವಣೆಗಳನ್ನು ಪ್ರಚೋದಿಸುವ ಮೂಲಕ, ಚಲಾವಣೆಗೆ ತರುತ್ತದೆ. 'ಪ್ಲಾಸಿಬೋ' ಕೇವಲ ಮನುಷ್ಯ ವರ್ಗಕ್ಕೆ ಮಾತ್ರ ಪರಿಣಾಮಕಾರಿಯಾಗಿದೆ.

ಮನುಷ್ಯನಲ್ಲಿ 'ಪ್ಲಾಸಿಬೋ' ಚಿಕಿತ್ಸೆಗೆ ಪ್ರಕ್ರಿಯೆ ತೋರುವ ಚರ್ಯೆಯು ಶೈಶವದಲ್ಲೇ ಮಾತು ತಿಳಿಯದ ಮೂಕ ಸಂಜ್ಞೆಗಳ ಅನುಭವಗಳ ಕಾಲದಲ್ಲಿ ಪ್ರಾರಂಭವಾಗುತ್ತದೆಂದು ಕೆಲವು ವೈದ್ಯರು ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ, ಶಿಶುವಿನ ಕ್ಷುದ್ಬಾಧೆಯ ಅನುಭವವು, ಅದು ಹಾಲು ಕುಡಿದಾಗ ಮಾಯವಾಗಿ, ಸಂತೃಪ್ತಿಯ ಅನುಭವ ಉಂಟಾಗುತ್ತದೆ. ಅಂದರೆ ಒಂದು ದೈಹಿಕ ಯಾತನೆಯ ಅನುಭವವನ್ನು ಇಲ್ಲವಾಗಿಸಿ, ಸುಖಕರವಾದ ಅನುಭವ ಕೊಡುವ ಸ್ತನ್ಯಪಾನವೇ ಶಿಶುವಿನ ಮೊದಲ 'ಪ್ಲಾಸಿಬೋ' ಮದ್ದು. ಹೀಗೆ ಮೊದಲಾದ 'ಪ್ಲಾಸಿಬೋ' ಆಜೀವಪರ್ಯಂತ ನೆನಪಿನಲ್ಲಿ ಉಳಿದು ಮನುಷ್ಯನ ದೇಹ ಮತ್ತು ಮನಸ್ಸು ಈ ಚಿಕಿತ್ಸೆಗೆ ಮಣಿಯುತ್ತವೆ. ಹೀಗೆ 'ಪ್ಲಾಸಿಬೋ' ಮನುಷ್ಯನ ಆರೋಗ್ಯವನ್ನು ಕಾಪಾಡುವ ಹೊಸ ವೈದ್ಯಕೀಯ ಮಾರ್ಗವಾಗುತ್ತಿದೆ. ಮುಖ್ಯವಾಗಿ, ಹೊಸಯುಗದ ಪ್ರಮುಖ ವ್ಯಾಧಿಗಳಾದ ನಿಷಣ್ಣತೆ, ಉದ್ರಿಕ್ತತೆ, ರಕ್ತದೊತ್ತಡ ಇತ್ಯಾದಿಗಳ ಚಿಕಿತ್ಸೆಯಲ್ಲಿ ಇದು ವಿಶೇಷ ಪರಿಣಾಮಕಾರಿಯಾಗಿದೆ. ಇನ್ನು ಮುಂದೆ 'ಪ್ಲಾಸಿಬೋ' ರೋಗಿಗೆ ತನ್ನ ರೋಗಗಳನ್ನು ತಾನೇ ಗುಣಪಡಿಸಿಕೊಳ್ಳಲು ಕೂಡ ಸಹಾಯಕವಾಗಬಹುದಾಗಿದೆ. ಈ ಕಾರಣದಿಂದ ಶತಮಾನಗಳಷ್ಟು ಹಳೆಯದಾದ 'ಪ್ಲಾಸಿಬೋ' ತತ್ವವು ಇಂದು ಅತ್ಯಾಧುನಿಕ ವೈದ್ಯಕೀಯ ತತ್ತ್ವಜ್ಞಾನ ಹಾಗೂ ಚಿಕಿತ್ಸಾ ವಿಧಾನವಾಗಿ ಬಳಕೆಗೆ ಬರುತ್ತಿದೆ. ✡


ನಿಮ್ಮ ಚರ್ಮಕ್ಕೆ
ಪ್ರಕೃತಿಸಹಜ ಕಾಂತಿ
VEP
ಸರ್ಕಾರಿ ಉದ್ಯಮವೊಂದರ ಉತ್ಕೃಷ್ಟ ಉತ್ಪನ್ನ
ವೇಪ್
ಟಾಯ್‌ಲೆಟ್ ಸೋಪ್
ವೇಪ್. ದ್ರವೀಕರಣ ಗುಣವುಳ್ಳ ಈ ಸಾಬೂನು ಎಣ್ಣೆ ಸ್ನಾನದ ಎಲ್ಲ ಪ್ರಯೋಜನಗಳನ್ನೂ ನಿಮಗೆ ನೀಡುವುದು. ನಿಮ್ಮ ಚರ್ಮ ಒಣಗದಂತೆ ಹಾಗೂ ಸುಕ್ಕು ಬೀಳದಂತೆ ರಕ್ಷಿಸುವುದು. ಬಹುಕಾಲ ಉಳಿಯುವ ಪರಿಮಳ, ಶುಭ್ರಗೊಳಿಸುವ ಕ್ರಿಯೆ, ಪ್ರಕೃತಿಸಹಜ ಸ್ವಚ್ಛ ಕಳೆ, ನಿಷ್ಕಳಂಕ ಕಾಂತಿಗೆ...
ನಿಮ್ಮ ಚರ್ಮಕ್ಕೆ ಅಗತ್ಯವಾದ
ನೈಸರ್ಗಿಕ ರಕ್ಷಣೆಗೆ ವೇಪ್
ಕೇರಳ ಸೋಪ್ಸ್ & ಆಯಿಲ್ಸ್ ಲಿಡ್.,
ಕಾಲಿಕಟ್.
FDS KSO 3303A KAN

ನಗೆಮಲ್ಲಿಗೆ

ಸಂದರ್ಶನದಲ್ಲಿ ಮ್ಯಾನೇಜರ್: ಜನ ಜಂಗುಳಿ ಚದುರಿಸಲು ನೀನೇನು ಮಾಡುವೆ?

ಓರ್ವ ಅಭ್ಯರ್ಥಿ: ಭಿಕ್ಷೆ ಎತ್ತಲು ಪ್ರಾರಂಭಿಸುವೆ...

*

ತಂದೆ: ಆ ಏಜೆಂಟನನ್ನು ಲಗ್ನವಾದರೆ ಕಷ್ಟ ತಪ್ಪಿದ್ದಲ್ಲ. ಆತ ಸದಾ ಸಂಚಾರಿ...

ಮಗಳು: ಆತ ಸಂಚಾರದಲ್ಲಿರುವುದರಿಂದ ಕಷ್ಟವೆಲ್ಲಿಯದು!

*

ಅಪ್ಪ: ಎಲ್ಲ ವಿಷಯುಗಳಲ್ಲಿ ಚೆನ್ನಾಗಿ ಅಂಕಗಳನ್ನು ತೆಗೆದಿರುವ ನೀನು ಐಚ್ಛಿಕ ಗಣಿತದಲ್ಲೇಕೆ ಕಡಿಮೆ ಅಂಕ ತೆಗೆದಿರುವಿ?

ಮಗ: ಅದು ಐಚ್ಛಿಕವಿರುವುದರಿಂದ.

*

ಆಕೆ: ಮಗು ನಿಮ್ಮವರಂತೆಯೇ ಇದೆ.

ಈಕೆ: ಅದರ ಆರೋಗ್ಯ ಚೆನ್ನಾಗಿಲ್ಲ.

*

ಆಕೆ: ತತ್ತಿಯಿಂದ ಮರಿಗಳು ಹೊರ ಬರುವುದು ಆಶ್ಚರ್ಯಕರ ಸಂಗತಿಯಲ್ಲವೇ?

ಈಕೆ: ಅದಕ್ಕಿಂತ ಆಶ್ಚರ್ಯಕರ ಸಂಗತಿಯೆಂದರೆ ಅವು ತತ್ತಿಯೊಳಗೆ ಹೋದದ್ದು...

*

ರಮೇಶ: ನನ್ನ ಕೂದಲು ಉದುರುತ್ತಿವೆ. ಏನಾದರೂ ಉಪಾಯವುಂಟೇ?

ಗಿರೀಶ: ನನ್ನ ಬಳಿ ಖಾಲಿ ಪೆಟ್ಟಿಗೆಯುಂಟು, ಬೇಕೆ?

*

ಸಂದರ್ಶಕ: ನೀವು 'ಶಾಂತಿಪರ್ವ' ರಚಿಸಿದ್ದು ಯಾವಾಗ?

ಸಾಹಿತಿ: ನನ್ನ ಮಡದಿ ಸತ್ತ ನಂತರ...

*

ಕಂಪೋಜಿಟರ್ (ಹೆಮ್ಮೆಯಿಂದ): ಕಂಪೋಜ್ ಮಾಡುತ್ತಲೇ ನಾನು ಸಾಹಿತ್ಯ ರಚಿಸುವೆ.

ಮಿತ್ರ: ಮಿಕ್ಕ ಅವಧಿಯಲ್ಲಿ ನಿನಗೆ ಸಾಹಿತ್ಯ ರಚಿಸಲು ಬರುವುದಿಲ್ಲವೇನು!

*

ರಾಜ್ಯಶಾಸ್ತ್ರ ಶಿಕ್ಷಕ: 'ಪಕ್ಷಾಂತರ' ಪಿಡುಗನ್ನು ತಡೆಯಲು ಏನು ಮಾಡಬೇಕು?

ಓರ್ವ ವಿದ್ಯಾರ್ಥಿ: ಪಕ್ಷಗಳೇ ಇಲ್ಲದಂತೆ ಮಾಡಬೇಕು...

*

ಮಿತ್ರ: ಸದಾ ರೋಗಗ್ರಸ್ಥಳಾದ ನಿನ್ನ ತಂಗಿಯನ್ನು ಯಾರೊಡನೆ ಲಗ್ನ ಮಾಡಬೇಕೆಂದಿರುವೆ?

ಈತ: ಓರ್ವ 'ಮೆಡಿಕಲ್ ರಿಪ್ರೆಜೆಂಟೇಟಿವ್'ನೊಂದಿಗೆ.

*

ಆತ: ನೀವು ಈ ಹೊಸ ಶಬ್ದಕೋಶವನ್ನು ಹೇಗೆ ತಯಾರಿಸಿದಿರಿ?

ಈತ: ಒಂದು ದಿನ ನನ್ನ ಹೆಂಡತಿ ಜಗಳ ತೆಗೆದಳು. ಮಾತಿಗೆ ಮಾತು ಬೆಳೆಯುತ್ತ ಹೋಯಿತು...

*

ಅವ: ನೀವು ನಮ್ಮ ಭಾಷಣಕಾರರ ಸಂಘವನ್ನೇಕೆ ಸೇರಿಲ್ಲ?

ಇವ: ನನಗೆ ವಿವಾಹವಾಗಿದೆ.

*

ಮಿತ್ರ: ನೀವು ಹೊರಗೆ ಹೋಗುವಾಗ ಕಾರಿನಲ್ಲೇಕೆ ನಿಮ್ಮ ಪತ್ನಿಯನ್ನು ಕರೆದೊಯ್ಯುವುದಿಲ್ಲ?

ಆತ: ಒಮ್ಮೆಲೇ ಎರಡನ್ನೂ ನಡೆಸಿಕೊಂಡು ಹೋಗುವುದು ನನ್ನಿಂದಾಗದು.

*

ಸಾಹಿತಿ: ಇತ್ತೀಚೆ ನನಗೆ ಬರೆಯಲು ಸ್ಫೂರ್ತಿನೇ ಬರ್‍ತಿಲ್ಲಾ.

ಸಂಪಾದಕ: ಹಾಗೋ, ಚಿಂತಿಸಬೇಡಿ. ನಮ್ಮ ಈ ಕಸದಬುಟ್ಟೀನ ನೀವು ಒಯ್ಯಬಹುದಲ್ಲಾ!

ತಿದ್ದುಪಡಿ

...ರೈಲು ಅಪಘಾತದಲ್ಲಿ ಸತ್ತವರ ಸಂಖ್ಯೆ ಕೇವಲ ಹತ್ತು. ನಿನ್ನೆ ನಾವು ಪ್ರಕಟಿಸಿದಂತೆ ಐವತ್ತಲ್ಲ ಎಂದು ತಿಳಿಸಲು ವಿಷಾದಿಸುತ್ತೇವೆ. –ಸಂ.

ಮಿತ್ರ: ಯಾರ ಸ್ಮಶಾನಯಾತ್ರೆಗೂ ಹೋಗದ ನೀನು ರಘುನ ಸ್ಮಶಾನ ಯಾತ್ರೆಗೆ ಹೋದದ್ದು ಆಶ್ಚರ್ಯಕರ ವಲ್ಲವೇ?

ಈತ: ಆಶ್ಚರ್ಯವೇನಿಲ್ಲ. ಆತ ನನಗೆ ಸಾವಿರ ರೂ. ಸಾಲ ಕೊಡಬೇಕಾಗಿತ್ತು. 'ಸತ್ತವ ಎದ್ದು ಬಂದ' ಪೇಪರ್ ಸುದ್ದಿ ನೆನಪಾಗಿ ಈತನೇನಾದರೂ ಬದುಕಿ ಬರಬಹುದೇನೋ ಎಂದು ಸ್ಮಶಾನಯಾತ್ರೆಯಲ್ಲಿ ಪಾಲ್ಗೊಂಡಿದ್ದೆ.

*

ಸಂಪಾದಕ: ನಿಮ್ಮ ಇತ್ತೀಚಿನ ಕೃತಿ ಯಾವುದು?

ಸಾಹಿತಿ: 'ನನ್ನ ನಿಗೂಢ ಸಾವು.'

ಸಂಪಾದಕ: ಅದು ನಿಮ್ಮದೇ?

ಸಾಹಿತಿ: ಹೌದು ಸ್ವಾಮೀ ನನ್ನದೇ. ನಾನೇನೂ ಕೃತಿಚೌರ್ಯ ಮಾಡುವವನಲ್ಲ.

*

ರವಿ: ನನ್ನ ಮಿತ್ರ ಪ್ರಸಿದ್ಧ ರಾಜಕಾರಣಿ. ದೇಶದ ಪರಿಸ್ಥಿತಿ ಬಗ್ಗೆ ಗಂಟೆಗಟ್ಟಲೆ ನಿರರ್ಗಳವಾಗಿ ಮಾತಾಡಬಲ್ಲ.

ಗಿರಿ: ಅದ್ಸರಿ ಕೇಳುವವರ ಪರಿಸ್ಥಿತಿ...!

*

ಓರ್ವ ರಾಜಕಾರಣಿ: (ಶೋಕಸೂಚಕ ಸಭೆಯಲ್ಲಿ) ಶ್ರೀಯುತರು ದೇಶೋದ್ಧಾರಕ್ಕಾಗಿ ಹೋರಾಡಿದವರು. ಅವರು ನಡೆದ ದಾರಿಯಲ್ಲಿಂದು ನಾವು...

(ಮಾತಿನ ಮಧ್ಯೆ ಹಿಂದೆ ಕುಳಿತಿದ್ದವನೊಬ್ಬ ಹೇಳಿದ) – "ಅವರ ಶಿಲಾಪ್ರತಿಮೆಯನ್ನಿಟ್ಟು ಗೌರವಿಸಬೇಕು."

*

ಶಿಕ್ಷಕ: (ಬೆಲೆಯೇರಿಕೆ ಬಗ್ಗೆ ಹೇಳಿದ ನಂತರ) ಯಾವಾಗ ಖರ್ಚು ಕಡಿಮೆಯಾಗಲು ಸಾಧ್ಯ?

ವಿದ್ಯಾರ್ಥಿ: ಫೆಬ್ರವರಿಯಂತೆ ಎಲ್ಲ ತಿಂಗಳಲ್ಲೂ ಕಡಿಮೆ ದಿನಗಳಿದ್ದಾಗ.

*

ಆತ: ವಸ್ತುಗಳ ಬೆಲೆ ಹೆಚ್ಚಾಗಿದೆ. ಇನ್ನೂ ಹೆಚ್ಚಿದರೆ ಏನು ಮಾಡುವುದು, ಮಹಾರಾಯಾ?

ಈತ: ಅದಕ್ಕೇಕೆ ಚಿಂತಿಸುವಿ. ಹೆಂಡತಿ-ಮಕ್ಕಳನ್ನು ಮಾವನ ಮನೆಗೆ ಕಳಿಸಿಬಿಟ್ಟರಾಯಿತು.

*

ಓರ್ವ ರಾಜಕಾರಣಿ: (ದೇಶದ ಪ್ರಚಲಿತ ಸಮಸ್ಯೆ ಕುರಿತು ಮಾತನಾಡುತ್ತಿದ್ದ) ನಾವೀಗ ಏನು ಮಾಡಬೇಕು ಗೊತ್ತೇ?... (ಎನ್ನುತ್ತಿದ್ದಂತೆ ವಿದ್ಯುತ್ ಸರಬುರಾಜು ನಿಂತಿತು.)


ಕೊನೆಯಲ್ಲಿ ಕುಳಿತಿದ್ದವನೊಬ್ಬ: "ಮೇಣಬತ್ತಿ ಇಲ್ಲವೆ ಲಾಟೀನ್ ಹಚ್ಚಬೇಕು" ಎಂದು ನುಡಿದ.

*

ಆಕೆ: ನೀನು ಸಂಪಾದಕನನ್ನೇ ಏಕೆ ಮದುವೆಯಾದೆ?

ಈಕೆ: ತಿದ್ದುಪಡಿಗೆ ಅವಕಾಶ ಉಂಟು ಆದ್ದರಿಂದ.

*



ಯಾರು ಈ ಛಿದ್ರಕ 'ಜ್ಯಾಕ್?'

ಎಂ.ಆರ್. ಗಿರಿಧರ ಸ್ಥಪತಿ

ನಮ್ಮ ಸಾಮ್ರಾಜ್ಯದಲ್ಲಿ ಎಂದೂ ಸೂರ್ಯ ಮುಳುಗುವುದೇ ಇಲ್ಲ ಎನ್ನುವಂತೆ ಪ್ರಪಂಚದ ಉದ್ದಗಲಕ್ಕೂ ಬ್ರಿಟಿಶ್ ಸಾಮ್ರಾಜ್ಯ ಹರಡಿದ್ದ ಕಾಲವದು. ವಿಕ್ಟೋರಿಯಾ ಮಹಾರಾಣಿ ಸಿಂಹಾಸನಾರೂಢಳಾಗಿ ಆಗಲೇ ಐವತ್ತೊಂದು ಸಂವತ್ಸರಗಳು ಕಳೆದಿದ್ದವು. ನಲ್ವತ್ತು ಲಕ್ಷ ಜನಸಂಖ್ಯೆಯುಳ್ಳದ್ದೂ ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು ವಿಸ್ತಾರ (೭೦೦ ಚ. ಮೈ.) ಹಾದ ಲಂಡನ್ ನಗರ ಭೂಮಿಯ ಮೇಲಿದ್ದ ಅಂದಿನ ಇತರ ಯಾವುದೇ ನಗರಕ್ಕಿಂತಲೂ ಮಿಗಿಲಾದ ವೈಭವದಿಂದ ಮೆರೆಯುತ್ತಿತ್ತು. ಅಲ್ಲಿನ ಜನ ಅಮೇರಿಕದ ರೈಲು ಮಾರ್ಗಗಳಿಗಾಗಿಯೋ ಆಫ್ರಿಕದಲ್ಲಿ ಚಿನ್ನದ ಗಣಿಗಳಲ್ಲಿಯೋ ಅಥವಾ ಅಮೇರಿಕದಲ್ಲಿ ಜಮೀನುಗಳಲ್ಲಿಯೋ ಹಣ ತೊಡಗಿಸಿದ್ದರು. ರಾತ್ರಿಯಲ್ಲಿ ಸ್ಟ್ರ್ಯಾಂಡ್ ಮತ್ತು ಹೇ ಮಾರ್ಕೆಟ್ ರಸ್ತೆಗಳುದ್ದಕ್ಕೂ ಗ್ಯಾಸ್ ಲೈಟ್‌ಗಳ ಬೆಳಕಿನಲ್ಲಿ ಪುರುಷರ ಹ್ಯಾಟಿನ ಮೇಲಿರುವ ಬಣ್ಣದ ರಿಬ್ಬನ್ ಮತ್ತು ಅವರ ಹೆಂಗಸರ ಕೊರಳಲ್ಲಿ ಮೆರೆಯುತ್ತಿದ್ದ ವಜ್ರಗಳು ಥಳಥಳನೆ ಹೊಳೆಯುತ್ತಿದ್ದವು.

ಆದರೆ ಅದೇ ವೇಳೆಯಲ್ಲಿ ಜನಭರಿತ ವೈಟ್ ಚಾಪೆಲ್ ಮತ್ತು ಕಮರ್ಷಿಯಲ್ ರೋಡುಗಳ ಈಸ್ಟ್ ಎಂಡ್ ಪ್ರದೇಶದಲ್ಲಿ ಎಂತಹ ದಾರಿದ್ರ್ಯ, ಕೊಳಕು, ವಂಚನೆಗಳು ತುಂಬಿದ್ದವೆಂದರೆ ಇಡೀ ಪ್ರಪಂಚದಲ್ಲಿ ಅಷ್ಟು ನಿಕೃಷ್ಟ ಪ್ರದೇಶ ಮತ್ತೊಂದು ಇರಲಿಲ್ಲ ಎಂದು ಹೇಳಬಹುದಾಗಿತ್ತು. ಇಲ್ಲಿನ ಸುಮಾರು ೬೫೦ ಮೀಟರ್ ಪ್ರದೇಶದಲ್ಲಿ ಜನಜಂಗುಳಿ ಜಾಸ್ತಿ. ಇದು ಕೀಳು ದರ್ಜೆಯ ಸಾರ್ವಜನಿಕ ಗೃಹಗಳು ವೇಶ್ಯಾಗೃಹಗಳು, ದಾರಿಹೋಕರು ಮತ್ತು ಕಳ್ಳಕಾಕರಿಂದ ತುಂಬಿಹೋಗಿತ್ತು. ಇಂತಹ ಕೊಳಕು ಪ್ರದೇಶವನ್ನೇ ತನ್ನ ಕಾರ್ಯಕ್ಷೇತ್ರವಾಗಿ ಕೊಂಡಿದ್ದರೂ ಇಡೀ ಲಂಡನ್ ಮಹಾನಗರವನ್ನೇ ತನ್ನ ಅಮಾನುಷ ಕೊಲೆಗಳಿಂದ ಎರಡು ತಿಂಗಳುಗಳ ವರೆಗೆ ತಲ್ಲಣಿಸುವಂತೆ ಮಾಡಿ, ಇಂದಿನೂ ಅವನ ಬಗ್ಗೆ ಸ್ವಲ್ಪವೂ ಸುಳಿವು ಸಿಗದಂತೆ ಕಣ್ಮರೆಯಾದ 'ಛಿದ್ರಕ ಜ್ಯಾಕ್' ಎಂಬ ಹೆಸರಿನ ವ್ಯಕ್ತಿ ಅವತರಿಸಿದುದು ಇಲ್ಲಿಯೇ.

'ಜ್ಯಾಕ್ ದಿ ರಿಪ್ಪರ್' ಅಥವಾ 'ಛಿದ್ರಕ ಜ್ಯಾಕ್'

ಎಂದು ತನ್ನನ್ನು ತಾನೇ ಘೋಷಿಸಿಕೊಂಡ ಆ ವ್ಯಕ್ತಿ ಕೇವಲ ಹತ್ತು ವಾರಗಳ ಅವಧಿಯಲ್ಲೇ ಐವರು ಮಹಿಳೆಯರನ್ನು ಭೀಕರವಾಗಿ ಕೊಲೆಗೈದು ಪೋಲೀಸರ ಕೈಗೆ ಸಿಗದಂತೆ ಕೊನೆಗೆ ತನ್ನ ಹಿಂದೆ ಯಾವ ಸೂಕ್ಷ್ಮ ಸುಳಿವು ಅಥವಾ ಗುರುತುಗಳನ್ನೂ ಬಿಡದಂತೆ ಅತ್ಯಂತ ಚಾಣಾಕ್ಷತನದಿಂದ ಮಾಯವಾದ. ಕೇವಲ ಆತನ ಹೆಸರೆಯನ್ನಷ್ಟನ್ನೇ ತಿಳಿಯಲು ಪತ್ತೇದಾರರಿಗೆ ಹತ್ತಾರು ವರ್ಷಗಳೇ ಬೇಕಾದವು.

ಈ ಪ್ರಕರಣ ನಡೆದು ಆಗಲೇ ೯೦ ವರ್ಷಗಳೇ ಉರುಳಿದ್ದರೂ ಇಂದಿಗೂ ಈ 'ಛಿದ್ರಕ ಜ್ಯಾಕ್' ಎನಿಸಿಕೊಂಡಿದ್ದ ವ್ಯಕ್ತಿ ಯಾರು? ಆತನ ನಿಜವಾದ ಹೆಸರು, ಚರಿತ್ರೆಯೇನು? ಆತ ಆ ಮಹಿಳೆಯರನ್ನು ಏಕೆ ಕೊಲೆ ಮಾಡಿದ? ಅದರಲ್ಲಿಯೂ ಬರೀ ವೇಶ್ಯಾ ಸ್ತ್ರೀಯರನ್ನು ಮಾತ್ರವೇ ಕೊಂದಿದ್ದೇಕೆ? ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಕೊನೆಯಲ್ಲಿ ನೇಮಿಸಲಾಗಿದ್ದ ಅಷ್ಟೊಂದು ಬಿಗಿಯಾದ ಪೋಲೀಸ್ ಹಹರೆಯಿಂದಲೂ ಆತ ಹೇಗೆ ತಪ್ಪಿಸಿಕೊಂಡ? ಮುಂತಾದ ಪ್ರಶ್ನೆಗಳಿಗೆ ಇನ್ನೂ ಉತ್ತರ ದೊರೆತಿಲ್ಲ. ಅದು ಅಪರಾಧಗಳ ಚರಿತ್ರೆಯಲ್ಲಿಯೇ ಹಿರಿದೆಂಬಂತೆ ಇನ್ನೂ ನಿಗೂಢವಾಗಿಯೇ ಉಳಿದಿದೆ. ನಂಬಲೂ ಅಸಾಧ್ಯವೆನಿಸುವಂತಹ ಆತನ ಕತೆ ಎಷ್ಟು ಕುತೂಹಲಕರವೆಂದರೆ, ಅನೇಕ ಜನ ಅಪರಾಧಶಾಸ್ತ್ರಜ್ಞರು, ಕಾದಂಬರಿಕಾರರು, ನಾಟಕಕಾರರು, ವಕೀಲರು, ವೈದ್ಯರು, ಹೀಗೆ ಎಲ್ಲ ರೀತಿಯ ಜನರಲ್ಲಿಯೂ ಇಂದಿಗೂ ಆತನ ಬಗ್ಗೆ ಆಸಕ್ತಿ ಕಡಿಮೆಯಾಗಿಲ್ಲ. ಅಂತೆಯೇ ಇದುವರೆಗೆ ಆತನ ಬಗ್ಗೆಯೇ ಸುಮಾರು ೧೦೦ ಪುಸ್ತಕಗಳು ಹೊರಬಂದಿವೆ. ಹತ್ತು ಚಲನಚಿತ್ರಗಳು ಮತ್ತು ಹಲವಾರು ನಾಟಕಗಳು ತಯಾರಾದವು. ಅವುಗಳಲ್ಲಿ 'ದಿ ಲಾಡ್ಜರ್' ಎಂಬ ಪುಸ್ತಕ ೧೯೧೩ ರಲ್ಲಿ ಪ್ರಕಟವಾದ ನಂತರ ೩೧ ಬಾರಿ ಪುನರ್ ಮುದ್ರಣವನ್ನು ಕಂಡಿದೆ. ಇತರ ೧೮ ಭಾಷೆಗಳಿಗೆ ಅನುವಾದಗೊಂಡಿದೆ. ಅಲ್ಲದೆ ಅದೇ ಪುಸ್ತಕವನ್ನು ಆಧರಿಸಿ ಐದು ಬಾರಿ ಸಿನಿಮಾ ತಯಾರಿಸಲಾಗಿದೆ.

ಇಷ್ಟೆಲ್ಲಾ ಆದರೂ ಯಾರಿಗೂ ಆತನ ನಿಜ ರೂಪವನ್ನು ತಿಳಿಯಲು ಸಾಧ್ಯವಾಗಲೇ ಇಲ್ಲ.

ಇದರ ಮಧ್ಯೆ ಒಮ್ಮೆ ಸೆಂಟ್ರಲ್ ನ್ಯೂಸ್ ಏಜೆನ್ಸಿಗೆ 'ಛಿದ್ರಕ ಜ್ಯಾಕ್' ಎಂದು ಸಹಿ ಮಾಡಿದ್ದ ಪತ್ರವೊಂದು ಬಂದಿದ್ದು ಸಹ ತುಸು ಮುಖ್ಯವಾದ ವಿಚಾರವೇ. ಆ ಪತ್ರದಲ್ಲಿ, "ನಾನು ವೇಶ್ಯೆಯರನ್ನು ನಿರ್ಮೂಲನ ಮಾಡಲು ಹೊರಟಿದ್ದೇನೆ. ನಾನು ಬಂಧಿತನಾಗುವವರೆವಿಗೂ ಅವರನ್ನು ಹೀಗೆ ಛಿದ್ರಗೊಳಿಸುವುದನ್ನು ನಾನು ನಿಲ್ಲಿಸುವುದಿಲ್ಲ" ಎಂದು ಬರೆದಿತ್ತು. ಇಷ್ಟರಲ್ಲಾಗಲೇ ಆತ ಇಬ್ಬರು ವೇಶ್ಯೆಯರನ್ನು ಭಯಾನಕವಾಗಿ ಕೊಲೆ ಮಾಡಿದ್ದ. ಆತನ ಪ್ರಪ್ರಥಮ ಬಲಿ ವೈಟ್ ಚಾಪೆಲ್‌ನ ಮೇರಿ ನಿಕೋಲಾಸ್ ಎಂಬ ವೇಶ್ಯೆ. ೧೮೮೮ರ ಆಗಸ್ಟ್ ೩೧ರಂದು ಆಕೆಯನ್ನು ಕೊಲೆ ಮಾಡಿದ. ಆಕೆಯ ರುಂಡ ಮುಂಡಗಳು ಬೇರ್ಪಟ್ಟಿದ್ದುದಲ್ಲದೆ ಆಕೆಯ ಉದರವನ್ನೂ ಛಿದ್ರಗೊಳಿಸಿದ್ದ. ಮತ್ತೆ ಒಂದು ವಾರದಲ್ಲಿ, ಅಂದರೆ ಸೆಪ್ಟೆಂಬರ್ ೮ನೇ ತಾರೀಖು ಬೆಳಗಿನ ೬ ಘಂಟೆಗೆ ಮತ್ತೊಬ್ಬ ವೇಶ್ಯೆ, ಆ್ಯನ್ ಚಾಪ್‌ಮನ್ ಎಂಬಾಕೆಯನ್ನು ಅದೇ ಪ್ರದೇಶದಲ್ಲಿಯೇ ಆತ ಕೊಲೆ ಮಾಡಿದ. ಛಿದ್ರ ವಿಚ್ಛಿದ್ರವಾದ ಆಕೆಯ ದೇಹ ದೊರೆತ ಸ್ಥಳದ ಹತ್ತಿರದಲ್ಲೇ ಇದ್ದ ಸಾರ್ವಜನಿಕ ನಲ್ಲಿಯ ಬಳಿ ಕಟುಕರು ಮತ್ತು ಚಪ್ಪಲಿ ಮಾಡುವವರು ಧರಿಸುವಂತಹ ಏಪ್ರನ್ ಒಂದು ದೊರೆಯಿತು. ಬಹುಶಃ ಇದನ್ನು ಕೊಲೆಗಾರನು ಬಲಿಪಶುವಿನ ದೇಹದಿಂದ ಚಿಮ್ಮಿದ ರಕ್ತದಿಂದ ರಕ್ಷಣೆ ಪಡೆಯಲು ಧರಿಸಿದ್ದಿರಬಹುದು.

ವೈಟ್‌ಚಾಪೆಲ್ ಪ್ರದೇಶದಲ್ಲಿ ದೊಂಬಿ, ಗಲಭೆ, ಹಿಂಸೆ ಹೊಡೆದಾಟಗಳು ತೀರ ಸಾಮಾನ್ಯವಾಗಿದ್ದರೂ ಅಂತಹ ಪ್ರದೇಶವೂ ಜಾಕ್‌ನ ಕೃತ್ಯಗಳಿಂದ ಬೆರಗಾಗಿಹೋಯಿತು. ಆತನ ಅಮಾನುಷ ಕೃತ್ಯಗಳ ಜೊತೆಗೆ ಆತನು ಅದೃಶ್ಯವಾಗುವುದರ ಬಗ್ಗೆ ಸ್ವಲ್ಪವೂ ಸುಳಿವು ಸಿಗದಿರುವ ಕಾರಣಕ್ಕಾಗಿ ಇಡೀ ಲಂಡನ್ ನಗರದಲ್ಲಿಯೇ ಭಾರಿ ಕೋಲಾಹಲವೆದ್ದಿತು. ಜ್ಯಾಕ್ ಎಂದೂ ಪ್ರವೇಶಿಸದ ಅತ್ಯಾಧುನಿಕ ವೆಸ್ಟ್ ಎಂಡ್ ಪ್ರದೇಶದಲ್ಲೂ ಮಹಿಳೆಯರು ಕತ್ತಲಾದ ನಂತರ ಮನೆಗಳಿಂದ ಹೊರಕ್ಕೆ ಬರಲು ಹೆದರುತ್ತಿದ್ದರು. ಪತ್ರಿಕೆಗಳೂ ಜನರನ್ನು ಇನ್ನಷ್ಟು ಕೆರಳಿ


ಎಂಡ್ ವೇಶ್ಯಾಗೃಹಗಳು ನಿರಾಳವಾಗತೊಡಗಿದವು. ಅಧಿಕಾರಿಗಳು ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನೂ ಕೈಕೊಂಡರು. ಅನೇಕ ಪೋಲೀಸರು ಕೀಳು ಕರೆ ಕಾಮಿನಿಯರ ವೇಷಧರಿಸಿ ರಾತ್ರಿ ರಸ್ತೆಯಲ್ಲಿ ತಿರುಗುತ್ತಿದ್ದರು. ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಪದವಿ ಪೂರ್ವ ವಿದ್ಯಾರ್ಥಿಗಳು ಈಸ್ಟ್ ಎಂಡ್ ಪ್ರದೇಶದಲ್ಲಿ ತಮ್ಮ ಸಮಾಜ ಸೇವಾ ಕಾರ್ಯವೆಂದು ಗಸ್ತು ತಿರುಗುತ್ತಾ ಜ್ಯಾಕನ ಶೋಧದಲ್ಲಿ ಭಾಗಿಗಳಾಗಿದ್ದರು.

ಇಷ್ಟೆಲ್ಲಾ ಬಿಗಿ ವ್ಯವಸ್ಥೆಗಳಿದ್ದಾಗಲೂ ಸೆಪ್ಟಂಬರ್ ೩೦ರ ಮಧ್ಯರಾತ್ರಿಯಲ್ಲಿ ಕೇವಲ ಅರ್ಧ ಗಂಟೆಯ ಅವಧಿಯಲ್ಲಿ ಎರಡು ಕೊಲೆಗಳನ್ನು ಮಾಡಿ ಜ್ಯಾಕ್ ಮತ್ತೊಮ್ಮೆ ಪರಾರಿಯಾದ. ಈ ಬಾರಿ ಆತನಿಗೆ ಬಲಿಯಾದವರೆಂದರೆ ಬೆರ್‌ನರ್ ರಸ್ತೆಯಲ್ಲಿ ಎಲಿಜಬೆತ್ ಸ್ಟೈಡ್ ಎಂಬಾಕೆ ಮತ್ತು ಮೈಟ್ರ್ ಸ್ಕೇರ್‌ನಲ್ಲಿ ಕ್ಯಾಥರೀನ್ ಎಡೋಸ್ ಎಂಬಾಕೆ. ಇಲ್ಲೂ ಅಷ್ಟೆ. ಹಂತಕ ಯಾವ ಸುಳಿವನ್ನೂ ಬಿಟ್ಟು ಹೋಗಿರಲಿಲ್ಲ.

ಈ ಜೋಡಿ ಕೊಲೆ ಪ್ರಕರಣ ಕೇವಲ ಈಸ್ಟ್ ಎಂಡ್ ಪ್ರದೇಶವಷ್ಟೇ ಅಲ್ಲ, ಇಡೀ ಲಂಡನ್ ಮಹಾನಗರವೇ ತಲ್ಲಣಿಸುವಂತೆ ಮಾಡಿತ್ತು. ಇತರರನ್ನು ಬಿಟ್ಟು ಕೇವಲ ಮಹಿಳೆಯರಿಂದಲೇ ವಿಕ್ಟೋರಿಯಾ ರಾಣಿಯ ಬಳಿ ಬಂದ ದೂರುಗಳ ಸಂಖ್ಯೆ ನಾಲ್ಕು ಸಾವಿರ. ವಿಕ್ಟೋರಿಯಾ ರಾಣಿ ತನ್ನ ಗೃಹಶಾಖೆಗೆ ಮತ್ತಷ್ಟು ಬಿಗಿ ವ್ಯವಸ್ಥೆ ಮಾಡುವಂತೆ ಆಜ್ಞೆ ಮಾಡಿದಳು. ಆ ಮುಂದಿನ ಐದಾರು ವಾರಗಳು ಶಾಂತಿಯಿಂದಲೇ ಕಳೆದವು.

೧೮೮೮ ನವೆಂಬರ್ ೯ನೇ ತಾರೀಖು ಶುಕ್ರವಾರ ಬೆಳಗಿನ ೧೦–೪೫ ಗಂಟೆಗೆ ಮಿಲ್ಸರ್ ಕೋರ್ಟ್ ಬಳಿಯಿರುವ ಮನೆಯೊಂದರ ಒಡತಿಯು ತನ್ನ ವಠಾರದಲ್ಲಿ ೧೩ನೇ ನಂಬರ್ ಕೋಣೆಯ ಬಳಿ ಬಂದು ಬಾಡಿಗೆ ವಸೂಲಿಗಾಗಿ ಕದ ತಟ್ಟಿದಳು. ಆ ರೂಮಿನಲ್ಲಿ ವಾಸವಾಗಿದ್ದ ೨೪ ವರ್ಷದ ವೇಶ್ಯೆ ಮೇರಿ ಜೆನೆಟ್ ಕೆಲ್ಲಿ ಎಷ್ಟು ಹೊತ್ತಾದರೂ ಉತ್ತರ ಕೊಡಲಿಲ್ಲ. ಆಗ ಆ ಮನೆಯೊಡತಿ ಹತ್ತಿರದಲ್ಲಿ ಅರೆತೆರೆದಿದ್ದ ಕಿಟಕಿಯಿಂದ ನೋಡಿದಾಗ ಚಿಟ್ಟನೆ ಚೀರಿಕೊಂಡಳು. ಮೇರಿಯ ದೇಹ ಹಾಸಿಗೆಯ ಮೇಲೆ ಅಸ್ತವ್ಯಸ್ತವಾಗಿ ಬಿದ್ದಿದೆ. ಆಕೆಯ ಕಿವಿ ಮೂಗುಗಳನ್ನು ಕತ್ತರಿಸಲಾಗಿದೆ. ರುಂಡ ಮುಂಡಗಳು ಬೇರ್ಪಟ್ಟಿವೆ, ಸ್ತನಗಳನ್ನು ಕೊಯ್ದು ತೆಗೆದು ಟೇಬಲ್ ಮೇಲೆ ನೀಟಾಗಿ ಜೋಡಿಸಲಾಗಿದೆ. ಮುಖವನ್ನು ವಿಕಾರಗೊಳಿಸಲಾಗಿದೆ. ಉದರವನ್ನು ಛಿದ್ರಗೊಳಿಸಲಾಗಿದೆ. ಹಾಗೆ ಹೊರ ಬಂದ ಕರುಳನ್ನು ತೆಗೆದು ಹತ್ತಿರದ ಗೋಡೆಯ ಮೇಲೆ ಹೊಡೆದಿದ್ದ ಮೊಳೆಯೊಂದಕ್ಕೆ ನೇತುಹಾಕಲಾಗಿದೆ....

ಅಬ್ಬ! ಎಂತಹ ಘೋರ ದೃಶ್ಯ ಎನ್ನುತ್ತೀರೇನು? ಹೌದು, ...ಆತ ಕೊಲೆಗೈದ ಎಲ್ಲ ಸ್ತ್ರೀಯರೂ ಹೆಚ್ಚು ಕಡಿಮೆ ಹೀಗೆ ವಿಕಾರಗೊಳಿಸಲ್ಪಟ್ಟವರೇ. ಅವುಗಳಲ್ಲಿ ಅತಿ ಭಯಾನಕವಾಗಿದ್ದ ಮೇರಿ ಜೆನೆಟ್‌ಕೆಲ್ಲಿಯದೇ ಜ್ಯಾಕ್



"ಬಸ್ಸು ಬಂತಲ್ಲೋ ...ಒಂದು ಜೊತೆ ಜನಿವಾರ ಕೊಡಯ್ಯಾ— ಬೇಗ."

ನಡೆಸಿದ ಕಟ್ಟ ಕಡೆಯ ಹತ್ಯೆ. ಅದೇ ದಿನ ಲಂಡನ್ ನಗರದ ಪೋಲೀಸ್ ಕಮೀಷನರ್ ಆಗಿದ್ದ ಸರ್ ಚಾರ್ಲ್ಸ್ ವಾರನ್ ತನ್ನ ಹುದ್ದೆಗೆ ರಾಜೀನಾಮೆ ಸಲ್ಲಿಸಿದ. ಛಿದ್ರಕ ಜ್ಯಾಕ್‌ನ ಹಾವಳಿಯೂ ಅಂದೇ ಕೊನೆಗೊಂಡಿತು. ಇದು ನಡೆದು ಆಗಲೇ ೯೦ ವರ್ಷಗಳೇ ಕಳೆದಿದ್ದರೂ ಆತ ಯಾರೆಂಬುದು ಮಾತ್ರ ಇಂದಿಗೂ ಚಿದಂ–ಬರ ರಹಸ್ಯವಾಗಿಯೇ ಉಳಿದುಬಿಟ್ಟಿದೆ. ಅಂತೆಯೇ ಆತ ಯಾರಾಗಿದ್ದ ಎಂಬ ಬಗ್ಗೆ ಸಾವಿರಾರು ಊಹಾಪೋಹಗಳು ನಡೆಯುತ್ತಲೇ ಇವೆ. ಮೊದಲು ಆತ ವೈಟ್ ಚಾಪೆಲ್‌ನಲ್ಲಿರುವ ಕಟುಕರ ಅಂಗಡಿಯೊಂದರಲ್ಲಿ ಕೆಲಸ ಮಾಡುವವನಿರಬೇಕು ಎಂದು ಊಹಿಸಲಾಯಿತು. ಅನಂತರ ಸ್ಥಳೀಯ ಚಪ್ಪಲಿ ಮಾರುವವನೊಬ್ಬ, ಲಂಡನ್ ನಗರದ ಅತ್ಯಾಧುನಿಕ ವ್ಯಕ್ತಿಯೊಬ್ಬ, ಮತ್ತೊಮ್ಮೆ ಬಹುಶಃ ಆತ ನುರಿತ ವೈದ್ಯನಿರಬಹುದು ಹೀಗೆ ಅನೇಕ ರೀತಿ ಊಹಿಸಲಾಯಿತು. ಹಾರ್ಲೆ ರಸ್ತೆಯಲ್ಲಿ ಸರ್ಜನ್ ಒಬ್ಬರ ಮಗ ವೇಶ್ಯಾಸಂಗದಿಂದ ಗುಹ್ಯರೋಗವನ್ನು ಅಂಟಿಸಿಕೊಂಡಿದ್ದ. ಆದ್ದರಿಂದ ಆ ಸರ್ಜನನೇ ವೇಶ್ಯೆಯರ ಮೇಲೆ ದ್ವೇಷ ತೀರಿಸಿಕೊಳ್ಳುತ್ತಿದ್ದಾನೆ... ಎಂದೆಲ್ಲಾ ಊಹಿಸಲಾಯಿತು.

ಹೀಗೆ ಪೋಲೀಸರು ಸಂಶಯಪಟ್ಟಿದ್ದ ನೂರಾರು ಜನರಲ್ಲಿ ಸೇರಿದ್ದ ಡ್ಯೂಕ್ ಆಫ್ ಕ್ಲಾರೆನ್ಸ್, ವಿಕ್ಟೋರಿಯಾ ರಾಣಿಯ ಮೊಮ್ಮಗ, ಖ್ಯಾತ ಕಾದಂಬರಿಕಾರ ವರ್ಜೀನಿಯಾ ವುಲ್ಫ್‌ನ ಸಹೋದರ ಮುಂತಾದ ಭಾರಿ ಮನುಷ್ಯರೂ ಇದ್ದಾರೆ. ೧೮೯೨ ರಲ್ಲಿ ವಿಷದ ಮಾರಾಟಗಾರನೆಂದು ನೇಣು ಗಂಬಕ್ಕೇರಿಸಲಾದ ವೈದ್ಯ ಡಾ. ನೀಲ್ ಕ್ರೀಮ್ ಎಂಬುವನ ಕಟ್ಟ ಕಡೆಯ ಮಾತುಗಳೆಂದರೆ, "ನಾನೇ ಛಿದ್ರಕ ಜ್ಯಾಕ್" ಎಂಬುದು. ಮತ್ತೊಬ್ಬ ತುಂಬಾ ಕೋಪಿಷ್ಠನಾದ ಹಜಾಮನಿದ್ದ. ಆತ ಪೋಲೆಂಡಿನವನು. ಆತ ತನ್ನ ಹೆಂಡತಿಯನ್ನು ವಿಷ ಹಾಕಿ ಕೊಂದ ಅಪಾದನೆಯಿಂದ ಆತನನ್ನು ಗಲ್ಲುಗಂಬಕ್ಕೆ ಏರಿಸಲಾಯಿತು. ಆತನೇ ಜಾಕ್ ರಹಸ್ಯ ಪೋಲೀಸರಿಂದ ಸ್ಕಾಟ್ಲೆಂಡ್ ಯಾರ್ಡ್‌ನ್ನು ಗೊಂದಲಕ್ಕೀಡುಮಾಡಲೆಂದು ದಂಗೆಕೋರರನ್ನು ಮಾತ್ರ ಕೊಲೆ ಮಾಡಲು ಕಳುಹಿಸಲ್ಪಟ್ಟ ವ್ಯಕ್ತಿಯೆಂದೂ ಊಹಿಸಲಾಗಿತ್ತು.

ಇದುವರೆಗೆ 'ಛಿದ್ರಕ ಜ್ಯಾಕ್' ಬಗ್ಗೆ ಸಂಗ್ರಹಿಸಲಾಗಿರುವ ವಿವರಗಳು ಇಷ್ಟು: ಆತನ ಬಲಿಪಶುಗಳಾರೂ ಬಲಾತ್ಕಾರಕ್ಕೊಳಗಾಗಿಲ್ಲ, ಅವರೆಲ್ಲ ಸಾಮಾನ್ಯವಾಗಿ ಹುಣ್ಣಿಮೆಯ ಸಮಯದಲ್ಲೇ ಕೊಲೆಯಾಗಿದ್ದಾರೆ. ಆತನಲ್ಲಿ ಸಾಕಷ್ಟು ಶಸ್ತ್ರವನ್ನು ಬಳಸುವ ಚಮತ್ಕಾರವಿದೆ, ಆತನಿಗೆ ಬಲಿಯಾದವರೆಲ್ಲರೂ ವೇಶ್ಯೆಯರು. ಎಲ್ಲರೂ ಸಾಮಾನ್ಯವಾಗಿ ಮಧ್ಯರಾತ್ರಿಯಿಂದ ಬೆಳಗಿನ ೫ ಗಂಟೆವರೆಗಿನ ಅವಧಿಯಲ್ಲಿ, ಅದೂ ಜನಭರಿತ ಪ್ರದೇಶದಿಂದ ಅರ್ಧ ಕಿಲೋಮೀಟರ್ ದೂರದಲ್ಲೇ ಕೊಲೆಯಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲರ ಕುತೂಹಲ ಕೆರಳಿಸಿರುವ ವಿಷಯವೆಂದರೆ ಆತ ಕೊಲೆಮಾಡಿದ ನಂತರ ಪೋಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಿ ಮಾಯವಾಗುತ್ತಿದ್ದುದು ಹೇಗೆ ಎನ್ನುವುದು. ಇದಕ್ಕೆ ಷೆರ್ಲಾಕ್ ಹೋಮ್ಸ್‌ನ ಸೃಷ್ಟಿಕರ್ತ ಸರ್ ಆರ್ಥರ್ ಕಾನನ್ ಡೋಯಲ್, "ಬಹುಶಃ ಆತ ಸ್ತ್ರೀ ವೇಷ ಧರಿಸಿ ಕೊಲೆಯಾದ ನಂತರ ತಪ್ಪಿಸಿಕೊಳ್ಳುತ್ತಿದ್ದ" ಎಂದು ಊಹೆ ಮಾಡಿದ್ದಾನೆ. ಆದರೆ ಈ ವಾದವನ್ನು ಸಮರ್ಥಿಸಲು ಹೆಚ್ಚಿನ ಆಧಾರಗಳಿಲ್ಲ.

*

ಕೆಲವು ದಿನಗಳ ಹಿಂದೆ ಕನ್ನಡ ವಾರಪತ್ರಿಕೆಯೊಂದನ್ನು ಹಾಗೆಯೇ ತಿರುವಿ ಹಾಕುತ್ತಿದ್ದೆ, ಅದರಲ್ಲಿ 'ಜ್ಯಾಕ್ ದಿ ರಿಪ್ಪರ್' ಅಥವಾ 'ಛಿದ್ರಕ ಜ್ಯಾಕ್' ಎಂಬ ಹೆಸರಿನ ವ್ಯಕ್ತಿ ವಿಕ್ಟೋರಿಯಾ ಮಹಾರಾಣಿಯ ಮೊಮ್ಮಗ ಆಲ್ಬರ್ಟ್ ವಿಕ್ಟರ್ ಕ್ರಿಶ್ಚಿಯನ್ ಎಡ್ವರ್ಡ್‌ನೇ ಆಗಿದ್ದನು ಎಂದು ಸಮರ್ಥಿಸುತ್ತಾ ಆತನ ಬಗ್ಗೆ ಲೇಖಕರು ಬಹಳಷ್ಟು ಕುತೂಹಲಕರ ವಿಷಯಗಳನ್ನು ಸಚಿತ್ರವಾಗಿ ವಿವರಿಸಿದ್ದರು. ಅವರು ೧೯೭೦ರಲ್ಲಿ 'ದಿ ಕ್ರಿಮಿನಾಲಜಿಸ್ಟ್' ಎಂಬ ವಾರ್ತಾಪತ್ರಿಕೆಯಲ್ಲಿ ಪ್ರಕಟವಾದ ಡಾ. ಥಾಮಸ್ ಸ್ಟೋವೆಲ್ ಅವರ ಲೇಖನವೊಂದನ್ನು ಆಧರಿಸಿ ಈ ವಾದವನ್ನು ಮಂಡಿಸಿದ್ದಾರೆ. ಆದರೆ ಅದಾದ ಮೂರು ವರ್ಷಗಳ ನಂತರ ೧೯೭೩ (ಆಗಸ್ಟ್) ರಲ್ಲಿ

'ರೀಡರ್ಸ್ ಡೈಜೆಸ್ಟ್' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಜೇಮ್ಸ್ ಸ್ಟೀವರ್ಟ್ ಗೋರ್ಡನ್ ಎಂಬುವರ ಲೇಖನದಲ್ಲಿ ಆತ ಯಾರೆಂಬುದು ಇಂದಿಗೂ ನಿಗೂಢ ರಹಸ್ಯವಾಗಿಯೇ ಉಳಿದಿದೆ ಎಂದು ಹೇಳಿದ್ದಾರೆ. ಹಾಗಾದರೆ ಇವರುಗಳಲ್ಲಿ ಯಾವುದು ನಿಜವಿರಬಹುದು ಎನ್ನುವ ತರ್ಕದಲ್ಲಿಯೇ ತಲೆ ಕೆಡಿಸಿಕೊಳ್ಳುತ್ತಿರುವಷ್ಟರಲ್ಲಿಯೇ ಆಂಗ್ಲ ಭಾಷಾ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ವರದಿಯೊಂದು ಮತ್ತೂ ಅಚ್ಚರಿಯ ವಿಷಯವೊಂದನ್ನು ಹೊತ್ತು ತಂದಿದೆ. ಅದೆಂದರೆ ಇದೀಗ 'ಛಿದ್ರಕ ಜ್ಯಾಕ್' ಎಂಬ ಅದೇ ಹೆಸರಿನ ಮತ್ತೊಬ್ಬ ವ್ಯಕ್ತಿ ಅವತರಿಸಿದ್ದಾನೆ ಎಂದು ವಿಜ್ಞಾನ, ಜ್ಞಾನದ ಬೆಳವಣಿಗೆಯ ಶಿಖರವನ್ನು ತಲುಪಿರುವ ಇಂದಿನ ಪರಿಸರದಲ್ಲೂ ಹಿಂದಿನಂತೆಯೇ ಪೋಲೀಸರ ಕಣ್ಣಿಗೆ ಮಣ್ಣೆರಚಿ ಅದೃಶ್ಯವಾಗಿರುವ ಈ 'ನವ ಜ್ಯಾಕ್' ಈಗಾಗಲೇ ನಡೆಸಿರುವ ಕೊಲೆಗಳ ಸಂಖ್ಯೆ ೧೨!

ಇಂದು ಬ್ರಿಟಿಶ್ ನಾಗರಿಕರಿಗೆ ಮತ್ತು ಅಲ್ಲಿನ ಜನಪ್ರಿಯ ಸಾಮೂಹಿಕ ಸಂಪರ್ಕ ಮಾಧ್ಯಮಗಳಿಗೆ ಈ ಯಾರ್ಕ್‌ಶೈರ್ ಹುಚ್ಚನ ರಕ್ತ ಹೆಪ್ಪುಗಟ್ಟಿಸುವಂತಹ ಕೊಲೆಗಳು ಹೆಚ್ಚು ಹೆಚ್ಚು ಕುತೂಹಲವನ್ನು ಭಯವನ್ನೂ ಹುಟ್ಟಿಸುತ್ತಿವೆ. ತನ್ನನ್ನು ತಾನು 'ಜಾಕ್ ದಿ ರಿಪ್ಪರ್' ಅಥವಾ 'ಛಿದ್ರಕ ಜಾಕ್' ಎಂದು ಕರೆದುಕೊಳ್ಳುವ ಈ ವ್ಯಕ್ತಿ ಕೇವಲ ನಾಲ್ಕೂವರೆ ವರ್ಷಗಳಲ್ಲಿಯೇ ನಡೆಸಿದ ಕೊಲೆಗಳ ಸಂಖ್ಯೆ ಒಂಬತ್ತು ದಶಕಗಳ ಹಿಂದಿನ ಅಸಲಿ ಛಿದ್ರಕ ಜ್ಯಾಕನ ಕೊಲೆಗಳ ಸಂಖ್ಯೆಯ ಎರಡರಷ್ಟು. ೧೯೭೫ರ ಅಕ್ಟೋಬರಿನಿಂದಲೇ ಪ್ರಾರಂಭವಾದ ಇವನ ಹತ್ಯಾಕಾಂಡ ಸರಣಿಗೆ ತುತ್ತಾದವರಲ್ಲಿ ಹೆಚ್ಚು ಜನ ವೇಶ್ಯೆಯರು. ಇದಲ್ಲದೆ ಇನ್ನೂ ಇತರ ನಾಲ್ಕು ಮಂದಿ ಮಹಿಳೆಯರ ಕೊಲೆಗಾಗಿ

ಆಕ್ರಮಣ ನಡೆಸಿದ್ದ. ಇಷ್ಟಾದರೂ ಇದುವರೆವಿಗೂ ಆತನ ಬಗ್ಗೆ ಯಾವ ಸುಳಿವೂ ದೊರೆತಿಲ್ಲ. ಆತ ಮಾಡಿದ ಪ್ರಥಮ ಕೊಲೆ ೧೯೭೫ರ ಅಕ್ಟೋಬರ್ ೩೦ ರಂದು, ಇತ್ತೀಚಿನ (೧೨ನೆಯ) ಕೊಲೆ ನಡೆದದ್ದು ಸೆಪ್ಟೆಂಬರ್ ೩, ೧೯೭೯ ರಂದು. ಇತ್ತೀಚೆಗೆ ಆ ವ್ಯಕ್ತಿಯೇ ಪೋಲೀಸ್ ಪತ್ತೇದಾರರಿಗೆ ಟೇಪ್ ಮಾಡಿದ ಸಂದೇಶವೊಂದನ್ನು ಕಳಿಸಿರುವುದು ಈ ಪ್ರಕರಣಕ್ಕೆ ಮತ್ತೊಂದು ಕುತೂಹಲಕಾರಿ ತಿರುವು ಕೊಟ್ಟಿದೆ.

ಅನಂತರ ಪೋಲೀಸ್ ಅಧಿಕಾರಿಗಳು ವ್ಯಾನ್ ಒಂದರಲ್ಲಿ ಕೊಲೆಗಾರನ ಧ್ವನಿಮುದ್ರಿಕೆಯನ್ನು ಬಿತ್ತರಿಸುತ್ತಾ ಎಲ್ಲಿಯಾದರೂ ಯಾರಾದರೂ ಆ ಧ್ವನಿಯನ್ನು ಗುರುತಿಸುತ್ತಾರೆಯೋ ಎಂದು ಪರೀಕ್ಷಿಸಿದರು. ಆದರೆ ಅದು ಪ್ರಯೋಜನವಾಗಲಿಲ್ಲ.

ಇತ್ತೀಚೆಗೆ ಈ ಹಂತಕನ ಬೇಟೆಗಾಗಿ ಮೈಯೆಲ್ಲಾ ಕಣ್ಣಾಗಿ ಕಾಯುತ್ತಿರುವ ಪ್ರದೇಶವೆಂದರೆ ವಿಯರ್ ಸೈಡ್ ಜಿಲ್ಲೆ. ಏಕೆಂದರೆ ಈ ವರ್ಷದ ಆದಿಭಾಗದಲ್ಲಿ ಆತ ಟೇಪ್ ಮೂಲಕ ಪೋಲೀಸ್‌ರಿಗೆ ಕಳಿಸಿದ ಸಂದೇಶದಲ್ಲಿ ಮ್ಯಾಂಚೆಸ್ಟರ್ ಪ್ರದೇಶದಲ್ಲಿ ಮತ್ತೆ ಕಾಣಿಸಿಕೊಳ್ಳುವುದಾಗಿ ಎಚ್ಚರಿಕೆ ನೀಡಿದ್ದ.



"ನಿಮ್ಮ ಹತ್ರ ಏನೂ ಇಲ್ಲವೇ,... ಹಾಗಾದ್ರೆ ಬನ್ನಿ ನನ್ನ ಜೊತೆಗೆ."

ಆದ್ದರಿಂದ ಸ್ಥಳೀಯ ಪೋಲೀಸರು ಕತ್ತಲೆಯಾದನಂತರ ರಸ್ತೆಯಲ್ಲಿ ತಿರುಗಾಡುತ್ತಾ, ಗಿರಾಕಿಗಳ ಕಾರನ್ನು ಮತ್ತು ವೇಶ್ಯೆಯರನ್ನು ಎಚ್ಚರಿಸಿದ್ದಾರೆ.

ಈ ಪ್ರಕರಣದ ತನಿಖೆ ನಡೆಸುತ್ತಿರುವ ಪೋಲೀಸ್ ಮುಖ್ಯಾಧಿಕಾರಿ ಜಾರ್ಜ್ ಓಲ್ಡ್‌ಫೀಲ್ಡ್ ಮತ್ತು ಈ ಹಂತಕನ ನಡುವೆ ಈಗ ಪರಸ್ಪರ ವೈಯಕ್ತಿಕ ಪಣಾಪಣಿ ಉಂಟಾಗಿದೆ. ಪೋಲೀಸ್ ಅಧಿಕಾರಿಯನ್ನು ಅಣಕಿಸುವ ಉದ್ದೇಶದಿಂದಲೇ ಆ ಹಂತಕ ತನ್ನ ಧ್ವನಿಮುದ್ರಿತ ಟೇಪನ್ನು ಅವರಿಗೆ ಕಳಿಸಿದ್ದಾರೆ. ಆದರೆ ಹೀಗೆ ತನ್ನ ಧ್ವನಿಮುದ್ರಿತ ಸಂದೇಶ ಕಳಿಸುವಲ್ಲಿ ಒಂದು ತಪ್ಪು ಮಾಡಿದ್ದಾರೆ. ಅದೆಂದರೆ ನಿರ್ದಿಷ್ಟ ಪ್ರದೇಶವೊಂದರಲ್ಲಿ ಆತ ಕಾರ್ಯ ನಿರತನಾಗಿದ್ದಾಗ ಸಮವಸ್ತ್ರ ಧರಿಸಿದ್ದ ಪೋಲೀಸ್ ಅಧಿಕಾರಿಗಳಿಗೆ ಇನ್ನೇನು ಸಿಕ್ಕಿ ಬೀಳಬೇಕು ಎನ್ನುವಂತಿತ್ತು ಪ್ರಸಂಗ ಎಂದು ಆತನೇ ಒಪ್ಪಿಕೊಂಡಿರುವುದು. ಐವತ್ತರ ಅಂಚಿನಲ್ಲಿರುವ ತುಸು ಸ್ಥೂಲ ದೇಹಿ ಎನಿಸುವ ಜಾರ್ಜ್ ಓಲ್ಡ್‌ಫೀಲ್ಡ್ ಹೆಚ್ಚು ಧೂಮಪಾನ ಮಾಡುತ್ತಾನೆ ಮತ್ತು ಕ್ರಿಕೆಟ್ ಆಟವನ್ನು ವೀಕ್ಷಿಸುತ್ತಾ ವಿಶ್ರಾಂತಿ ತೆಗೆದುಕೊಳ್ಳುತ್ತಾನೆ. ಆತ ಕೆಲಸದ ದಿನಗಳಲ್ಲಿ ದಿನವೊಂದಕ್ಕೆ ಹದಿನೈದುಗಂಟೆಗಳವರೆಗೂ ಜ್ಯಾಕನ ಪ್ರಕರಣದಲ್ಲೇ ಮುಳುಗಿಕೊಂಡಿರುತ್ತಾನೆ. ಇದುವರೆಗೆ ಆತನಿಗಿದ್ದ ಮುಖ್ಯ ಸಮಸ್ಯೆಯೆಂದರೆ ಜನರಿಂದ ಸುದ್ದಿ ಸಂಗ್ರಹಿಸುವುದೇ ಆಗಿತ್ತು. ಏಕೆಂದರೆ ಅನೇಕರು ವೇಶ್ಯೆಯರ ಕೊಲೆ ಮೊಕದ್ದಮೆಯಲ್ಲಿ ಸಿಕ್ಕಿಹಾಕಿಕೊಳ್ಳುವುದಕ್ಕೆ ಹಿಂಜರಿಯುತ್ತಾರೆ. ಆದರೆ ಇತ್ತೀಚೆಗೆ ಪರಿಸ್ಥಿತಿ ಬದಲಾಗಿದೆ. ಜನರು ತಾವಾಗಿಯೇ ಹಂತಕನ ಬಗ್ಗೆ ತಮಗೆ ತಿಳಿದಷ್ಟು ಮಾಹಿತಿಗಳನ್ನು ಕೊಡುತ್ತಿದ್ದಾರೆ.

ಇದು ಇಂದು ಇಡೀ ಬ್ರಿಟನ್ನಿನಲ್ಲಿಯೇ ಅತ್ಯಂತ ಹೆಚ್ಚು ಖರ್ಚು ತಗಲಿರುವ ಕೊಲೆಯ ವಿಚಾರಣೆ. ಅದರಲ್ಲಿ ಮೊದಲು ಬಾರಿಗೆ ದೊರೆತ ಮಹತ್ವದ ಸುಳಿವು ಎಂದರೆ ಹಂತಕನೇ ಕಳಿಸಿರುವ ಟೇಪ್. ಅನೇಕ ತಜ್ಞರು ಟೇಪಿನಲ್ಲಿರುವ ಧ್ವನಿಯನ್ನು ಸೂಕ್ಷ್ಮವಾಗಿ ಆಲಿಸಿ, ಆ ವ್ಯಕ್ತಿಯ ಸ್ವರ ಉಚ್ಚಾರಣವನ್ನು ಅಧ್ಯಯನ ಮಾಡಿ, ಆ ವ್ಯಕ್ತಿಯು ಉತ್ತರದ

ವಿಯರ್ ಸೈಡ್ ಜಿಲ್ಲೆಯಲ್ಲಿ ಜನಿಸಿದವನು ಮತ್ತು ಸ್ವಲ್ಪ ಕಾಲ ಸಂಡರ್‌ಲ್ಯಾಂಡ್ ನಗರದಲ್ಲಿ ಜೀವಿಸಿದ್ದಿರಬೇಕು ಎಂದು ನಿರ್ಧಾರಕ್ಕೆ ಬಂದಿದ್ದಾರೆ.

ಈ ಭಯಾನಕ ಹತ್ಯಾಕಾಂಡವು, ನಿರ್ದಿಷ್ಟವಾಗಿ ಬ್ರಾಡ್‌ಫೋರ್ಡ್ ಮತ್ತು ಲೀಡ್ಸ್ ಮುಂತಾದ ಉತ್ತರದ ನಗರಗಳಲ್ಲಿ ಒಂಭತ್ತು ದಶಕಗಳ ಹಿಂದೆ ಆಗಿಹೋದ 'ಛಿದ್ರಕ ಜ್ಯಾಕ್'ನ ಕೃತ್ಯಗಳನ್ನೇ ಹೋಲುತ್ತದೆ. ಈ ವ್ಯಕ್ತಿಗೆ ಬಲಿಯಾದ ಎಲ್ಲರ ತಲೆಗೆ ಭಾರಿ ಪೆಟ್ಟು ಬಿದ್ದಿದೆ. ಅವರನ್ನು ತುಂಡು ತುಂಡಾಗಿ ಕತ್ತರಿಸಲಾಗಿದೆ. ಈ ಹಂತಕನನ್ನು ಹಿಡಿಯಲು ಪೋಲೀಸರು ಬಹಳಷ್ಟು ಸಾಹಸಪಟ್ಟು ಕೇವಲ ಕೆಲವೇ ವಿಷಯಗಳನ್ನು ಕಂಡುಹಿಡಿದಿದ್ದಾರೆ. ಏಕೆಂದರೆ ಆ ಹಂತಕನು ೧೨ ಕೊಲೆಗಳನ್ನು, ಮಾಡಿ ಮತ್ತು ನಾಲ್ಕು ಮಂದಿಯ ಮೇಲೆ, ಕ್ರೂರ ಆಕ್ರಮಣ ನಡೆಸಿ ಎಲ್ಲಿಯೂ, ಯಾವ ಪ್ರಕರಣದಲ್ಲಿಯೂ, ಯಾವುದೇ ರೀತಿಯ ಸುಳಿವು ಅಥವಾ ಗುರುತನ್ನು ಬಿಟ್ಟುಹೋಗಿಲ್ಲ. ಆದರೆ ಎಷ್ಟೇ ಎಚ್ಚರಿಕೆ ವಹಿಸಿದ್ದರೂ ಆ ಕೊಲೆಗಾರ ಪೋಲೀಸರಿಗೆ ಸಹಾಯವಾಗುವಂತಹ ಒಂದೆರಡು ಸಣ್ಣ ಪುಟ್ಟ ತಪ್ಪುಗಳನ್ನು ಮಾಡಿದ್ದಾನೆ. ಉದಾಹರಣೆಗೆ, ಆ ವ್ಯಕ್ತಿಯ ರಕ್ತದ ಗುಂಪು ಅಪರೂಪವಾದದ್ದು ಎಂದು ಪೋಲೀಸರಿಗೆ ಗೊತ್ತಾಗಿದೆ. ಅವನಿಂದ ಬಂದ ಪತ್ರವೊಂದಕ್ಕೆ ಅಂಟಿಸಲಾಗಿದ್ದ ಸ್ಟಾಂಪ್ ಹಿಂಭಾಗದಲ್ಲಿ ಆತನ ಜೊಲ್ಲಿನ ಸ್ಯಾಂಪಲ್ಲನ್ನು ಪರೀಕ್ಷಿಸುವಲ್ಲಿ ಪೋಲೀಸರು ಯಶಸ್ವಿಯಾಗಿದ್ದಾರೆ. ಅಲ್ಲದೆ ಅವರ ಬಳಿ ಆತನ ಬೂಟಿನ ಗುರುತು ಸಿಕ್ಕು ಅದರಿಂದ ಆತನ ಆಕಾರ, ವಯಸ್ಸು ಮತ್ತು ಅದುವರೆಗೆ ಆತ ಮಾಡುತ್ತಿದ್ದಿರಬಹುದಾದ ಕೆಲಸ ಮುಂತಾದವನ್ನು ಊಹಿಸಿ ಪಟ್ಟಿ ಮಾಡಿದ್ದಾರೆ. ಪತ್ತೇದಾರರು, "ಹಂತಕನು ತುಂಬಾ ಅಸೂಯೆಯುಳ್ಳವನು, ಬುದ್ಧಿವಂತ, ಆದರೆ ವಿದ್ಯಾವಂತನಲ್ಲ" ಎಂದು ಕಂಡುಹಿಡಿದಿದ್ದಾರೆ.


ಹಂತಕನು ತನ್ನ ಕೃತ್ಯಗಳ ಸರಣಿಯನ್ನು ಪ್ರಾರಂಭಿಸಿದುದು ಕೇವಲ ನಾಲ್ಕೂವರೆ ವರ್ಷಗಳ ಹಿಂದೆ, ೧೯೭೫ರ ಬೇಸಿಗೆಯಲ್ಲಿ. ನಂತರ ೫ ವಾರಗಳ ಅವಧಿಯಲ್ಲಿ ಇಬ್ಬರು ಹೆಂಗಸರನ್ನು ಕೊಲೆಮಾಡಿದ್ದ. ಆದರೆ ಇನ್ನು ಎರಡು ಬೇರೆ ಬೇರೆ ನಗರಗಳಲ್ಲಿ ಮತ್ತೆ ಮೂರು ಕೊಲೆಗಳನ್ನು ಮಾಡಿದಾಗಲೇ ಪೋಲೀಸರು ಈ ಎಲ್ಲ ಹತ್ಯೆಗಳ ಹಿಂದೆ ಒಂದೇ ವ್ಯಕ್ತಿಯ ಕೈವಾಡ ಇರುವದನ್ನು ಗುರುತಿಸಿದ್ದು.

ಈಗ ಒಟ್ಟು ನಾಲ್ಕು ಪೋಲೀಸ್ ದಳಗಳು ಈ ಹಂತಕನ ಶೋಧದಲ್ಲಿ ಅವಿರತವಾಗಿ ನಿರತವಾಗಿವೆ. ಅದರಲ್ಲಿ ೫೦೦ ಜನ ಸಮವಸ್ತ್ರಧಾರಿ ಹಾಗೂ ಮಫ್ತಿಯಲ್ಲಿರುವ ಪೋಲೀಸ್ ಅಧಿಕಾರಿಗಳು ಹಗಲೂ ರಾತ್ರಿ ಕೆಲಸ ಮಾಡುತ್ತಿದ್ದಾರೆ. ಹೀಗೆ ಎಲ್ಲ ರೀತಿಯಿಂದ ಆ ಹಂತಕನ ಶೋಧಕ್ಕಾಗಿಯೇ ಖರ್ಚು ಮಾಡಲಾಗುತ್ತಿರುವ ಒಟ್ಟು ವೆಚ್ಚ ೬ ಕೋಟಿ ರೂಪಾಯಿಗಳಿಗೂ ಹೆಚ್ಚು! ಇವರು ಈಗಾಗಲೇ ಎರಡೂವರೆ ಲಕ್ಷ ಗಂಟೆಗಳಷ್ಟು ಕಾಲ ಈ ಕೇಸಿನ ಬಗ್ಗೆಯೇ ವ್ಯಯಿಸಿದ್ದಾರೆ. ೨೦,೦೦೦ಕ್ಕೂ ಹೆಚ್ಚು ಜನರ ಹೇಳಿಕೆಗಳನ್ನು ಪಡೆದುಕೊಂಡಿದ್ದಾರೆ ಅಲ್ಲದೆ ೧೫೦,೦೦೦ ಜನರನ್ನು ಶೋಧಿಸಿದ್ದಾರೆ.

ಇತ್ತೀಚೆಗೆ ಏರ್ಪಡಿಸಲಾಗಿದ್ದ ಪತ್ರಿಕಾ ಗೋಷ್ಠಿಯೊಂದರಲ್ಲಿ ಪತ್ರಕರ್ತನೊಬ್ಬ ಪೋಲೀಸ್ ಮುಖ್ಯಾಧಿಕಾರಿಯೊಬ್ಬರನ್ನು, "ಈ ಕೇಸಿನ ಬಗ್ಗೆ ನೀವು ಸ್ಕಾಟ್ಲೆಂಡ್‌ಯಾರ್ಡಿನ ನೆರವು ಪಡೆಯಬಯಸುತ್ತಿಲ್ಲವೇ?" ಎಂದು ಪ್ರಶ್ನಿಸಿದಾಗ, "ಅವರಿಗೆ ಇಷ್ಟು ದಿನವಾದರೂ, ಛಿದ್ರಕ ಜ್ಯಾಕನನ್ನೇ ಹಿಡಿಯಲು ಆಗಲಿಲ್ಲ," ಎಂದರು.

'ಜ್ಯಾಕ್ ದಿ ರಿಪ್ಪರ್' ತೊಂಬತ್ತು ವರ್ಷಗಳಿಂದ ಒಡೆಯಲಾಗದ ಒಗಟಾಗಿ ಕಡೆಗೆ ಅಪರಾಧದ ಇತಿಹಾಸದಲ್ಲೇ ನಿಗೂಢ ದುಂತಕತೆಯಾಗಿ ಹೋದ.

✡



ಅಮಾವಾಸ್ಯೆ

ತಿಂಗಳಿಗೊಮ್ಮೆ ಬಂದು ಬಂದು ತಿಂಗಳಾಗದ
ಅಮಾವಾಸ್ಯೆ : ಕತ್ತಲೋ ಬರಿ ಕತ್ತಲು ಸುತ್ತಲೆಲ್ಲ!
ಬಟ್ಟ ಬಯಲಲಿ ನಿಂತು ರಾತ್ರಿಯನು ಕಂಡಾಗ–ಕಣ್ಣಾರೆ
ಬೆಳಕು ಎಂಬುದೇ ಮಿಥ್ಯವೆನಿಸುವುದು.
ನಮಗೆ ಇರುವುದೇ ಅಮಾವಾಸ್ಯೆ–ಹಗಲು ಕೂಡಾ ಕತ್ತಲು!
ಏತಕ್ಕೆ ಬೇಕು ಬೆಳಕು? ಕತ್ತಲಲ್ಲಿ ಕೂಡಾ ಕಾಣುವದಲ್ಲ
ಎಂಬ ತಾಳ್ಮೆ ತಮ್ಮಟೆ ಹಿಡಿದು ಸಾಗುವುದು ಹಾದಿ
ಎಂಬುದೇ ನಮ್ಮ ವಾದ-ವೇದ ಮೂಲ ಕತ್ತಲು!
ಸಾವು ಬಿತ್ತಿ ಬೆಳೆದುದೆಲ್ಲ ಅಮಾವಾಸ್ಯೆ ಕತ್ತಲು.
ಬೆಳದಿಂಗಳೆಂಬುದೇ ಬರೀ ಕತ್ತಲೆಯ ಅಂಚು ಸೆರಗು
ಮಾಯೆ. ಮೋಸ, ಲೆಕ್ಕಾಚಾರ, ಬಡ್ಡಿ–ಗಿಡ್ಡಿ
ದುಡ್ಡು–ದೂಡಾ–ತಂಗಿ–ಗಿಂಗಿ–ಎಲ್ಲರೂ
ನಿಸ್ಸಂಗಿಯಾಗುವರು–ಬೆಳದಿಂಗಳಿನ ಕತ್ತಲಲ್ಲಿ!
ಮುಂಗಾಳು–ಹಿಂಗಾಳು ಎಲ್ಲಾ ಕತ್ತಲೋ ಕತ್ತಲು.
ಏಕೋ ಏನೋ? ಕಾಮಧೇನು ಕೂಡಾ
ಬರಡಾಗುವುದು ನಮ್ಮ ನುಂಗಲಾರದ ದುಸ್ಸಂಗಕ್ಕೆ
ತಿಂದು, ತೇಗಿ – ಕಣ್ಣು ಮುಚ್ಚಿದ ಜನವೆಲ್ಲಾ–
ಸ್ವರ್ಗವಿದೇ ಎಂದರೂ – ಉಳಿದಿದೆ ಮೂರು ಗೇಣು!
ಅವರಳತೆ ಅಪರಿಮಿತ – ಬೆಳದಿಂಗಳು ಕಾಳಿಗೂ
ಇರುವ ಅಂತರ – ಬರಿ – ಗೇಣು ಅವರಳತೆಯು?
ಹಾಕಿದರು – ಎಲ್ಲೆಲ್ಲೂ ಬಟ್ಟ ಬಯಲು – ಬರಿ ಬಯಲು.
ಮನುಕುಲದ ಕೂಗಾಟ - ಇತಿಹಾಸ – ಕತ್ತಲೆಯ ಹಾಸ.
ನಿತ್ಯವಿರುವ ಸಮಸ್ಯೆ – ನಾಟಕಕ್ಕೆ ಕಾಳೀ ಪ್ರಕಾಶ!
ಬೆಳಕೆಂಬುದೇ ಹುಚ್ಚು ಮಾಯೆಯು – ಕಾಣದಾಟ
ಕಂಡರೂ ಕಾಣದಂತಿರಬೇಕು – ಕಣ್ಣು ಮುಚ್ಚಿ
ಆಗ ನಿಮಗೂ ನಮಗೂ – ಕೇವಲ ಅಮಾವಾಸ್ಯೆ!
ಸತ್ತವರು ಹುಟ್ಟುವರೆಂಬುದು ನಮ್ಮ ನಂಬುಗೆ
ಇದ್ದವರೇ ಸತ್ತಿರುವಾಗ – ಹುಟ್ಟುವ ಬಯಕೆಯು?
ಯಾರಿಗೆ? ಏತಕ್ಕೆ? ಎಂಬುದೇ ಗಾಢ ಕತ್ತಲು
ನಿತ್ಯ ನಿತ್ಯ ನಮ್ಮ ಕತ್ತಲು ಕಪ್ಪಾಗುತಿಹುದು
ಹೆಪ್ಪುಗಟ್ಟುತಿಹುದು; ಸರಿ – ಪಾಪವೆಂಬುದೇ ಮೋಕ್ಷ!
ಇನ್ನು ಪಂಚಾಂಗ ತುಂಬೆಲ್ಲ ಬರಿಯಬೇಕು ಅಮಾವಾಸ್ಯೆ!

— ಬಿ. ಆರ್. ನಾಡಿಗ್



'ಅವುಗಳನ್ನು ನಾನು ನಂಬುವುದಿಲ್ಲ. ಆದರೆ ಅವುಗಳಿಗೆ ಹೆದರುತ್ತೇನೆ' ದೆವ್ವಗಳ ಕುರಿತಂತೆ ಈ ಇಂಗ್ಲೀಷ್ ಉಕ್ತಿ ವರ್ಷಗಳಿಂದ ನನ್ನನ್ನು ಅಣಕಿಸುತ್ತ ಉಳಿದಿದೆ.

ಬಾಲ್ಯದಲ್ಲಿ ಕೇಳಿದ ಅಜ್ಜಿಯ ಕಥೆಗಳಲ್ಲಿ ದೆವ್ವ ಇದ್ದೇ ಇರುತ್ತಿತ್ತು. ಅದು ಕೋಟೆಯೊಂದರಲ್ಲಿ ರಾಜಕುಮಾರಿಯನ್ನು ಬಚ್ಚಿಟ್ಟದ್ದು, ಅದನ್ನು ಮಾರ್ಗವಾಗಿ ಹೊರಟಿದ್ದ ರಾಜಕುಮಾರನಿಗೆ ನೆಲ ಮುಗಿಲು ಏಕಾಕಾರವಾಗಿ ತೋರಿದ್ದು, ಅರಸನೊಬ್ಬನ ಮಗನಿಗೆ ಔಷಧಿಯಾಗಿ ಗಿಡವನ್ನು ಬೇರು ಸಹಿತ ಕಿತ್ತು ತಂದದ್ದು—ಈ ಸಾಹಸಗಳು ನಮ್ಮ ಬಾಲಬುದ್ಧಿಗೆ ಅಸಾಧಾರಣ ಅನಿಸಿದ್ದವು. ಎಷ್ಟೋ ಪ್ರಸಂಗಗಳಲ್ಲಿ ಅಜ್ಜಿಯ ಕಥೆ ಮುಗಿದರೂ ನಮ್ಮ ತೆರೆದ ಬಾಯಿ ಮುಚ್ಚುತ್ತಿರಲಿಲ್ಲ. ಇಂದು ನನ್ನ ಅಜ್ಜಿ ಬದುಕಿಲ್ಲ. ಅವಳ ಚಹರೆ ನನ್ನ ಮನದಲ್ಲಿ ಸ್ಪಷ್ಟವಾಗಿ ಉಳಿದಿಲ್ಲ. ಆದರೆ ಅವಳು ಹೇಳುತ್ತಿದ್ದ ಕಥೆಗಳಲ್ಲಿಯ ದೆವ್ವ ಸುಪರಿಚಿತವಾಗಿದೆ. ಅದೆಲ್ಲಿಯಾದರೂ ಅಕಸ್ಮಾತ್ತಾಗಿ ಎದುರಾದರೆ ಅದನ್ನು ಥಟ್ಟನೆ ಗುರುತಿಸಬಲ್ಲೆ. ಹಾಂ, ಅದನ್ನು ಮರೆತಿದ್ದೇನೆ ಎಂದು ಹೇಳಲೂ ನನಗೆ ಭೀತಿಯಾಗುತ್ತದೆ.

ಅಲ್ಲಾವುದ್ದೀನನ ಮಾಯಾದೀಪದ ಕತೆ ಕೇಳಿದ್ದೀರಿ ತಾನೆ? ದೀಪಸ್ಥ ರಾಕ್ಷಸ ಅಲ್ಲಿ ಗೈದ ಸೇವೆ ಒಂದೆರಡು ಬಗೆಯದಲ್ಲ. ಬಾಲ್ಯದಲ್ಲಿ ಆತ ಎದುರಾಗಿದ್ದರೆ ಅವನನ್ನು ಏನು ಕೇಳುತ್ತಿದ್ದೆನೊ ದೇವರೇ ಬಲ್ಲ. ಆದರೆ ಈಗೇನಾದರೂ ಆತ ಎದುರಾದರೆ ಮುಖ್ಯವಾಗಿ ಮೂರು ವಸ್ತುಗಳನ್ನು ಕೇಳ ಬಯಸುತ್ತೇನೆ: ಸಕ್ಕರೆ, ಸೀಮೆ ಎಣ್ಣೆ, ಹಾಗೂ ಸಿಮೆಂಟ್. ಅನೇಕ ಪ್ರಬುದ್ಧ ಜನಗಳಂತೆ ಇಂದಿಗೂ ಬೇತಾಳ ಕತೆಗಳು ಅಂದರೆ ನಾನು ಬಿದ್ದು ಸಾಯುತ್ತೇನೆ. ಹಿಡಿದ ಕಾರ್ಯವನ್ನು ನೆರವೇರಿಸದೆ ಇರಲಾರೆನೆಂದು ಪಟತೊಟ್ಟ ತ್ರಿವಿಕ್ರಮನು ಮತ್ತೆ ಮರದ ಬಳಿಗೆ ಬಂದು ಕೊಂಬೆಯಲ್ಲಿ ನೇತಾಡುತ್ತಿದ್ದ ಶವವನ್ನು ಕೆಳಗಿಳಿಸಿ ಮೌನವಾಗಿ ಸ್ಮಶಾನದ ಕಡೆಗೆ ನಡೆಯತೊಡಗಿದ. ಆಗ ಶವದೊಳಗೆ ಹುದುಗಿದ್ದ ಬೇತಾಳ ಮಾತನಾಡತೊಡಗಿತು...ಬೇತಾಳ ಕಥೆಯೊಂದನ್ನು ನಿರೂಪಿಸಿ ಒಂದು ಸಮಸ್ಯೆಯನ್ನು ತ್ರಿವಿಕ್ರಮನ ಮುಂದಿಡುತ್ತಿದ್ದಂತೆ ಸರಿಯ ಉತ್ತರದಿಂದ ಬೇತಾಳ ಮತ್ತೆ ಶವದೊಡನೆ ಸ್ಮಶಾನದ ಅಂಚಿನ ಮುತ್ತುಗದ ಮರಕ್ಕೆ ಹಾರತೊಡಗುತ್ತದೆ. ಹಾಂ. ಮುಂದಿನ ತಿಂಗಳವರೆಗೂ ತ್ರಿವಿಕ್ರಮನಿಗೂ ನಮ್ಮಂತೆ

ಅಂಜುಗುಳಿಗಳೇ ಇದನ್ನೋದಬೇಡಿ

ವಿ. ಎ. ಜೋಶಿ

ಅವನ ಓದುಗರಿಗೂ ವಿರಾಮ!

ದೆವ್ವಗಳನ್ನು ಕುರಿತು ಪ್ರೊ. ಎ. ಎನ್. ಮೂರ್ತಿರಾವ್ ರವರು ಹರಟೆಯನ್ನು ಬರೆದಿದ್ದಾರೆ. ಅದರಲ್ಲಿಯ ಒಂದೆರಡು ಸನ್ನಿವೇಶಗಳು ಇಲ್ಲಿ ಉಲ್ಲೇಖನೀಯ. ಸಂದೇಹವಾದಿಯೊಬ್ಬ, "ನಾನು ದೆವ್ವಗಳನ್ನು ನಂಬಬೇಕಾದರೆ ಅವು ಧೈರ್ಯವಾಗಿ ನನ್ನೆದುರು ಬಂದು ನಿಲ್ಲಲಿ," ಎಂದನಂತೆ. ಕೂಡಲೆ ಅಶರೀರವಾಣಿಯೊಂದು, "ನಿನ್ನಂಥವನು ನಂಬುವುದರಿಂದ ನಮಗೆ ಆಗಬೇಕಾದುದೇನು?" ಎಂದು ಉತ್ತರ ಕೊಟ್ಟಿತು.

ಹಾಂ ಈ ರೀತಿ ಹೇಳುವ ಧಾರ್ಷ್ಟ್ಯವನ್ನು ಮಾತ್ರ ನಾನು ಸರ್ವಥಾ ತೋರಲಾರೆ. ಅಶರೀರ ವಾಣಿಯ ಭೀತಿಯಿಂದಲ್ಲ, ದೆವ್ವ ತನ್ನ ನಿಜ ರೂಪದಲ್ಲೆ ನನ್ನೆದುರು ನಿಂತರೆ...! ಎಂಬ ಘೋರ ವಿಚಾರದಿಂದ. ಈ ವಿಚಾರಕ್ಕೆ ನಾನಿಷ್ಟು ಹೆದರುತ್ತಿರುವಾಗ, ಇದರ ಹಿಂದಿನ ಸತ್ಯಕ್ಕೆ ಇನ್ನೆಷ್ಟು ಹೆದರುತ್ತಿರಬೇಕೆಂದು ನೀವೇ ಊಹಿಸಿ. ನನ್ನ (ಅ)ಧೈರ್ಯವನ್ನು ಪರೀಕ್ಷಿಸಲೆಂದು ಭೂತವೇನಾದರೂ ನನ್ನೆದುರು ಪ್ರತ್ಯಕ್ಷವಾಯಿತೋ, ಆಯ್ತು, ನನಗೆ ಹೃದಯಾಘಾತವಾಗುವುದು ಗ್ಯಾರಂಟಿ. ನೀವು ಆ ಸುದ್ದಿಯನ್ನು ಜನ ಪತ್ರಿಕೆಯಲ್ಲಿ ಓದುವುದೂ ಅಷ್ಟೆ ಗ್ಯಾರಂಟಿ. ಯಾಕೆಂದೀರಾ? ಜನಪತ್ರಿಕೆಯ ಸ್ಥಳೀಯ ಸುದ್ದಿಗಾರರು ನನ್ನ ಹಳೆಯ ಗೆಳೆಯರು.

ಪ್ರೊ. ಎ. ಎನ್. ಮೂರ್ತಿರಾಯರು ನಿರೂಪಿಸಿದ ಮದ್ರಾಸಿನ ಮರೀನಾ ಬೀಚಿನಲ್ಲಿ ನಡೆದ ಇನ್ನೊಂದು ಘಟನೆ ಇನ್ನಷ್ಟು ರೋಮಾಂಚಕಾರಿಯಾಗಿದೆ. ಫ್ರೀಮನ್ ಎಂಬ ವರ್ತಕ ಸೂರ್ಯಾಸ್ತದ ನಂತರ ಬೀಚಿನಲ್ಲಿ ಬಂದಿದ್ದ. ಜನಜಂಗುಳಿ ಅಲ್ಲಿಂದ ಚದುರಿತ್ತು. ಸ್ವಲ್ಪ ಹೊತ್ತು ಕಳೆಯುವುದರೊಳಗೆ ಮತ್ತೊಬ್ಬ ಯಾರೋ ತನ್ನ ಕಡೆಗೆ ನಡೆದು ಬಂದದ್ದು ಕಾಣಿಸಿತು. ಆ ವ್ಯಕ್ತಿ ಹತ್ತಿರ ಬಂದು, ಫ್ರೀಮನ್ನನಿಗೆ 'ಗುಡ್ ಈವನಿಂಗ್' ಎಂದು ಹೇಳಿ ಹತ್ತಿರ ಕುಳಿತುಕೊಂಡ. ಅಪರಿಚಿತನು ಹೀಗೆ ಸಲಿಗೆಯಿಂದ ಅಕ್ಕಿಯೇ ಕುಳಿತದ್ದು ಫ್ರೀಮನ್ನಿಗೆ ಹಿತವಾಗದಿದ್ದರೂ ಮರ್ಯಾದೆಗಾಗಿ ಅವನೊಡನೆ ಮಾತಿಗೆ ತೊಡಗಿದ. ಸ್ವಲ್ಪ ಹೊತ್ತು ಲೋಕಾಭಿರಾಮವಾದ ಮಾತು ನಡೆದ ಮೇಲೆ ಆ ಅಪರಿಚಿತ ತನ್ನ ಚರಿತ್ರೆಯನ್ನು ಹೇಳಿದ: "ನಾನು ಮದ್ರಾಸಿಗೆ ಬಂದದ್ದು ಮೂವತ್ತು ವರ್ಷಗಳ ಕೆಳಗೆ. ಹೆಂಡತಿಯೊಡನೆ ಬಂದು ಇಲ್ಲೇ ಸಂಸಾರ ಹೂಡಿದೆ. ಒಂದೆರಡು ವರ್ಷ ಸುಖವಾಗಿಯೇ ಇದ್ದೆವು. ನಂತರ ನನ್ನ ಹೆಂಡತಿ ಯಾವನೋ ಯುವಕನೊಡನೆ ಸ್ನೇಹ ಬೆಳೆಸಿದಳು. ನನಗೆ

ಸ್ವಲ್ಪ ಸಂಶಯ ಹುಟ್ಟಿದ್ದು ಆ ಯುವಕನಿಗೆ ಗೊತ್ತಾಯಿತು. ಆತ ಹೊಂಚು ಹಾಯುತ್ತಿದ್ದು ಒಂದು ದಿನ ನಾನು ಬೀಚಿನಲ್ಲಿ ಹೋಗುತ್ತಿದ್ದಾಗ ನನ್ನನ್ನು ಕೊಂದು ಇಗೋ ಈ ಜಾಗದಲ್ಲೇ ಹೂಳಿದ."

ಈ ವರೆಗೆ ಕತ್ತು ಬಗ್ಗಿಸಿ ಕಥೆ ಕೇಳುತ್ತಿದ್ದ ಫ್ರೀಮನ್ 'ನನ್ನನ್ನು ಕೊಂದು ಇಲ್ಲೇ ಹೂಳಿದ' ಎಂಬ ಮಾತನ್ನು ಕೇಳಿದಾಗ ಚಕಿತನಾಗಿ ಕತ್ತೆತ್ತಿ ನೋಡಿದರೆ ಆ ಅಪರಿಚಿತ ಅದೃಶ್ಯನಾಗಿದ್ದ!

ನಾವು ಮನುಷ್ಯರು ದೆವ್ವಗಳಲ್ಲಿ ಹಲವು ಪ್ರಕಾರಗಳನ್ನು ಕಲ್ಪಿಸಿದ್ದೇವಷ್ಟೆ. ಕೊಳ್ಳಿದೆವ್ವ ಸ್ಮಶಾನದಲ್ಲಿದ್ದು ಅರ್ಧ ಸುಟ್ಟ ಕಟ್ಟಿಗೆಗಳನ್ನು ಹಿಡಿದುಕೊಂಡು ತಿರುಗುತ್ತವಂತೆ ಚಲಿಸುವ ಕೊಳ್ಳಿಯೇ ಅವರ ಟ್ರೇಡ್‌ಮಾರ್ಕ್ ಇನ್ನು ಅನಾಥ ಪ್ರೇತಗಳು ಕೆಲವಿರುತ್ತವೆ, ಇವು ಗೊತ್ತುಗುರಿಗಳಿಲ್ಲದೆ ಅಲೆಯುತ್ತಿರುತ್ತವೆ. ಸಿರಾತೆ, ಭಗ್ನ ಪ್ರಣಯಗಳು ಈ ಪ್ರೇತಗಳನ್ನು ಪೀಡಿಸುತ್ತಿರುತ್ತವೆ.

ನನ್ನ ಅಕ್ಕನ ಮನೆಯ ಹತ್ತಿರ ಮರವೊಂದಕ್ಕೆ ಪ್ರತಿರಾತ್ರಿ ಶವಗಳೆರಡು ಜೋತಾಡುತ್ತಿರುತ್ತವಂತೆ. ವರ್ಷಗಳ ಹಿಂದೆ ಭಗ್ನ ಪ್ರೇಮಿಗಳಿಬ್ಬರೂ ಆ ಮರಕ್ಕೆ ನೇಣು ಹಾಕಿಕೊಂಡಿದ್ದರಂತೆ. ಆಯಿತು, ಅವರ ಕಥೆ ಮುಗಿಯಿತು, ಆದರೆ ಈ ದೆವ್ವಗಳು ಅಲ್ಲಿ ಪ್ರತಿರಾತ್ರಿ ಮಾಡುತ್ತಿರುವುದೇನು? ವರ್ಷಗಳೂ ಕಳೆದರೂ ಆತ್ಮಹತ್ಯೆಯ ರಿಹರ್ಸಲ್ ಮುಗಿಯಲಿಲ್ಲವೆ? ಇನ್ನೂ ಅವರಲ್ಲಿ ಪರಿಪೂರ್ಣತೆ ಸಾಧಿಸಲು ಆಗಲಿಲ್ಲವೆ? ಎಂದು ನಾನು ಬೆರಗಾಗಿದ್ದೇನೆ.

ದೆವ್ವಗಳಲ್ಲಿ ಇನ್ನೊಂದು ಮುಖ್ಯ ಪ್ರಕಾರವಿದೆ. ಅದು ದಯೆಯ ಅವತಾರ. ಈ ದೆವ್ವಗಳಿಗೆ ಮನುಷ್ಯನ ಕುರಿತು ಅದೇನೋ ವ್ಯಾಮೋಹ. ಬಾಣಂತಿಗೆ ಭೂತ ನೆರವಾದದ್ದು, ಬಡವನಿಗೆ ಮನೆಕಟ್ಟಲು (ಜನತಾಗೃಹ ಅಲ್ಲ ಮತ್ತೆ!) ಸಹಾಯ ಮಾಡಿದ್ದು, ಕುರುಬನನ್ನು ಅವನ ಕುರಿ ಒಂದಿನೊಡನೆ ಹೊತ್ತುಕೊಂಡು ತುಂಬಿದ ಹೊಳೆ ದಾಟಿಸಿದ್ದು ಇಂಥ ಹಲವಾರು ಪ್ರಸಂಗಗಳು ನಮ್ಮ ಗ್ರಾಮಾಂತರದಲ್ಲಿ ಮನೆಮಾತಾಗಿರುತ್ತವೆ. ಕೀಟಲೆ ದೆವ್ವಗಳು ಕೆಲವಿರುತ್ತವೆ. ಇವು ಮನುಷ್ಯರಿಗೆ ಸುಮ್ಮನೆ ಕಿರುಕಳ ಕೊಡುತ್ತಿರುತ್ತವೆ. ರಸ್ತೆಯ ಯಾವುದೊ ಒಂದು ತಿರುವಿನಲ್ಲಿ ಎತ್ತಿನ ಗಾಡಿಯನ್ನು ಎತ್ತಿ ವಿರುದ್ಧ ದಿಶೆಗೆ ಮುಖ ಮಾಡಿ ನಿಲ್ಲಿಸಿದ್ದು, ಸೈಕಲ್ ಸವಾರರನ್ನು ಅನಾಮತ್ತಾಗಿ ಸೈಕಲ್ ಸಹಿತ ಎತ್ತಿ ಬಯಲು ಹೊಲದಲ್ಲಿ ಇಳಿಸಿದ್ದು—ಇಂಥ ಕುಚೇಷ್ಟೆಗಳಲ್ಲಿಯೆ ಇವಕ್ಕೆ ಸಂತೋಷ. ದೆವ್ವಗಳ ನೆನಪಿನಿಂದ ನಾನು ಬಹಳಷ್ಟು ದಣ್ಣಾಗಿದ್ದೇನೆ. ಏಕಾಕಿಯಾಗಿ ರಾತ್ರಿ ಎಲ್ಲಿಯಾದರೂ ಹೋಗುವ ಪ್ರಸಂಗ ಬಂದರೆ ನನ್ನ ಮೈ ಮೇಲೆ ಮುಳ್ಳುಗಳು ಮೂಡುತ್ತವೆ. ನನ್ನ ಬಳಿ 'ಬ್ರಹ್ಮಗಂಟು' ಇದೆ. ಆದರೆ ಅದನ್ನು ಆಗ ಹಿಡಿಯಬೇಕೆಂದು ನನಗೆ ನೆನಪಾಗುವುದಿಲ್ಲ. ಒಂದೊಂದೋ ಕೇಳಿದ ದೆವ್ವದ ಕಥೆಗಳು ಒಂದೊಂದಾಗಿ ಕಣ್ಣ ಮುಂದೆ ಕುಣಿಯುತ್ತವೆ. ರಾತ್ರಿಯಲ್ಲಿ ಗಿಡಗಳು ಗಾಳಿಗೆ ಅಲ್ಲಾಡಿದರೆ ಸಾಕು, ಭೂತ ಗೋಣು ಹಾಕಿದಂತೆ ನನಗೆ ಭಾಸವಾಗುತ್ತದೆ. ನನ್ನ ಹೆಜ್ಜೆಯ ಸಪ್ಪಳಕ್ಕೆ ಯಾರೋ ನನ್ನನ್ನು [illegible]

ಯಿಂದ ಹೌಹಾರಿದ್ದಿದೆ.

ದೆವ್ವಗಳಿಗೆ ಹುಣಸೆಯ ಮರಗಳು ಪ್ರಿಯವೆಂದೂ ಅವುಗಳ ಹೆಡ್‌ಕ್ವಾರ್ಟರ್ಸ್ ಆ ಮರಗಳಾಗಿರುವವೆಂದೂ ನೀವು ಕೇಳಿದ್ದೀರಷ್ಟೆ! ಪಂಚತಂತ್ರದಲ್ಲಿ ಸೊಸೆಯ ಮಾತನ್ನು ಕೇಳುವ ಅತ್ತೆಯ ಕಥೆಯೊಂದು ಬಂದಿದೆ. ಅಲ್ಲಿಯ ಸಾಲಿಗ್ರಾಮ ಅಗ್ರಹಾರದ ಹೊರವಲಯದ ಹುಣಸೆಯ ಮರ ಶಾಕಿನಿಯರ ವಿಶ್ರಾಂತಿ ಸ್ಥಳವಾಗಿತ್ತು. ಮಾತ್ರವಲ್ಲ, ಅವರು ಅದನ್ನು ತಮ್ಮ ವಾಹನವಾಗಿಸಿಕೊಂಡು ಯಾವ ದ್ವೀಪಕ್ಕೆ ಬೇಕಾದರೂ ಹೋಗಿ ಬರುತ್ತಿದ್ದರು.

ನನ್ನ ಬಾಲ್ಯದ ನೆನಪೊಂದರಲ್ಲಿ ಈ ಹುಣಸೆ ಮರದ ಛಾಯೆ ದಟ್ಟವಾಗಿ ಕವಿದಿದೆ. ನನ್ನ ಹಳ್ಳಿಯ ಸ್ಮಶಾನದ ಬಳಿಯ ಹುಣಸೆಯ ಮರದಲ್ಲಿ ಮಹಾಭೂತ ಮನೆ ಮಾಡಿಕೊಂಡಿದೆ ಎಂದು ಜನ ಆಡಿಕೊಳ್ಳುತ್ತಾರೆ. ಹಗಲಿನಲ್ಲೆ ಅಲ್ಲಿ ಹೋಗಲು ಹಲವರಿಗೆ ಭೀತಿ. ನಗರದಿಂದ ರಜೆಗೆ ಬಂದಿದ್ದ ಗೌಡರ ಮಗ ಆಗ ಇಪ್ಪತ್ತರ ತರುಣ. ಹುಕ ಮೀಸೆ ಒಡೆಯುತ್ತಿತ್ತು. ಮೀಸೆ ಮೂಡಿದಾಗ ದೇಶಕಾಣುವುದಿಲ್ಲವಂತೆ, ಬಹುಶಃ ದೆವ್ವಗಳು ಕೂಡ ಕಾಣುವುದಿಲ್ಲ. ಅಮಾವಾಸ್ಯೆಯ ಮಧ್ಯರಾತ್ರಿ ಬೇಕಿದ್ದರೆ ತಾನು ಆ ಹುಣಸೆಯ ಮರಕ್ಕೆ ಹೋಗಿ ಬರಬಲ್ಲೆ ಎಂದು ಆತ ಪ್ರತಾಪ ಕೊಚ್ಚಿಕೊಂಡ. ಗೆಳೆಯರ ಬಳಗ ಈ ಸವಾಲನ್ನು ಒಪ್ಪಿತು. ಹತ್ತು ರೂಪಾಯಿ ನೋಟು ಬೆಟ್ ಆಗಿ ನಿಂತಿತು (ಆಗಿನ ಹತ್ತು ರೂಪಾಯಿ ಈಗಿನ ನೂರಕ್ಕಿಂತ ಹೆಚ್ಚೇನೋ). ಅವನು ಆ ಮರವನ್ನು ತಲುಪಿದ್ದರ ಗುರುತಾಗಿ ಅದರ ಬೊಡ್ಡೆಗೆ ಮೊಳೆ ಹೊಡೆಯಬೇಕೆಂದು ಗೆಳೆಯರು ವಿಧಿಸಿದರು.

ಅಮಾವಾಸ್ಯೆಯ ಮಧ್ಯರಾತ್ರಿ ಗೌಡರ ಮಗ ಪರಮೇಶಿಯ ಮನೆಯಿಂದ ಹೊರಟ. ನಾವೆಲ್ಲ ಅವನನ್ನು ಬೀಳ್ಕೊಳ್ಳಲು ಅಂಗಳದಲ್ಲಿ ನೆರೆದಿದ್ದೆವು. ನನ್ನ ಗಲ್ಲ ತಟ್ಟುತ್ತ ಆತ ಅಂದ, "ಮಗು, ಸ್ಮಶಾನಕ್ಕೆ ಹೋಗುತ್ತಿರುವವನು ನಾನು, ನೀನಲ್ಲ." ಊರ ಹತ್ತಿರದ ನದಿಯ ಇನ್ನೊಂದು ದಂಡೆಯಲ್ಲಿ ಸ್ಮಶಾನ, ಸೇತುವೆ ದಾಟಿ ಆತ ಮುಂದೆ ಮುಂದೆ ಹೋದದ್ದು ಅವನ ಕಾಲಿನ ಸಪ್ಪಳ ಕ್ಷೀಣವಾಗಿ ಕೇಳಿಸಿತು. ನಾಲ್ಕಾರು ನಿಮಿಷಗಳಲ್ಲಿ ಆತ ಹುಣಸೆಯ ಮರಕ್ಕೆ ಮೊಳೆ ಹೊಡೆಯುತ್ತಿರುವುದೂ ರಾತ್ರಿಯ ನಿಶ್ಯಬ್ದತೆಯನ್ನು ಸೀಳಿಕೊಂಡು ಕಿವಿಗೆ ಅಪ್ಪಳಿಸಿತು. ಹಿಂದಿನಿಂದ ಕರ್ಣಕಠೋರ ಚೀತ್ಕಾರವೊಂದು ಕೇಳಿ ಬಂದಿತು. ಅನಂತರ ಎಲ್ಲವೂ ಮೊದಲಿನಂತೆ ಸ್ತಬ್ಧ. ಆ ಕೂಗು ಗೌಡರ ಮಗನದೇ ಎಂದು ಎಲ್ಲರಿಗೂ ಮನವರಿಕೆಯಾಯಿತು. ಹೌಹಾರಿದ ನನ್ನ ಪ್ರಜ್ಞೆ ಕಳೆದಿರಬೇಕು.

ಇದ್ದವರಲ್ಲೇ ನಾಲ್ಕಾರು ಜನ ಧೈರ್ಯಶಾಲಿಗಳು ದೆವ್ವ ಬಿಡಿಸುವ ಪೂಜಾರಿಯನ್ನು ಮುಂದಿಟ್ಟುಕೊಂಡು, ಕೋಲು ಕತ್ತಿ ತಕ್ಕೊಂಡು ಹುಣಸೆ ಮರದ ಕಡೆಗೆ ಹೆಜ್ಜೆ ಹಾಕಿದರಂತೆ. ಅಲ್ಲಿ ಮೂರ್ಛಿತನಾಗಿ ಬಿದ್ದಿದ್ದ ಗೌಡರ ಮಗನನ್ನು ಹೊತ್ತು ತಂದು ಮನೆ ತಲುಪಿಸಿದರಂತೆ. ಕತ್ತಲೆಯಲ್ಲಿ ಆತ ಹುಣಸೆಯ ಮರಕ್ಕೆ ಮೊಳೆ ಹೊಡೆಯುತ್ತಿದ್ದಾಗ ತನ್ನ ಶರ್ಟಿನ ಕೆಳಭಾಗ ಆ ಮೊಳೆಗೆ ಸಿಕ್ಕಿಹಾಕಿಕೊಂಡದ್ದನ್ನು ಆತ ಗಮನಿಸಿರಲಿಲ್ಲವಂತೆ, ಪುಅರ್ ಫೆಲೊ. ಮೊಳೆ ಹೊಡೆದು ಮೇಲೆದ್ದಾಗ ದೆವ್ವವೆ ತನ್ನ ಶರ್ಟ್ ಜಗ್ಗಿತೆಂದು ತಿಳಿದು ಹೌಹಾರಿ ಬಿದ್ದಿರಬೇಕು. ಮೂರ್ಛಿತನನ್ನು ಮೇಲೆತ್ತಲು ಮುಂದಾದಾಗ ಗೆಳೆಯರಿಗೆ ತಿಳಿದದ್ದು. ಗೌಡರ ಮಗನಿಗೆ ಪ್ರಜ್ಞೆ ಮರುಕಳಿಸಿದ್ದು ಮರುದಿನ ಬೆಳಗು. ನನ್ನ ದುರವಸ್ಥೆ ತಿಳಿದು ಅವನು ನನ್ನ ಮನೆಗೆ ಬಂದಾಗ ಆಗ ತಾನೆ ನಾನು ಮೂರ್ಛೆ ತಿಳಿದು ಕಣ್ಣು ಬಿಟ್ಟಿದ್ದೆನಷ್ಟೆ!

ಈಗಲೂ ಹಳ್ಳಿಗೆ ಹೋದಾಗ ನಾನು ಗೌಡರ ಮಗನನ್ನು ಚುಡಾಯಿಸುತ್ತಿರುತ್ತೇನೆ– "ಏನಯ್ಯಾ ಸ್ಮಶಾನದ ಹುಣಸೆಯ ಮರಕ್ಕೆ ಇನ್ನೊಮ್ಮೆ ಮೊಳೆ ಹೊಡೆಯಲು ಹೋಗುತ್ತೀಯೇನು?" ಆ ಖದೀಮ ನಗುತ್ತ ನನಗೆ ಪ್ರತಿಯಾಗಿ ಏನೆನ್ನುತ್ತಾನೆ ಗೊತ್ತೇ? "ನೀನು ಜೊತೆಯಲ್ಲಿ ಬಂದರೆ ಆ ಮರಕ್ಕೆ ಒಂದಲ್ಲ ಹತ್ತು ಮೊಳೆ ಹೊಡೆದೇನು, ಹಗಲಿನಲ್ಲಿ!" ಎಂದು

ಈ ಹರಟೆಯ ಪ್ರಾರಂಭದಲ್ಲಿ ದೆವ್ವಗಳ ಕುರಿತು ನಾನು ಉಲ್ಲೇಖಿಸಿರುವ ಇಂಗ್ಲೀಷ್ ಉಕ್ತಿಗೆ ತಿದ್ದುಪಡಿಯೊಂದನ್ನು ಸೂಚಿಸಬಯಸುತ್ತೇನೆ, "ನಾನು ದೆವ್ವಗಳನ್ನು ನಂಬುತ್ತೇನೆ ಹಾಗೂ ಅವುಗಳಿಗೆ ಹೆದರುತ್ತೇನೆ." ✡


ನೆಸ್‌ಕಾಫೆ
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ ಇನ್‌ಸ್ಟಂಟ್ ಕಾಫಿ

ಪದಾರ್ಥ ಚಿಂತಾಮಣಿ

– ೨೫ –


ಬರಹದ ಆರಂಭದೊಂದಿಗೆ ಮಾನವನ ಹಣೆಬರಹವೂ ಬದಲಾಯಿತು. ಬೇರೆ ಬೇರೆ ಭಾಷೆಗಳಲ್ಲಿ **ಬರಹಕ್ಕೆ** ಇರುವ ಪದಗಳ ಪರಿಶೀಲನೆ ಬರಹದ ಆರಂಭದ ಕಾಲದ ರೀತಿಗಳನ್ನು ಕುರಿತು ಚಾಡಿ ಹೇಳುತ್ತದೆ.

ಕನ್ನಡ **ಬರೆ**ಯನ್ನೇ ತೆಗೆದುಕೊಳ್ಳಿ. ಎಲ್ಲ ಲಿಖಿತ ದ್ರಾವಿಡ ಭಾಷೆಗಳಲ್ಲಿಯೂ ಇದಕ್ಕೆ ಜ್ಞಾತಿ ಪದಗಳಿವೆ. (ತಮಿಳು **ವರೈ**, ತೆಲುಗು **ವ್ರಾ**, ತುಳು **ಬರೆ**). ಚಿತ್ರ ಮಾಡುವುದಕ್ಕೂ ಅಕ್ಷರ ಲೇಖನಕ್ಕೂ ಈ ಭಾಷೆಗಳಲ್ಲಿ **ಬರೆ** ಧಾತುವನ್ನೇ ಬಳಸಲಾಗುತ್ತದೆ. ಪ್ರಾಣಿಗಳ ಮೈ ಮೇಲೆ ಕಾಸಿ ಮಾಡಿದ ಗುರುತಿಗೂ ಕೋಲಿನಿಂದ ಹೊಡೆದಾಗ ಏಳುವ ಬಾಸುಂಡೆಗೂ **ಬರೆ** ಎಂದೇ ಹೆಸರು. ಚಿನ್ನವನ್ನು ತಿಕ್ಕಿ ನೋಡುವುದಕ್ಕೆ ಉಪಯೋಗಿಸುವ **ಒರೆ** ಧಾತುವೂ **ಬರೆ** ಧಾತುವೂ ಮೂಲದಲ್ಲಿ ಒಂದೇ ಇರಬಹುದು. **ಕಸಬರಿಗೆ** ಎಂಬಲ್ಲಿ **ಬರಿಗೆ** ಎಂಬುದೂ **ಬರೆ** ಧಾತುವಿನ ಮಗುವೇ. ಹೀಗೆ **ಬರೆ** ಧಾತುವಿಗೆ ಕಡ್ಡಿಯಂಥ ಪದಾರ್ಥದಿಂದ ಕೆರೆದು ಅಥವಾ ಯಾವುದಾದರೂ ಕುರುಹು ಬಿಡಬಲ್ಲ ಪದಾರ್ಥದಿಂದ ತಿಕ್ಕಿ **ಗುರುತು** ಮಾಡು ಎಂಬರ್ಥ ಮೂಲದಲ್ಲಿ ಇರಬೇಕು. ಮಾನವನ ಅತಿ ಪ್ರಾಚೀನ ಗುಹಾ ನಿವಾಸಗಳಲ್ಲಿ ನಮಗೆ ದೊರೆಯುವ ಚಿತ್ರಗಳು ಈ ವಿಧಾನದಲ್ಲಿ ನಿರ್ಮಿತವಾದವುಗಳೆಂದು ಮನಗಂಡರೆ ಲೇಖನ ಕಲೆಯ ಉಗಮ ಹೇಗಾಯಿತೆಂಬುದರಲ್ಲಿ **ಬರೆ** ಧಾತುವಿನ ಅರ್ಥಕ್ಕೆ ಬೆಂಬಲ ಬರುತ್ತದೆ. ಮಾನವನ ಆದಿಮ ಲಿಪಿ ಚಿತ್ರಲಿಪಿಯೇ ಆಗಿದ್ದುದರಿಂದ ಚಿತ್ರ ಲೇಖನಕ್ಕೂ ಅಕ್ಷರ ಲೇಖನಕ್ಕೂ ಒಂದೇ ಧಾತುವಿರುವುದು ಸಹಜವಾಗುತ್ತದೆ.

ಸಂಸ್ಕೃತದ **ಲೇಖನ** ಮತ್ತು ಇಂಗ್ಲಿಷಿನ writing ಪದಗಳನ್ನು ಗಮನಿಸಿದರೆ ಇದಕ್ಕಿಂತಲೂ ಸ್ಪಷ್ಟವಾದ ಸಂಕೇತ ಸಿಗುತ್ತದೆ. **ಲಿಖ್** ಧಾತುವಿನ ಮೂಲ ರೂಪ **ರಿಖ್** ಆಗಿತ್ತು. ಅಥರ್ವವೇದದಂಥ ಬಹು ಪ್ರಾಚೀನ ಭಾರೋಪ್ಯ ದಾಖಲೆಗಳಲ್ಲಿ **ರಿಖ್→ಲಿಖ್** ಧಾತುವಿಗೆ ಕೆರೆ ಕೆರಸು ಕುಕ್ಕು ಮೊದಲಾದ ಅರ್ಥಗಳೇ ಇವೆ. ಸಂಸ್ಕೃತಕ್ಕೆ ಬಹಳ ಹತ್ತಿರವಾದ ಯುರೋಪಿನ ಲಿಥುವೇನಿಯನ್ ಭಾಷೆಯಲ್ಲಿ **ರೇಕ್ತಿ** ಎಂದರೆ **ಕೊರೆಯು**ವುದು, ಕೆತ್ತುವುದು ಎಂದೇ ಅರ್ಥ. ಇಂಗ್ಲಿಷಿನ writeನ ಹಳೇ ಇಂಗ್ಲೀಷ್ writan ಮತ್ತು ಹಳೇ ನಾರ್ಸ್ ಭಾಷೆಯ rita ಇವೆರಡೂ **ಕೆರೆ** ಎಂಬರ್ಥವನ್ನೇ ಕೊಡುತ್ತವೆ. ಸಂಸ್ಕೃತದ **ಲಿಖಿತಕ್ಕೆ** ಅಥರ್ವವೇದದಲ್ಲಿ ಕೆರೆದ, ಕಲೆಯುಂಟುಮಾಡಿದ ಗುರುತು ಎಂಬರ್ಥವೇ ಇದ್ದು, ಅದಕ್ಕೆ ಲೇಖನ ಎಂಬರ್ಥ ಬಂದದ್ದು ತಡವಾಗಿ, ಯಾಜ್ಞವಲ್ಕ್ಯ ಸ್ಮೃತಿ, ಸಾಂಖ್ಯಾಯನ ಶ್ರೌತ ಸೂತ್ರಗಳಲ್ಲಿ. ಹೀಗೆ **ಲೇಖನ**ವೆಂದರೆ ಮೂಲತಃ **ಕೆರೆದು ಮಾಡಿದ ಕಾಯಂ ಗುರುತು** ಎಂದೇ. ಇದು ಕಂಟದಿಂದ ತಾಳೆ ಓಲೆಯ ಮೇಲೆ ಕೆರೆದು ಬರೆಯುವ ಕಾಲದ ಲೇಖನಕ್ಕೂ ಸರಿಯಾಗಿ ಹೊಂದಿಕೊಂಡಿತು. ಮುಂದೆ ಬಣ್ಣ ಬಳಿದು ಮಾಡಿದ ಚಿತ್ರಗಳಿಗೂ ಅಕ್ಷರಗಳಿಗೂ **ಲಿಖ್** ಧಾತುವಿನಿಂದ ಬಂದ ಪದಗಳನ್ನೇ ವಿಸ್ತರಿಸಲಾಯಿತು. ಹೀಗೆ ನಮಗೆ **ಚಿತ್ರಲೇಖೆ**ಯರು ಪ್ರಾಚೀನ ಪುರಾಣ ಕಾವ್ಯ ಸಾಹಿತ್ಯದಲ್ಲಿ ಸಿಗುತ್ತಾರೆ. ಮೂಲ **ರಿಖ್** ಧಾತುವಿನಿಂದ ಬಂದ **ರೇಖೆ** ಗೆರೆ ಎಂಬರ್ಥದಲ್ಲಿ ಉಳಿದುಕೊಂಡಿದೆ. ಈ ಪ್ರಕಾರ ಕೆರೆದು ಮಾಡಿದ ಗುರುತು **ಅಕ್ಷರ**ವಾಯಿತು. **ಅಕ್ಷರ** ಎಂದರೆ **ಅಳಿ ಇಲ್ಲದ್ದು** ಎಂದು ಒಂದು ಅರ್ಥ.

ಆದರೆ **ಲಿಪಿ** (ಬರಹ) ಎಂಬುದು ಬೇರೆಯೇ ಕಥೆ ಹೇಳುತ್ತದೆ. **ಲಿಪ್** ಎಂದರೆ (ಎಣ್ಣೆ,ಬಣ್ಣ) **ಬಳಿ**. ಈ ಶಬ್ದ ಬಳಕೆಗೆ ಬಂದಾಗಲೇ ಕಲ್ಲಿನಲ್ಲೋ, ಇಟ್ಟಿಗೆಯಲ್ಲೋ ಕೆರೆದು ಇಡುವ ಲೇಖನ ಪದ್ಧತಿಯ ಬದಲು ಬಣ್ಣಗಳಿಂದ ಅಥವಾ ಮಸಿಯಿಂದ ಚರ್ಮ, ಭೂರ್ಜಪತ್ರ ಇತ್ಯಾದಿಗಳ ಮೇಲೆ ಚೀನಾದಲ್ಲಿನ ಹಾಗೆ ಕುಂಚದಿಂದಲೋ ಗರಿಯಿಂದಲೋ ದಾಖಲೆಗಳನ್ನು ಬರೆದಿಡುವುದು ಪ್ರಾರಂಭವಾಗಿರಬೇಕು. ಅದು ಲೇಪಿಸುವುದಾದ್ದರಿಂದ **ಲಿಪಿ**ಯಾಯಿತು.

—ಪಾವೆಂ.


ಬಿಳುಪು
ಡೆಟ್‌ನ
ಬಿಳುಪು
ಹೊಸ ಫಾರ್ಮ್ಯುಲಾ
ಡೆಟ್
ಡಿಟರ್ಜೆಂಟ್ ಒಗೆಯುವ
ಪೌಡರ್
det
det
ಸಾಟಿಯಿಲ್ಲದ ಒಗೆಯುವ ಶಕ್ತಿ, ವಿಪುಲವಾದ ನೊರೆ,

ಭೀಷ್ಮ ಪ್ರತಿಜ್ಞೆ ಮತ್ತು ಜಿಲೇಬಿ ಪ್ರಸ್ತ

ನಾ. ರಾ. ಬಾಲೇಹೊಸೂರ

"ಓ, ನೀವು ವೆಂಕೋಬರಾಯರ ಶಿರಹಟ್ಟಿಯವರೋ? ನಾವು ಅವರ ನಾಟಕವನ್ನು ನೋಡಿದ್ದೇವೆ. ತುಂಬಾ ಚೆನ್ನಾಗಿ ಅಭಿನಯಿಸುತ್ತಿದ್ದರು" ಎಂದು ಮುಂತಾಗಿ ಹೇಳುತ್ತಿದ್ದುದನ್ನು ಕೇಳಿ ಅದೇ ಹೊಸದಾಗಿ ಬೆಂಗಳೂರಿಗೆ ಬಂದ ನನಗೆ ಅದೆಷ್ಟು ಹೆಮ್ಮೆ! ಶಿರಹಟ್ಟಿ ವೆಂಕೋಬರಾಯರ ಹೆಸರನ್ನು ಕೇಳದವರೇ ವಿರಳ. ಶಿರಹಟ್ಟಿಯ ಶ್ರೀ ಫಕೀರಸ್ವಾಮಿಗಳ ಜಾತ್ರೆಯ ಕಾಲಕ್ಕೆ ಕರ್ನಾಟಕದ ಸುಪ್ರಸಿದ್ಧ ನಾಟಕ ಕಂಪನಿಗಳು ಬರುತ್ತಿದ್ದವು. ಏಕಕಾಲಕ್ಕೆ ಮೂರು ನಾಟಕ ಕಂಪನಿಗಳು ಬಿಡಾರ ಬಿಟ್ಟಿರುತ್ತಿದ್ದವು. ಶಿರಹಟ್ಟಿ ಎಂದರೆ ಸಂಗೀತ, ಸಂಸ್ಕೃತಿಯ ತೌರೂರು. ಇಂಥ ಕಲೆ ಹಾಗೂ ಸಾಂಸ್ಕೃತಿಕ ವಾತಾವರಣದಲ್ಲಿ ಬೆಳೆದ ಶಿರಹಟ್ಟಿಯ ಪ್ರತಿಯೊಬ್ಬ ನಾಗರಿಕನಲ್ಲಿ ಕಲಾವಿದನ ಅಂಶ ಇದ್ದೇ ಇರುವುದು ಸ್ವಾಭಾವಿಕ. ಹೀಗಾಗಿ ಕಾಲಕಾಲಕ್ಕೆ ಅಮೆಚೂರು ಕಂಪನಿಗಳು ಈ ಊರಲ್ಲಿ ಹುಟ್ಟಿ ಬೆಳೆದು ಕನ್ನಡ ನಾಡಿನ ಸೇವೆಯನ್ನು ಸಲ್ಲಿಸುತ್ತ ಬಂದಿವೆ. ಅಂಥದರಲ್ಲಿ ಶಿರಹಟ್ಟಿಯ ಗೆಳೆಯರ ಗುಂಪಿನ ಅಮೆಚೂರು ಕಂಪನಿಯೂ ಒಂದು. ಈ ಗುಂಪಿನ ಗೆಳೆಯರು ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ಆಡಿ ತೋರಿಸಿ ಜನರ ಮನಸನ್ನು ತಣಿಸಿದ್ದಾರೆ. ಶ್ರೀರಂಗರ 'ಉದರ ವೈರಾಗ್ಯ', ಬೆಟಗೇರಿ ಕೃಷ್ಣಶರ್ಮರ ಐತಿಹಾಸಿಕ ಕಾದಂಬರಿ ಆಧಾರಿತ 'ರಾಜಯೋಗಿ' ನಾಟಕಗಳು ತುಂಬಾ ಜನಪ್ರಿಯವಾದವು. ಪಾತ್ರವರ್ಗದವರು ತುಂಬ ಪರಿಶ್ರಮ ವಹಿಸಿ ಮನಃಪೂರ್ವಕವಾಗಿ ನಾಟಕವಾಡಿ ಕಲಾ ಸೇವೆಗೈದರು, ಜನರ ಮೆಚ್ಚುಗೆಗೆ ಪಾತ್ರರಾದರು. ಈ ತರುಣ ಕಲಾವಿದರು ೧೯೫೪ರಲ್ಲಿ ರಬಕವಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಯಾವುದಾದರೊಂದು ಉತ್ತಮ ನಾಟಕವಾಡಿ ಕನ್ನಡ ನುಡಿಯ ಸೇವೆಗೈಯಬೇಕೆಂದು ನಿರ್ಧರಿಸಿದರು. ಊರಿನ ಹಿರಿಯರು ಕಲಾವಿದರಿಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡಿದರು. ಸರಿ, ನಾಟಕ ಮಾಡುವುದಂತೂ ನಿಶ್ಚಿತವಾಯ್ತು! ಯಾವ ನಾಟಕ ಆಡುವುದು? ಅನೇಕ ನಾಟಕಗಳು ಸೂಚಿತವಾದವು. ಕೊನೆಗೆ, 'ಭೀಷ್ಮಪ್ರತಿಜ್ಞೆ' ಎಂಬ ಪೌರಾಣಿಕ ನಾಟಕ ಆಡಬೇಕೆಂದು ನಿರ್ಧರಿಸಲಾಯ್ತು. ನಾಟಕದ ಪುಸ್ತಕಪೂಜಾ ವಿಧಾನ, ಪಾತ್ರವರ್ಗದ ಹಂಚಿಕೆ ಎಲ್ಲವೂ ಕ್ರಮಬದ್ಧವಾಗಿ ನಡೆದು ನಾಟಕದ ರಂಗತಾಲೀಮು ಶುರುವಾಯಿತು. ಕೊನೆಗೆ ಒಂದು ಮುಂಜಾನೆ "ಜೈ ಭಜರಂಗ ಬಲೀಕೀ ಜೈ" "ಗೆಳೆಯರ ಗುಂಪಿಗೆ ಜಯವಾಗಲಿ" "ಜೈ ಭುವನೇಶ್ವರಿ" "ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲಿ" ಮುಂತಾದ ಘೋಷಣೆಗಳೊಂದಿಗೆ ಕಲಾವಿದರ ವಿಶೇಷ ಬಸ್ಸು ರಬಕವಿಗೆ ಹೊರಟಿತು. ಮಾರನೆ ದಿನ ಬೆಳಗಿನ ಜಾವ ರಬಕವಿ ತಲುಪಿತು. ಮೊದಲೇ ನಿರ್ಧಾರವಾದಂತೆ ರಬಕವಿಯಲ್ಲಿಯ ಶ್ರೀಮಂತರ ಭವ್ಯ ಮನೆಯ ಮುಂದೆ ಬಸ್ಸು ಬಂದು ನಿಂತಿತು. ತರುಣ ಕಲಾವಿದರಿಗೆ ಎಂದೂ ಇಲ್ಲದ ಉತ್ಸಾಹ. ಇಂತಹ ಭವ್ಯ ನಿವಾಸದಲ್ಲಿ ಇಳಿದುಕೊಳ್ಳುವ ಏರ್ಪಾಟಾದುದನ್ನು ತಿಳಿದು ಸಂತೋಷಗೊಂಡರು. ಆದರೆ ಆ ಸಂತೋಷ ಬಹಳ ಕಾಲ ಉಳಿಯಲಿಲ್ಲ. ಮನೆಯ ಯಜಮಾನರು ಅತಿಥಿಗಳನ್ನು ಬರಮಾಡಿಕೊಂಡು ಅವರಿಗೆ ವಾಸಕ್ಕಾಗಿ ಮೀಸಲಿಟ್ಟ ಸ್ಥಳವನ್ನು ತೋರಿಸಿದಾಗ ಕೆಲವರ

ಉತ್ಸಾಹ ಉಡುಗಿ ಹೋಯಿತು. ಆದರೆ ಬಂದ ಉದ್ದೇಶವನ್ನು ಮನದಲ್ಲಿ ನೆನೆದು ತಮ್ಮ ಬಿಡಾರ ಬಿಟ್ಟರು, ವಿಶಾಲವಾದ ದನದ ಕೊಟ್ಟಿಗೆಯಲ್ಲಿ! ಸರಿ, ಹೇಗಾದರೂ ಮಾಡಿ ನಾಲ್ಕಾರು ದಿನ ಇರುವುದು. ಯಾವ ಸ್ಥಳವಾದರೇನು? ಕಲಾಸೇವೆ ಮುಖ್ಯ. ಊರಿನಿಂದಲೇ ಕರೆತಂದ ಅಡಿಗೆಯವರು ತಮ್ಮ ಪಾರ್ಟೀ ಜನರಿಗೆ ಬೇಕಾದ ಫಲಾಹಾರ, ಅಡಿಗೆಗೆ ಸಜ್ಜುಮಾಡಿಕೊಂಡರು. ಮೊದಲು ಎಲ್ಲರಿಗೂ ಬಿಸಿ ಬಿಸಿ ಚಹಾ ಆಯ್ತು. ಮಧ್ಯಾಹ್ನ ಜೋಳದ ರೊಟ್ಟಿ ಬದನೇಕಾಯಿ–ಉಳ್ಳೇಗಡ್ಡಿ ಪಲ್ಯ. ಸಂಪು ಊಟ ಹೊಡೆದು ಎಲ್ಲರೂ ಪ್ರವಾಸದ ದಣಿವಾರಿಸಿಕೊಳ್ಳುವ ಹೊತ್ತಿಗೆ ಸಾಯಂಕಾಲವೇ ಆಯ್ತು. ಆ ಹೊತ್ತಿಗಾಗಲೇ ಬೇರೆ ಬೇರೆ ಊರುಗಳಲ್ಲಿ ನೆಲೆಸಿದ ಶಿರಹಟ್ಟಿಯ ಸ್ನೇಹಿತರೂ ಅಲ್ಲಿಗೇ ಬಿಜಯಂಗೈದರು. ಎಲ್ಲೆಲ್ಲಿಯೂ ಹಬ್ಬದ ವಾತಾವರಣ. ಹರಟೆ, ಮಾತಿನ ಮೋಜು, ಮಧ್ಯೆ ರಂಗತಾಲೀಮು ಸರಾಗವಾಗಿ ಸಾಗಿತ್ತು.

ಕನ್ನಡ ಸಾಹಿತ್ಯ ಸಮ್ಮೇಳನ ಒಳ್ಳೇ ವಿಜೃಂಭಣೆಯಿಂದ ಪ್ರಾರಂಭವಾಯ್ತು. ಶಿರಹಟ್ಟಿಯಿಂದ ಬಂದ ಕಲಾವಿದ ಅತಿಥಿಗಳಿಗೆ ಸಂಭ್ರಮದ ಸ್ವಾಗತವಾಯ್ತು. 'ಭೀಷ್ಮಪ್ರತಿಜ್ಞೆ' ನಾಟಕವು ಅತ್ಯಂತ ಯಶಸ್ವಿಯಾಗಿ ಜರುಗಿತು. ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನಾಟಕ ಮುಗಿದಾಗ ರಬಕವಿಯ ನಾಗರಿಕರು ಬೆಳಗಿನ ವಾಯು ಸಂಚಾರಕ್ಕೆ ಹೊರಟಿದ್ದರು. ಗೆಳೆಯರ ಗುಂಪಿನ ತರುಣರೆಲ್ಲ ತಾವು ಬಂದ ಕಾರ್ಯ ತುಂಬಾ ಯಶಸ್ವಿಯಾದುದಕ್ಕೆ ಹೆಮ್ಮೆ ಪಟ್ಟುಕೊಂಡರು. ಶಿರಹಟ್ಟಿಗೆ ಮರಳಲು ಉತ್ಸಾಹದಿಂದ ಕಾದಿದ್ದರು. ಆದರೆ... ಅವರ ಪಾಲಿಗೆ ನಿರಾಶೆ ಕಾಯ್ದಿದ್ದಿತು. ಊರಿಗೆ ಹೋಗುವುದೇ ಸಾಧ್ಯವಿಲ್ಲದ ಪರಿಸ್ಥಿತಿ ಉದ್ಭವವಾಗಿತ್ತು. "ಬಸ್ಸಿನಲ್ಲಿ ಪೆಟ್ರೋಲೇ ಇಲ್ಲ" ಡ್ರೈವರ್ ಸಾಹೇಬರು ಘೋಷಿಸಿದರು. "ಕೈಯಲ್ಲಿ ದುಡ್ಡೂ ಇಲ್ಲ" ಗುಂಪಿನಿಂದ ಒಂದು ಧ್ವನಿ ಬಂದಿತು! ಎಲ್ಲರೂ ಒಬ್ಬರ ಮುಖವನ್ನು ಒಬ್ಬರು ನೋಡಹತ್ತಿದರು. ಅಷ್ಟರಲ್ಲಿ ನಮ್ಮ ಸೆಟ್ಟಿನ ಹಿರಿಯರೊಬ್ಬರು, "ಕಾಳಜಿ ಮಾಡುವ ಕಾರಣವಿಲ್ಲ, ನಾವು ಸಮೀಪದ ಜಮಖಂಡಿಯಲ್ಲಿ ಒಂದು ನಾಟಕ ಆಡಿ ಬಂದ ಹಣದಿಂದ ಊರು ತಲುಪೋಣ. ನಾಳೆ ಬೆಳಿಗ್ಗೆ ಜಮಖಂಡಿಗೆ ಪ್ರಯಾಣ. ಅದಕ್ಕೆ ಬೇಕಾಗುವ ಪೆಟ್ರೋಲ್ ಖರ್ಚು ನಾನು ವಹಿಸುವೆ" ಎಂದು ಹೇಳಿ ಹುಡುಗರನ್ನು ಹುರುಪು ಮಾಡಿದರು. ಪೂರ್ವ ಸಿದ್ಧತೆಗಾಗಿ ಅಂದು ಸಂಜೆ ಹಿರಿಯರು ಜಮಖಂಡಿಗೆ ಪ್ರಯಾಣ ಬೆಳೆಸಿದರು. ಸರಿ ಮಾರನೇ ದಿನ ಬೆಳಿಗ್ಗೆ ನಮ್ಮ ಕಂಪನಿ ರಬಕವಿಯಿಂದ ಜಮಖಂಡಿಗೆ ಪ್ರಯಾಣ ಹೊರಟಿತು. ಮತ್ತೆ "ಜೈ ಭುವನೇಶ್ವರಿ" ಜೈಘೋಷಗಳು ಗಗನಕ್ಕೆ ಮುಟ್ಟಿದವು. ಸರಿಯಾಗಿ ಮಧ್ಯಾಹ್ನದ ಹೊತ್ತಿಗೆ ಬಸ್ಸು ಜಮಖಂಡಿ ತಲುಪಿತು. ಊರ ಹೊರಗಿನ ಒಂದು ಭವ್ಯವಾದ ಬಂಗ್ಲೆಯಲ್ಲಿ ಎಲ್ಲರನ್ನೂ ಇಳಿಸಿದರು. ಅಷ್ಟರಲ್ಲಿ ಒಂದು ಸಂತೋಷದ ಸುದ್ದಿ ಎಲ್ಲರ ಕಿವಿಗಳನ್ನು ಅಪ್ಪಳಿಸಿತು. "ಮಧ್ಯಾಹ್ನದ ಊಟಕ್ಕೆ ಈ ಊರಿನ ಭಾರೀ ಶ್ರೀಮಂತರು ಆಮಂತ್ರಣವಿತ್ತಿದ್ದಾರೆ, ಅಲ್ಲಿಗೇ ಹೋಗುವುದು. ಎಲ್ಲರೂ ಬೇಗ ಸಿದ್ಧವಾಗಿರಿ" ಎಂದು ಹರ್ಷೋದ್ಗಾರಗಳ ಮಧ್ಯೆ ನಮ್ಮ ಹಿರಿಯರು ಘೋಷಿಸಿದರು. ಮಧ್ಯಾಹ್ನದ ಊಟಕ್ಕೆ ಶ್ರೀಮಂತರ ಮನೆಯ ಬಾಗಿಲಿಗೆ ಬಸ್ಸು ಬಂದು ನಿಂತಾಗ ಯಜಮಾನರು ಒಳ್ಳೇ ಆದರದಿಂದ ಶಿರಹಟ್ಟಿಯ ಗೆಳೆಯರ ಗುಂಪಿನ ಎಲ್ಲ ತರುಣರನ್ನೂ ಅವರ ಸ್ನೇಹಿತರನ್ನೂ ಬರಮಾಡಿಕೊಂಡರು. ಬಾಗಿಲಲ್ಲೇ ಸೇವಕರು ಕಾಲಿಗೆ ಬಿಸಿ ನೀರು ಹಾಕಿ ಒರೆಸಿಕೊಳ್ಳಲು ಟಾವೆಲ್ಲು ಹಿಡಿದುಕೊಂಡು ನಿಂತಿದ್ದರು. ಭೋಜನಶಾಲೆಗೆ ಹೊಕ್ಕಾಗ ಅಲ್ಲಿಯ ದೃಶ್ಯವನ್ನು ಕಂಡು ಎಲ್ಲರೂ ದಂಗುಬಡಿದರು. ಭವ್ಯವಾದ ಬಾಳೆ ಎಲೆ, ಕೂಡಲು ಮಣೆ, ಎಲೆಯ ಮುಂದೆ ಕಲಾಕುಸುಮದ ರಂಗೋಲಿ. ಬೆಳ್ಳಿಯ ತಂಬಿಗೆಯಿಂದ ಜೀಕುತ್ತಿರುವ ಕೇಸರಿ ನೀರು. ಎಲ್ಲರ ಮುಖಕಮಲಗಳೂ ಅರಳಿದವು. ಎಂಟು ದಿನಗಳಿಂದ ಸರಿಯಾದ ಆಹಾರ ನಿದ್ರೆಗಳಿಲ್ಲದ ಈ ಕಲಾವಿದರಿಗೆ ಎಂಥ ದಿವ್ಯ ಭೋಜನ! ಎಲ್ಲರೂ ಕುಳಿತು ಆದ ಬಳಿಕ ಬರುತ್ತಿದ್ದ ಭಕ್ಷ್ಯಗಳನ್ನು ಕಂಡಾಗಂತೂ ಬಾಯಲ್ಲಿ ನೀರು ತಡೆಹಿಡಿಯುವುದೇ ಕಷ್ಟವಾಯಿತು. ಊಟಕ್ಕೆ

ಕುಳಿತುಕೊಳ್ಳಲು ಯಜಮಾನರಿಂದ ಅಪ್ಪಣೆ ದೊರೆತುದುದೇ ತಡ ಎಲ್ಲರ ಕೈಗೂ ಬಾಯಿಗೂ ಯುದ್ಧವೇ ಶುರುವಾದಂತಾಯಿತು. ಮೊದಲಿನ ರಭಸ ಕಡಿಮೆಯಾಗುವ ಹೊತ್ತಿಗೆ ಸರಿಯಾಗಿ ಬೆಳ್ಳಿಯ ತಾಟಿನಲ್ಲಿ ಕೇಸರಿ ಬಣ್ಣದ ಘಮಘಮಿಸುವ ಜಿಲೇಬಿ ಬಡಿಸ ಹತ್ತಿದುದನ್ನು ಕಂಡು ಎಲ್ಲರೂ ತಮ್ಮ ತಮ್ಮ ಹೊಟ್ಟೆ ಬಟ್ಟೆಗಳನ್ನು ಸರಿ ಮಾಡಿಕೊಳ್ಳಹತ್ತಿದರು. ತಿಂದಷ್ಟು ಜಿಲೇಬಿ! ಒಬ್ಬೊಬ್ಬರು ಹತ್ತು ಇಪ್ಪತ್ತು ಮೂವತ್ತು ಯಥಾಶಕ್ತಿ ಜಿಲೇಬಿ ತಿಂದು ತೇಗಿದರು. ತಮ್ಮ ಜೀವಮಾನದಲ್ಲಿಯೇ ಇಂಥ ಊಟ ಮಾಡಿರಲಿಲ್ಲವೆಂದು ತಮ್ಮತಮ್ಮೊಳಗೇ ಹೇಳಿಕೊಳ್ಳಹತ್ತಿದರು. ಊಟ ಮುಗಿದು ಒಬ್ಬೊಬ್ಬರೇ ಏಳತೊಡಗಿದರು. ಕೆಲವರ ಕಾಲುಗಳು ಜೋಮು ಹಿಡಿದು ಬೇಗನೇ ಏಳಲು ಬಾರದಾಯಿತು. ಸಮೀಪ ನಿಂತವರು ಕೈಹಿಡಿದು ನಡೆಸಿದರು. ಪೇಟಿ ಮಾಸ್ತರಗೆ ದಿಕ್ಕು ಕಾಣದೇ ಎತ್ತ ಹೋಗುವುದೇ ತಿಳಿಯದಾಯಿತು. ನನ್ನ ಸ್ನೇಹಿತನೊಬ್ಬ ಏಳಲು ತೊಡಗಿದಾಗಿ 'ಛಟ್' ಎಂದು ಶಬ್ದವಾಯಿತು. ಅತ್ತ ನೋಡಿದಾಗ ಅವನ ಪಾಯಿಜಾಮಾದ ಲಾಡಿ ಹರಿದಿತ್ತು. ಹಾಗೇ ಎಡಗೈಯಿಂದ ಪಾಯಿಜಾಮಾ ಹಿಡಿದುಕೊಂಡು ನಿಧಾನವಾಗಿ ಕೈತೊಳೆದುಕೊಂಡಾದ ಮೇಲೆ ಅದನ್ನು ಸರಿಮಾಡಿಕೊಳ್ಳಬೇಕಾಯಿತು.

ಅಂದೇ ರಾತ್ರಿ "ಭೀಷ್ಮಪ್ರತಿಜ್ಞೆ" ನಾಟಕ. ಥಿಯೇಟರು ಕಿಕ್ಕಿರಿದು ತುಂಬಿತ್ತು. ಶಿರಹಟ್ಟಿ ಕಂಪನಿಯ ಬಗ್ಗೆ ಅಷ್ಟು ಅಭಿಮಾನ. ತಾಯಿ ಭುವನೇಶ್ವರಿ ಪ್ರಾರ್ಥನೆಯ ಭವ್ಯ ಸ್ತುತಿಪದದಿಂದ ನಾಟಕ ಒಳ್ಳೇ ಭರ್ಜರಿಯಾಗಿ ಪ್ರಾರಂಭವಾಯಿತು. ಮೊದಮೊದಲು ಒಳ್ಳೇ ಸರಾಗವಾಗಿ ನಾಟಕ ಸಾಗಿತು. ಆದರೆ ಬರಬರುತ್ತ ಎಲ್ಲಿಯೋ ಏನೋ ತಪ್ಪುವಂತೆ ಕಾಣಹತ್ತಿತು. ಪ್ರಾಂಪ್ಟರನ ಮಾತುಗಳೂ ನಿಷ್ಫಲವಾಗ ತೊಡಗಿದವು. ಕೃಷ್ಣಾರ್ಜುನರ ಸಂವಾದದಲ್ಲಿ ತೊದಲು ನುಡಿಗಳು ಕೇಳಬರಹತ್ತಿದವು. ಅಷ್ಟು ಹೊತ್ತಿಗೆ ಮೊದಲನೇ ಅಂಕ ಪರದೆ ಬಿದ್ದಿತು. ಮುಂದಿನ ಸಾಲಿನಲ್ಲಿ ಕುಳಿತ ಹಿರಿಯರು ಗ್ರೀನ್ ರೂಮಿಗೆ ಧಾವಿಸಿ ಆಗುತ್ತಿದ್ದ ಪ್ರಮಾದಗಳ ಬಗ್ಗೆ ಕಲಾವಿದರ ಗಮನ ಸೆಳೆದು ಎಚ್ಚರಿಕೆ ಕೊಟ್ಟರು. ಎರಡನೇ ಅಂಕ ಪ್ರಾರಂಭವಾಯಿತು. ಶ್ರೀಕೃಷ್ಣನ ಹಾಡಿಗೂ ಪೇಟಿ ಮಾಸ್ತರನ ಹಾರ್ಮೋನಿಯಂ ವಾದನಕ್ಕೂ ತಾಳಮೇಳವಿಲ್ಲದಂತಾಯಿತು. ಕೃಷ್ಣನು ಹಾಡುವುದೇ ಒಂದು, ಪೇಟಿ ಮಾಸ್ತರನು ಬಾರಿಸುವುದೇ ಮತ್ತೊಂದು. ಅಂತೂ ಒಂದು ಬಗೆಯ ಗೊಂದಲಮಯ ವಾತಾವರಣ ಥಿಯೇಟರಿನಲ್ಲಿ ಕಂಡುಬಂದಿತು. ರಂಗಭೂಮಿಯ ಮೇಲೆ. ಅರ್ಜುನ, ಕೃಷ್ಣ, ಭೀಷ್ಮರ ಸಂವಾದದ ಒಂದು ದೃಶ್ಯ. ಅರ್ಜುನನ ಮೂದಲಿಕೆಯ ಮಾತುಗಳಿಗೆ ಭೀಷ್ಮರ ಗಂಭೀರ ಹಾಗೂ ಮಾರ್ಮಿಕ ಉತ್ತರ, ಕೃಷ್ಣನ ಹಿತೋಪದೇಶ ಇತ್ಯಾದಿ ನಡೆದಾಗ ಭೀಷ್ಮ ತನ್ನ ಶೌರ್ಯವನ್ನು ಹೇಳಿಕೊಳ್ಳುತ್ತ ತನ್ನ ಮೀಸೆಯ ಮೇಲೆ ಕೈ ಹಾಕುತ್ತಾನೆ. ಆದರೆ ದುರದೃಷ್ಟವಶಾತ್ ಆ ಬದಿಯ ಮೀಸೆಯೇ ಕೆಳಗೆ ಬಿದ್ದುಹೋಗಿದೆ. ಇನ್ನೊಂದನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಎದುರಿಗೆ ಕುಳಿತು ವೀಕ್ಷಿಸುತ್ತಿದ್ದ ನಮ್ಮ ಹಿರಿಯರು ಕಲಾವಿದನನ್ನು ಉದ್ದೇಶಿಸಿ, ಅದೂ ಒಂದು ಮೀಸೆಯನ್ನು ಕಿತ್ತೊಗೆದು ಬಿಡು" ಎಂದು ಜೋರಾಗಿ ಕೂಗಿಕೊಂಡರು. 'ಭೀಷ್ಮ ತಬ್ಬಿಬ್ಬಾದ! ಇಂದು ಇದು ಹೀಗೇಕೆ ಸಂಭವಿಸಹತ್ತಿದೆ... ಇನ್ನು ಮುಂದುವರಿದು ಪ್ರಯೋಜನವಿಲ್ಲ. ಎಲ್ಲವೂ ನಗೆಪಾಟಲಿನ ಘಟ್ಟಕ್ಕೆ ಮುಟ್ಟಹತ್ತಿದ್ದಿತು. ಅಷ್ಟರಲ್ಲಿ ಎರಡನೇ ಅಂಕ ಪರದೆಯನ್ನು ಎಳೆದು ನಾಟಕ ಮುಕ್ತಾಯಗೊಳಿಸಲಾಯಿತು. ಇದೆಲ್ಲಾ ಮಧ್ಯಾಹ್ನದ 'ಜಿಲೇಬಿ ಪ್ರಸ್ತ'ದ ಪ್ರತಾಪವಿರಬಹುದೇ? ಪಾಪ, "ಭೀಷ್ಮಪ್ರತಿಜ್ಞೆ"ಗೆ ಜಿಲೇಬಿಯಿಂದ ಈ ರೀತಿ ಭಂಗ ಉಂಟಾಗಬಹುದೆಂದು ತರುಣ ಕಲಾವಿದರು ಕನಸು-ಮನಸಿನಲ್ಲೂ ಊಹಿಸಿರಲಾರರು, ಅಲ್ಲವೆ? ✡

ಮನುಷ್ಯ ಎಂಬುವನು...

ಮೂಲ : ಜಿ. ವಿ. ನಾಥನ್

ಕನ್ನಡಕ್ಕೆ : ಕರುಣಾಕರ ಕೋವರ್ ಕೊಲ್ಲಿ

ಆ ಎಕ್ಸ್‌ಪ್ರೆಸ್ ಬಸ್ ಕೋಯಂಬತ್ತೂರಿನಿಂದ ಹೊರಟು ಕಾಂಗಾಯಂದಲ್ಲಿ ಟಿಫನ್ನಿಗೆಂದು ನಿಂತು ಪುನಃ ಹೊರಟಾಗ ನನ್ನ ಮುಂದೆ ಇದ್ದ ವ್ಯಕ್ತಿ ಎದ್ದು ಕೂರಲು ಸಾಧ್ಯವಿಲ್ಲದೆ ಬೇಸರದಿಂದ ಕಿಟಕಿಯ ಮೂಲಕ ಕತ್ತನ್ನು ಉದ್ದ ಮಾಡಿ ಯಾರನ್ನೋ ಹುಡುಕುತ್ತಿದ್ದ.

"ಓ ಕಂಡಕ್ಟರ್ ಸ್ವಲ್ಪ ತಡೆಯಿರಿ. ನನ್ನ ಪಕ್ಕದ ಸೀಟಿನವರು ಇನ್ನೂ ಬರಲಿಲ್ಲ. ಅವರು ತಿರುಚಿ ವರೆಗೆ ಹೋಗುವವರು."

ಡ್ರೈವರ್ ಹಾರ್ನ್ ಮಾಡುತ್ತಾ ಗಾಡಿಯನ್ನು ನಿಲ್ದಾಣದಿಂದ ತುಸು ಮುಂದೆ ತಂದ. ನಂತರ ಕಂಡಕ್ಟರನನ್ನು ಒಮ್ಮೆ ನೋಡಿದ.

"ರೈಟ್ ಹೋಗುಪಾ" ಎಂದು ವಿಷಲ್ ಕೊಟ್ಟು ಕಂಡಕ್ಟರ್ ತನ್ನ ಸ್ಥಳದಲ್ಲಿ ಆಸೀನನಾಗಿ ಪಕ್ಕದಲ್ಲಿದ್ದ ಪುಟ್ಟ ತಗಡಿನ ಟಿಕೆಟ್ ಪೆಟ್ಟಿಗೆಯನ್ನು ತೆಗೆದುಕೊಂಡ.

"ಏನಪ್ಪಾ ಕಂಡಕ್ಟರ್ ನಾನು ಹೇಳ್ತಲೇ ಇದ್ದೇನೆ, ನೀನು ರೈಟು ಕೊಟ್ಟು ಹೋಗ್ತಾನೇ ಇದ್ದೀಯಲ್ಲ? ತಿರುಚಿಯವರೆಗೆ ಟಿಕೇಟ್ ಆದ ಪ್ರಯಾಣಿಕ ಇನ್ನೂ ಬರಲೇ ಇಲ್ವಲ್ಲ. ಏನು ಅವಸರದ ಕೆಲಸಕ್ಕೆ ಹೋಗುವವರೊ......"

ಕಂಡಕ್ಟರ್ ಒಮ್ಮೆ ಕೈಯಲ್ಲಿದ್ದ ವಾಚನ್ನು ನೋಡಿದ.

"ಇನ್ನೊಂದು ಗಂಟೆಯ ಬಳಿಕ ಮತ್ತೊಂದು ಎಕ್ಸ್‌ಪ್ರೆಸ್ ಗಾಡಿ ಬರ್‍ತದೆ. ಅದ್ರಲ್ಲಿ ಅವರು ಸಾವಕಾಶವಾಗಿ ಬರಲಿ" ಎಂದು ನಿಧಾನವಾಗಿ ಉಲಿಯುತ್ತಾ ಚಲಿಸುತ್ತಿದ್ದ ಬಸ್ಸಿನಲ್ಲಿದ್ದ ಉಳಿದ ಪ್ರಯಾಣಿಕರಿಗೆ ಟಿಕೆಟ್ ಕೊಡಲು ಶುರು ಮಾಡಿದ.

"ಎಷ್ಟು ಗರ್ವ ನೋಡ್ರಿ. ಸ್ವಲ್ಪ ಬಸ್ ತಡವಾಗಿ ಹೋದ್ರೆ ಮನೆಯೇನು ಮುಳುಗಿ ಹೋಗ್ತದಾ? ಟಿಕೆಟ್ ತೆಗೆದುಕೊಂಡ ವ್ಯಕ್ತಿ ಬಸ್ಸು ತಪ್ಪಿ ಎಲ್ಲಾದರೂ ಕೋಯಂಬತ್ತೂರಿಗೆ ಹೋಗುವ ಬಸ್ಸಿನಲ್ಲೇ ಕುಳಿತುಕೊಂಡಿದ್ದಾರೊ ಏನೋ? ಒಂದು ನಿಮಿಷ ಕಾದು ನಿಂತು ಬಸ್ಸಿಗೆ ರೈಟು ಕೊಡ್ಲಿಕ್ಕೆ ಅದೇನು ಕೇಡಾಗಿತ್ತು!" ಎಂದು ತೊದಲತೊಡಗಿದ, ನನ್ನ ಮುಂದೆ ಕುಳಿತ ದಪ್ಪನಾದ ವ್ಯಕ್ತಿ.

ಕಂಡಕ್ಟರ್ ಪರವಾಗಿಯೂ ನನ್ನ ಮುಂದಿರುವವನ ಪರವಾಗಿಯೂ ಮಾತುಗಳ ಬಾಣಗಳು ರಭಸವಾಗಿ ಹಾರಾಡತೊಡಗಿದವು.

ಸುಮಾರು ಒಂದೂವರೆ ಗಂಟೆ ಚಲಿಸಿದ ನಂತರ ಬಸ್ಸು ನಿಧಾನವಾಗಿ ಕರೂರು ಬಸ್ ನಿಲ್ದಾಣವನ್ನು ತಲುಪಿತು.

"ಕರೂರು ಪ್ರಯಾಣಿಕರು ಮಾತ್ರ ಇಳಿಯಿರಿ; ಇನ್ನಾರೂ ಕೆಳಗಿಳಿಯಬೇಡ್ರಿ. ಇಲ್ಲಿ ಬಸ್ಸು ಬಹಳ ಹೊತ್ತು ನಿಲ್ಲೋದಿಲ್ಲ," ಎಂದು ಎಚ್ಚರಿಸಿದ ಕಂಡಕ್ಟರ್ ಅಲ್ಲಿ ಇಳಿಯಬೇಕಾದ ಪ್ರಯಾಣಿಕರನ್ನು ಇಳಿಸಿದ ನಂತರ ಹೊಸ ಪ್ರಯಾಣಿಕರನ್ನು ಹತ್ತಿಸಿ ಬಾಗಿಲು ಹಾಕುತ್ತ "ರೈಟ್" ಎಂದು ಹೇಳಿದ. ಚಾಲಕ ಬಸ್ಸನ್ನು ರಭಸವಾಗಿ ಓಡಿಸತೊಡಗಿದ.

ಹೊಸದಾಗಿ ಹತ್ತಿದ ಐವರು ಪ್ರಯಾಣಿಕರಲ್ಲಿ ಇಬ್ಬರು ಹೆಂಗಸರಾಗಿದ್ದರು. ಅವರಿಬ್ಬರೂ



ಮೈಮೇಲಿನ ಆಭರಣ ಹಾಗೂ ಬೆಲೆ ಬಾಳುವ ವಸ್ತ್ರಗಳಿಂದಾಗಿ ದೊಡ್ಡ ಮನೆತನಕ್ಕೆ ಸೇರಿದವರಂತೆ ತೋರುತ್ತಿದ್ದರು. ಅವರು ಆವೇಶದ ಗಾಬರಿಯಿಂದ ಅವಸರವಸರವಾಗಿ ಹೊರಟು ಬಂದವರಂತೆ ತೋರುತ್ತಿತ್ತು, ಅವರ ಆ ಅಸ್ತವ್ಯಸ್ತಗೊಂಡ ತಲೆಗೂದಲು ಅತ್ತು ಅತ್ತು ಕೆಂಪಾಗಿದ್ದ ಆ ಕಣ್ಣುಗಳನ್ನು ನೋಡುವದರಿಂದ. ಪುನಃ ದುಃಖದಿಂದ ಉಮ್ಮಳಿಸುತ್ತಿದ್ದರು. ಆಗಲೇ ಗಮನಿಸಿದ್ದು, ಅವರೊಡನೆ ಹತ್ತಿದ ಗಂಡಸರು ಸಹ ಬಿಕ್ಕಳಿಸುತ್ತಿರುವುದನ್ನು. ಅವರ ಹೆಗಲಿನ ವಸ್ತ್ರವನ್ನು ಬಾಯಿಯ ಮುಂದೆ ಕಣ್ಣುಗಳಿಗೆ ಒತ್ತಿಕೊಳ್ಳುತ್ತಿದ್ದರು.

ಬಸ್ಸಿನಲ್ಲಿದ್ದ ಪ್ರಯಾಣಿಕರಿಗೂ ಅವರ ಬಗ್ಗೆ ಕುತೂಹಲ ಕೆರಳಿರಬೇಕು. ಎಲ್ಲರೂ ಒಬ್ಬೊಬ್ಬರಾಗಿ ಕೇಳಲು ಶುರುಮಾಡಿದರು. "ಏನ್ರಿ ಏನಾಯ್ತು? ಏನಾಯ್ತು?" ಪ್ರಶ್ನೆಗಳು ಹಲವು ದನಿಗಳಾಗಿ ಕೇಳತೊಡಗಿದವು. ಅದರೊಡನೆ ಸಹಾನುಭೂತಿಯ ಮಾತುಗಳು. ವಿಷಯ ತಿಳಿಯಲು ಕಾತರ ಪಡುತ್ತಿದ್ದ ನೋಟಗಳು.

ಅವರ ಪೈಕಿ ಓರ್ವ ಸ್ತ್ರೀ ತಡೆಯಲಾರದೆ ತುಸು ಜೋರಾಗಿಯೇ ಅಳಲು ಪ್ರಾರಂಭಿಸಿ ಬಳಿಕ, "ಪಾಪಿ ಮಗ ಕಾಳಮ್ಮನ ಜಾತ್ರೆಗೆ ಹೋಗ್ಬೇಕೆಂದು ಒಂಟಿ ಕಾಲ್ನಲ್ಲೇ ನಿಂತಿದ್ದ. ಯಾವೋನೋ ಬರೆದ ಕಾಗದ ನೋಡ್ಕೊಂಡು ಕೂಸನ್ನು ಕಳ್ಸಿ ತೂಗಲಿಸಿಬಿಟ್ನಲ್ಲ. ಈ ವೈಶಾಖಕ್ಕೆ ಇಪ್ಪತ್ತು ವರ್ಷ ಪೂರ್ತಿ ಆಯಿತು. ಊರ್ನಲ್ಲಿ ಆದಿಮೂಲ ಎಂದರೆ ಒಳ್ಳೆಯ ಹೆಸರು ವಾಸಿ. ಚೇರಮನ್ ಪ್ರೆಸಿಡೆಂಟ್ ಎಂ. ಎಲ್. ಎ. ಎಲ್ಲರ ಹತ್ರಾನೂ ಓಡಾಡಿಕೊಂಡಿದ್ದ. ತೋಟಕ್ಕೆ ಹೋದ. ಆ ಒಳ್ಳೆ ಶನಿ ನನ್ನ ಮಗನೇ ಸಿಕ್ಕಿದ್ನಾ? ನನ್ನ ಮಗ ಹೋದ್ನಲ್ಲಾ..." ಆ ತಾಯಿಯ ಅಳು ಬಸ್ಸಿನಲ್ಲಿದ್ದ ಎಲ್ಲ ಪ್ರಯಾಣಿಕರ ಹೃದಯವನ್ನು ಕರಗಿಸಿತು.

"ಭಾಗ್ಯ, ಈಗ ಬೇಡ. ಊರಿಗೆ ಹೋಗೋವರೆಗೂ ಸ್ವಲ್ಪ ನಿಧಾನ ಮಾಡ್ಕೋ" ಎಂದು ಪುರುಷಧ್ವನಿಯೊಂದು ಆಜ್ಞೆಮಾಡಿ, ಕಂಡಕ್ಟರನ ಮುಂದೆ ಹಣ ಚಾಚುತ್ತ ಹೇಳಿದ, "ಕುಳಿತಲೆಗೆ ಟಿಕೆಟ್ ಕೊಡಿ ಕಂಡಕ್ಟರ್. ಆದರೆ ಕುಳಿತಲೆಗೆ

ನಾಲ್ಕು ಮೈಲಿ ಈಚೆ ಕಡೆ ನಮ್ಮ ಊರು ಮಾಂಬಟ್ಟಿನ ಹತ್ರ ನಮ್ಮನ್ನು ಇಳಿಸಿಬಿಡಿ."

ಹಣ ಪಡೆದು ಟಿಕೆಟ್ ಪಂಚ್ ಮಾಡುತ್ತ ಕಂಡಕ್ಟರ್, "ಕುಳಿತಲೆಯಲ್ಲೇ ಬಸ್ಸು ನಿಲ್ಲುತ್ತೆ ಅದಕ್ಕೆ ಮೊದ್ಲು ಬೇರೆಲ್ಲೂ ನಿಲ್ಲೋದಿಲ್ಲ" ಎನ್ನುತ್ತಾ ಪಕ್ಕಕ್ಕೆ ತಿರುಗಿ ಟಿಕೆಟ್ ಕೊಡುತ್ತ ಸಾಗಿದ.

ಅಷ್ಟರಲ್ಲಿ ಆತ ಹೇಳಿದ, "ಕಂಡಕ್ಟರ್, ಸರ್, ನೀವು ಮನಸ್ಸು ಮಾಡಿದರೆ ಎಲ್ಲಾ ಆಗ್ತದೆ. ನಾವು ಸ್ವಲ್ಪ ಬೇಗನೇ ಮನೆ ಸೇರ್ಬೇಕೆಂದು ಇದ್ರಲ್ಲಿ ಬಂದಿದ್ದು. ಸತ್ತೋದ ಮಗುಗನಿಗೆ ನಾವು ತುಂಬಾ ಬೇಕಾದವರು."

"ನೀವು ಕುಳಿತಲೆಗೆ ಎಂದು ಬಸ್ಸು ಹತ್ತಿದ್ದಲ್ವ? ಮೊದಲೇ ನನಗೆ ಹೇಳಿದ್ರೆ ಬಸ್ ನಿಲ್ಲಿಸ್ತಿರಲಿಲ್ಲ. ಕ್ಷಮಿಸಿಬಿಡಿ. ಕುಳಿತಲೆಗಿಂತ ಮುಂಚೆಲ್ಲೂ ಬಸ್ಸು ನಿಲ್ಲುವುದಿಲ್ಲ" ಎಂದು ಖಂಡಿತವಾಗಿ ಹೇಳಿಬಿಟ್ಟ ಕಂಡಕ್ಟರ್.

ಬಸ್ಸಿನಲ್ಲಿ ಪುನಃ ರಭಸದ ಬಿಸಿ ಮಾತುಗಳು ಪ್ರಾರಂಭವಾದವು.

"ಆ ಕಂಡಕ್ಟರ್ ತುಂಬಾ ಗರ್ವಿಷ್ಟ ಅಂತ ಕಾಣ್ತದೆ."

"ಒಂದಿಷ್ಟಾದರೂ ದಯೆದಾಕ್ಷಿಣ್ಯ ಇದೆಯಾ ನೋಡಿ.ಬಸ್ಸು ಹೋಗುವ ಮಾರ್ಗ ತಾನೆ? ಒಂದು ನಿಮಿಷ ಅಲ್ಲಿ ನಿಲ್ಲಿಸಿದರೆ ಇವನ ಗಂಟು ಏನು ಮಹಾ ಮುಳುಗಿಹೋಗುತ್ತದೆ?"

"ಕಾಂಗಾಯದ ಬಸ್ ನಿಲ್ದಾಣದಲ್ಲಿ ಟಿಕೆಟ್ ಮಾಡಿದ ಪ್ರಯಾಣಿಕನನ್ನೇ ಅವನ್ಮೊಂತ ಬಿಟ್ಟು ಬಂದದ್ದನ್ನು ನೋಡ್ಲಿಲ್ವಾ?"

"ಟ್ರಾನ್ಸ್‌ಪೋರ್ಟ್ ಕಾರ್ಪೊರೇಶನ್ ಮ್ಯಾನೇಜಿಂಗ್ ಡೈರೆಕ್ಟರಿಗೆ ಇವನ ಮೇಲೆ ಒಂದು ಪುಕಾರು ಬರೆಯಬೇಕು. ಇವನ್ನ ಹೀಗೆ ಸುಮ್ನೆ ಬಿಡ ಬಾರದು."

ಯಾವುದಕ್ಕೂ ಎಡೆಗೊಡದ ಕಂಡಕ್ಟರ್ ಚಾಲಕನ ಸಮೀಪ ಹೋಗಿ ಹಿಂದೋಡುತ್ತಿದ್ದ ಮಾರ್ಗವನ್ನು ದಿಟ್ಟಿಸಿ ನೋಡುತ್ತಾ ಕಂಬಕ್ಕೆ ಒರಗಿ ನಿಂತುಕೊಂಡ.

ಸತ್ತ ಮಗನನ್ನು ಕಾಣಲು ಹೋಗುತ್ತಿದ್ದ ಆ ತಾಯಿ, ಆ ಪ್ರಯಾಣಿಕರ ದುಃಖ ಅಧಿಕವಾಗ ತೊಡಗಿತು. ಎಕ್ಸ್‌ಪ್ರೆಸ್ ಗಾಡಿ ಎಂದರೆ ಎಲ್ಲೂ ನಿಲ್ಲಿಸಬಾರದೆಂದು ಅದೇನಾದರೂ ನಿಯಮವಿದೆಯಾ? ನನಗೆ ಸಹಜವಾಗಿಯೇ ಕೋಪ ಬಂತು, ಮನುಷ್ಯರು ಮತ್ತು ನಿಯಮಗಳ ಬಗ್ಗೆ.

ತುಸು ಹೊತ್ತು ಕಿಟಕಿಯ ಹೊರಗಿನಿಂದ ನಿಸರ್ಗವನ್ನು ದಿಟ್ಟಿಸಿದೆ. ಬಸ್ಸಿನೊಡನೆ ಓಡಿ ಬರುತ್ತಿದ್ದ ಅಲ್ಲಲ್ಲಿನ ಬಾಳೆತೋಟಗಳೂ ನೀರಿನ ತೋಡುಗಳೂ ಭತ್ತದ ಗದ್ದೆಗಳೂ ಮಾವಿನ ತೋಪುಗಳು ಕಬ್ಬಿನ ಬಯಲು ಇವೆಲ್ಲವನ್ನೂ ನೋಡುತ್ತ ಇರುತ್ತಿದ್ದಂತೆ ಕಣ್ಣುಗಳು ಯಾಂತ್ರಿಕವಾಗಿ ಮುಚ್ಚಿದವು, ಹಿಂದಿನ ದಿನ ಕೋವೆಯಲ್ಲಿ ನಡೆದ ಮಹಾಸಭೆಯಲ್ಲಿ ಮಧ್ಯರಾತ್ರಿಯವರೆಗೆ ಕಣ್ಣರೆದು ಕುಳಿತಿದ್ದುದರ ಫಲವಾಗಿ ಇರಬೇಕು.

ಕುಳಿತಲೆ ಎಂಬ ನಿಲ್ದಾಣದಲ್ಲಿ ಬಸ್ಸು ನಿಂತಿತು. "ಹತ್ತು ನಿಮಿಷ ಬಸ್ ನಿಲ್ಲುತ್ತದೆ" ಎಂದು ಕಂಡಕ್ಟರ್ ಆಜ್ಞಾಪಿಸಿದ. ಆ ದುಃಖಿತಪ್ರ ಪ್ರಯಾಣಿಕರು ಅವಸರವಾಗಿ ಇಳಿದು ಪಕ್ಕದಲ್ಲಿದ್ದ ಒಂದು ಟ್ಯಾಕ್ಸಿಯಲ್ಲಿ ಕುಳಿತಿದ್ದು ಕಾಣಿಸಿತು. ಕಾಫಿಗೆ ಇಳಿದವರು, ಬಸ್ಸಿನಲ್ಲಿ ಒಂದೇ ಸವನೆ ಗಂಟೆಗಟ್ಟಲೆ ಕಾಲು ಮಡಚಿ ಕುಳಿತವರು ತುಸು ಕಾಲನ್ನು ನೇರ ಮಾಡಲು ಹೊಟೇಲಿನಲ್ಲಿ ಅಡಿಯಿಟ್ಟರು. ಸಿಗರೇಟೊಂದನ್ನು ಅಂಟಿಸಿ ಹೊಗೆಯನ್ನು ದೂರ ಮಾಡುತ್ತಿರುವವರು ಪೆಟ್ಟಿಗೆ ಅಂಗಡಿಯನ್ನು ಹುಡುಕುತ್ತಾ ಹೋದರು. ಬಸ್ಸು ಮುಕ್ಕಾಲು ಭಾಗ ಖಾಲಿಯಾಯಿತು. ಆದರೆ ನಾನು ಮಾತ್ರ ಕುಳಿತಲ್ಲಿಯೇ ಇದ್ದೆ; ಅರ್ಧನಿದ್ರೆಯಿಂದಾಗಿ ಇಳಿಯುವ ಮನಸ್ಸು ಬರಲಿಲ್ಲ.

ಮತ್ತೆ ಚಾಲಕ ಹಾರ್ನ್ ಮಾಡಿದ.-ಚದುರಿ ಹೋದ ಎಲ್ಲ ಪ್ರಯಾಣಿಕರು ಓಡೋಡಿ ಬಂದು ಕುಳಿತರು. ಕಂಡಕ್ಟರ್ ಬಾಗಿಲು ಹಾಕಿದ ನಂತರ ತಿರುಚಿ ಮಾರ್ಗದಲ್ಲಿ ಬಸ್ಸು ಚಲಿಸುವವರೆಗೆ ಎಚ್ಚರಗೊಂಡಿದ್ದೆ. ಅನಂತರ ಸುಖವಾದ ನಿದ್ರೆ ಆವರಿಸಿತು.

ತಟ್ಟನೆ ಕೆಳಗೆ ಕಾಲು ಪ್ರಪಾತದಲ್ಲಿ ಇಳಿಯುವಂತೆ ಭಾಸವಾಯಿತು. ಈಗ ನಾನು ಎಲ್ಲಿದ್ದೇನೆ? ಮನೆಯಲ್ಲಿಯೋ ಅಥವಾ ಕೋವೆಯ ಆ ಮಹಾ ಸಭೆಯಲ್ಲಿಯೋ ?

ಎಚ್ಚರಗೊಂಡಾಗ ಬಸ್ಸು ಚಲಿಸದೆ ನಿಚಲಿತ

ವಾಗಿರುವುದು ಸ್ಪಷ್ಟವಾಯಿತು. ತಿರುಚಿ ತಲಪಿತೋ ಏನು? ಇಲ್ಲ. ಇದು ತಿರುಚಿ ಅಲ್ಲ. ಒಂದು ಅಂಗಡಿಯ ಮುಂದೆ ಇದ್ದ ಬೋರ್ಡಿನಲ್ಲಿ 'ಕುಳಿತಲೆ' ಎಂದು ಬರೆದದ್ದು ಗೋಚರಿಸಿತು. ಬಸ್ಸು ಇನ್ನು ಹೊರಡಲ್ಲವಾ...ಏನಾಯ್ತು ಬಸ್ಸಿಗೆ?

ಬಸ್ಸಿನೊಳಗೆ ಕೆಲವರು ಮಾತ್ರ ಕುಳಿತಿದ್ದರು. ಉಳಿದವರು ಹೊರಗಡೆ ಅಲ್ಲಲ್ಲಿ ಗುಂಪುಗೂಡಿ ನಿಂತಂತೆ ಗೋಚರಿಸಿತು. ಚಾಲಕ ಮತ್ತು ಕಂಡಕ್ಟರ್ ಹೊರಗಡೆ ಬೀಡಿ ಸೇದಿ ಹೊಗೆ ಬಿಡುತ್ತಾ ಏನನ್ನೊ ಹರಟುತ್ತಾ ಅವರದೇ ಒಂದು ಲೋಕದಲ್ಲಿದ್ದರು. ನಾನು ಅಚ್ಚರಿ ಗಾಬರಿಯಿಂದ ಕೆಳಗಿಳಿದೆ. ಬಸ್ಸಿಗೇನಾದರೂ ತೊಂದರೆಯಾಗಿದೆಯಾ ಎಂದು ಸಮೀಪದಲ್ಲಿದ್ದ ಓರ್ವನನ್ನು ಕೇಳಿದೆ.

"ಏನು ಸಾರ್, ಏನಾಯ್ತು? ಬಸ್ಸು ಯಾಕೆ ನಿಂತೋಯ್ತು?"

ಆತ ಉತ್ತರಿಸಿದ.

"ಕೊಯಂಬತ್ತೂರಿನಿಂದ ಸಣ್ಣ ಮಗುವನ್ನೆತ್ತಿ ಓರ್ವ ಅಯ್ಯಂಗಾರರ ಅಮ್ಮ ಹತ್ತಿದ್ದರು. ನೋಡಿದರಲ್ಲಾ ಅವರ ಮಗುವಿಗೆ ದಿಢೀರನೆ ಫಿಟ್ಸ್ ಶುರುವಾಯಿತು. ಕೈಕಾಲು ಬಡಿದು ಎಳೆದಾಡಿ ಗೋಳಾಡಿಸತೊಡಗಿತು. ಸ್ಟ್ಯಾಂಡಿನಿಂದ ಬಸ್ಸು ಬಿಡೋವರೆಗೂ ಮಗು ಚನ್ನಾಗಿ ನಗುತ್ತ ಇತ್ತು. ಸುಮಾರು ಒಂದೂವರೆ ವಯಸ್ಸಿನ ಮಗು. ಆ ಹೆಂಗಸು ಅತ್ತು ರಾದ್ಧಾಂತ ಮಾಡುವುದನ್ನು ನೋಡಲು ಸಹಿಸಲಾಗಲಿಲ್ಲ. ಕಂಡಕ್ಟರ್ ಮತ್ತು ಡ್ರೈವರ್ ಕೂಡ ಮನುಷ್ಯರು ನೋಡಿ. ನೇರವಾಗಿ ಸರಕಾರಿ ಆಸ್ಪತ್ರೆಗೆ ಬಸ್ಸನ್ನು ತಂದು ನಿಲ್ಲಿಸಿದರು. ಡಾಕ್ಟರು ಮಗುವಿಗೆ ಎರಡು ಸೂಜಿ ಹಾಕಿದ ನಂತರವೇ ಮಗುವಿನ ಸೆಳೆತ ನಿಂತಿತು. ಒಂದು ನಿಮಿಷ ಕೂಡ ಹಾಳು ಮಾಡದೆ ಬಸ್ಸನ್ನು ಇಲ್ಲಿ ಆಸ್ಪತ್ರೆಗೆ ತರದೆ ಇದ್ದಿದ್ರೆ ಬಸ್ಸಿನಲ್ಲೇ ಆ ಮಗು ಪರಲೋಕಕ್ಕೆ ಹೋಗ್ತಿತ್ತು."

ಅಷ್ಟರಲ್ಲಿ ಬಸ್ಸಿನಲ್ಲಿ ನನ್ನ ಮುಂದಿನ ಸೀಟಿನಲ್ಲಿ ಕುಳಿತಿದ್ದ ಆ ದಪ್ಪ ವ್ಯಕ್ತಿ ಹೇಳಿದ.

"ಕಂಡಕ್ಟರರ ಬಗ್ಗೆ ನಾನು ಕಾಂಗಾಯದಲ್ಲಿ ಸ್ವಲ್ಪ ಬೇಸರಪಟ್ಟೆ. ಆದ್ರೆ ಈಗ್ಲೆ ಅವರ ಚಿನ್ನದಂತಾ ಸ್ವಭಾವ ಗೊತ್ತಾಗಿದ್ದು. ಕರೂರಲ್ಲಿ ಶವಸಂಸ್ಕಾರಕ್ಕೆ ಹೋಗಲೆಂದು ಕೆಲ ಪ್ರಯಾಣಿಕರು ಕುಳಿತಲೆಗಿಂತಾ ಮುಂಚೆ ಇಳಿಸಬೇಕೆಂದು ಬೇಡಿಕೊಂಡಾಗ ಸಾಧ್ಯವಿಲ್ಲೆಂದು ಕುಳಿತಲೆಯಲ್ಲೇ ನಿಲ್ಲಿಸುವುದೆಂದು ಹೇಳಿ ಸತಾಯಿಸಿದ್ದು......"

"ಸತ್ತುಹೋದ ಒಬ್ಬರಿಗೆ ಬೇಕಾಗಿ ನಿಯಮವನ್ನು ಮೀರುವುದಕ್ಕಿಂತ ಸಾಯಲಿರುವ ಒಂದು ಜೀವವನ್ನು ಕಾಪಾಡಲು ಬೇಕಾಗಿ ನಿಯಮವನ್ನು ಮೀರಬಹುದು. ಅದಕ್ಕಾಗಿ ಯಾವ ದಂಡ ವಿಧಿಸಿದರೂ ಸ್ವೀಕರಿಸಲು ತಯಾರೆಂದು ಕಂಡಕ್ಟರ್ ಹೇಳಿದರು ಸಾರ್. ಕರೂರಿನಿಂದ ಬಸ್ಸು ಹತ್ತುವಾಗಲೆ ನಿಜವಾದ ವಿವರವನ್ನು ಹೇಳಿದ್ದರೆ ಬಹುಶಃ ಅವರು ಹೇಳಿದಲ್ಲೆ ಬಸ್ಸನ್ನು ನಿಲ್ಲಿಸುತ್ತಿದ್ದರೋ ಏನೋ. ಕುಳಿತಲೆಗೆ ಎಂದು ಸುಳ್ಳು ಹೇಳಿ ಹತ್ತಿದ ನಂತರ ವಿಷಯವನ್ನು ತಿಳಿಸಿ ಬೇರೆ ಊರಿನಲ್ಲಿ ಇಳಿಸಬೇಕೆಂದು ಹೇಳಿದ್ದೆ ತನಗೆ ಒಪ್ಪಿಗೆ ಆಗಲಿಲ್ಲ ಎಂದು ಕಂಡಕ್ಟರ್ ಹೇಳುವುದರಲ್ಲೂ ನ್ಯಾಯವಿದೆ ಸರ್."

ಅರ್ಧ ಗಂಟೆ ಕಳೆದ ನಂತರ ಆಪತ್ತಿನ ಘಟಕ ದಾಟಿದ ನೆಲೆಯಲ್ಲಿ ಮಗುವಿನೊಡನೆ ಆ ತಾಯಿ ಬಂದು ಕುಳಿತಾಗ ಬಸ್ಸು ಮುಂದೆ ಹೊರಟಿತು.

"ಅಪ್ಪಾ ಕಂಡಕ್ಟರ್, ನೀನು ಮಹಾರಾಜನಾಗಿ ಇರಬೇಕು. ದೇವರು ದೇವಸ್ಥಾನದಲ್ಲೇ ಇರುವುದೆಂದು ಹೇಳುತ್ತಾರೆ. ಇಲ್ಲಪ್ಪ ನೀನೇ ನಮ್ಮ ಕುಲದೈವ" ಎಂದು ಕಣ್ಣೀರಿಡುತ್ತಾ ಆ ಮಗುವಿನ ತಾಯಿ ಕೈ ಜೋಡಿಸಿ ಕೃತಜ್ಞತೆಯನ್ನು ವ್ಯಕ್ತಪಡಿಸಿದಾಗ ನನಗೆ ರೋಮಾಂಚನವಾಗದೇ ಇರಲಿಲ್ಲ. ✿

ಉತ್ತರ ಅಮೇರಿಕದಲ್ಲಿ ವಾಸಿಸುವ 'ಕಾಂಗರೂ-ಇಲಿ'ಯ ಕೆನ್ನೆಯ ಎರಡೂ ಕಡೆ ಆಹಾರವನ್ನು ಕೂಡಿಡಲು ಸಂಚಿಗಳಿವೆ.

* *

ಹಿಮವತ್ಪರ್ವತದ ತಪ್ಪಲಲ್ಲಿದ್ದ ಬ್ರಹ್ಮಾಶ್ರಮದ ಅಧಿಪತಿಯನ್ನು, ಚಿತ್ರಕೂಟ ಆಶ್ರಮದ ಪ್ರಧಾನಿಯನ್ನು 'ಕುಲಪತಿ' ಎಂದು ಕರೆಯಲಾಗುತ್ತಿತ್ತು.

ಉತ್ತರಾಧಿಕಾರಿ ?

ಡಾನ್ ಪೆಟ್ರೊ ಡಿ ಪೆರಾಲ್ಟ ಗವರ್ನರ್ ಆಗಿದ್ದಾಗ ಸ್ಪೇನಿನ ರಾಜ ಅವನಿಗೆ 'ಅರಿಜೋನಾದ ಜಹಗೀರುದಾರ' ಎಂಬ ಬಿರುದಿನೊಂದಿಗೆ ೧.೨ ಕೋಟಿ ಎಕರೆ ಭೂಮಿಯನ್ನು ಕಾಣಿಕೆಯಾಗಿ ನೀಡಿದ್ದ. ಮುಂದೆ ಡಾನ್ ಪೆಟ್ರೊ ತೀರಿಕೊಂಡಾಗ ಅವನ ಈ ಭೂಮಿ ವಾರಸುದಾರರಿಲ್ಲದೆ ಅನಾಥವಾಗಿತ್ತು.

೧೮೮೦ ರ ಮೇ ತಿಂಗಳ ಒಂದು ದಿನ ಜೇಮ್ಸ್ ರೇವಿಸ್ ಎಂಬ ಒಬ್ಬ ಗುಮಾಸ್ತ ಅರಿಜೋನಾದ ಫಿನಿಕ್ಸ್‌ಗೆ ಬಂದ. ಅವನ ಬಳಿಯಿದ್ದ ದಾಖಲೆ ಪತ್ರಗಳು ಅರಿಜೋನಾ ಹಾಗೂ ನ್ಯೂ ಮೆಕ್ಸಿಕೋದಲ್ಲಿದ್ದ ಪೆಟ್ರೋನಿನ ಎಲ್ಲಾ ಭೂಮಿಗೂ ಅವನೇ ಒಡೆಯ ಎಂಬುದನ್ನು ಸಿದ್ಧಪಡಿಸಿದವು.

ಮೆಕ್ಸಿಕೋದ ಚರ್ಚುಗಳಲ್ಲಿ ನಡೆಸಿದ ಜನನ ಮರಣಗಳ ದಾಖಲೆಯ ಪರಿಶೀಲನೆಯೂ [ಪೆಟ್ರೊಗೆ ರೇವಿಸ್ ನೇರ ಉತ್ತರಾಧಿಕಾರಿ ಎಂಬುದಷ್ಟೇ ಅಲ್ಲದೆ ಅವನ ಪತ್ನಿ ಪರಾಲ್ಟಾ ಕೂಡ ಆ ಕುಟುಂಬದ ಸದಸ್ಯಳು ಎಂಬುದು ಸಿದ್ಧವಾಯಿತು.

ಮೆಕ್ಸಿಕೋದಿಂದ ಪಡೆದಿದ್ದ ಭೂಮಿಯ ಮೇಲಿನ ಹಳೆಯ ಬಾಡಿಗೆ ಇನ್ನೂ ಬಂದಿಲ್ಲವೆಂದೂ ಬಾಕಿಯಾಗಿ ೨೦ ಕೋಟಿ ಡಾಲರು ನೀಡಬೇಕೆಂದೂ ಅಮೇರಿಕದ ಸರಕಾರಕ್ಕೆ ರೇವಿಸ್ ಬೇಡಿಕೆ ಸಲ್ಲಿಸಿದ. ಜೊತೆಗೆ ರೇಲ್ವೆ ಕಂಪನಿಗಳು ರೈತರು ಇತ್ಯಾದಿ ಎಲ್ಲರಿಗೂ ಗೌರವಧನ ಸಲ್ಲಿಸಲೆಂದು ಅಪಾರ ಮೊತ್ತದ ಬೇಡಿಕೆಗಳನ್ನು ಮಂಡಿಸಿದ.

ಮ್ಯಾಡ್ರಿಡ್ ಮೆಕ್ಸಿಕೊ ನಗರದಲ್ಲಿ ದೊರೆತ ದಾಖಲೆ ಪತ್ರಗಳೆಲ್ಲಾ ಸಮರ್ಥಿಸಿದಾಗ ಪೆಟ್ರೋನ ಎಲ್ಲಾ ಆಸ್ತಿ ರೇವಿಸ್‌ಗೇ ಸಂದಿತು. ರೇವಿಸನ ಸುಖಭೋಗಕ್ಕೆ ನಾಂದಿಯಾಯಿತು.

ಒಂಬತ್ತು ವರ್ಷಗಳ ಕಾಲ ವೈಭವದ ಜೀವನ ನಡೆಸಿ ವಿಕ್ಟೋರಿಯಾ ರಾಣಿಯ ಸಭಾಸದನೂ ಆಗಿದ್ದ ಜೇಮ್ಸ್ ರೇವಿಸ್‌ನ ಮೋಸ ವಂಚನೆ ಕೊನೆಗೂ ಬಯಲಾಗಿ ಆತ ಸೆರೆಮನೆ ಸೇರಬೇಕಾಯಿತು. ಅವನ ಹೆಂಡತಿ ರೆಡ್ ಇಂಡಿಯನ್ ಎಂದು ತಿಳಿದುಬಂದಿತು. ದಾಖಲೆ ಪತ್ರಗಳನ್ನು ಆತ ಸ್ಯಾನ್ ಫ್ರಾನ್ಸಿಸ್ಕೋ ನಿವಾಸದಿಂದ ಸೃಷ್ಟಿಸಿ ತಂದಿದ್ದ. ಆದರೆ ೧೯೧೪ ರಲ್ಲಿ ೬೭ ರ ಪ್ರಾಯದ ಆತ ಸಾಯುವಾಗಲೂ ತಾನೊಬ್ಬ ಸ್ಪೇನಿನ ಸಾಮಂತ ಎಂದೇ ಹೇಳುತ್ತಿದ್ದ.

ಸಂಗ್ರಹ : **ಸಿ. ಎಸ್. ಎ.**

ಇಚ್ಛಾಶಕ್ತಿಗಿಂತ ಮಿಗಿಲಾದದ್ದಿದೆಯೇ ?

ಕೈದಿಯ ಶಿಖರ

ಮೂಲ: **ಫ್ಲೋವೆಲ್ ಸ್ಟೈಲ್ಸ್** ಕನ್ನಡಕ್ಕೆ: **ಸೇತೂರಾವ್ ಶ್ರೀನಿವಾಸ**

ಶಿಖರಾರೋಹಣದ ತೀವ್ರ ಹಂಬಲದಿಂದಾಗಿ ಕಾರಾಗೃಹದಿಂದ ತಪ್ಪಿಸಿಕೊಂಡು ಹೋಗಿ ಶಿಖರಾರೋಹಣವನ್ನು ಮಾಡಿ ಬಂದ ಸಾಹಸದ ಪ್ರಕರಣವೊಂದು ಎರಡನೆಯ ಮಹಾಯುದ್ಧದ ಸಮಯದಲ್ಲಿ ನಡೆಯಿತು. ಫೆಲಿಸ್ ಬೆನುಜಿ ಓರ್ವ ಇಟಾಲಿಯನ್ ಸೈನಿಕ. ಅವನು ಇತರ ಇಟಾಲಿಯನ್ ಸೈನಿಕರೊಂದಿಗೆ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟಿದ್ದ. ಈ ಸೈನಿಕರನ್ನೆಲ್ಲಾ ಬ್ರಿಟಿಷರು ಆಫ್ರಿಕದ ಕೀನ್ಯಾದೇಶದಲ್ಲಿನ ನಾಯ್ಯುಕಿ ಎಂಬ ಸ್ಥಳದಲ್ಲಿ ಯುದ್ಧಬಂದಿಗಳ ಶಿಬಿರದಲ್ಲಿ ಕೂಡಿಟ್ಟಿದ್ದರು.

ಯುದ್ಧಬಂದಿಗಳ ಶಿಬಿರಗಳ ಪೈಕಿ ೩೫೪ನೆಯ ಶಿಬಿರವೂ ಒಂದು. ಅದರಲ್ಲಿ ಫೆಲಿಸ್ ಬೆನುಜಿಯನ್ನೂ ಹಿಡಿದಿಟ್ಟಿದ್ದರು. ಅವನು ಇದ್ದ ಕೋಣೆಗೆ ಒಂದೇ ಕಿಟಕಿ. ಅದರ ಬಳಿ ನಿಂತು ಹೊರಗೆ ಇಣುಕಿ ಹಾಕಿ ನೋಡಿದರೆ ದೂರದಲ್ಲಿ ಕಾಣುವುದು ಕೀನ್ಯಾ ಶಿಖರ. ನೀಲಿ ಬಣ್ಣದ ನೀರ್ಗಲ್ಲ ಪ್ರವಾಹದಲ್ಲಿ ಮುಳುಗಿದ ಬೃಹದಾಕಾರದ ಕಪ್ಪು ಬಣ್ಣದ ಕೋರೆದಾಡೆಯಂತೆ ಕಾಣುತ್ತಿತ್ತು ಈ ಶಿಖರ. ಹಾಳಾದ್ದು ಈ ಶಿಬಿರ ವಾಸ. ಕೇವಲ ಶಿಬಿರವಾಸವಲ್ಲ; ಯುದ್ಧಬಂದಿಗಳ ಶಿಬಿರವಾಸ. ಸ್ವಾತಂತ್ರ್ಯ ಕಳೆದುಕೊಂಡು ಸೀಮಿತ ಕ್ಷೇತ್ರದಲ್ಲಿಯೇ ಐದು ವರ್ಷಗಳನ್ನು ಕಳೆಯುವುದಕ್ಕಿಂತ ಸಾವು ಲೇಸು ಎಂದು ಬೆನುಜಿ ಭಾವಿಸಿದ. ಅವನು ಸೈನಿಕನಷ್ಟೇ ಅಲ್ಲ, ಪರ್ವತಾರೋಹಿಯೂ ಹೌದು. ಯಶಸ್ವಿಯಾದ ಶಿಖರಾರೋಹಿಯೂ ಹೌದು. ಇಟಲಿಯ ಎಲ್ಲ ಪರ್ವತ, ಶಿಖರಗಳನ್ನೂ ಏರಿಬಂದ ಬೆನುಜಿಯು ಕೀನ್ಯಾ ಶಿಖರವನ್ನು ಕಂಡಾಗ "ನಾನು ಒಮ್ಮೆಯಾದರೂ ಈ ಶಿಖರವನ್ನು ಏರಲಾರನೇ?" ಎಂದು ಹಲುಬಿದ. ತನ್ನ ಕೋಣೆಯ ಕಿಟಕಿಯಿಂದ ಬಾಹ್ಯಜಗತ್ತನ್ನು ನೋಡಿದಾಗಲೆಲ್ಲಾ ಅವನನ್ನು ಕೀನ್ಯಾ ಶಿಖರವು ಕೈ ಬೀಸಿ ಕರೆದಂತೆ ಭಾಸವಾಗುತ್ತಿತ್ತು. ಶಿಖರಾರೋಹಣದ ಹಂಬಲ ತೀವ್ರಗೊಳ್ಳಲಾರಂಭಿಸಿತು. ಶಿಬಿರದಿಂದ ತಪ್ಪಿಸಿಕೊಂಡು ಹೊರಕ್ಕೆ ಓಡಿ ಶಿಖರವನ್ನು ಹತ್ತಬಾರದೇಕೆ ಎಂಬ ಆಲೋಚನೆ ಅವನಲ್ಲಿ ಮೂಡಿತು. ಅವನು ಕಾರಾಗೃಹದ ಗ್ರಂಥಾಲಯದಲ್ಲಿ ಕೀನ್ಯಾ ಶಿಖರದ ಬಗ್ಗೆ ಮಾಹಿತಿ ಸಂಗ್ರಹಿಸತೊಡಗಿದ. ಅಗ ಸಿಕ್ಕಿದ ಮಾಹಿತಿ ಇಷ್ಟೇ. ಕೀನ್ಯಾ ಪರ್ವತದಲ್ಲಿ ಎರಡು ಶಿಖರಗಳಿದ್ದವು. ಒಂದು ಬಾಟಿಯನ್, ಇನ್ನೊಂದು

ಲೆನಾನಾ: ಆದರೆ ಪುಸ್ತಕದಲ್ಲಿ ಬಾಟಿಯುನ್ನಿನ ಅವಳಿ ಶಿಖರವಾದ ನೇವಿಯುನ್ನಿನ, ಪ್ರಸ್ತಾಪವೇ ಇರಲಿಲ್ಲ. ನೇವಿಯನ್ ಸಹ ಬ್ಯಾಟಿಯುನ್ನಿನಷ್ಟೇ ಎತ್ತರವಿತ್ತು. ಈ ಪರ್ವತದಲ್ಲಿ ೧೫ ನೀರ್ಗಲ್ಲ ಪ್ರವಾಹಗಳಿದ್ದವು. ಅವು ಅನೇಕಾನೇಕ ನದಿಗಳಿಗೆ ನೀರನ್ನು ಒದಗಿಸುತ್ತಿದ್ದವು. ಯುದ್ಧಬಂದಿಗಳ ಶಿಬಿರದ ಸಮೀಪದಲ್ಲಿ ಹರಿಯುತ್ತಿದ್ದ ನಾನ್ಯುಕಿ ನದಿಗೂ ಇವೇ ನೀರನ್ನು ಪೂರೈಸುತ್ತಿದ್ದವೆಂದೂ ತಿಳಿಯಿತು. ಆದರೆ ಶಿಖರವು ಈ ನದಿಯಿಂದ ಸುಮಾರು ೨೦ ಮೈಲಿಗಳಷ್ಟು ದೂರದಲ್ಲಿತ್ತು. ನದಿಗೂ ಶಿಖರಕ್ಕೂ ಮಧ್ಯೆ ಕಡಿದಾದ ಬೆಟ್ಟಗುಡ್ಡಗಳ ಪ್ರದೇಶವೂ ದಟ್ಟವಾದ ಅರಣ್ಯವೂ ಇದ್ದವು. ಸುರಿತ ಪರ್ವತಾರೋಹಿಯಾದ ಬೆನುಜಿಯ ಕಣ್ಣಳತೆಯಂತೆ ಈ ಪರ್ವತವು ಅತಿ ಕಡಿದಾಗಿಯೂ ಹತ್ತಲು ತುಂಬ ಕಷ್ಟಸಾಧ್ಯವೂ ಆದಂತೆ ಕಂಡುಬಂದಿತು. ಪರ್ವತಾರೋಹಣಕ್ಕೆ



ಅಗತ್ಯವಾದ ಪರಿಕರಗಳೂ ಜತೆಗೆ ಒಬ್ಬಿಬ್ಬರು ಸಂಗಾತಿಗಳೂ ಅವಶ್ಯವೆಂದು ಅನ್ನಿಸಿತು. ಅವನು ಶಿಬಿರದಲ್ಲಿ ತನಗೆ ತಕ್ಕವರೆನಿಸಿದ ಸಂಗಾತಿಗಳನ್ನು ಹುಡುಕ ಮಾಡಲಾರಂಭಿಸಿದ.

ಹಲವಾರು ಬಾರಿ ಪ್ರಯತ್ನಗಳನ್ನು ಮಾಡಿದ ನಂತರ ಅವನಿಗೆ ಇಬ್ಬರು ಸಂಗಾತಿಗಳು ದೊರೆತರು. ಒಬ್ಬ ಡಾಕ್ಟರ್ ಗಿಯ್ವಾನ್ ಮತ್ತು ಇನ್ನೊಬ್ಬ ಎಂಜೋ. ಗಿಯ್ವಾನ್‌ಗೆ ಪರ್ವತಾರೋಹಣದಲ್ಲಿ ಸಾಕಷ್ಟು ಪರಿಶ್ರಮವಿತ್ತು. ಎಂಜೋಗೆ ಅನುಭವವಿರಲಿಲ್ಲ. ಅಷ್ಟೇ ಅಲ್ಲ, ಅವನಿಗೆ ಶ್ವಾಸಕೋಶದ ತೊಂದರೆ ಬೇರೆ. ಆದರೂ ಇವನನ್ನು ಆರಿಸಿಕೊಳ್ಳದೆ ವಿಧಿಯಿರಲಿಲ್ಲ. ಏಕೆಂದರೆ, ಬೆನುಜಿಗೆ ವಿಶ್ವಾಸಾರ್ಹ ವ್ಯಕ್ತಿಗಳೇ ಬೇಕಾಗಿತ್ತು. ಪರ್ವತಾರೋಹಣಕ್ಕೆ ಅಗತ್ಯವಾದ ಉಪಕರಣಗಳು ಎಂದರೆ ನೀರ್ಗಲ್ಲ ಕೊಡಲಿ (ನೀರ್ಗಲ್ಲಿನಲ್ಲಿ ಮೆಟ್ಟಲು ಕಡಿಯಲು ಬಳಸುವ ಕೊಡಲಿ), ಹಗ್ಗಗಳು ಮತ್ತು ಕನಿಷ್ಠ ಪಕ್ಷ ೧೫ ದಿನಗಳಿಗಾಗುವಷ್ಟು ಆಹಾರ ಪದಾರ್ಥಗಳು. ಬೆನುಜಿ ಇಷ್ಟನ್ನೂ ಗಿಟ್ಟಿಸಿಕೊಂಡ ಸಾಹಸವನ್ನು ಮೆಚ್ಚಬೇಕಾದದ್ದೇ. ಇಷ್ಟನ್ನು ಸರಿ ದೊರಕಿಸಿಕೊಳ್ಳಲು ಸುಮಾರು ಆರು ತಿಂಗಳು ಬೇಕಾಯಿತು. ಪ್ರತಿನಿತ್ಯವೂ ಕೈದಿಗಳನ್ನು ಶಿಬಿರದ ವಿಶಾಲವಾದ ಆವರಣದಲ್ಲಿ ಒಂದು ಮೈಲಿಯಷ್ಟು ದೂರದ ವರೆಗೆ ವ್ಯಾಯಾಮಕ್ಕೆಂದು ನಡೆಸಲಾಗುತ್ತಿತ್ತು. ಇವರು ಭೂಮಧ್ಯ ರೇಖೆಯನ್ನು ಹಾದು ಹೋಗುವುದೆಂಬುದನ್ನು ಗುರುತಿಸುವುದಕ್ಕೆ ನಿಲ್ಲಿಸಿದ ಕೈಮರದ ವರೆಗೂ ನಡೆಯಬೇಕಾಗಿತ್ತು. ಆ ಕೈಮರದ ಸಮೀಪದಲ್ಲಿಯೇ ಶಿಬಿರದ ಕಸವನ್ನೆಲ್ಲಾ ಎಸೆಯಲಾಗುತ್ತಿತ್ತು. ಈ ಮೂವರು ಕೈದಿಗಳೂ ಚಾಕಚಕ್ಯತೆಯಿಂದ ಕಸವನ್ನು ವನ್ನು ಕೆದಕಿ ಕಬ್ಬಿಣ ಮತ್ತು ಅಲ್ಯೂಮಿನಿಯಮ್ಮಿನ ಚೂರು ಪಾರುಗಳನ್ನು ಆರಿಸಿ ಬಚ್ಚಿಟ್ಟರು. ಶಿಬಿರದ ಕಟ್ಟಡಗಳ ಸಂರಕ್ಷಣಾ ಕಾರ್ಯವನ್ನು ಭಾರತೀಯ ತಂತ್ರಜ್ಞರಿಗೆ ವಹಿಸಿಕೊಡಲಾಗಿತ್ತು. ಇದರಿಂದ ಈ ಮೂವರು ಕೈದಿಗಳು ಎರಡು ಸುತ್ತಿಗೆಗಳನ್ನೂ ಒಂದು ಉಳಿಯನ್ನೂ ಅಪಹರಿಸಿದರು. ಕಸದ ರಾಶಿಯಿಂದ ಆರಿಸಿದ್ದ ಮೋಟಾರ್ ಕಾರಿನ ಮಡ್‌ಗಾರ್ಡ್‌ಗಳನ್ನು, ಕತ್ತರಿಸಿ, ಆ ಉಕ್ಕಿನ ತಗಡುಗಳಿಂದ ಎರಡು ಜೊತೆ ಲೋಹದ ಕೊಕ್ಕೆಗಳನ್ನು ಅವರು ಶಿಬಿರದ ಕಮ್ಮಾರನಿಂದ ಮಾಡಿಸಿಕೊಂಡರು. ಎರಡು ಸುತ್ತಿಗೆಗಳನ್ನು ಸರಿ ಸುಮಾರು ನೀರ್ಗಲ್ಲ ಕೊಡಲಿಗಳನ್ನು ಹೋಲುವಂತಹ ಉಪಕರಣಗಳನ್ನಾಗಿ ಮಾರ್ಪಡಿಸಿಕೊಂಡರು. ಪ್ರತಿ ವಾರವೂ ತಮಗೆ ಕೊಡುತ್ತಿದ್ದ ಸಿಗರೇಟುಗಳನ್ನು ಬೇರೆಯವರಿಗೆ ಕೊಟ್ಟು ಅದಕ್ಕೆ ಬದಲಿಯಾಗಿ ಬ್ರೆಡ್ ಮತ್ತಿತರ ಆಹಾರ ಪದಾರ್ಥಗಳನ್ನೂ ಗುಡಾರಗಳಿಗಾಗಿ ಬಳಸುವ ಚೂರು ಪಾರು ಬಟ್ಟೆಗಳನ್ನು ಪಡೆದುಕೊಂಡರು. ಹಾಸಿಗೆಗಳನ್ನು ಕಟ್ಟಲು ಬಳಸುವ ಹಗ್ಗಗಳನ್ನು ಪರ್ವತಾರೋಹಣಕ್ಕಾಗಿ ಬಳಸಿಕೊಳ್ಳಲು ತಕ್ಕಂತೆ ಮಾರ್ಪಡಿಸಿಕೊಂಡರು. ಒಂದು ಇಟಾಲಿಯನ್ ಧ್ವಜವನ್ನು ಸಹ ಸಂಪಾದಿಸಿಕೊಂಡರು. ಶಿಖರಾರೋಹಣದ ನಂತರ ಅದನ್ನು ಹಾರಿಸುವ ಮಹತ್ವಾಕಾಂಕ್ಷೆ ಅವರದು. ಕೀನ್ಯಾ ಪರ್ವತಕ್ಕೆ ಸಂಬಂಧ ಪಟ್ಟಂತೆ ಎಲ್ಲ ಮಾಹಿತಿಯನ್ನೂ ಸಂಗ್ರಹಿಸಿದರು. ಪರ್ವತದಲ್ಲಿನ ಹವಾಮಾನ, ಅದನ್ನು ಹೇಗೆ ಎದುರಿಸಬೇಕು, ದಾರಿಯಲ್ಲಿ ತಮಗೆ ಅಡ್ಡ ಬರಬಹುದಾದ ಕ್ರೂರ ಪ್ರಾಣಿಗಳಾವುವು ಇವನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡರು.

ಡಾಕ್ಟರ್ ಗಿಯ್ವಾನ್‌ಗೆ ಶಿಬಿರದ ಕಾಯಿಪಲ್ಲೆಗಳನ್ನು ಬೆಳೆಯುವ ತೋಟವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿಕೊಡಲಾಗಿತ್ತು. ತೋಟದ ಕೆಲಸಕ್ಕೆ ಅಗತ್ಯವಾದ ಉಪಕರಣಗಳನ್ನು ದಾಸ್ತಾನು ಮಾಡುವುದಕ್ಕೆಂದು ನೆಲದೊಳಗೆ ತೋಡಿದ್ದ ಮೂರು ಅಡಿಗಳ ಹಳ್ಳದಲ್ಲಿ ಶಿಖರಾರೋಹಣಕ್ಕೆಂದು ಸಿದ್ಧಪಡಿಸಿಕೊಂಡಿದ್ದ ಉಪಕರಣಗಳನ್ನು ಬಚ್ಚಿಡಲಾಗಿತ್ತು. ಬೆನುಜಿ ಕಾಂಪೌಂಡ್ ಗೇಟಿಗೆ ಹಾಕಿದ್ದ ಬೀಗದ ಕೈಯ ಟಾರ್ ಗುರುತನ್ನು ಹೇಗೋ ಪಡೆದು ಅದರಿಂದ ಒಂದು ನಕಲಿ ಕೀಲಿಯನ್ನು ತಯಾರಿಸಿದ್ದೂ ಆಯಿತು. ಎಲ್ಲವೂ ಸಿದ್ಧವಾದಾಗ, ಒಂದು ರಾತ್ರಿ ಈ ಮೂವರು ಕೈದಿಗಳೂ ತೋಟದ ಕೊಟ್ಟಿಗೆಯೊಂದರಲ್ಲಿ ಅಡಗಿಟ್ಟುಕೊಂಡರು. ರಾತ್ರಿ ಕಾಂಪೌಂಡ್ ಗೇಟ್ ತೆರೆದು

ಶಿಬಿರದಿಂದ ಪರಾರಿಯಾದರು. ಪರಾರಿಯಾದ ಸಮಯದಲ್ಲಿ ಎಂಜೋಗೆ ೧೦೧ ಡಿಗ್ರಿ ಜ್ವರ. ಅವನನ್ನು ಹಿಂದಕ್ಕೆ ಬಿಟ್ಟು ಬರುವಂತಿರಲಿಲ್ಲ. ಅವರು ಪರಾರಿಯಾದದ್ದು ಜನವರಿ ೨೪, ೧೯೪೩ ರ ರಾತ್ರಿ ಸಮಯದಲ್ಲಿ. ಅವರು ಫೆಬ್ರುವರಿ ೭ ನೇ ತಾರೀಖಿನ ವೇಳೆಗೆ ಪರ್ವತದ ತಪ್ಪಲಿಗೆ ಬಂದಿದ್ದರು. ಬಾಟಿಯನ್ ಶಿಖರದ ಉತ್ತರ ಮುಖದ ಹಾದಿಯದು. ಅವರು ತಲುಪಿದ ಪ್ರದೇಶವೆಲ್ಲ ಹಿಮಾಚ್ಛಾದಿತವಾಗಿತ್ತು. ಒಂಭತ್ತು ದಿನಗಳ ವರೆಗೆ ಅವರು ನಿಧಾನವಾಗಿ ಮೇಲಕ್ಕೆ ಹತ್ತತೊಡಗಿದರು. ಅವರು ಅರ್ಧಂ–ಬರ್ಧ ಸಾಗುವಳಿಯಾದ ಗದ್ದೆಗಳು, ಅನಂತರ ಕಾಡು–ಮೇಡುಗಳು ಇವನ್ನೆಲ್ಲ ದಾಟಬೇಕಾಯಿತು. ಪ್ರಯಾಣ ದುಸ್ಸಹನೀಯವಾಗಿತ್ತು. ಈ ಮೂವರಲ್ಲೊಬ್ಬರೂ ದೈಹಿಕವಾಗಿ ಗಟ್ಟಿಮುಟ್ಟಾಗಿ ಉಳಿದಿರಲಿಲ್ಲ. ಎಲ್ಲರೂ ಅಸ್ವಸ್ಥರೇ. ಅವರಲ್ಲಿಯೂ ಎಂಜೋನ ಪರಿಸ್ಥಿತಿ ಶೋಚನೀಯವಾಗಿತ್ತು. ಇವರಲ್ಲಿದ್ದ ಆಹಾರ ಪದಾರ್ಥಗಳ ದಾಸ್ತಾನು ಅತ್ಯಲ್ಪ. ದಾರಿಯಲ್ಲಿ ಇವರ ಮೇಲೆ ಚಿರತೆಯೊಂದು ಆಕ್ರಮಣ ನಡೆಸಿತ್ತು. ಒಂಟಿ ಸಲಗವೊಂದನ್ನು ಸಹ ಇವರು ಎದುರಿಸಿದ್ದರು. ಆದರೆ ಇವರ ಕಷ್ಟಗಳಿಗೆ ಪರಿಹಾರವೆಂಬಂತೆ ದಾರಿಯುದ್ದಕ್ಕೂ ರಮಣೀಯ ನೈಸರ್ಗಿಕ ದೃಶ್ಯಗಳನ್ನು ನೋಡಿ ಸಂತೋಷಪಡಬೇಕಾಯಿತು. ಭೂಪಟವಿಲ್ಲ. ಮಾರ್ಗ ತೋರಲು ಮಾರ್ಗದರ್ಶಿಯಿಲ್ಲ. ನಿಬಿಡ ಅರಣ್ಯ ಪ್ರದೇಶದಿಂದ ಅವರು ಪರ್ವತಾರೋಹಣ ಶುರು ಮಾಡಿದ್ದರು.

ಅಸ್ವಸ್ಥನಾಗಿದ್ದರೂ ಎಂಜೋ ಹಸನ್ಮುಖಿಯಾಗಿಯೇ ಇದ್ದ. ಪರ್ವತದ ತಪ್ಪಲಿನಲ್ಲಿ ಒಂದು ಒಳ್ಳೆಯ ಜಾಗವನ್ನು ಗೊತ್ತುಮಾಡಿ ಅಲ್ಲಿ ಅವನನ್ನು ಬಿಟ್ಟರು. ಬೆಳಗಿನ ಜಾವ ಎರಡು ಗಂಟೆ ವೇಳೆಗೆ ಗಿಯ್ವಾನ್ ಮತ್ತು ಬೆನುಜಿ ಪರ್ವತಾರೋಹಣವನ್ನು ಪ್ರಾರಂಭಿಸಿದರು. ಮೊದಲು ತಮ್ಮ ಮುಂದೆ ಕಾಣುತ್ತಿದ್ದ ಡಟ್ಬನ್ ಶಿಖರವನ್ನು ಏರಿ ಅದನ್ನು ದಾಟಿ ಮುಂದೆ ಬೆಟ್ಟದ ಬೆನ್ನೇಣಿನ ಮೂಲಕ ಹಾದು ಹೋದರೆ ಬಾಟಿಯನ್ ಶಿಖರವನ್ನು ಮುಟ್ಟಬಹುದು ಎಂಬುದು ಅವರಿಬ್ಬರ ಅಂದಾಜಾಗಿತ್ತು. ಆ ರಾತ್ರಿ ಸೊಗಸಾಗಿತ್ತು. ನಕ್ಷತ್ರಗಳ ಬೆಳಕಿನಲ್ಲಿ ಹತ್ತಲು ಆರಂಭಿಸಿದರು. ಕಡಿದಾದ ಬೆಟ್ಟದ ಇಳಿಜಾರವನ್ನು ದಾಟಲು ಅವರಿಗೆ ಕಷ್ಟವಾಗಲಿಲ್ಲ. ಬೆಳಗಿನ ವೇಳೆಗೆ ಆಕಾಶವೆಲ್ಲ ನಿರ್ಮಲವಾಗಿತ್ತು. ಎರಡು ಗಂಟೆಗಳ ಅನಂತರ ತಾವೇ ಸಿದ್ಧಪಡಿಸಿಕೊಂಡಿದ್ದ ಹಗ್ಗವನ್ನು ತಮ್ಮ ತಮ್ಮ ಸೊಂಟಗಳಿಗೆ ಕಟ್ಟಿಕೊಂಡು ಡಟ್ಬನ್ ಶಿಖರದ ಕಡಿದಾದ ಮುಖವನ್ನು ಹತ್ತಲು ತೊಡಗಿದರು. ಈ ಶಿಖರವನ್ನು ಹತ್ತುವ ಮೊದಲು ಅವರು ಸೀಸರ್ ನೀರ್ಗಲ್ಲ ನದಿಯ ಆಳವಾದ ಬಿರುಕುಗಳನ್ನು ತಾವೇ ಮೊಳೆ ಹೊಡೆದು ಸಜ್ಜುಗೊಳಿಸಿದ್ದ ಬೂಟುಗಳನ್ನು ಹಾಕಿಕೊಂಡು ದಾಟಿದರು. ಒಮ್ಮೆ ಬೆನುಜಿ ಜಾರಿ ಬಿದ್ದು ಹೋಗುವುದರಲ್ಲಿದ್ದ. ದೈವವಶಾತ್ ಹಗ್ಗ ಅವನನ್ನು ಉಳಿಸಿತು. ನೀರ್ಗಲ್ಲ ಇಳುಕಲಿನ ಇಳಿಜಾರು ಮಟ್ಟಗಳಿಂದ ಕೂಡಿದ ಕಂದರಗಳನ್ನು ದಾಟಿದರು. ಅನಂತರ ಅವರು ಬೆಟ್ಟದ ಬೆನ್ನೇಣಿನ ಸಮೀಪ ಬಂದರು.



“ಸಣ್ಣ ಸಣ್ಣ ಮೊಳೆಗಳನ್ನು ಹೊಡೀಬೇಡಿ ಅಂತ ತಾವೇ ಹೇಳಿದ್ರಲ್ಲಾ.”

ಅಲ್ಲಿಂದ ಕೆಳಗೆ ನೋಡಿದಾಗ ಅವರಿಗೆ ಕಂಡದ್ದು ರುದ್ರರಮಣೀಯ ನಾರ್ಥ್ ನೀರ್ಗಲ್ಲ ಪ್ರಪಾತಗಳು. ಹಿಮಾಚ್ಛಾದಿತ ಬಂಡೆಗಳನ್ನು ಹತ್ತುವುದು ತುಂಬ ಕಷ್ಟವಾಯಿತು. ಅವರು ೧೩,೦೦೦ ಸಾವಿರ ಅಡಿಗಳಷ್ಟು ಎತ್ತರ ಹತ್ತಿದರು. ಮೈಯೆಲ್ಲ ಕೊರೆಯುತ್ತಿತ್ತು. ಅವರ ಹತ್ತಿರ ಸರಿಯಾದ ಉಡುಪುಗಳು ಸಹ ಇರಲಿಲ್ಲ. ಮಧ್ಯಾಹ್ನದ ವೇಳೆಗೆ ಅವರು ಹಿಮ ಆವರಿಸಿದ ಬಂಡೆಗಳನ್ನು ಹತ್ತತೊಡಗಿದರು. ಮುಂದಿದ್ದ ಗಿಯ್ವಾನ್ ಒಂದೊಂದು ಹೆಜ್ಜೆ ಮುಂದಿಡಲೂ ಪ್ರಯಾಸ ಪಡುತ್ತಿದ್ದ. ಅರ್ಧ ಗಂಟೆಯ ಅನಂತರ ದಟ್ಟವಾದ ಮಂಜು, ಆಣೆಕಲ್ಲಿನಿಂದ ಕೂಡಿದ ಮಳೆ ಸುರಿಯಲು ಶುರುವಾಯಿತು. ಬೆನುಜಿಗಿಂತ ಸ್ವಲ್ಪ ಮುಂದಿದ್ದ ಗಿಯ್ವಾನ್ ತನ್ನ ನಡಿಗೆಯನ್ನು ನಿಲ್ಲಿಸಿದ. ಇನ್ನು ಮುಂದೆ ಹೋಗಲು ಸಾಧ್ಯವೇ ಇಲ್ಲ ಎಂದು ಸಾರಿದ. ಜೀವ ಸಹಿತ ಉಳಿಯಬೇಕಾದ ಪಕ್ಷದಲ್ಲಿ ಅವರಿಬ್ಬರೂ ಹಿಮ್ಮೆಟ್ಟುವುದು ಅವಶ್ಯವಾಯಿತು. ಆದರೆ ಹಿಮ್ಮೆಟ್ಟುವುದು ಸುಲಭದ ಕೆಲಸವೇನಾಗಿರಲಿಲ್ಲ.

ನಲವತ್ತು ನಿಮಿಷಗಳ ನಂತರ ಗಿಯ್ವಾನ್ ಹಿಮದಲ್ಲಿ ಅರ್ಧ ಹೆಪ್ಪುಗಟ್ಟಿದ್ದ ಬೆನುಜಿಯನ್ನು ಕೂಡಿಕೊಂಡ. ಬೆನುಜಿ ಸುತ್ತಿಕೊಂಡಿದ್ದ ಅನೋರಕ್ ಅಂಗಿಯು (ಕಂಬಳಿಯಿಂದ ಮಾಡಿದ್ದು) ಹಿಮದಿಂದ ಮುಚ್ಚಿಹೋಗಿದ್ದು ಅದು ಬಿಳಿ ಸೂಟ್‌ನಂತೆ ಕಾಣುತ್ತಿತ್ತು. ಹಗ್ಗವು ಸಹ ಸೆಟೆದುಕೊಂಡು ಕಬ್ಬಿಣದ ಸರಳಿನಂತೆ ಗಟ್ಟಿಯಾಗಿತ್ತು. ನಿಧಾನವಾಗಿ ಇಳಿಯುತೊಡಗಿದರು. ಹನ್ನೆರಡು ಗಂಟೆಗಳ ನಂತರ ಅವರಿಬ್ಬರೂ ತಪ್ಪಲಿನಲ್ಲಿ ಕಟ್ಟಿದ್ದ ಗುಡಾರಕ್ಕೆ ಬಂದರು. ಅಲ್ಲಿ ಎಂಜೋನನ್ನು ಎಬ್ಬಿಸಿ ಚಹ ಮಾಡಿಸಿಕೊಂಡು ಕುಡಿದರು. ಆಗ ರಾತ್ರಿ ಒಂಭತ್ತು ಗಂಟೆಯ ಸಮಯವಾಗಿತ್ತು. ಅವರಿಬ್ಬರೂ ೧೮ ಗಂಟೆಗಳಿಗೂ ಹೆಚ್ಚು ಸಮಯ ಓಡಾಡಿದ್ದರು.

ಮೂವತ್ತು ಗಂಟೆಗಳ ನಂತರ ಫೆಬ್ರುವರಿ ೬ ರಂದು ಬೆಳಗಿನ ಜಾವ ಒಂದು ಗಂಟೆಗೆ ಎಂಜೋ ಓವಲ್‌ಟೀನ್, ಸಕ್ಕರೆ, ಕೋಕೋಪುಡಿಯನ್ನು ನೀರು ಹಾಕಿ ಕಲುಕಿ ಅದನ್ನೆಲ್ಲಾ ಒಂದು ಪಾತ್ರೆಯಲ್ಲಿ ಸುರಿದಿಟ್ಟುಕೊಂಡ. ಅದನ್ನೇ ತನ್ನ ಮಿತ್ರರಿಗೆ ಪೇಯವಾಗಿ ಕೊಟ್ಟ. ಅವರಿಗೆ ಬೆಳಗಿನ ಉಪಹಾರಕ್ಕೆ ಸಿಕ್ಕಿದ್ದು ಕೇವಲ ಒಂದೊಂದು ಬಿಸ್ಕತ್ತು. ಅವನ್ನೇ ಸೇವಿಸಿ ಬೆನುಜಿ ಮತ್ತು ಗಿಯ್ವಾನ್ ೧೩,೩೦೦ ಅಡಿಗಳ ಎತ್ತರದ ಲೆನಾನಾ ಶಿಖರವನ್ನು ಹತ್ತಲು ಹೊರಟರು.

ಒಂದು ದಿನದ ವಿಶ್ರಾಂತಿಯ ನಂತರ ಈ ಸಾಹಸಿಗಳು ಲೆನಾನಾ ಶಿಖರವನ್ನು ಏರಿ ಬಂದರು. ಈ ಶಿಖರವನ್ನೇರಲು ಅವರಿಗೆ ಏಳು ಗಂಟೆಗಳಷ್ಟು ಸಮಯ ಬೇಕಾಯಿತು. ಶಿಖರದ ತುತ್ತತುದಿಯನ್ನು ಅವರು ಬೆಳಗ್ಗೆ ಹತ್ತು ಗಂಟೆಯ ಸಮಯದಲ್ಲಿ ತಲುಪಿದರು. ತಮ್ಮೊಂದಿಗೆ ಇಟಾಲಿಯನ್ ಧ್ವಜವನ್ನೂ ಕೋಲೊಂದನ್ನೂ ಒಯ್ದಿದ್ದರು. ಶಿಖರದ ತುತ್ತತುದಿಯಲ್ಲಿ ಧ್ವಜವನ್ನು ಕೋಲಿಗೆ ಸಿಕ್ಕಿಸಿ ಹಾರಿಸಿದರು. ಅದಕ್ಕೆ ತಮ್ಮ ರಾಷ್ಟ್ರಧ್ವಜ ವಂದನೆ ಮಾಡಿದರು.

ಮೂರು ದಿನಗಳ ನಂತರ, ಅವರು ರಾತ್ರಿ ಸಮಯದಲ್ಲಿ ಯುದ್ಧಬಂದಿಗಳ ಶಿಬಿರದ ಕಾಂಪೌಂಡಿನೊಳಗೆ ಪ್ರವೇಶಿಸಿದರು. ಬೆಳಿಗ್ಗೆ ಶಿಬಿರದ ಮುಖ್ಯಾಧಿಕಾರಿಗಳಿಗೆ ವರದಿ ಮಾಡಿದರು. ಅವರಿಗೆ ಶಿಬಿರದ ನಿಯಮಗಳ ಉಲ್ಲಂಘನೆಯ ಆರೋಪದ ಮೇಲೆ ೨೮ ದಿನಗಳ ಕೋಣೆ ಶಿಕ್ಷೆಯನ್ನು ವಿಧಿಸಲಾಯಿತು. ಅವರು ಕಷ್ಟಪಟ್ಟು ಸಂಪಾದಿಸಿದ್ದ ಉಪಕರಣಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಆದರೂ ಕನಸನ್ನು ನನಸಾಗಿಸಿಕೊಂಡ ಆನಂದದಲ್ಲಿದ್ದ ಈ ಸಾಹಸಿಗಳು ಶಿಕ್ಷೆಯನ್ನು ಮರುಮಾತಾಡದೆ ಸ್ವೀಕರಿಸಿದರು. ✡

ನಿರುತ್ಸಾಹದ ಶಿಲೆಯಲ್ಲಿ ತೂತು ಕೊರೆದಾಗ ಜೀವನಸ್ರೋತ ತಂತಾನೆ ಪುಟಿಯುತ್ತದೆ.

— ಅಲೆಕ್ಸಿ ಕ್ಯಾರೆಲ್

ನಿಮ್ಮ ಶಬ್ದಭಂಡಾರ ಬೆಳೆಸಿರಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ದಲಿತ
(ಅ) ಹೊರಿಸಿದ (ಆ) ಚದರಿದ (ಇ) ಚಿಗುರಿದ (ಈ) ಹಿಂಸೆಗೆ ಗುರಿಯಾದ

೨. ದಂಗುಬಡಿ
(ಅ) ಬಾಗು (ಆ) ಪುಡಿಗುಟ್ಟು (ಇ) ವಿಸ್ಮಯಪಡು (ಈ) ಮೋಸಹೋಗು

೩. ಜಾಲಾಡು
(ಅ) ಸಾಣಿಗೆಯಲ್ಲಿ ಸೋಸು (ಆ) ಬಲೆ ಹಾಕು (ಇ) ದುಷ್ಟತನ ಮಾಡು (ಈ) ತೊನೆದಾಡು

೪. ಜಿದ್ದು
(ಅ) ಕೊಳೆ (ಆ) ಕಡು ಹಟ (ಇ) ಬದುಕು (ಈ) ಒಡವೆ

೫. ಆತತಾಯಿ
(ಅ) ಕೊಲೆಪಾತಕಿ (ಆ) ಅಜ್ಜಿ (ಇ) ಸಂಗ್ರಹಿಸಿಟ್ಟ ಹಣ (ಈ) ಸುಡುಬಿಸಿಲು

೬. ಆತ್ಯಂತಿಕ
(ಅ) ಸ್ವಂತದ (ಆ) ಅವಸರದ (ಇ) ತೀರ ಕೊನೆಯ (ಈ) ಸಾಯುವ ಹೊತ್ತು

೭. ಕುತ್ತ
(ಅ) ಗಿಡ್ಡ (ಆ) ರೋಗ (ಇ) ಕೂಗಾಟ (ಈ) ಆಳವಾದ

೮. ಕುತ್ತು
(ಅ) ಪೊದೆ (ಆ) ನಿಲ್ಲುವ ನೆಲೆ (ಇ) ಅಧಿಕಾರ (ಈ) ಅಪಾಯ

೯. ನಿಕಟ
(ಅ) ಒರೆಗಲ್ಲು (ಆ) ಉದ್ರೇಕ (ಇ) ಸಮೀಪ (ಈ) ಸಂಕೋಲೆ

೧೦. ನಿಗಾ
(ಅ) ಕರಿಯ (ಆ) ಲಕ್ಷ್ಯ (ಇ) ಮದುವೆ (ಈ) ಸಂದಣಿ

೧೧. ಪ್ರತಿರೋಧ
(ಅ) ಅಡ್ಡಿ (ಆ) ಮೊರೆಯಿಡುವುದು (ಇ) ದೊಡ್ಡಸ್ತನ (ಈ) ಹಿಂತೆಗೆದುಕೊಳ್ಳುವುದು

೧೨. ಬೆಂಬತ್ತು
(ಅ) ಟೊಳ್ಳಾಗು (ಆ) ಪ್ರೋತ್ಸಾಹಿಸು (ಇ) ಸುಟ್ಟುಹೋಗು (ಈ) ಹಿಂಬಾಲಿಸು

‘ಶಬ್ದ ಭಾಂಡಾರ’ದ ಸರಿಯಾದ ಅರ್ಥಗಳು

೧. **ದಲಿತ** (ಈ) ಹಿಂಸೆಗೆ ಗುರಿಯಾದ, ಪೀಡಿತ. ಉದಾ:— ದಲಿತ ಜನಾಂಗ. [ಸಂ. ದಲ್=ಒಡೆ, ಹರಿ]

೨. **ದಂಗುಬಡಿ** (ಇ) ವಿಸ್ಮಯಪಡು, ಬೆರಗಾಗು, ಅತಿ ಆಶ್ಚರ್ಯಪಡು. ಉದಾ:— ಅವನ ಶೌರ್ಯ ಕಂಡು ದಂಗು ಬಡಿದು ಹೋದೆ. [ಫಾರಸಿ–ದಂಗ್= ವಿಸ್ಮಿತ]

೩. **ಜಾಲಾಡು** (ಅ) ಸಾಣಿಗೆಯಲ್ಲಿ ಸೋಸು ನೀರಲ್ಲಿ ಚೆನ್ನಾಗಿ ತೊಳೆ: (ಆದ್ದರಿಂದ) ಚೆನ್ನಾಗಿ ಒಬ್ಬನ ದೋಷಗಳನ್ನು ವಿಮ-ರ್ಶಿಸು. [ಸಂ. ಜಾಲ=ಜಾಳಿಗೆ+ಕನ್ನಡ, ಆಡು]

೪. **ಜಿದ್ದು** (ಅ) ಕಡು ಹಟ, ಬಲವಾದ ಸ್ಪರ್ಧೆ, ಪೊಗರು. ಉದಾ:— ಜಿದ್ದಿನಿಂದ ಹೋರಾಡಿದ. [ಫಾರಸಿ—ಜಿದ್= ಸ್ಪರ್ಧೆ]

೫. **ಆತತಾಯಿ** (ಅ) ಕೊಲೆಪಾತಕಿ, ಕೊಲ್ಲಲು ಏರಿ ಬರುವವನು. ಉದಾ:— ಆತ-ತಾಯಿಯನ್ನು ಕೊಂದರೆ ಪಾಪವಿಲ್ಲ. [ಸಂ.]

೬. **ಆತ್ಯಂತಿಕ** (ಇ) ತೀರ ಕೊನೆಯ, ಪರಮಾವಧಿ. ಉದಾ:— ಅತ್ಯಂತಿಕ ಪ್ರಯತ್ನ. [ಸಂ. ಅತಿ+ಅಂತ= ತುದಿಯ–ಎಂಬುದರಿಂದ]

೭. **ಕುತ್ತ** (ಅ) ರೋಗ, ಕೊರತೆ, ತೊಂದರೆ. ಉದಾ:– ಅವಳೊಂದು ಕುತ್ತಗಳ ಆಗರ. [ದೇಶ್ಯ, ‘ಕುದಿ’ಯಿಂದ?]

೮. **ಕುತ್ತು** (ಈ) ಅಪಾಯ, ಗಂಡಾಂತರ. ಉದಾ:— [ಜೀವಕ್ಕೆ ಕುತ್ತು ಬಂತು. [ದೇಶ್ಯ, ಕುತ್ತು=ಇರಿಯಿಂದ]

೯. **ನಿಕಟ** (ಇ) ಸಮೀಪ, ಹತ್ತಿರ. ಉದಾ:— ಮಂತ್ರಿಗಳ ನಿಕಟವರ್ತಿಗಳಿಂದ ಸುದ್ದಿ ತಿಳಿಯಿತು. [ಸಂ.]

೧೦. **ನಿಗಾ** (ಅ) ಲಕ್ಷ್ಯ, ಗಮನ, ಎಚ್ಚರ. ಉದಾ:— ಯಾರ ಮಾತಿಗೂ ನಿಗಾ ಕೊಡಲಿಲ್ಲ. [ಫಾರಸಿ, ನಿಗಾಹ್=ದೃಷ್ಟಿ]

೧೧. **ಪ್ರತಿರೋಧ** (ಅ) ಅಡ್ಡಿ, ಆತಂಕ, ತಡೆ. ಉದಾ:— ಸೈನ್ಯದ ಆಕ್ರಮಣಕ್ಕೆ ಪ್ರತಿ ರೋಧ ಬರಲಿಲ್ಲ. [ಸಂ. ಪ್ರತಿ= ವಿರುದ್ಧ, ರೋಧ. (ರುದ್=ತಡೆ)= ಅಡ್ಡಿ]

೧೨. **ಬೆಂಬತ್ತು** (ಈ) ಹಿಂಬಾಲಿಸು, ಬೆಂಬೀಳು. ಉದಾ:– ಬೆಂಬತ್ತಿದ ಪೋಕರಿ ಗಳು. [ಕನ್ನಡ, ಬೆನ್=ಬೆನ್ನು+ ಪತ್ತು=ತಗಲು]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿ-ಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿ-ನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ,,	...	ಉತ್ತಮ
೧೧—೧೨ ,,	...	ಅತ್ಯುತ್ತಮ

ಏನಿದು ಈ (ಅ)ವ್ಯವಸ್ಥೆ?

ರಾಮಚಂದ್ರ ಕಿತ್ತೂರ

ನಮ್ಮ ದೇಶದ ಇಂದಿನ ಪರಿಸ್ಥಿತಿಯನ್ನು ಗಮನಿಸಿದಾಗ ಬಹಳ ನಿರಾಶೆಯೆನಿಸುತ್ತದೆ. ಸ್ವಾತಂತ್ರ್ಯದ ಮೂವತ್ತು ವರ್ಷಗಳಲ್ಲಿ ನಾವು ಸಾಧಿಸಿದ್ದು ಏನು ಎಂಬ ದೊಡ್ಡ ಪ್ರಶ್ನೆ ಸದಾ ನಮ್ಮನ್ನು ಕಾಡುತ್ತಲೇ ಇದೆ. ಯುದ್ಧಗ್ರಸ್ತ ದೇಶಗಳಾದ ಜರ್ಮನಿ ಹಾಗೂ ಜಪಾನ ಕೂಡ ಕಳೆದುದನ್ನು ಗಳಿಸಿಕೊಂಡು, ಮತ್ತೆ ಈಗ ಮೊದಲ ಸಾಲಿನಲ್ಲಿ ಬಂದು ನಿಂತಾಗ ನಮಗೇನಾಗಿದೆ? ಎಂಬ ವಿಚಾರ ನಮ್ಮನ್ನು ಕಾಡುತ್ತಲೇ ಇದೆ. ಸಾಧಿಸಿದ್ದು ಬಹಳ ಸ್ವಲ್ಪ; ಅದರ ಬಗ್ಗೆ ಹೆಮ್ಮೆ ಪಡಬೇಕಾಗಿಲ್ಲ. ಸಾಧಿಸಲಾರದ ಬಗ್ಗೆ ಒಂದು ಸಣ್ಣ ವಿಶ್ಲೇಷಣೆ ಮಾಡುವ ಪ್ರಯತ್ನ ಇಲ್ಲಿದೆ– ಅದೂ ಸ್ಥೂಲವಾಗಿ.

ನಮಗೆ ತಗುಲಿದ ದೊಡ್ಡ ರೋಗವೆಂದರೆ ರಾಜಕೀಯತೆ. ಸ್ವತಂತ್ರ ಭಾರತದ ೩೨ ವರುಷಗಳ ದೊಡ್ಡ ಸಾಧನೆಯೆಂದರೆ ಕೋಟ್ಯಧೀಶ ಕಳ್ಳ ಸಾಗಾಟಗಾರರು ಹಾಗೂ ದೇಶದ ಬೊಕ್ಕಸವನ್ನು ದೋಚುತ್ತಿರುವ ಪುಢಾರಿಗಳ ಗುಂಪು. ಈ ಸಂತತಿ ದಿನದಿಂದ ದಿನಕ್ಕೆ ಸಮೃದ್ಧಿಯಾಗಿ ಬೆಳೆಯುತ್ತಲೇ ಇದೆ. ಇದೇ ಒಂದು ಒಳಹಾದಿ. ಬೇಗನಾಗುವವರಲ್ಲಿ ಶ್ರೀಮಂತನಾಗಲು. ಈ ಪರಮ ಜಾತಿಗಳನ್ನು ಮೆಟ್ಟಿ ಹಾಕಲು ಯಾವ ಕಾಯದೆಗೂ ಸಾಧ್ಯವಾಗಿಲ್ಲ. ಅದಕ್ಕೆ ಬದಲಾಗಿ ಇವರಿಬ್ಬರು ತಮ್ಮ ಜಗತ್ತನ್ನೇ ಬೇರೆ ನಿರ್ಮಿಸಿಕೊಂಡಿದ್ದಾರೆ; ತಮ್ಮ ಕಾನೂನುಗಳನ್ನೇ ಬೇರೆ ಮಾಡಿಕೊಂಡಿದ್ದಾರೆ. ಕಳ್ಳ–ಸಾಗಾಟಗಾರನಿ–ಗಿಂತಲೂ ಪುಢಾರಿಗಳು ಹೆಚ್ಚು ಮಾರಕ. ದೇಶದ ಎಲ್ಲ ಸಮಸ್ಯೆಗಳಿಗೂ ಪರಿಹಾರ ಇವರ ಕೈಯಲ್ಲಿ! ಅಣೆಕಟ್ಟು ಕಟ್ಟುವದು, ಮೆಡಿಕಲ್ ಕಾಲೇಜು ಸ್ಥಾಪಿಸುವುದು, ಕಾರಖಾನೆಗಳನ್ನು ನಿರ್ಮಿಸುವುದು, ಒಂದೇ ಎರಡೇ, ಎಲ್ಲಕ್ಕೂ ರಾಜಕೀಯದ ಸೋಂಕು. ಯಾಕೆ ಈ ಪುಢಾರಿಗೆ ಇಷ್ಟೊಂದು ಅವಾಸ್ತವ ಮಹತ್ವ!

ಇವನ ಚಲನದ ಗತಿಯೋ ಬಹಳ ವಿಚಿತ್ರ; ಎಲ್ಲಿ ಬೇಕೆಂಬಲ್ಲಿ ನುಗ್ಗುತ್ತಾನೆ; ಬೇಕಾಗಿಯೋ ಬೇಡವಾಗಿಯೋ ಮುಂಚೂಣಿಯಲ್ಲಿ ನಿಲ್ಲುತ್ತಾನೆ. ಸಮಸ್ಯೆಗಳಿಗೆ ಬೇರೆ ತಿರುವು ಕೊಟ್ಟು ತನ್ನ ಕಾರ್ಯ ಸಾಧಿಸುತ್ತಾನೆ. ತೀರ ಇತ್ತೀಚಿನ ಉದಾಹರಣೆಯೆಂದರೆ ಮಹಾರಾಷ್ಟ್ರದಲ್ಲಿಯ ರೈತರ ಚಳವಳಿ. ಮೊದಲು ರೈತರಿಂದ ಆರಂಭವಾದ ಚಳವಳಿ. ಈಗ ಪುಢಾರಿಗಳ ಕೈಯಲ್ಲಿ, ಈ ಚಳವಳಿಯು ಮಹಾಯಾಂತರ ರಾಜಕೀಯ ಪಣಾಪಣಿ. ಇಂಥ ಪುಢಾರಿಗಳ ಪರಿಹಾರ ಮಾರ್ಗವೂ ಬಹಳ ವಿಚಿತ್ರ. ನಮ್ಮ ಸಮೀಪದ ನರ--ಗುಂದವನ್ನೇ ತೆಗೆದುಕೊಳ್ಳಿ. ನರಗುಂದದಲ್ಲಿ ಮೂವತ್ತು ದಿನಗಟ್ಟಲೇ ರೈತರು ಉಪವಾಸ ಕೂತಾಗ ಯಾರೂ ದರಕಾರು ಮಾಡದೇ, ಕಚೇರಿ ಸುಟ್ಟಾಗ ರಾಜಧಾನಿಯಿಂದ ಒಮ್ಮೆಲೇ ೮೦ ಕೋಟಿ ರೂಪಾಯಿಗಳ ಪರಿಹಾರ ಘೋಷಿಸುವ ಈ ಮಾರ್ಗ ಎಂತಹದು ? ಸಮಸ್ಯೆಗಳ

ನಿಜವಾದ ಅಭ್ಯಾಸವಿಲ್ಲದೇ ವ್ಯವಸ್ಥೆಯಲ್ಲಿಯ ತಪ್ಪಿತಸ್ಥರನ್ನು ಕಂಡುಹಿಡಿಯುವ ಗೋಜಿಗೆ ಹೋಗದೆ, ರಾಜಕೀಯ ಲಾಭ ಪಡೆಯುವ ದೃಷ್ಟಾಂತ ನಮ್ಮೆಲ್ಲರ ಕಣ್ಣು ತೆರೆಯಿಸಬೇಕು. ನರಗುಂದದ ಘಟನೆಯ ನಂತರ ಎಲ್ಲ ಪುಢಾರಿಗಳೂ ಭೆಟ್ಟಿ ಕೊಟ್ಟರು, ಕೇವಲ ರಾಜಕೀಯ ಅವಕಾಶಕ್ಕಾಗಿ ಮಾತ್ರ. ಯಾರಿಗೂ ನಿಜವಾದ ಕಳಕಳಿಯೇ ಇಲ್ಲ. ಏಕೆ ಹೀಗೆ? ವ್ಯವಸ್ಥೆಯಲ್ಲಿಯೇ ಏನಾದರೂ ದೋಷವಿದೆಯೇ?

ಹೌದು ಎಂದೇ ನನ್ನ ಭಾವನೆ. ಈ ದಿನಗಳಲ್ಲಿ ಪಕ್ಷವನ್ನು ನಡೆಯಿಸಬೇಕಾದರೆ ಕಪ್ಪು ಹಣ ಅತ್ಯವಶ್ಯ. ಚುನಾವಣೆ ಬಂದರಂತೂ ಮುಗಿದೇಹೋಯಿತು. ಕಪ್ಪು ಹಣ ಸಂಗ್ರಹವಾಗುವದು ಅಧಿಕಾರ ಕೈಯಲ್ಲಿ ಇರುವಾಗ ತಾನೇ! ಅಧಿಕಾರದ ಐದು ವರುಷದ ಅಲ್ಪ ಅವಧಿಯಲ್ಲಿ. ಆ ಅವಧಿಯಲ್ಲಿಯೇ ಎಷ್ಟು ಅಭದ್ರತೆ! 'ನಾನಂತೂ ಇರುವುದು ಇಷ್ಟೇ! ಮುಂದೆ ಹೇಗೋ ಏನೋ! ಇರುವಾಗ ಸಿಕ್ಕಷ್ಟು ದೋಚು' ಎಂಬ ಧೋರಣೆ ಈ ಪುಢಾರಿಗಳದು. ಇದು ಮನುಷ್ಯ ಸಹಜ ಎಂದು ಎಂದುಕೊಂಡರೂ. ದೇಶ ಅದಕ್ಕಾಗಿ ಕೊಡುವ ಬೆಲೆ ಎಂತಹದು! ಇದಕ್ಕಾಗಿ ಇಡೀ ಸರಕಾರೀ ಯಂತ್ರವನ್ನು ಉಪಯೋಗಿಸುತ್ತಾರೆ. ಅಧಿಕಾರೀ ವರ್ಗ ಅವರ ತಾಳಕ್ಕೆ ತಕ್ಕಂತೆ ಕುಣಿಯಲೇಬೇಕಲ್ಲವೆ? ಬಡ ದೇಶದ ಸಂಪನ್ಮೂಲಗಳ ಹಣೆಬರಹ 'ಇದ್ದಷ್ಟು ಮೂಗು ಇಲಿ ತಿಂತು' ಎಂಬ ಹಾಗೆ.

ಇದು ಒಂದು ಮೈ. ಇನ್ನೊಂದು ಮೈ ಎಂದರೆ ಸಮಸ್ಯೆಗಳ ನಿರ್ಮಾಣ. ಸಮಸ್ಯೆಗಳ ನಿರ್ಮಾಣ ಮಾಡದಿದ್ದರೆ, ಅವುಗಳನ್ನು ಜಟಿಲಗೊಳಿಸದಿದ್ದರೆ ತನ್ನ ತಳಪಾಯವೇ ಸಡಿಲವಾಗುತ್ತದೆ ಎಂಬ ಸಂಗತಿ ಪುಢಾರಿಗೆ ಚೆನ್ನಾಗಿ ಗೊತ್ತು. ೧೯೪೭ರಿಂದ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಲೇ ಇದ್ದೇವೆ. ಭೂ–ಮಿತಿ ಕಾಯ್ದೆ, ಜಾತೀಯತೆ, ನಿರಕ್ಷರತೆ, ಒಂದೇ ಎರಡೇ, ಮುಂದಿನ ಬಾಗಿಲಿನಿಂದ ಪರಿಹಾರ, ಹಿಂದಿನ ಬಾಗಿಲಿನಿಂದ ದೋಚುವಿಕೆ – ಎರಡೂ ಅವ್ಯಾಹತವಾಗಿ ನಡೆದೇ ಇದೆ. ನಿರಕ್ಷರತೆ ನಿಜವಾಗಿಯೂ ಹೊರಟುಹೋದರೆ ಪುಢಾರಿಯ ಹೂರಣ ಹೊರಬೀಳುವುದು. ಏಕೆಂದರೆ, ಜನರ ಅಜ್ಞಾನವೇ ಅವನ ಬಂಡವಳ. ಭೂ–ಮಿತಿ ಕಾಯ್ದೆ ಅವನು ಜಾರಿಗೊಳಿಸಲಾರ. ಏಕೆಂದರೆ ಅವನೇ ಅದಕ್ಕೆ ಪ್ರಥಮ ಬಲಿ. ಜಾತೀಯತೆ ಜಾಗೃತವಾಗಿದ್ದಷ್ಟೂ ಅವನಿಗೆ ಒಳ್ಳೆಯ ಫಸಲು. ಈ ಮೂವತ್ತು ವರುಷಗಳಲ್ಲಿ ಬಂದ ಹೊಸ ಪೀಳಿಗೆ ಭಾರತದಲ್ಲಿಯೇ ಹುಟ್ಟಿ ಬೆಳೆದರೂ ಜಾತೀಯ ವೈಷಮ್ಯ ಬೆಳೆಯುತ್ತಲೇ ಇದೆ. ಬೇರೆ ದೇಶದ ಹಸ್ತಕರು ಅದನ್ನು ಪ್ರಚೋದಿಸುತ್ತಾರೆಂದೇ ನಂಬೋಣ. ಆದರೆ ಅದಕ್ಕೆ ಬೇಕಾಗುವ ಫಲವತ್ತಾದ ಭೂಮಿಯನ್ನು ನಾವೇ ಬೆಳೆಯಿಸಿದ್ದೇವೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಅಲ್ಪಸಂಖ್ಯಾತರ ಮತಗಳ ಸಾಧ್ಯವು ಈ ಪುಢಾರಿಯ ಪರಮ ಉದ್ದೇಶ. ಅಂತೆಯೇ ಅವರು ರಾಷ್ಟ್ರೀಯ ಜೀವನದಲ್ಲಿ



'ಮನೆ ಬಾಡಿಗೆ ಜಾಸ್ತಿ ಮಾಡಬೇಕಂತಿದ್ದೀನಿ. ನಿಮ್ಮ ಇಂಕ್ರಿಮೆಂಟ್ ಯಾವಾಗ ?'

ಒಂದುಗೂಡಿ ಹೋಗುವುದನ್ನು ಇವನು ಸಹಿಸಲಾರ. ಅವರಿಗೆ ಪ್ರತ್ಯೇಕ ಕಾಯ್ದೆ ಎಂದೋ, ಧಾರ್ಮಿಕ ಸ್ವಾತಂತ್ರ್ಯವೆಂದೋ, ಅವರನ್ನು ಪ್ರತ್ಯೇಕಿಸಿ ಇಡುತ್ತಾನೆ ಈತ. ಚುನಾವಣೆಯಲ್ಲಿ ಕೀಳು ಭಾವನೆಗಳನ್ನು ಬಡಿದೆಬ್ಬಿಸಿ, ಮತ ಗಳಿಸಿ ನಮ್ಮೆಲ್ಲರ ತಲೆಯ ಮೇಲೆ ರಾರಾಜಿಸುತ್ತಿದ್ದಾನೆ ಈ ವ್ಯಕ್ತಿ. ಆರ್ಥಿಕ ಸಂಘರ್ಷಣೆಯಲ್ಲಿ ಇಂಥ ಸಮಸ್ಯೆಗಳಿಂದ ಎಂಥ ಹಿನ್ನಡೆತ! ಈ ಪುಢಾರಿ ತನ್ನ ವೈಯಕ್ತಿಕ ಹಿತಾಕಾಂಕ್ಷೆಗಳಿಗೆ ತಾಜಮಹಲನ್ನೂ ಮಾರಿಕೊಂಡರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ.

ಈ ರಾಜಕೀಯ ಧಂಧೆ ಎಷ್ಟು ಆಕರ್ಷಕವಾಗಿದೆ! ಕಲಾವಿದೆ ನರ್ಗಿಸ್, ಟಿ. ಅನಂತ ಪೈ, ವಿ.ಕೆ.ಆರ್.ವಿ. ರಾವ್... ಎಂಥೆಂಥವರೂ ಇದಕ್ಕೆ ಬಲಿಯಾದವರಲ್ಲ! ತಂತಮ್ಮ ಕ್ಷೇತ್ರಗಳಲ್ಲಿ ಅಪ್ರತಿಮರೆನಿಸಿಕೊಂಡರೂ ಇವರಿಗೆ ರಾಜಕೀಯ ಶಕ್ತಿಯೇ ಪರಮ ಗುರಿಯಾಯಿತಲ್ಲ! ಕೊನೆಗೆ ಏನು ಇವರ ಪರಿಸ್ಥಿತಿ! ಏನು ನಮ್ಮ ಹಣೆಬರೆಹ!

ಇಂಥ ಪುಢಾರಿಗಳ ತಾಳಕ್ಕೆ ತಕ್ಕಂತೆ ಕುಣಿಯಲು ಸದಾ ಸಿದ್ಧ ನಮ್ಮ ಅಧಿಕಾರೀ ವರ್ಗ. ತಮ್ಮ ಬಡತಿಯನ್ನೋ, ವೈಯಕ್ತಿಕ ಆಕಾಂಕ್ಷೆಗಳನ್ನೋ ಎದುರಿಗೆ ಇಟ್ಟುಕೊಂಡು, ಪುಢಾರಿಗಳ ಜತೆ ಕೈ ಕೂಡಿಸುತ್ತದೆ ಈ ವರ್ಗ. ೧೯೭೫ರ ಗಂಡಾಂತರ ಪರಿಸ್ಥಿತಿ ಒಂದು ಒಳ್ಳೆಯ ದೃಷ್ಟಾಂತ. ಅಧಿಕಾರಗಳನ್ನು ಕೊಟ್ಟಾಗ ಈ ವರ್ಗ ರಾಜಕೀಯ ವಿರೋಧಿಗಳನ್ನು ಮಟ್ಟ ಹಾಕುವುದರಲ್ಲಿಯೇ ತೊಡಗಿತಲ್ಲದೆ ಸಾಮಾಜಿಕ ದುಷ್ಟ ಶಕ್ತಿಗಳ ವಿರುದ್ಧ ಏಳಲೇ ಇಲ್ಲ. ಈ ವರ್ಗಕ್ಕೆ ನ್ಯಾಯಾಂಗ ಪದ್ಧತಿಯೂ ಹೊರತಾಗಿಲ್ಲ. ಕಳ್ಳ ಸಾಗಣೆದಾರರನ್ನು ಬಂಧಿಸಿದಾಗ ಅವರನ್ನು ಶಿಕ್ಷಿಸುವುದರಲ್ಲಿ ನ್ಯಾಯಾಧೀಶರು ಅಸಹಾಯಕರು! ಮಥುರಾ ಅತ್ಯಾಚಾರ ಪ್ರಕರಣದಲ್ಲಿಯೂ ಇವರು ನಿಷ್ಕ್ರಿಯರು. ಗಂಡಾಂತರ

ಪರಿಸ್ಥಿತಿಯಲ್ಲಿ ವ್ಯಕ್ತಿಗಳನ್ನು, ರಾಜಕೀಯದ ದಂಡದಿಂದ ಬದುಕಿಸುವವರಷ್ಟೆ ನ್ಯಾಯಾಧೀಶರು ಅಸಹಾಯಕರು! 'ಕೊಲ್ಲುವವನಿಗಿಂತಲೂ ಕಾಯುವವನೇ ದೊಡ್ಡವನು' ಎಂಬ ಉಕ್ತಿ ಎಲ್ಲಿದೆ ಇಂದು! ನ್ಯಾಯ ಪದ್ಧತಿ ಬಿಳಿ ಆನೆಯಾಗಿದೆಯಲ್ಲವೆ?


ಪತ್ರಿಕೆಗಳು ಕೂಡ ವಿಫಲವಾಗಿವೆ ಇಂದು. ಉದ್ಯಮಿಗಳಿಂದ ನಡೆಸಲ್ಪಡುತ್ತಿರುವ ಅವುಗಳ ಸ್ವಂತದ ಹಿತರಕ್ಷಣೆಯನ್ನೂ ಅಲ್ಲಗಳೆಯಲಾಗದು. ಆದರೂ ಅವುಗಳು ಈ ರಾಜಕೀಯಕ್ಕೆ ಕೊಡುವ ವಾಸ್ತವ ಮಹತ್ವ ದೊಡ್ಡ ದೋಷ. ಒಬ್ಬ ವ್ಯಕ್ತಿ ಮಂತ್ರಿಯಾದ ಕೂಡಲೇ ಅವನು ಮಾತನಾಡುವ ಎಲ್ಲ ಅಸಂಬದ್ಧ ಹೇಳಿಕೆಗಳೂ ಮುದ್ರಣ ಕಾಣಬೇಕೇ? ಅವನು ಕೆಮ್ಮಿದ್ದನ್ನು ಸೀನಿದ್ದನ್ನು ಬಂಗಾರದ ಕಟ್ಟು ಹಾಕಿ ಪ್ರಸಿದ್ಧಿಸುವದು ಯಾರ ಉದ್ಧಾರಕ್ಕಾಗಿ! ಕೇಳಿದರೆ ಪತ್ರಿಕೆಗಳು ಕೊಡುವ ಉತ್ತರ (News Value) ಎಂಬ ಹಾರಿಕೆಯ ಉತ್ತರ. ಇದರ ದುಷ್ಪರಿಣಾಮಗಳು ಎರಡು: ಒಂದು ಈ ಪುಢಾರಿ ತನ್ನ ತಲೆಯ ಮೇಲೆಯೇ ಭೂಮಂಡಲ ನಿಂತಿದೆಯೆಂದು ಭಾವಿಸುತ್ತಾನೆ; ಎಲ್ಲದರಲ್ಲಿಯೂ ತನ್ನ ಮೂಗು ಚಾಚುತ್ತಾನೆ. ಎರಡು ಶ್ರೀಸಾಮಾನ್ಯನ ಆಸಕ್ತಿ ರಾಜಕೀಯಕ್ಕೆ ಸೀಮಿತವಾಗುತ್ತದೆ. ಬೇಕಾಗಿಯೋ ಬೇಡವಾಗಿಯೋ ಶ್ರೀಸಾಮಾನ್ಯ ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತುಕೊಂಡು ರಾಜಕೀಯದ ಬಗ್ಗೆಯೇ ತಲೆ ಕೆದಿಸಿಕೊಳ್ಳುತ್ತಾನೆ. ಇದು ದೊಡ್ಡ ಅಪಾಯ. ನಮಗೆ ಪತ್ರಿಕಾ ಸ್ವಾತಂತ್ರ್ಯ ಸಿಕ್ಕಾಗ, ಪುಢಾರಿಗಳನ್ನು ಹೊಗಳುವದೇ ಕಸುಬಾಗಿದ್ದ ಇವು ಸ್ವಾತಂತ್ರ ಹರಣವಾದಾಗ ಬಿಲ ಸೇರಿದವು. ಮತ್ತೆ ಸ್ವಾತಂತ್ರ್ಯ ಸಿಕ್ಕಾಗಲೂ ಕಳೆದುಕೊಂಡಿದ್ದ ಸ್ವಾತಂತ್ರ್ಯದ ಮಹತ್ವ ಅರಿಯಬೇಕಾಗಿತ್ತಲ್ಲವೇ? ಉಹುಂ... ಮತ್ತೆ ಅದೇ ಹಳೆಯ ರಾಗ.


ನಮ್ಮ ಈ ಎಲ್ಲ ವ್ಯವಸ್ಥೆಯ ಅಂತಿಮ ಗುರಿ ಶ್ರೀಸಾಮಾನ್ಯ. ಆದರೆ [illegible] ಹಾಯ. ಪ್ರಾಪಂಚಿಕ ಹಿತಾಸಕ್ತಿಗಳ ಒತ್ತಡಕ್ಕೆ ಗುರಿಯಾದ ಇವನು ವ್ಯವಸ್ಥೆಯನ್ನೇ ಒಪ್ಪಿಕೊಂಡು ಬಿಡುತ್ತಾನೆ. ಏಕೆಂದರೆ, ಇವನು ಏಕಾಕಿ, ಇವನು ಅಸಹಾಯ. ಸಾರ್ವಜನಿಕವಾಗಿ ದೂರುತ್ತ, ವೈಯಕ್ತಿಕವಾಗಿ ಆ ವ್ಯವಸ್ಥೆಯನ್ನೇ ಬಲಪಡಿಸುವ, ಅಥವಾ ವ್ಯವಸ್ಥೆಗೇ ಬಲಿಯಾಗುವ ಎರಡು ಮೋರೆಯ ಸರ್ಪ ಇವನು. ಐದು ವರುಷಗಳ ತನಕ ತನ್ನ ಸುತ್ತಲೂ ಇರುವ ವ್ಯವಸ್ಥೆಯನ್ನು ದೂರುತ್ತಾನೆ, ಕ್ರಾಂತಿಯ ಮಾತು ಆಡುತ್ತಾನೆ. ಆದರೆ ಚುನಾವಣೆಯ ಸಮಯದಲ್ಲಿ, ಆ ಒಂದು ಮಹತ್ವದ ಕ್ಷಣದಲ್ಲಿ, ತನ್ನ ಮತವನ್ನು ೧೦ ರೂಪಾಯಿಗೋ ೧೫ ರೂಪಾಯಿಗೋ ಮಾರಿಕೊಂಡೇ ಬದುಕುತ್ತಾನೆ, ಈ ಮಹಾಶಯ! ಇವನ ಅಜ್ಞಾನಕ್ಕೆ ಮರುಗಬೇಕೆಂದರೆ, ಮೂವತ್ತು ವರ್ಷಗಳ ಹಿಂದಿನ ಕ್ರಾಂತಿ ನೆನಪಿದೆ. ಈಗಿನಷ್ಟು ಸಾಕ್ಷರತೆ, ಜ್ಞಾನ, ಅನುಕೂಲಗಳು ಇಲ್ಲದ ಸ್ವಾತಂತ್ರ್ಯಪೂರ್ವ ಕಾಲ. ಆದರೆ ಜಗತ್ತೇ ಕಂಡು ಕೇಳರಿಯದ ಕ್ರಾಂತಿ ಮಾಡಿದ ಧೀರ ಇವನು. ಈಗ ಇವನಿಗೆಂಥ ಜಾಡ್ಯ, ಎಂಥ ಅಸಹಾಯಕತೆ? ಗಾಂಧೀಜಿ ಸತ್ತ ಮೂವತ್ತು ವರುಷಗಳಲ್ಲಿಯೇ ಇವನಿಗೆಂಥ ರೋಗ? ಪ್ರಾಪಂಚಿಕ ಸೌಕರ್ಯಗಳ ಬೆನ್ನು ಹತ್ತಲಿ, ಆದರೆ ಅವುಗಳಿಗಾಗಿ ಅಡ್ಡ ಹಾದಿಯ ಬಲಿಗೇಕೆ ಬೀಳಬೇಕೀತ?

ದೇಶಕ್ಕಾಗಿ ವಿಚಾರಿಸುವ ಪ್ರಜ್ಞಾವಂತ ವಿಚಾರಶೀಲ ಜನರಿಗೇನೂ ಕೊರತೆಯಿಲ್ಲ. ಆದರೆ ಅವರು ಸಕ್ರಿಯವಾಗಿ ಭಾಗವಹಿಸುವಂಥ ಯಾವ ಕ್ಷೇತ್ರವನ್ನೂ ನಮ್ಮ ರಾಜಕಾರಣಿಗಳ ಸಂತಾನ ಉಳಿಯಗೊಟ್ಟಿಲ್ಲ. ಅವರಲ್ಲಿ ಕೆಲವರು ದೇಶವನ್ನು ಬಿಟ್ಟು ಹೋಗಬಹುದು; ಕೆಲವರು [illegible] ಸಾಧನೆಗಳಲ್ಲಿ ಮಗ್ನರಾಗಿರಬಹುದು. ಕೆಲವರು ಪತಾಸರಾಗಿ ಮೂಲೆಗುಂಪಾಗಿರಬಹುದು.

ಒಂದು ಕಡೆ ಇಂಥ ಅಲ್ಪಸಂಖ್ಯಾಕರು, ಇನ್ನೊಂದು ಕಡೆ ಅಸಹಾಯ ಶ್ರೀಸಾಮಾನ್ಯ, ಮತ್ತೊಂದು ಕಡೆ ಸ್ವಾರ್ಥಿ ಅಧಿಕಾರೀ ವರ್ಗ — ಇವರೆಲ್ಲರ ಮೇಲೆ ಕಾಲಿಯಾ ನರ್ತನ ಮಾಡುವ [illegible] ರಾಜಕಾರಣ! ಭಾರತವನ್ನು ಬದುಕಿಸಲು ದೇವರು ಇನ್ನೂ ಹತ್ತು ಅವತಾರ [illegible]

“ನಾನು ಸೆಕ್ರೆಟರಿ,
ಆದ್ದರಿಂದ ನನ್ನ ಉಡುಪು ಸ್ಮಾರ್ಟ್ ಆಗಿರಬೇಕಲ್ಲವೆ?”





ನಿಮ್ಮ ಮೆಚ್ಚಿನ ಉಡುಪುಗಳಿಗಾಗಿ
ನಿಮ್ಮ ನಚ್ಚಿನ ಬಟ್ಟೆಗಳು

ಮಫತ್‌ಲಾಲ್ ಫ್ಯಾಬ್ರಿಕ್ಸ

ಸೂಟಿಂಗ್ಸ್, ಶರ್ಟಿಂಗ್ಸ್,
ಸೀರೆಗಳು, ಡ್ರೆಸ್ ಮಟೀರಿಯಲ್ಸ್, ಮತ್ತು ಡೆನಿಮ್ಸ್.

ಮಫತ್‌ಲಾಲ್ ಇಂಡಸ್ಟ್ರೀಸ್ ನ್ಯೂ ಶೊರೋಕ್ ಮಿಲ್ಸ್ **ಮಫತ್‌ಲಾಲ್ ಫೈನ್.**

MF-4 KAN

ಹೀಗೂ ಆಗಿರಬಹುದೇ ?

ನೆಪೋಲಿಯನ್ನನ ದುರಂತ ಕಥೆ

ಶಿವರಾಮ ಜೋಶಿ

(ಜನೆವರಿ 'ಕಸ್ತೂರಿ'ಯಲ್ಲಿ ಬಂದ 'ನೆಪೋಲಿಯನ್ ಸತ್ತದ್ದೆಲ್ಲಿ?' ಲೇಖನವನ್ನೋದಿದಾಗ ಪ್ರಸ್ತುತ ಲೇಖಕರು ಆ ಬಗ್ಗೆ ಆಳವಾಗಿ ಚಿಂತಿಸಿದರು. ಅವರ ಆಗಿನ ಕಲ್ಪನೆ, ತರ್ಕಗಳ ಸಮ್ಮಿಶ್ರಣದಿಂದ ಮೂಡಿಬಂದ ವಿಚಾರಗಳಿವು. ವಾಸ್ತವದಲ್ಲಿ ಸತ್ಯದಿಂದ ದೂರವಿರಲಿಕ್ಕೂ ಇಲ್ಲ.)

ಗಡಿಯಾರದ ಪೆಂಡ್ಯೂಲಮ್ ಅತ್ತಿಂದಿತ್ತ ಹೊಯ್ದಾಡತೊಡಗಿತ್ತು. ಗಂಟೆ ಹನ್ನೆರಡಾಗುವುದನ್ನೇ ನೆಪೋಲಿಯನ್ ನೋಡುತ್ತ ಕುಳಿತ. ಹೊರಗೆ ಕತ್ತಲಿನ ಕಪ್ಪುರಾಶಿ ಹಬ್ಬಿತ್ತು. ಸಾಗರದ ತೆರೆಗಳು ಹೊಯ್ದಾಡುತ್ತ ಅನವರತ–ವಾಗಿ ತೀರಕ್ಕೆ ಅಪ್ಪಳಿಸುತ್ತಿದ್ದವು. ನಿಶಾಚರ ಜೀವಿಗಳು ಕೂಗು ಹಾಕುತ್ತಿದ್ದವು. ಇನ್ನೇನು ಸೆರೆಮನೆಯ ಕಾವಲುಗಾರ ಬಂದೀಖಾನೆಯ ಬಾಗಿಲು ತೆರೆಯುತ್ತಾನೆ, ಅವನು ಸಲಾಮು ಹಾಕುತ್ತಿದ್ದಂತೆ ತಾನು ನೇರವಾಗಿ ಹೊರಟು ಹೋಗುತ್ತೇನೆ ಅಂದುಕೊಂಡ ನೆಪೋಲಿಯನ್. ಆದರೆ ಗಂಟೆ ಈಗಿನ್ನೂ ಹತ್ತು. ವೇಳೆ ಕಳೆಯುವುದು ಹೇಗೆ ಎಂದು ನೆಪೋಲಿಯನ್ ಸಿಳ್ಳು ಹಾಕುತ್ತ ತಾನಿದ್ದ ಸೆರೆಮನೆಯಲ್ಲಿಯೇ ಶತಪಥ ಹಾಕತೊಡಗಿದ. ಅವನ ತಲೆಯಲ್ಲಿ ವಿಚಾರಗಳ ಸಾಗರವೇ ಎದ್ದಿತ್ತು. ಕೊನೆಗೊಮ್ಮೆ ಗಂಟೆ ಹನ್ನೆರಡಾಯಿತು. ನೆಪೋಲಿಯನ್ ತನ್ನ ವೇಷ ಬದಲಾಯಿಸಿದ. ನಾವಿಕನಂತೆ ವೇಷ ಧರಿಸಿ ಶಾಂತ ಮುಖಮುದ್ರೆಯಿಂದ ಕಾವಲುಗಾರ ತೆರೆದಿರಿಸಿದ ಬಾಗಿಲಿನಿಂದ ಹೊರಬಿದ್ದ. ಬಾಗಿಲಿ–ನಾಚೆ ಇಬ್ಬರು ಕಾದಿದ್ದರು. ಅವರಲ್ಲೊಬ್ಬ ನೆಪೋಲಿಯನ್ನನ ಕೈ ಕುಲುಕಿದ. ಮುಂದಿನ ಕ್ಷಣದಲ್ಲಿ ಕಾವಲುಗಾರ ಓಂದೆ ಸರಿದಿದ್ದ. ಮುಂದೆ ಏನಾಯಿತೋ ಯಾರೂ ತಿಳಿಯುವಂತಿರಲಿಲ್ಲ. ಇಂತಹ ಪ್ರಮೇಯವನ್ನು ಊಹಿಸದಿದ್ದ ನೆಪೋಲಿಯನ್ ಏನಾಯಿತೆಂದು ತಿಳಿದುಕೊಂಡ. ಕಾವಲುಗಾರನನ್ನು ಯಾರೋ ಅಮುಕಿ ಹಿಡಿದು ಕೊಂಡಿದ್ದರು. ಅವನ ಇತಿಶ್ರೀ ಅಲ್ಲಿಗೆ ಆಯಿತೆಂದು ನೆಪೋಲಿಯನ್‌ನಿಗೆ ಅರಿವಾಯಿತು. ಅವನ ಮನಸ್ಸಿಗೆ ಬಹಳ ಖೇದ ಉಂಟಾಯಿತು. ಅಷ್ಟರಲ್ಲಿ ಕೈ ಕುಲುಕಿದ್ದ ವ್ಯಕ್ತಿ ಬಂದೀಖಾನೆಯ ಒಳಸೇರಿ 'ಯಶಸ್ಸು ನಮ್ಮದಾಯಿತು' ಎಂದು ಅಲ್ವಿದಾ ಹೇಳಿದ. ನೆಪೋಲಿಯನ್ ಮಾತನಾಡಲಿಲ್ಲ. ಸೆರೆಮನೆಯಿಂದ ಹೊರಬಿದ್ದವನೇ ಬದಿಯ ಪೊದೆಗಳ ನಡುವೆ ನುಸುಳಿ ಮರೆಯಾದ. ಮುಂದೆ ಅವನು ಹೇಗೆ ಹೋದ ಎಂಬುದು ಮಾತ್ರ ಯಾರಿಗೂ ತಿಳಿಯದಾಯಿತು.

ಸುಮಾರು ಎರಡು ತಾಸುಗಳಾದರೂ ಕಳೆದಿರಬೇಕು. ಸೆರೆಮನೆಯಿಂದ ಒಂದು ಶವವನ್ನು ಇಬ್ಬರು ಧಡೂತಿ ಆಸಾಮಿಗಳು ಹೊರತಂದು ಒಂದು ಪೊದೆಯ ಕೆಳಗೆ ಮರೆಮಾಡಿ ಇರಿಸಿದರು. ಇನ್ನೊಂದು ಪೊದೆಯೊಳಗಿನಿಂದ ಯಾರೋ ಇದನ್ನೆಲ್ಲ ನೋಡುತ್ತ ಕುಳಿತಿದ್ದರು. ಆ ವ್ಯಕ್ತಿ ನೆಪೋಲಿಯನ್ನನೇ ಆಗಿದ್ದ. ತೀರದಲ್ಲಿ ನಾವೆ ಇನ್ನೂ ಕಾಯುತ್ತಿತ್ತು. ನೆಪೋಲಿಯನ್ ಕತ್ತಲಿನಲ್ಲೆ ಶವವನ್ನಿರಿಸಿದ ಪೊದೆಯತ್ತ ತೆರಳಿ ಅರಿವೆ ಮುಸುಕಿದ ಅದರ ಮುಖವನ್ನು ತೆರೆದು ಬಾಗಿ ಅದರ ಹಣೆಗೆ ಮುತ್ತಿಟ್ಟ. ನೆಪೋಲಿಯನ್ ತನಗೆ ನೆರವಾಗಿದ್ದ ಬಂಟನಿಗೆ ಈ ರೀತಿ ತನ್ನ ಪ್ರೀತಿಯ ಗೌರವನ್ನರ್ಪಿಸಿದ. ಆಯಿತು. ನೆಪೋಲಿಯನ್ ತೀರದತ್ತ ತೆರಳಿದ. ಅವನ ಮನಸ್ಸು ಖಿನ್ನವಾಯಿತು. ಅವನಿಗರಿವಾಗದ ರೀತಿಯಲ್ಲಿ ಮೋಸ ನಡೆದಿತ್ತು. ಸತ್ತವನು ಕಾವಲುಗಾರನಾಗಿರಲಿಲ್ಲ. ತನ್ನ ಬದಲಾಗಿ ಸೆರೆಮನೆ ಸೇರಲಿದ್ದ ಒಬ್ಬ ಮಿತ್ರನಾಗಿದ್ದ. ಅವನಿಂದಲೇ ವಂಚನೆಯಾಗಿತ್ತು. ಅದನ್ನು ಎಳವೆಯಲ್ಲೇ ಮುರುಟಿ ಹಾಕಲಾಗಿತ್ತು. ಹಾಗಾದರೆ ಬಂದೀಖಾನೆಯೊಳಕ್ಕೆ ಸೇರಿಕೊಂಡವರು ಯಾರು? ನೆಪೋಲಿಯನ್ ಧೀರನಂತೆ ಹೆಜ್ಜೆ ಹಾಕತೊಡಗಿದ. ಕೆಲವೇ ನಿಮಿಷಗಳಲ್ಲಿ ದೋಣಿ ನಿಂತಿದ್ದ ಸ್ಥಳಕ್ಕೆ ಬಂದ. ಅತನನ್ನು ಕಾಣುತ್ತಲೇ ನಾವಿಕ ದೋಣಿಯಿಂದಿಳಿದು ಸೆಲ್ಯೂಟ್ ಹೊಡೆದ. ನೆಪೋಲಿಯನ್ ನಾವೆಯಲ್ಲಿ ಹೆಜ್ಜೆ ಇಟ್ಟು ಒಮ್ಮೆ ತುಳಿದು ನೋಡಿದ. ನಾವೆ ಹೊಯ್ದಾಡಿತು. ಅದೇ ಹೆಜ್ಜೆಯ ಮೇಲೆ ಅವನು ಜಿಗಿದು ನಾವೆಯೊಳಕ್ಕೆ ಸೇರಿ ಅದರಲ್ಲಿ ಅವಿತುಕೊಂಡ. ನಾವೆಯ ತಳಕ್ಕೆ ಅಂಟಿಕೊಂಡು ಮಲಗಿದ. ನಾವಿಕ ದೋಣಿಯಲ್ಲಿ ಒಂದು ಮೀನು ಬಲೆಯಿಂದ ನೆಪೋಲಿಯನ್ನನನ್ನು ಸಂಪೂರ್ಣ ಮುಚ್ಚಿಬಿಟ್ಟ. ನಾವೆ ಚಲಿಸಿತು. ಸಮುದ್ರ ಅಷ್ಟೇನೂ ಅರ್ಭಟಿಸುತ್ತಿರಲಿಲ್ಲ. ದೂರದಿಂದ ಕಾವಲು ನೌಕೆಗಳು ಸುತ್ತಿ ಬರತೊಡಗಿದ್ದವು. ನೆಪೋಲಿಯನ್ನನ ನಾವೆ ಮತ್ತೆ ಹಿಂದಕ್ಕೆ ಚಲಿಸತೊಡಗಿತು. ಆ ನಾವೆಯಲ್ಲಿ ನೆಪೋಲಿಯನ್ ಅವಿತುಕೊಂಡಿದ್ದಾನೆಂದು ಬ್ರಿಟಿಶ್ ನೌಕೆಗಳಿಗೆ ತಿಳಿದುಹೋಗಿತ್ತು. ಆದರೂ, ನೆಪೋಲಿಯನ್ ಎದೆಗುಂದಲಿಲ್ಲ. ಮರಳಿ ದ್ವೀಪಕ್ಕೆ ಬಂದು ಮರೆಯಾದ. ಮುಂದೆರಡು ಗಳಿಗೆಗಳಲ್ಲಿ ಸಾಗರ ತೀರಕ್ಕೆ ತರಲ್ಪಟ್ಟ ಆ ಶವವನ್ನು ನಾವೆಯಲ್ಲಿರಿಸಲಾಯಿತು. ಮತ್ತೆ ನಾವೆ ಚಲಿಸಿತು. ಸಾಗರದ ಅನತಿದೂರಕ್ಕೆ ಹೋಗುತ್ತಲೇ ಕಾವಲು ನೌಕೆಗಳು ನಾವೆಯನ್ನು ಸುತ್ತುಗಟ್ಟಿದವು. ನಾವಿಕ ಮರು ಮಾತನಾಡದೆ ಕಾವಲುಗಾರ ಸೈನಿಕರು ನಾವೆಯಲ್ಲಿಳಿಯಲು ಅವಕಾಶ ಮಾಡಿಕೊಟ್ಟ, ನಾವೆಯಲ್ಲಿದ್ದ ಶವ ಸೈನಿಕರ ವಶವಾಯಿತು. ನೆಪೋಲಿಯನ್ ಮತ್ತೆ ಕಾದ, ಮುಂಜಾವು ಸಮೀಪಿಸತೊಡಗಿತ್ತು.

ಅಷ್ಟರಲ್ಲಿ ನೆಪೋಲಿಯನ್ ಪಾರಾಗಲು



“ನಾನು ರಾಜಕೀಯಕ್ಕೆ ಧುಮುಕೊ ಮುಂಚೆ ನೀನು ತೌರುಮನೆಗೆ ಧುಮುಕು... ನನ್ಗೆ ಮಂತ್ರಿ ಪದವಿ ಸಿಕ್ಕಿದ್ರೆ... ನಿನ್ನ ರಾಣಿ ಹಂಗೆ ನೋಡ್ಕೊತೀನಿ...!!”

ಮತ್ತೊಂದು ಸಿದ್ಧತೆ ನಡೆದಿತ್ತು. ಶವವನ್ನು ಕೈಸೆರೆಹಿಡಿದ ನೌಕೆಗಳು ಅಲ್ಲಿಂದ ತೆರಳುತ್ತಲೇ ಮತ್ತೊಂದು ನಾವೆಯಲ್ಲಿ ನೆಪೋಲಿಯನ್ ಮೊದಲಿನಂತೆಯೇ ಮರೆಯಾದ. ಮತ್ತೆ ನಾವೆ ಚಲಿಸಿತು. ನಿರಾತಂಕವಾಗಿ ನಾವೆ ಸಾಗರದ ತೆರೆಗಳೊಂದಿಗೆ ತೇಲಿಹೋಯಿತು. ಬ್ರಿಟಿಶರ ವಶವಾದ ಶವವೇ ನೆಪೋಲಿಯನ್ನನದೆಂದು ಪ್ರಚಾರವಾಗಿ ನೆಪೋಲಿಯನ್ ಸಾಯುವ ಮೊದಲೇ ಮರಣಿಸಿದನೆಂದು ಪ್ರಸಿದ್ಧವಾಯಿತು.

ಆದರೆ ನಿಜವಾದ ನೆಪೋಲಿಯನ್ ಬ್ರಿಟಿಶ್ ಕಾವಲುಗಾರರ ಕಣ್ಣೆದುರೇ ತಪ್ಪಿಸಿಕೊಂಡು ಹೋಗಿದ್ದ. ಅವನು ಎಲ್ಲಿಗೆ ಹೋದ, ಏನಾದ ಎಂಬುದು ಮಾತ್ರ ರಹಸ್ಯವಾಗುಳಿಯಿತು.

ಆತ ರಹಸ್ಯ ಸೈನಿಕರ ಗುಂಡಿಗೆ ಬಲಿಯಾಗಿ ಸತ್ತನೆಂದು ಮುಂದೆ ಮತ್ತೊಮ್ಮೆ ಸುದ್ದಿ ಹಬ್ಬಿದಾಗ ಬ್ರಿಟಿಶರಿಗೆ ತಬ್ಬಿಬ್ಬಾಯಿತು. ನಾವೆಯಲ್ಲಿ ಸೆರೆ ಹಿಡಿದ ಶವವನ್ನೇ ಸೈನಿಕ ಗೌರವದೊಂದಿಗೆ ಹೂಳಲಾಗಿತ್ತು. ಜೀವಂತ ನೆಪೋಲಿಯನ್ನನ ಕಿವಿಗೂ ಈ ಸಂಗತಿ ತಲುಪಿತು. ಅವನು ಕದನದಲ್ಲಿ ಸೆರೆಸಿಕ್ಕಾಗಲೇ ಬ್ರಿಟಿಶರ ಕೈಯಲ್ಲಿ ಸೆರೆಯಾಳಾಗಿ ಸಾಯುವುದಕ್ಕಿಂತ ಬೇರೆಲ್ಲಿಯಾದರೂ ಮರಣ ಪಡೆಬೇಕೆಂದು ನಿಶ್ಚಯಿಸಿದ್ದ.

ನೆಪೋಲಿಯನ್ ಬ್ರಿಟಿಶರ ಕೈಯಿಂದ ಪಾರಾಗುವುದು ಅಷ್ಟೇನೂ ಕಠಿಣವಾಗಿರಲಿಲ್ಲ. ಆದರೆ ಕೊನೆಯ ಕ್ಷಣದಲ್ಲಿ ಪಿತೂರಿ ತಲೆ ಕೆಳಗಾಗಿತ್ತು. ನೆಪೋಲಿಯನ್ ಎಣಿಸಿದಂತೆ ಸೆರಮನೆಯಲ್ಲಿ ಪ್ರಾಣ ಕಳೆದುಕೊಂಡವ ಅವನ ಬಂಟನಾಗಿರಲಿಲ್ಲ. ಮುಂದೆ ಇದೇ ಸೇವಕ ನೆಪೋಲಿಯನ್ನನ ಸಹಕಾರಿಯಾಗಿ ಪ್ರಾಣ ತ್ಯಾಗಮಾಡಿದ.

ನೆಪೋಲಿಯನ್ನನೂ ಮುಂದೆ ಸತ್ತ. ಆದರೆ ಆ ಸಾವು ಎಂತಹದೆಂದು ಯಾರಿಗೂ ತಿಳಿಯದೆ ಹೋಯಿತು. ಇತಿಹಾಸದ ಪುಟಗಳೂ ಇದನ್ನು ನಿಷ್ಕರ್ಷೆಯಾಗಿ ಹೇಳದಾದವು. ನೆಪೋಲಿಯನ್ನನ ದಿನಚರಿ ಅವನ ಸಾವಿನ ಬಗೆಗೆ ಹೆಚ್ಚು ಹೇಳುವಂತಹುದು ಏನೂ ಇರಲಿಲ್ಲ. ಕಾರಣ ಅವನ ಕೊನೆಯ ಕ್ಷಣಗಳನ್ನು ತನಗರಿಯದಂತೆ ಕಳೆದಿದ್ದ. ಆದರೆ ಜೀವಂತ ನೆಪೋಲಿಯನ್ ಮರಣಿಸಿದಾಗ ಶತ್ರುಗಳಿಗೆ ಸಂತೋಷವಾಗುವ ಬದಲು ನಿರಾಶೆಯಾಗಿತ್ತು. ಕಾರಣ, ಅವರ ದಾಖಲೆಗಳಲ್ಲಿ ಅವನಾಗಲೇ ಸತ್ತುಹೋಗಿದ್ದ! ಈ ಸಂಗತಿ ನೆಪೋಲಿಯನ್ನನ ದಿನಚರಿಯಿಂದ ಸ್ಪಷ್ಟವಾಗುತ್ತದೆ. ಅವನ ದಿನಚರಿಯಲ್ಲಿ ಇನ್ನೂ ಅನೇಕ ಅಗಾಧ ಸಂಗತಿಗಳು ದೊರೆಯುತ್ತವೆ. ನೆಪೋಲಿಯನ್ನನ ಪತ್ನಿ ಅವನಷ್ಟೇ ಚುರುಕು ಬುದ್ಧಿಯುಳ್ಳವಳಾಗಿದ್ದಳೆಂಬುದು ಅವನ ಬರಹಗಳಿಂದ ತಿಳಿಯುತ್ತದೆ. ಅವಳು ಪತಿಯ ಅತ್ಯಂತ ವಿಶ್ವಾಸಿಯಾಗಿದ್ದಳಷ್ಟೇ ಅಲ್ಲ ಅವನ ಪ್ರೇಮದ ಪುತ್ಥಳಿಯಾಗಿದ್ದಳು. ಅವನೊಮ್ಮೆ ದಾಳಿಗೆ ಹೊರಟಿದ್ದಾಗ [illegible] ಮತ್ತೊಬ್ಬಳನ್ನು ಪ್ರೇಮಿಸಬೇಡ ಎಂದು ನುಡಿದಳಂತೆ. ಆಗ ಅವನು ಅವಳ ತುಟಿಗೆ ಮುತ್ತಿಟ್ಟು 'ನೀನು ನನ್ನ ಪ್ರೀತಿಯ ಮಡದಿ ಎಂಬುದನ್ನು ಮರೆತೆಯಾ?' ಎಂದು ಕೇಳಿದನಂತೆ. ✡

ಕ್ಲಬ್ ಒಂದರಲ್ಲಿ ಆತ ಡ್ಯಾನ್ಸ್ ಪಾರ್ಟನರನ್ನ ಹುಡುಕುತ್ತಿದ್ದ. ದೂರದಲ್ಲಿ ಆ ಸುಂದರಿ ಒಂಟಿಯಾಗಿ ಕುಳಿತಿರುವುದು ಕಾಣಿಸಿತು. ಆಕೆಯ ಬಳಿಸಾರಿದ.

"ಮ್ಯಾಡಂ-ಪ್ಲೀಸ್ ಡ್ಯಾನ್ಸ್‌ಗೆ ಕಂಪ್ನಿ ಕೊಡ್ತೀರಾ?" ಕೇಳಿದ.

"ಅಯ್ಯೊ-ವೆರಿ ಸಾರಿ. ಮಗುವಿನೊಂದಿಗೆ ಡ್ಯಾನ್ಸ್ ಮಾಡೋದೆ? ಎಂದಿಗೂ ಅಸಾಧ್ಯ."

"ಓಹ್-ಹೌದಾ? ಗೊತ್ತಿರ್ಲಿಲ್ಲ ಕ್ಷಮಿಸಿ."

"ಈಗಾದ್ರೂ ಗೊತ್ತಾಯ್ತಲ್ಲ."

"ಆದ್ರೆ ಎಷ್ಟು ತಿಂಗಳೂಂತ ಗೊತ್ತಾಗ್ಲಿಲ್ಲ ಮ್ಯಾಡಂ."

నన్న మగ గురుదత్

వాసంతి పడుకోణే
సంగ్రహ: రామదాస్

ನನ್ನ ಮಗ ಗುರುದತ್ತ

ಗುರುದತ್ತ-ಭಾರತೀಯ ಚಲನಚಿತ್ರದ ಅಪರೂಪದ ವ್ಯಕ್ತಿ. ನಟನಾಗಿ, ನಿರ್ಮಾಪಕನಾಗಿ, ನಿರ್ದೇಶಕನಾಗಿ ಚಿತ್ರರಂಗಕ್ಕೆ ನೀಡಿದ ಕಾಣಿಕೆ ಬಹಳ. ಈ ಕನ್ನಡಿಗನ ಪರಿಚಯ ಕನ್ನಡಿಗರಿಗೆ ಅಷ್ಟಿಲ್ಲ. ಆತನ ಜೀವನ-ಸಾಧನೆ ಮತ್ತು ಮನದ ಬೇಗುದಿಯನ್ನು ಅವರ ತಾಯಿ ತಮ್ಮದೇ ಆದ ಶೈಲಿಯಲ್ಲಿ ನಿರೂಪಿಸಿರುವ ಜೀವನಚಿತ್ರದ ಸಂಗ್ರಹರೂಪ ಇದು.

ನಮ್ಮ ಮದುವೆಯಾಗಿ ಆಗಲೇ ಎರಡೂವರೆ ವರ್ಷಗಳಾಗಿದ್ದವು. ನಮ್ಮ ಮನೆಯವರಿಗೆ ಅವರ ಇಷ್ಟದಂತೆ ಎಲ್ಲೂ ನೌಕರಿ ಸಿಕ್ಕಿರಲಿಲ್ಲ. ಕಡೆಗೆ ಬೇಸತ್ತು ಪಣಂಬೂರಿನಲ್ಲಿ ಒಂದು ಹೆಡ್ ಮಾಸ್ತರರ ಕೆಲಸವನ್ನು ಅವರು ಕೈಕೊಳ್ಳಬೇಕಾಯಿತು; ಕೈಗೊಂಡರು. ಈ ಪಣಂಬೂರು ಮಂಗಳೂರಿನಿಂದ ಉಡುಪಿಗೆ ಹೋಗುವ ದಾರಿಯಲ್ಲಿದೆ. ಒಂದು ಸಣ್ಣ ಹಳ್ಳಿ; ಎಂಟು ಹತ್ತು ಮನೆಗಳು. ಇಂಥಲ್ಲಿಯೂ ಒಂದು ಪಾಠಶಾಲೆ ಇದೆ. ಅಕ್ಕಪಕ್ಕದ ಅನೇಕ ಇಂಥ ಹಳ್ಳಿಗಳಿಗೆ ಅದೊಂದೇ ಪಾಠಶಾಲೆ.

ನಮ್ಮ ಯಜಮಾನರಿಗೆ ಆಗಾಗ್ಗೆ ಮಲೇರಿಯಾ ಜ್ವರ ಬಂದು ಅವರನ್ನು ಪೀಡಿಸುತ್ತಿತ್ತು. ಶಾಲೆಯ ಇನ್ನೊಬ್ಬ ಮೇಷ್ಟರಾಗಿದ್ದ ಪಚ್ಚಪ್ಪಾ ಎಂಬುವರು ವೈದ್ಯರು. ಅವರೇ ಔಷಧಿ ಕೊಡುತ್ತಿದ್ದರು. ಅವರ ಔಷಧಿಗಳಿಂದ ತಕ್ಕ ಮಟ್ಟಿಗೆ ಗುಣವಾಗುತ್ತಿತ್ತಾದರೂ "ನಿಮಗೆ ಗ್ರಹಚಾರ ಕಾಡುತ್ತಿರಬಹುದು. ಒಮ್ಮೆ ನಿಮ್ಮ ಜಾತಕವನ್ನು ಜ್ಯೋತಿಷಿಗೆ ತೋರಿಸಬಹುದಿತ್ತೆಂದು ಅವರೇ ಸಲಹೆ ಕೊಟ್ಟರು. ಇವರಿಗೋ ಜೋತಿಷ್ಯದಲ್ಲಿ ನಂಬಿಕೆಯೇ ಇರಲಿಲ್ಲ. ಆದರೂ ಎಲ್ಲರ ಒತ್ತಾಯಕ್ಕಾಗಿ ಅಲ್ಲಿಯ ಹೆಸರುವಾಸಿಯಾದ ಜ್ಯೋತಿಷಿಯೊಬ್ಬರನ್ನು ಕರೆದು ಕೇಳಿದೆವು. ಅವರು ನಮ್ಮಿಬ್ಬರ ಜಾತಕಗಳನ್ನೂ ಅಂಗೈಗಳನ್ನೂ ನೋಡಿ ಏನೇನನ್ನೋ ಹೇಳಿದರು. ನನ್ನ ಅಂಗೈ ನೋಡಿದಾಗ ನಕ್ಕರು. ನನಗೆ ಎದೆಯಲ್ಲಿ ಜುಮ್ ಎಂದಿತು. ಮುಂದೆ ಅವರೇ ಹೇಳಿದರು: "ಮಗಳೇ ನೀನು ಭಾಗ್ಯವಂತೆ. ಐದು ವರುಷದೊಳಗೆ ನಿನಗೊಬ್ಬ ಮಗ ಹುಟ್ಟುವನು. ಆತನು ನಿಮ್ಮ ಮನೆತನಕ್ಕೆ ಹೆಸರು, ಐಶ್ವರ್ಯ, ಸುಖಸಂತೋಷಗಳನ್ನು ತರುವನು. ಆತನು ಕೀರ್ತಿವಂತನಾಗಿ ಬಾಳುವನು. ಆದರೆ..." ಎಂದು ಮುಂದೆ ಮಾತಾಡದೆ ನನ್ನನ್ನೇ ನೋಡಿದರು. ನನಗೆ ನಾಚಿಕೆಯಾಯಿತು. ಮಕ್ಕಳು ಹುಟ್ಟುವ ಮೊದಲೆ ಮಕ್ಕಳ ವಿಷಯ ಯಾರು ತಾನೆ ಯೋಚಿಸುವರು? ಜೋತಿಷಿಗಳು ಹೊರಟುಹೋದರು. ನನ್ನ ಮನಸ್ಸಿನಲ್ಲಿ ಮಾತ್ರ ಅವರು ಹೇಳಿದ ಮಾತುಗಳಿಂದ ಅಲ್ಲದ ಸಲ್ಲದ ವಿಚಾರಗಳು ಬರಲಾರಂಭಿಸಿದವು.

೧೯೨೫ನೇ ಇಸ್ವಿ ಜುಲೈ ೯ನೇ ತಾರೀಖಿಗೆ ನನ್ನ ಚೊಚ್ಚಿಲ ಮಗ ಹುಟ್ಟಿದ. ನನ್ನ ಮಗು ತುಂಬ ಚಿಕ್ಕದಿತ್ತು. ಆದರೆ ಬಣ್ಣ ಬೆಳ್ಳಗೆ; ಕುರುಳು ಕಪ್ಪು; ಕಣ್ಣು ದೊಡ್ಡದಾಗಿ ಆಕರ್ಷಕವಾಗಿದ್ದವು. ಆಸ್ಪತ್ರೆಯಲ್ಲಿದ್ದದ್ದು ಹತ್ತೇ ದಿನ. ಹನ್ನೊಂದನೆಯ ದಿನ ಮಗುವಿನೊಡನೆ ನಮ್ಮ ಮನೆಗೆ ತಿರುಗಿ ಬಂದೆನು. ನನ್ನ ತಾಯಿ ಆ ಪುಟ್ಟ ಮಗುವನ್ನು ಎರೆಯುವದು ನೋಡಿದಾಗ ನನಗೊಂದು ಆಶ್ಚರ್ಯ. ಅಷ್ಟೊಂದು ಸಣ್ಣ ಮಕ್ಕಳನ್ನು ನಾನು ನೋಡಿದ್ದು ಅದೇ ಮೊದಲು. ಪುಟ್ಟ

ಪುಟ್ಟ ಆ ಕೈಕಾಲುಗಳಿಗೆ ಎಣ್ಣೆ ಹಚ್ಚಿ ನೀವಿ ನೀವಿ ನೀರು ಹಾಕುವದು ಒಂದು ದಿವ್ಯವೆಂದೇ ಭಾವಿಸಿದ್ದೆ. ಹನ್ನೆರಡನೆಯ ದಿನ ಬಳಗದವರನ್ನೆಲ್ಲ ಕರೆದು, ತೊಟ್ಟಿಲಲ್ಲಿ ಹಾಕಿ, ನಾಮಕರಣ ಮಾಡುವ ನೇಮ ಮುಗಿಯಿತು. ನಮ್ಮ ಕುಟುಂಬದಲ್ಲಿ ಇದೇ ಮೊಟ್ಟ ಮೊದಲ ಗಂಡುಮಗುವಾಗಿದ್ದರಿಂದ ನನ್ನ ಅಣ್ಣಯ್ಯನವರು ಕಲ್ಕತ್ತೆಯಿಂದ ಎರಡು ಹೆಸರುಗಳನ್ನು ಸೂಚಿಸಿ ಬರೆದಿದ್ದರು: ಒಂದು ವಸಂತಕುಮಾರ, ಇನ್ನೊಂದು ಗುರುದತ್ತ. ಮಗು ಗುರುವಾರ ಹುಟ್ಟಿದ್ದೊಂದು ಶ್ರೀಮನ್ ಮಧ್ವಾಚಾರ್ಯರ ಜನ್ಮದಿನವೂ ಆಗಿದ್ದಿನ್ನೊಂದು; ಈ ಎರಡು ಹೆಸರುಗಳನ್ನು ಸೇರಿಸಿಟ್ಟಿದ್ದರೂ ಆತನು ಮಾತ್ರ ಗೊಂಟ ಎಂಬ ಹೆಸರಿನಿಂದಲೇ ಪರಿಚಿತನಾದ; ಮತ್ತು ಅದರಿಂದಲೇ ಪ್ರಸಿದ್ಧನಾದನು.

ಆರು ತಿಂಗಳ ಗುರುದತ್ತನು ಅಂಬೆಗಾಲಿಡ ಹತ್ತಿದನು. ಎಷ್ಟೋ ತುಂಟತನ ಮಾಡಹತ್ತಿದ. ಸದಾ ಸರ್ವಕಾಲ ಆತನ ಹಿಂದೆ ಒಬ್ಬರು ಇರಬೇಕಾಗುತ್ತಿತ್ತು. ಏಳನೇ ತಿಂಗಳಲ್ಲಿ ತನ್ನಷ್ಟಕ್ಕೆ ಕೂತುಕೊಳ್ಳಲಾರಂಭಿಸಿದನು. ಹಾಗೆ ಕೂತಾಗಲೆ ಅವನ ಮೊದಲ ಫೋಟೋ ನಾವು ತೆಗೆಸಿದ್ದು. ಮಗು ಗುರುದತ್ತನನ್ನು ನೆರೆಯವರೇ ಎತ್ತಿಕೊಂಡು ಹೋಗಿ ಹೆಚ್ಚಿನ ಹೊತ್ತು ಆಡಿಸುವರು. ಅವನ ಲೀಲೆಗಳನ್ನೆಲ್ಲಾ ಅವರೇ ನನ್ನೆದುರಿಗೆ ಹೊಗಳುವರು. ಮಗುವಿಗೆ ದೃಷ್ಟಿ ಆದೀತೆಂದು ನನ್ನ ತಾಯಿ ದಿನಾಲು ಏನಾದರೂ ದೃಷ್ಟಿ ತೆಗೆದು ನಿವಾಳಿಸಿ ಚೆಲ್ಲುವರು. ಹತ್ತನೇ ತಿಂಗಳಿಗೆ ಗುರುದತ್ತ ನಡೆಯಲಾರಂಭಿಸಿದ.

ಗುರುದತ್ತನ ತುಂಟುತನ ಹೆಚ್ಚಿದಾಗ ಸಹಿಸಲಾಗದೆ ಒಮ್ಮೊಮ್ಮೆ ಉದ್ದ ಹಗ್ಗದಿಂದ ಅವನನ್ನು ಕಟ್ಟಿ ರೂಮಿನಲ್ಲಿ ಬಿಡುತ್ತಿದ್ದೆವು. ಆದರೂ ಆಟ ಆಡುವದನ್ನೇನೂ ಬಿಡುತ್ತಿರಲಿಲ್ಲ. ಲಗಾಮು ಹಾಕಿದ ಕುದುರೆಯಂತೆ ಓಡುವನು; ಕಟ್ಟಿದ ಕೋತಿಯಂತೆ ಜಿಗಿದಾಡುವನು; ಕಟ್ಟಿದರೂ ಅವನನ್ನು ಹಿಡಿಯುವದು ಕಷ್ಟವಾಗುತ್ತಿತ್ತು. ಅಂಗಳದಲ್ಲಿ ಬಂದ ಗುಬ್ಬಚ್ಚಿಗಳಿಗೆ ನಾನು ಕಾಳು ಹಾಕುವದನ್ನು ನೋಡಿದನು ಒಂದು ದಿನ; ಸುರುವಾಯಿತು ತಾನೂ ಕಾಳು ಹಾಕುವವನೆಂದು. ಅಡಕಲ ಈಡಾಡಿಬಿಡುವನು. ಕೊಡದಿದ್ದರೆ ರಂಭಾಟವೆ ರಂಭಾಟ. ಕೊನೆಗೆ ಅವನೇ ಗೆಲ್ಲುತ್ತಿದ್ದ. ಓಣಿಯಲ್ಲಿ ಬಂದ ಕೊತಿಯಾಡಿಸುವವನ ಬುಡಬುಡಿಕಿಯ ಶಬ್ದ ಕೇಳಿತೆಂದರೆ ಸಾಕು, ಕ್ಷಣಾರ್ಧದಲ್ಲಿ ಅವನೆದುರಿಗೇ ಇರುತ್ತಿದ್ದನು. ಅವನು ಆಟ ಮುಗಿಸಿ ಹೋಗುವವರೆಗೂ ನೋಡುತ್ತ ನಿಲ್ಲುವನು. ಏನು ಆ ಏಕಾಗ್ರತೆ! ಒಳಗೆ ನಾವು ಎಷ್ಟೋ ಕೂಗಲಿ, ಅತ್ತ ಲಕ್ಷ್ಯವೇ ಇರುತ್ತಿರಲಿಲ್ಲ. ಕೊನೆಗೆ ಅವನಿಗೆ ಮೂರು ಕಾಸು ನಮ್ಮಿಂದ ಕಾಡಿ ಬೇಡಿ ಇಸಕೊಂಡು ಕೊಡುತ್ತಿದ್ದ. ಬೆಂಗಳೂರಲ್ಲಿ ದಾಸರ ಪದಗಳನ್ನು ಹಾಡುತ್ತ ಮನೆ ಮನೆಗೆ ಭಿಕ್ಷೆ ಬೇಡಲು ಬರುವವರು ಅದೆಷ್ಟೋ ಮಂದಿ. ಅವರನ್ನೂ ಕರೆದು, ಹಾಡು ಹೇಳಿಸಿ, ಅವರು ಹಾಡು ಹೇಳುವಾಗ ತನ್ನ ಪುಟ್ಟ ಕೈಗಳನ್ನು ತಟ್ಟುತ್ತ ಕೇಳುವನು. ಇವನ್ನೆಲ್ಲಾ ನೋಡಿದಾಗ ವಯಸ್ಸಿಗೆ ಮೀರಿದ ಚುರುಕುತನ, ಬುದ್ಧಿವಂತಿಕೆ ಅವನಲ್ಲಿದೆ ಎಂದು ನಮಗೆ ಅನಿಸುತ್ತಿತ್ತು.

ಇತ್ತ ಕಲ್ಕತ್ತದಲ್ಲಿ ನನ್ನ ಅಣ್ಣ, ಅತ್ತಿಗೆ, ನನ್ನ ಇನ್ನೊಬ್ಬ ಚಿತ್ರಕಾರ ಅಣ್ಣ ಮುಂತಾದವರು ಆದರದಿಂದ ನಮ್ಮನ್ನು ಸ್ವಾಗತಿಸಿದರು. ನಮಗೆಲ್ಲಾ ಗುರುದತ್ತನೇ ಒಬ್ಬ ಮಗು. ಎಲ್ಲರೂ ಪ್ರೀತಿಯಿಂದ ಮುದ್ದಾಡುವವರೇ. ಆತನ ತುಂಟತನ, ತೊದಲು ಮಾತುಗಳು ಪ್ರತಿಯೊಬ್ಬರನ್ನೂ ಹತ್ತಿರಮಾಡಿಕೊಳ್ಳುತ್ತಿದ್ದವು.

ಇತ್ತೀಚೆಗೆ ಗುರುದತ್ತನಿಗೆ ಕಥೆಗಳನ್ನು ಕೇಳುವ 'ಖಯಾಲು' ಹೆಚ್ಚಾಗಿತ್ತು. ಈಸೋಪನ ಕಥೆಗಳು, ಪಂಜೆ ಮಂಗೇಶರಾಯರ "ಇಲಿಗಳ ತಕಥೈ," "ಅಜ್ಜಿಯ ಕಥೆ" ಮುಂತಾದವನ್ನೆಲ್ಲಾ ಹುಡುಕಿ ತಂದು, ಓದಿಕೊಂಡು ಆತನಿಗೆ ಹೇಳುತ್ತಿದ್ದೆ. ಆತನಿಗೋ ಕಥೆ ಮುಗಿಸದಿದ್ದರೆ ನಿದ್ದೆ ಬರುತ್ತಿರಲಿಲ್ಲ. ನನಗೋ ಕಥೆ ಮುಗಿಸುವ ಸಮಾಧಾನವಿರಲಿಲ್ಲ. ಇದಕ್ಕಾಗಿಯೆ ಗುರುದತ್ತ ಒಮ್ಮೊಮ್ಮೆ ನನ್ನ ಕೈಯಿಂದ ಪೆಟ್ಟು ತಿನ್ನಬೇಕಾಗುತ್ತಿತ್ತು. ಪಾಠ ಹೇಳುವಾಗಲೂ ಇದೇ ಹಾಡು; ಒಳ್ಳೆಯ ಮಾತಿನಿಂದ ಹೇಳಿದರೆ ಅವನು ಪ್ರತಿಯೊಂದನ್ನೂ ಕೇಳುತ್ತಿದ್ದನು. ಅದೇ ನಾನು ಸಿಟ್ಟಿನಿಂದ ಹೊಡೆದು


ಬಡಿದು ಹೇಳಿದರೆ, ಅವನ ಹಟ ನಮ್ಮ ಹಟ-ಕ್ಕಿಂತ ಹೆಚ್ಚಾಗುತ್ತಿತ್ತು. ಊಟ, ತಿಂಡಿ ಬಿಟ್ಟು ಒಂದು ಮೂಲೆಗೆ ಹೋಗಿ ಬಾಯಿ ಮುಚ್ಚಿಕೊಂಡಿರುತ್ತ ಕೂಡುವನು. ಆಗಿನ ಅವನ ಆ ಮುಖ ನನ್ನ ಮನಸ್ಸನ್ನು ಕರಗಿಸಿಬಿಡುತ್ತಿತ್ತು.

ಅವನಿಗೆ ಸುಮಾರು ನಾಲ್ಕು ವರುಷ ತುಂಬಿರಬೇಕು. ಆಗಲೇ ಅವನಿಗೆ ಶಾಲೆಗೆ ಹೋಗುವ ಆಸೆ. ಅವನ ತಂದೆಗೆ ಬಂಗಾಳಿ ಭಾಷೆ ಅಂದರೆ ಆಗುತ್ತಿರಲಿಲ್ಲ. ಅವನನ್ನು ಬಂಗಾಳಿ ಶಾಲೆಗೆ ಕಳುಹಿಸಕೂಡದೆಂಬ ಹಟ. ಹೀಗಾಗಿ ಸಮೀಪವಿರುವ ಒಂದು ಮುನಿಸಿಪಾಲಿಟಿ ಶಾಲೆಗೆ ಅವನ ಹೆಸರು ಹಚ್ಚಿದೆವು. ಆ ಶಾಲೆಯ ಮೇಷ್ಟರರ ನಡುವಳಿಕೆ, ಮಕ್ಕಳಿಗೆ ಅವರು ಕೊಡುವ ಹಿಂಸೆ ನೋಡಿ ಗುರುದತ್ತ ಬೆಪ್ಪನಾದ. ಸಂಜೆ ಹುಡುಗ ಮನೆಗೆ ಬರುವಾಗ ಅವನ ಸಪ್ಪಗಿನ ಮೋರೆ ನೋಡಿದರೆ ಸಾಕು, ನನ್ನ ಹೊಟ್ಟೆಯಲ್ಲಿ ತಳಮಳವಾಗುತ್ತಿತ್ತು. ಶಾಲೆಗೆ ಹೋಗುವ ಉತ್ಸಾಹ ಮಗುವಿನ ಒಂದೇ ದಿನಕ್ಕೆ ಮಾಯವಾಗಿ ಹೋಗಿತ್ತು. ಶಾಲೆಗೆ ಹೋಗುವದು ಬಂತೆಂದರೆ ಹುಡುಗ ಜಕಜಕ ಜರಿಯುತ್ತಿದ.

ಗುರುದತ್ತನಿಗೆ ಕೆಲವು ವಿಷಯಗಳಲ್ಲಿ ತುಂಬ ಹಟವಿತ್ತು. ತಾನು ಹೇಳಿದ್ದೇ ಆಗಬೇಕು. ಓದು ಬರಹವೆಂದರೆ ಅಷ್ಟೊಂದು ಆಸಕ್ತಿ ಇರಲಿಲ್ಲ. ಆದರೆ ಇತರ ಕಥೆ ಪುಸ್ತಕಗಳನ್ನು ಬೇಕಾದಷ್ಟು ಓದುವನು. ಪಾಠಶಾಲೆಯ ಪುಸ್ತಕಗಳೆಂದರೆ ಅಸಡ್ಡೆ ಮಾಡುವನು. ಅಂತಲೆ ಅವನಿಗೆ ಕಲಿಸುವಾಗ ನನಗೆ ಅಷ್ಟೊಂದು ಸಹನೆ ಇರುತ್ತಿರಲಿಲ್ಲ, ಒಮ್ಮೊಮ್ಮೆ ಏಟು ತಿನ್ನುವನು.

೨

ಪ್ರಖ್ಯಾತರಾದ ಉದಯಶಂಕರರ ನೃತ್ಯದ ಗುಂಪು ಬೊಂಬಾಯಿಗೆ ಬಂದಿತ್ತು. ನನ್ನ ಸ್ನೇಹಿ-ತರೊಬ್ಬರು ಇಬ್ಬರ ಪಾಸು ತಂದುಕೊಟ್ಟರು. ಗುರುದತ್ತನಿಗೆ ನನ್ನೊಡನೆ ಬರಬೇಕೆಂಬ ಆಸೆ.



"ಗಾಂಧಿಯವರು ಹಾಕಿ ಕೊಟ್ಟ ದಾರಿಯಲ್ಲಿ ನಡೆದು ಸುಸ್ತಾದಾಗ ನಾನು ಯಾವಾಗಲೂ ಹೀಗೆ ಬರುತ್ತೇನೆ."

ಆದರೆ ಸಾಧ್ಯವಾಗಲಿಲ್ಲ. ಎಂತಹ ನೃತ್ಯ ಅದು! ಈ ಜನ್ಮದಲ್ಲಿ ನಾನೆಂದೂ ಮರೆಯಲಾರೆ. ಅವರ "ಶಿವ–ಪಾರ್ವತಿ" ನೃತ್ಯ ನೋಡುವಾಗ ನಿಜವಾಗಿ ಶಿವಪಾರ್ವತಿಯರೇ ಕೈಲಾಸದಿಂದ ಇಳಿದು ಬಂದಿದ್ದಾರೋ 'ಏನೋ ಎಂಬ ಭಾವನೆ ಉಂಟಾಗುತ್ತಿತ್ತು. ಹಿನ್ನೆಲೆಯ ಆ ಪುರಾತನ ವಾದ್ಯಗಳು, ಪೌರಾಣಿಕ ವೇಷ ಭೂಷಣಗಳು. ಆ ಪಾತ್ರಧಾರಿಗಳು ಕೊರೆದಿಟ್ಟಂತೆ ಚಟಚಕಿತವಾದ ಆ ಚಲನವಲನಗಳು ಒಂದೇ ಎರಡೇ, ಎಲ್ಲವೂ ಕಣ್ಣಲ್ಲಿ ಒತ್ತಿಟ್ಟಂತೆ ನಡೆಯುತ್ತಿದ್ದವು. ನೋಡಿ ಧನ್ಯ ಎಂದುಕೊಂಡೆ. ಬೊಂಬಾಯಿಗೆ ಬಂದಿದ್ದು ಸಾರ್ಥಕ ಎನಿಸಿತು. ಆದರೆ ಮನೆಗೆ ಬಂದಾಕ್ಷಣ ಆನಂದದಿಂದ ಉಬ್ಬಿಹೋದ ನನ್ನ ಮನಸ್ಸು ಜರ್ರನೆ ಇಳಿಯಿತು. ಕಟ್ಟಿಕೊಂಡ ಕನಸುಗಳೆಲ್ಲಾ ಒಡೆದು ಚೂರಾದವು. ಗುರುದತ್ತ ತನ್ನನ್ನು, ಕರೆದುಕೊಂಡು ಹೋಗಲಿಲ್ಲವೆಂದು ಅತ್ತು ಅತ್ತು ಊಟ ಮಾಡದೆ, ಮನೆಯ ಹೊರಗೇ ಕೂತಿದ್ದನು. ಅವನನ್ನು ಸಂತೈಸಬೇಕಾದರೆ ನನಗೆ ಸಾಕು ಸಾಕಾಯಿತು. ಮೂರು ದಿನಗಳ ತನಕ ಈ ಸಿಂಧು ಇದ್ದೇ ಇತ್ತು. ನನಗೆ ಹೇಳುತ್ತಿದ್ದ, "ಅಮ್ಮಾ,ನಾನೂ ಒಂದು ದಿನ ಉದಯ ಶಂಕರನಂತೆ ರಂಗಭೂಮಿಯ ಮೇಲೆ ಬಂದೇ ನಿನಗೆ ತೋರಿಸುತ್ತೇನೆ ನೋಡುತ್ತಿರು," ಎಂದು. ಮಕ್ಕಳ ಮಾತಿಗೆ ಯಾರು ತಾನೆ ಬೆಲೆ ಕೊಡುವರು? ನಕ್ಕುಬಿಟ್ಟೆ. ಆದರೆ ಒಮ್ಮೆ ಮನಸ್ಸಿನಲ್ಲಿ ಹೊಕ್ಕ ಛಲವನ್ನು ಪೂರೈಸಿಕೊಳ್ಳದೆ ಎಂದೂ ಆತ ಬಿಡುವದಿಲ್ಲ ಎಂಬುದು ಹಿಂದಿನಿಂದ ಗೊತ್ತಾಯಿತು.

ನಾವು ಕಲ್ಕತ್ತೆಗೆ ತಿರುಗಿ ಸೇರಿದೆವು. ನನಗೋ ದುಡಿದು ಹಣ ಸಂಪಾದಿಸಿ ಮನೆಗೆ ತರಬೇಕು ಎಂಬ ಛಲ, ಗುರುದತ್ತನಿಗೋ ತಾನೂ ಉದಯ ಶಂಕರನಾಗಬೇಕೆಂಬ ಛಲ. ನನ್ನ ಚಿತ್ರಗಾರ ಅಣ್ಣ ಪಬ್ಲಿಸಿಟಿ ಕೆಲಸ ಮಾಡುತ್ತಿದ್ದರಿಂದ ಅವರಿಗೆ ಉದಯಶಂಕರನ ಪರಿಚಯ ಸಾಕಷ್ಟಿತ್ತು. ಗುರುದತ್ತ ಅವರ ಪಾಸಿನ ಮೇಲೆ ಅದೆಷ್ಟೋ ಸಲ ಉದಯಶಂಕರನ ಪ್ರದರ್ಶನಗಳಿಗೆ ಹೋಗಿ ಅವರ ಗುಂಪಿನಲ್ಲಿರುವವರೆಲ್ಲರ ಗುರುತನ್ನು ಮಾಡಿಕೊಂಡಿದ್ದ ಎಂಬುದು ಎಷ್ಟೋ ಕಾಲದ ನಂತರ ನನಗೆ ತಿಳಿಯಿತು. ಮಕ್ಕಳಿಗೆ ಸಿನೆಮಾ ನೋಡಲು ಬಿಡುವ ಕಾಲ ಅದಲ್ಲದಿದ್ದರೂ ತನ್ನ ಸೋದರ ಮಾವನ ಜೊತೆಗೆ ಹೋಗಿ ಒಳ್ಳೊಳ್ಳೆ ಇಂಗ್ಲೀಷ್ ಸಿನೆಮಾಗಳನ್ನು ನೋಡುತ್ತಿದ್ದ. ಅವನು ನನ್ನಿಂದ ಯಾವ ಮಾತನ್ನೂ ಅಡಗಿಸಿಬಿಟ್ಟಿರಲಿಲ್ಲವಾದರೂ ತಾನು ನೃತ್ಯ ಕಲಿತದ್ದನ್ನು ಮಾತ್ರ ಗುಪ್ತವಾಗಿಟ್ಟಿದ್ದ. ನಮಗೆಲ್ಲ ಒಮ್ಮೆಲೆ ವಿಸ್ಮಯ ಉಂಟು ಮಾಡಬೇಕೆಂದಿರಬೇಕು ಅವನ ಹಂಬಲ.

೧೯೪೧ ರಲ್ಲಿ ಗುರುದತ್ತನು ಮ್ಯಾಟ್ರಿಕ್ ಪರೀಕ್ಷೆಗೆ ಕೂತನು. ಆಗ ಆತನಿಗೆ ಹದಿನೈದೂವರೆ ವರುಷ. ಪರೀಕ್ಷೆ ಮುಗಿದೊಡನೆ ಟೈಪಿಂಗ್ ಕ್ಲಾಸಿಗೆ ಹೋಗಲು ಸೂಚಿಸಿದೆ. ಅವನಿಗೇನೂ ಅತ್ತ ಮನಸ್ಸಿದ್ದಂತೆ ತೋರಲಿಲ್ಲ. ಈ ಮಧ್ಯೆ ಅವನು ರಂಗಭೂಮಿಯ ಮೇಲೆ ಕೆಲವು ನೃತ್ಯಗಳನ್ನು ಪ್ರದರ್ಶಿಸಿ ಅನೇಕ ಒಳ್ಳೆಯ ಪದಕಗಳ ಬಹುಮಾನವನ್ನು ಪಡೆದಿದ್ದನು. ಅವನು ಮಾಡುತ್ತಿದ್ದ ನೃತ್ಯಗಳಲ್ಲಿ ಉದಯಶಂಕರರ "ಸ್ನೇಕ್ ಚಾರ್ಮರ್" ಅತ್ಯಂತ ಮನಮೋಹಕವಾಗಿತ್ತು.

ಅದೇ ಹೊತ್ತಿಗೆ ಅವನಿಗೆ ಇಪ್ಪತ್ತು ರೂಪಾಯಿಯ ವೇತನದ ಒಂದು ನೌಕರಿ ದೊರೆಯಿತು. ಮೊದಲನೇ ಪಗಾರವನ್ನು ಅವನು ಮನೆಯವರಿಗೆಲ್ಲಾ ಪ್ರೆಸೆಂಟ್ಸ್ ತಂದುಕೊಟ್ಟು ಖರ್ಚು ಮಾಡಿದನು. ತನ್ನ ಮೇಷ್ಟರಿಗಾಗಿ ಒಂದು ಭಗವದ್ಗೀತೆಯನ್ನು ತಂದುಕೊಟ್ಟನು. ನಂತರ ತಿಂಗಳಿಗೆ ಹತ್ತು ರೂಪಾಯಿ ಕಂತು ಗೊತ್ತುಮಾಡಿ ಒಂದು ಸೈಕಲ್‌ಗಾಡಿಯನ್ನು ಕೊಂಡುಕೊಂಡನು. ಹೊಸ ಹೊಸದಾಗಿ ಆ ಸೈಕಲ್ಲನ್ನು ಸ್ವಚ್ಛಮಾಡುವದರಲ್ಲೇ ಕಾಲ ಕಳೆಯುವನು; ತನ್ನ ತಂಗಿಯನ್ನು ಅದರ ಮೇಲೆ ಕೂಡಿಸಿಕೊಂಡು ಓಣಿ ಓಣಿ ತಿರುಗುವನು. ಆಗಲೇ ಹಿಟ್ಲರನು ಜೆಕೊಸ್ಲೊವಾಕಿಯಾದ ಮೇಲೆ ಜಯ ಗಳಿಸಿದ್ದರಿಂದ ಎಲ್ಲಾ ಕಡೆಯಲ್ಲೂ "ವಿ ಫೊರ್ ವಿಕ್ಟರಿ" ಎಂಬ ಸಾಯನ್ ಬೋರ್ಡು ಹಾಕಿದ್ದರು. ನನ್ನ ಕಡೆಯ ಮಗ ಅದೇ ಹೊತ್ತಿಗೆ ಹುಟ್ಟಿದ್ದರಿಂದ ಆತನಿಗೆ ಗುರುದತ್ತ ವಿಜಯನೆಂದೇ ಹೆಸರಿಟ್ಟ. ಕೆಲವೇ ದಿನಗಳಲ್ಲಿ ಈ ಎರಡನೇ ಮಹಾಯುದ್ಧದ ಪರಿಸ್ಥಿತಿಯು ಇನ್ನೂ ಗಂಭೀರವಾಯಿತು. ಬರ್ಮಾದೇಶದ ಮೇಲೆ ಜಪಾನೀಯರು ಬಾಂಬು ಹಾಕಿದರು. ಕಲ್ಕತ್ತದ ಜನರು ಹೌಹಾರಿ ಊರು ಬಿಟ್ಟು ಹೋಗ

ಲಾರಂಭಿಸಿದರು. ಜನರ ಆ ಕಿರಿಚಾಟ ಕೇಳಿ ಕೇಳಿ ಪ್ರತಿಯೊಬ್ಬರಿಗೂ ದಿಗಿಲು. ಕುಡಿಯುವ ನೀರನ್ನು ಕೆಡಿಸುತ್ತಾರೆಂದರು. ಮಾರವಾಡಿಗಳು ತಮ್ಮ ಗಂಟು ಭದ್ರಮಾಡಿಕೊಂಡು ತಮ್ಮ ತಮ್ಮ ಊರಿಗೆ ಓಡಿದರು. ನಾವು ಎಲ್ಲೂ ಹೋಗಬಾರದೆಂದುಕೊಂಡಿದ್ದೆವು. ಆದರೆ ಮಕ್ಕಳೆಲ್ಲಾ ಸಣ್ಣವರು. ಅವರನ್ನಿಟ್ಟುಕೊಂಡು ಇಂಥ ಧಗಧಗಿಯಲ್ಲಿ ಇರುವದು ಹೇಗೆ? ಕಡೆಗೆ ಕಾಂಜಾಂಗಾಡಿಗೆ ಹೋಗುವದೆಂದು ನಿಶ್ಚಯಿಸಿದೆವು. ಅಲ್ಲಿ ನನ್ನ ಭಾವ "ರಾಮದಾಸ" ಎಂಬ ಹೆಸರಿನ ಸಾಧುಗಳು ಒಂದು ಆಶ್ರಮವನ್ನು ಪ್ರಾರಂಭಿಸಿದ್ದರು. ನನಗೆ ಅವರ ಮೇಲೆ ಶ್ರದ್ಧೆ ಇತ್ತು. ನನ್ನ ಒಬ್ಬ ಮಗನಿಗೆ ಆತ್ಮಾರಾಮ ಎಂದು ಹೆಸರಿಟ್ಟವರೇ ಅವರು. ನಾವು ಒಟ್ಟಿಗೆ ಆರು ಜನ, ಜನರ ದಾನಧರ್ಮದಿಂದಲೇ ನಡೆಯುತ್ತಿದ್ದ ಆ ಆಶ್ರಮವನ್ನು ಸೇರಿದೆವು. ಆಗ ನಮ್ಮ ಪರಿಸ್ಥಿತಿಯೂ ಚೆನ್ನಾಗಿರಲಿಲ್ಲ. ನಾನು ಸೌದಾಮಿನಿ ಮೆಹತಾ ಅವರ ಶಾಲೆಯಲ್ಲಿಯೇ ಒಂದು ಮೂವತ್ತು ರೂಪಾಯಿಯ ನೌಕರಿ ಮಾಡುತ್ತಿದ್ದೆ. ಅದನ್ನೂ ಬಿಟ್ಟು ದೇವರ ಮೇಲೆ ಭಾರ ಹಾಕಿ ಕಲ್ಕತ್ತೆ ಬಿಟ್ಟು ಹೊರಟೆವು. ಆದರೆ ಗುರುದತ್ತ ಮಾತ್ರ ತಾನು ಯಾವ ಮಾತ್ರಕ್ಕೂ ಊರು ಬಿಟ್ಟು ಬರಲಾರೆ ಎಂದು ಹಟ ಹಿಡಿದ. ನಮ್ಮ ಮನೆಯವರ ಆಫೀಸು ಬೊಂಬಾಯಿಗೆ ಹೋಗುವ ವಾರ್ತೆ ಇತ್ತು. ಇವರಿಬ್ಬರನ್ನೂ ಬಿಟ್ಟು ನಾವಷ್ಟೇ ಹೊರಟೆವು.

ಗುರುದತ್ತನಿಗೆ ಉದಯಶಂಕರರ ಅಲ್ಮೋಡಾ ಸೆಂಟರಿನಿಂದ ಸ್ಕಾಲರ್‌ಶಿಪ್ ಸಿಕ್ಕಿತು. ಅವನು ಅಲ್ಮೋಡಾಕ್ಕೆ ಹೋದನು. ಕೆಲವೇ ದಿನಗಳಲ್ಲಿ ಅಲ್ಲಿ ನಾವಿದ್ದ ಜಾಗದ ಮೇಲೆಯೇ ಬಾಂಬು ಬಿದ್ದ ವರ್ತಮಾನ ಬಂತು. ಆಗ ನನ್ನ ಚಿತ್ರಕಾರ ಅಣ್ಣ ಇನ್ನೂ ಕಲ್ಕತ್ತೆಯಲ್ಲೇ ಇದ್ದರು.

೧೯೪೨ರಲ್ಲಿ ನಾವು ನನ್ನ ನಾದಿನಿಯ ಮಗನ

ಮಾತುಂಗಾದಲ್ಲಿನ ಮನೆಯಲ್ಲಿ ವಸತಿ ಹಾಕಿದೆವು. ಹದಿನೈದು ದಿನಗಳಿಗೆ ನಮಗೆ ಬೇರೊಂದು ಮನೆ ಸಿಕ್ಕಿತು. ಗುರುದತ್ತನೂ ಆಕಸ್ಮಾತ್ತಾಗಿ ಮನೆ ಹುಡುಕಿಕೊಂಡು ಬಂದನು. ಬಂದವನೇ ಏನೋ ಮನೆಗೆಲಸದಲ್ಲಿದ್ದ ನನ್ನನ್ನು "ಅಮ್ಮಾ" ಎಂದು ಕರೆದನು. ತಿರುಗಿ ನೋಡಿದರೆ ಗುರುದತ್ತ. ಆಶ್ಚರ್ಯ, ಸಂತೋಷ ಎಲ್ಲಾ ಉಕ್ಕಿಬಂತು. ನನಗೆ ನಮಸ್ಕಾರ ಮಾಡಿದ. ಮೇಲೆ ತಲೆ ಮುಟ್ಟಿ ಆಶೀರ್ವದಿಸಿದೆ. ಕ್ಷೇಮ ಸಮಾಚಾರ ಕೇಳಿಕೊಳ್ಳುವ ಮೊದಲೇ ಮಕ್ಕಳು ಬಂದು ಆತನನ್ನು ಸುತ್ತಿಕೊಂಡವು. ಮತ್ತೆ ಆತನನ್ನು ನೋಡಿದೆ. ಎಷ್ಟೋ-ತ್ತರ ಬೆಳೆದಿದ್ದಾನೆ! ಏನು ಸುಂದರವಾಗಿ ಕಾಣುತ್ತಾನೆ! ದನಿ ಎಷ್ಟು ಗಡುಸಾಗಿದೆ! ಪ್ರಾಯಕ್ಕೆ ಬಂದಾಗ ಕುರೂಪಿಯೂ ಕೂಡ ಸುರೂಪಿಯಾಗಿ ಕಾಣುತ್ತಾನೆ. ಗುರುದತ್ತ ಮೊದಲೇ ಚೆಲುವ. ಆದ ಮೇಲೆ ಕೇಳಬೇಕೆ? ತಿದ್ದಿ ತಿದ್ದಿ ಮಾಡಿದಂತಹ ಮುಖ, ತಲೆ ತುಂಬ ಕಪ್ಪು ಕುರುಳು, ಕಪ್ಪು ಕುಡಿಹುಬ್ಬು, ಕಪ್ಪು ಕುಡಿಮೀಸೆ, ಮಿಂಚಿನಂತೆ ಹೊಳೆಯುವ ಕಣ್ಣುಗಳು, ಮುಖದ ಮೇಲೆ ಮಿನುಗುವ ನಸುನಗು, ಉದ್ದ ಸಪೂರವಾಗಿ ಬೆಳೆದ ರಸತುಂಬಿದ ದೇಹ. ಮಾಟ ತಪ್ಪಿರಲಿಲ್ಲ, ಆಕರ್ಷಕವಾಗಿತ್ತು. ನಾನೀಗ ಅವನನ್ನು ನೋಡುತ್ತಿರುವದು ಸರಿಯಾಗಿ ಒಂದು ವರ್ಷದ ನಂತರ. ಆ ರಾತ್ರಿಯೆಲ್ಲ ತಾಯಿ ಮಕ್ಕಳಿಬ್ಬರೂ ಮಾತಾಡಿದ್ದೇ ಮಾತಾಡಿದ್ದು. ರಾತ್ರಿ ಕಳೆದದ್ದೇ ಗೊತ್ತಾಗಲಿಲ್ಲ. ನಮ್ಮ ಮನೆಯ ಪರಿಸ್ಥಿತಿ ನೋಡಿ ತುಂಬ ಚಿತಪಡಿಸಿದ. "ಅಮ್ಮಾ, ನಾನು ವಿಜಯನನ್ನು ನೋಡಿಕೊಳ್ಳುತ್ತೇನೆ. ನೀನು ಕೆಲಸ ಹುಡುಕು" ಎಂದು ಹೇಳಿದ. ಆದರೆ ಆಗ ಉದಯಶಂಕರನ ಪ್ರದರ್ಶನಗಳು ನಡೆಯುತ್ತಿದ್ದರಿಂದ ಆತನಿಗೆ ಮನೆಯಲ್ಲಿರಲಾಗಲಿಲ್ಲ. ಮುಂಬೈಯ "ನ್ಯೂ ಎಂಪಾಯರ್" ಥಿಯೇಟರಿನಲ್ಲಿ ಅವರ ಶೋಗಳು ನಡೆದವು. ಗುರುದತ್ತ ಅದರಿಂದ ನನ್ನನ್ನು ಉದಯಶಂಕರರ ಬಳಿಗೆ ಕರೆದೊಯ್ದು ಹೋಗಿ ಭೆಟ್ಟಿ ಮಾಡಿಸಿದ. ಅವರೇ ಗುರುದತ್ತನ ಪ್ರಶಂಸೆ ಮಾಡಿದ್ದನ್ನು ಕೇಳಿ ಮನಸ್ಸಿನಲ್ಲೇ ಹೆಮ್ಮೆಪಟ್ಟುಕೊಂಡೆ.

೧೯೪೩ ಫೆಬ್ರುವರಿಯಲ್ಲಿ ಉದಯಶಂಕರರ ಗುಂಪು ಮರಳಿ ಅಲ್ಮೋಡಕ್ಕೆ ಹೊರಟಿತು. ಗುರುದತ್ತನೂ ಅವರ ಜೊತೆಗೆ ಹೊರಟ. ಅವ ನನ್ನು ಕಳಿಸಿಕೊಡುವಾಗ ಎಲ್ಲಿಲ್ಲದ ದುಃಖ ಉಮ್ಮಳಿಸಿ ಬಂತು. ಅತ್ತು ಬಿಟ್ಟೆ. ಅವನು ಮುಂಬೈಯಲ್ಲಿರುವಷ್ಟು ದಿನ ನನಗೆ ಮನೆಯ ಚಿಂತೆಯೇ ಇರಲಿಲ್ಲ. ಅದೇ ತಾನೆ ಶ್ರೀ ಸೀತಾರಾಮ ಪೊದ್ದಾರ ಶಾಲೆಯಲ್ಲಿ ನನಗೆ ಕೆಲಸ ಸಿಕ್ಕಿತ್ತು. ಗಿರಗಾಂವಿಗೆ ಹೋಗಿಬರಬೇಕಾಗುತ್ತಿತ್ತು. ನಾನು ಬರುವವರೆಗೆ ಮಗು ವಿಜಯನನ್ನು ಗುರುದತ್ತನೇ ನೋಡಿಕೊಳ್ಳುತ್ತಿದ್ದನು. ಅಲ್ಲದೆ ಅನ್ನ ಬೇಳೆ ಬೇಯಿಸಿ ಅಡಿಗೆಯನ್ನು ಸಿದ್ಧಮಾಡಿರುತ್ತಿದ್ದನು. ಮಕ್ಕಳ ಬಟ್ಟೆ ಹರಿದಿದ್ದರೆ ಹೊಲೆದಿಡುವನು. ಪೇಟೆಗೆ ಹೋಗಿ ತಾನೇ ಸಾಮಾನು ತರುವನು. ಹೀಗೆ ಒಂದೇ ಎರಡೇ, ಎಲ್ಲ ರೀತಿಯಿಂದಲೂ ನನಗೆ ಸಹಾಯಮಾಡುತ್ತಿದ್ದನು. ಅವನಾದರೂ ತನ್ನ ಓದು ಬಿಟ್ಟು ಎಷ್ಟು ದಿನ ಇರಬಲ್ಲ?

೧೯೪೩ ನವೆಂಬರಿನಲ್ಲಿ ಮತ್ತೆ ರಜೆ ಬಂತು. ಉದಯಶಂಕರರು ತಮ್ಮ ಗುಂಪಿನೊಂದಿಗೆ ಬೊಂಬಾಯಿ, ಅಹಮದಾಬಾದ, ಮುಂತಾದ ಅನೇಕ ಊರುಗಳಲ್ಲಿ ನೃತ್ಯ ಪ್ರದರ್ಶನ ಮಾಡಿ ಮತ್ತಷ್ಟು ಹೆಸರು ಗಳಿಸಿದರಂತೆ. ಈ ಸಲದ ಟೂರಿನಲ್ಲಿ ಗುರುದತ್ತನು "ಸ್ವ್ಯಾನ್ ಡಾನ್ಸ್" (ಹಂಸನೃತ್ಯ) ಎಂಬ ಹೊಸ ನಾಟ್ಯವನ್ನು ತಾನೇ ಬರೆದು, ತಾನೇ ಡೈರೆಕ್ಟ್ ಮಾಡಿ ರಂಗಭೂಮಿಯ ಮೇಲೆ ಮಾಡಿತೋರಿಸುವಾಗ ಅಪ್ರತಿಮವಾಗಿ ಬಂದಂತೆ, ಎಲ್ಲರೂ ಬಾಯಿ ತುಂಬ ಹೊಗಳಿದರಂತೆ. ಬಿಳೀ ಉಡುಪು ಧರಿಸಿ ಪಕ್ಷಿಗಳಂತೆ ಅಂಗಚಲನೆ ಮಾಡುತ್ತ ಪ್ರವೇಶಿಸಿದಾಗಲೆ ಕಣ್ಣು ಸೆಳೆಯಿತಂತೆ. ಉದಯಶಂಕರರೂ ಪ್ರತಿ ಸಲ ಹೊಸ ಹೊಸ ನಾಟ್ಯಗಳನ್ನು ತಯಾರಿಸಿ ಪ್ರದರ್ಶಿಸುತ್ತಿದ್ದರಂತೆ. ರಾಮಲೀಲಾದ "ಶಾಡೋಪ್ಲೇ" ಆತೂ ಅತ್ಯಂತ ಹೊಗಳಿಕೆ ಗಳಿಸಿತಂತೆ. ಅದರಲ್ಲಿ ಸಚಿನ್‌ಶಂಕರನು ರಾಮನಾಗಿ, ಗುರುದತ್ತನು ಲಕ್ಷ್ಮಣನಾಗಿ, ಶ್ರೀಮತಿ ಸಿಮಿ ಕೈಕೆಯಿ, ತಾಟಕಿ ಶೂರ್ಪನಖಿ ಆಗಿ ಪಾತ್ರವಹಿಸಿದ್ದರಂತೆ. ಈ ಪ್ರದರ್ಶನ ಬಯಲಲ್ಲಿ ನಡೆದದ್ದರಿಂದ ಕಡಿಮೆ ದರ ಇದ್ದುದರಿಂದ ವಿಪರೀತ ಜನ ಬಂದಿದ್ದರಂತೆ, ಎಲ್ಲ ಕಡೆಯ


ಇತರರನ್ನು ಹಿಂದೆ ಬೀಳಿಸುವ ಬಿಳಿಪು,
ವಿಜಯದ ಕಾಂತಿಯಿಂದ ಥಳಥಳಿಸುವ
ಬಿಳಿಪು. ಕಣ್ಣು ಕೋರೈಸುವ ಬಿಳಿಪು.
ಬಿಳಿಪಿಗಿಂತ ಮಿಗಿಲಾದ ಬಿಳಿಪು.
ಅದುವೇ ಸ್ಕೋರ್! ಸ್ಕೋರ್ ಡಿಟರ್ಜೆಂಟ್
ಬಿಲ್ಲೆಯು ಕೊಳೆಯನ್ನು ಹೊರಹಾಕಿ ನಿಮ್ಮ
ಬಟ್ಟೆಗಳಿಗೆ ಅತ್ಯಂತ ಸುಂದರವಾದ
ಕಾಂತಿಯನ್ನು ನೀಡುವುದು. ಸ್ಕೋರ್
ನೊಡನೆ ಬಿಳೀ ಬಟ್ಟೆಗಳನ್ನು ಹೆಚ್ಚು
ಬಿಳಿಪಾಗಿ ಮಾಡಿ, ಬಣ್ಣದ ಬಟ್ಟೆಗಳನ್ನು
ಹೆಚ್ಚು ಶುಭ್ರ ಹಾಗೂ ಉಜ್ವಲಗೊಳಿಸಿ.
ವಿಜಯದ ಕಾಂತಿಯಿಂದ
ಥಳ ಥಳಿಸುವ ಬಿಳಿಪು
ಸ್ಕೋರ್
ನೀಲಿ ಡಿಟರ್ಜೆಂಟ್ ಬಿಲ್ಲೆ
ಕೇರಳ ಸ್ಟೇಟ್ ಡಿಟರ್ಜೆಂಟ್ಸ್ & ಕೆಮಿಕಲ್ಸ್ ಲಿಮಿಟೆಡ್
(ಒಂದು ಸರ್ಕಾರದ ಉದ್ಯಮ)
LATEST
Score
ವಿಜಯದ ಕಾಂತಿಯಿಂದ
ಥಳ ಥಳಿಸುವ ಬಿಳಿಪು!

ಪ್ರದರ್ಶನಗಳು ಮುಗಿದ ನಂತರ ಗುರುದತ್ತನಿಗೆ ಎರಡು ತಿಂಗಳು ರಜೆ ಸಿಕ್ಕಿತಂತೆ. ಆಗ ಊರಿಗೆ ಬಂದಾಗ ಗುರುದತ್ತ ಸ್ವಲ್ಪ ನಿರಾಶನಾಗಿದ್ದಂತೆ ತೋರಿತು.

ಗುರುದತ್ತನು ತನ್ನ ನಾಲ್ವರು ಗೆಳೆಯರೊಡನೆ ಮುಂಬೈಗೆ ಬಂದುಬಿಟ್ಟನು. ರವಿಶಂಕರ, ಅಲಿ ಅಕ್ಬರ, ಶಾಂತಿ ಬರ್ಧಾನ ಮುಂತಾದವರು ಬೊರಿವಲಿಯಲ್ಲಿ ಬಾಡಿಗೆಗೆ ಮನೆ ತೆಗೆದುಕೊಂಡು ಇರಲಾರಂಭಿಸಿದರು. ಉಳಿದ ಕೆಲವರು ತಮ್ಮ ತಮ್ಮ ಊರುಗಳನ್ನು ಸೇರಿದರು. ಗುರುದತ್ತನೇ ನನ್ನ ಆಶ್ರಯವೆಂದುಕೊಂಡಾಗ, ಅವನೇ ಹೀಗೆ ಆಶ್ರಯ ತಪ್ಪಿ ಅಲೆದಾಡುವಂತಾದ್ದನ್ನು ಕಂಡು ನನ್ನ ತಲೆಯ ಮೇಲೆ ಸಿಡಿಲೇ ಬಿದ್ದಂತಾಯಿತು. ಒಮ್ಮೆ ನೃತ್ಯ ಅಭಿನಯ ಮುಂತಾದ ಕಲೆಗಳಲ್ಲಿ ಸಿಕ್ಕಿಕೊಂಡವರು ಎಂದೂ ಆಫೀಸು ಕೆಲಸ ಮಾಡರು ಎಂಬುದು ನನಗೆ ಗೊತ್ತು. ಆದರೂ ಉಪಾಯಾಂತರದಿಂದ ನಾನು ನನ್ನ ಚಿತ್ರಗಾರ ಅಣ್ಣನವರ ಸಲಹೆ ಕೇಳಿದೆನು. ಅವರು ಊರಿಗೆ ಹೋಗಲು ಹೊರಟವರು ಮುಂಬೈಯ ಮೇಲಿಂದ ಹಾಯ್ದು ಹೋಗಲು ನಿಶ್ಚಯಿಸಿ, ಇಲ್ಲಿಗೆ ಬಂದರು. ಆಗ ಪ್ರಭಾತ ಕಂಪನಿಯಲ್ಲಿ ಶ್ರೀ ಬಾಬುರಾವ ಪೈ ಎಂಬುವರು ಪಾಲುದಾರರಾಗಿದ್ದರು. ಅವರಿಗೂ ನನ್ನ ಅಣ್ಣನಿಗೂ ಪರಿಚಯ ಇತ್ತು. ಅವರು ಗುರುದತ್ತನನ್ನು ಕರಕೊಂಡು ಅವರ ಬಳಿಗೆ ಹೋಗಿ ಕೆಲಸ ಕೊಡಲು ಕೇಳಿದರು. ಅದಕ್ಕೆ ಅವರು ಇಷ್ಟು ಎಳೆ ವಯಸ್ಸಿನ ಹುಡುಗರಿಗೆ ಚಿತ್ರಪಟದಲ್ಲಿ ಎಂತಹ ಕೆಲಸ ಕೊಡಬಹುದಪ್ಪಾ! ಎಂದು ಹೇಳಿದರೂ ಕಡೆಗೆ ಡ್ಯಾನ್ಸ್ ಡೈರೆಕ್ಟರನೆಂದು ಗುರುದತ್ತನನ್ನು ಮೂರು ವರ್ಷದ ಕಾಂಟ್ರ್ಯಾಕ್ಟ್ ಮೇಲೆ ನಿಯಮಿಸಿದರು. ಅಲ್ಲದೆ ಚಿತ್ರಪಟಗಳಲ್ಲಿ ಸಣ್ಣ ಸಣ್ಣ ಪಾತ್ರಾಭಿನಯ ಮಾಡಲೂ ಚಾನ್ಸ್ ಕೊಟ್ಟರು. "ಲಾಖಾರಾನಿ" ಎಂಬ ಪಿಕ್ಚರಿನಲ್ಲಿ ಗುರುದತ್ತನಿಗೆ ಸ್ವಲ್ಪ ಪ್ರಮುಖ ಪಾತ್ರ ಇತ್ತು. ನಂತರ "ಹಮ್ ಏಕ ಹೈಂ" ಎಂಬ ಚಿತ್ರದಲ್ಲಿ ರೆಹಮಾನ,ಗುರುದತ್ತ, ದೇವಾನಂದ, ದುರ್ಗಾ ಖೋಟೆ ಮುಂತಾದವರ ಕೆಲಸವಿತ್ತು. ಆಗಲೇ ದೇವಾನಂದ, ಗುರುದತ್ತ ಇಬ್ಬರೂ ತುಂಬ ಸ್ನೇಹಿತರಾದರು. ಒಂದೇ ರೂಮಿನಲ್ಲಿ ವಾಸಮಾಡುತ್ತಿದ್ದರು. ದೇವಾನಂದ ಸದ್ಗೃಹಸ್ಥ, ಪದವೀಧರ, ಸುಸಂಸ್ಕೃತ ಮನೆತನದವನಾಗಿದ್ದರಿಂದ ಇಬ್ಬರ ಸ್ನೇಹದಲ್ಲೂ ಕೆಸರು ಇರಲಿಲ್ಲ. ಯಾರು ಮೊದಲು ಹೆಸರು ಗಳಿಸುವರೋ ಅವರು ಇನ್ನೊಬ್ಬಾತನಿಗೂ ಅವನ್ನು ಗಳಿಸಲು ಅವಕಾಶಮಾಡಿಕೊಡಬೇಕು ಎಂದು ಇಬ್ಬರೂ ತಮ್ಮ ತಮ್ಮಲ್ಲೆ ಪ್ರತಿಜ್ಞಾಬದ್ಧರಾಗಿದ್ದರು.

ಈ ಮಧ್ಯೆ ಶ್ರೀ ವಿಶ್ರಾಮ ಬೇಡೇಕರರು ಗುರುದತ್ತನಲ್ಲಿದ್ದ ಸಾಹಸ ಕಲಾಕೌಶಲ್ಯ ಕಂಡು ತಮ್ಮ ಚಿತ್ರಪಟಗಳಲ್ಲಿ ಸಹಾಯಕನಾಗಲು ಕೇಳಿಕೊಂಡರು. ಗುರುದತ್ತನು ಮೊದಲಿದ್ದ ಕೆಲಸದ ಜೊತೆಗೆ ಇವನ್ನೂ ಆಯಾಸವಿಲ್ಲದೆ ನಿರ್ವಹಿಸಹತ್ತಿದನು.

ನನ್ನ ಒಬ್ಬ ಅಣ್ಣ ಹೈದ್ರಾಬಾದಿನಲ್ಲಿ ಆರ್ಟಿಸ್ಟ್ ಮತ್ತು ಫೋಟೋಗ್ರಾಫರ್ ಇದ್ದ. ಅವನಿಗೆ ಐದು ಹೆಣ್ಣು ಮಕ್ಕಳು. ಹಿರಿಯ ಹುಡುಗಿಯನ್ನು ನನ್ನ ಸೊಸೆಯಾಗಿ ತರಬೇಕೆಂದು ಗೊತ್ತು ಮಾಡಿಕೊಂಡು, ದೀಪಾವಳಿಯ ರಜೆಯಲ್ಲಿ ಹೈದ್ರಾಬಾದಿಗೆ ಹೋದೆ. ಹುಡಿಗಿಯ ಹೆಸರು ಸುವರ್ಣ. ಹೆಸರಿಗೆ ತಕ್ಕಂತೆಯೇ ಇದ್ದಳು. ಅವಳ ಸ್ವಭಾವವೂ ನನಗೆ ಮೆಚ್ಚಿತು. ಗುರುದತ್ತನನ್ನು ಪುಣೆಯಿಂದ ಕರೆತರಿಸಿದೆ. ಬಂದ, ನೋಡಿದ, ಒಪ್ಪಿದ. ಡಿಸೆಂಬರ್ ತಿಂಗಳಲ್ಲಿ ಹುಡುಗಿಯ ತಂದೆ ತಾಯಿ ಅವಳನ್ನು ಕರಕೊಂಡು ನಮ್ಮಲ್ಲಿಗೆ ಬಂದರು. ಗುರುದತ್ತ ಸುವರ್ಣಾ ಜೋಡಿ ಜೋಡಿಯಾಗಿ ತಿರುಗಾಡಿದರು. ಹುಡುಗಿಯ ತಂದೆ ಅವರ ಎಷ್ಟೋ ಫೋಟೋಗಳನ್ನೂ ತೆಗೆದರು. ಗುರುದತ್ತ ಸುವರ್ಣಾ ಒಬ್ಬರಿಗೊಬ್ಬರು ಪತ್ರವ್ಯವಹಾರವನ್ನೂ ಆರಂಭಿಸಿದರು. ೧೯೪೫ರಲ್ಲಿ ಮದುವೆ ಮಾಡುವದು ಎಂದು ನಿಶ್ಚಯಿಸಿದೆವು. ತಿರುಗಿ ಹೋಗುವಾಗ ತಂದೆ ತಾಯಿ ಪುಣೆಯಲ್ಲಿಳಿದು ಆಗ ತಾನೆ ಮಾಡಿದ ಗುರುದತ್ತನ ಮನೆಯಲ್ಲಿ ಉಳಿದುಕೊಂಡು,ಅಲ್ಲಿಂದ ಮುಂದೆ ಹೈದ್ರಾಬಾದಿಗೆ ಹೋದರು. ಅವರು ಹೋದ ನಂತರ ಗುರುದತ್ತ ತನ್ನ ಸೋದರಮಾವನಿಗೆ ಹಿಂದೆ ನಡೆದ ವಿಜಯಾಳ ಪ್ರಕರಣವನ್ನೆಲ್ಲ ಸವಿಸ್ತಾರವಾಗಿ ಬರೆದು ತಿಳಿಸಿದನಂತೆ. ತನ್ನ ಬಗ್ಗೆ ಅವರನ್ನು,

ಅಜ್ಞಾನವಲ್ಲಿಡುವವು ಗುರುದತ್ತನ ಸರಳ ಸತ್ಯ ನಿಷ್ಠ ಸ್ವಭಾವಕ್ಕೆ ಸರಿ ಎನಿಸಲಿಲ್ಲವಂತೆ. ಹಾಗೆಂದು ತಿಳಿಸಿಬಿಟ್ಟ. ಏನೊಂದೂ ಬಚ್ಚಿಡುವುದೇ ಅವನಿಗೆ ಗೊತ್ತಿರಲಿಲ್ಲ. ಅವನ ಈ ನಿಸ್ಪೃಹ ಸ್ವಭಾವವೇ ಅವನಿಗೆ ವೈರಿಯಾಗಿ ನಿಲ್ಲುತ್ತಿತ್ತು. ಇಡೀ ಜೀವಮಾನ ಎಲ್ಲ ಇದಕ್ಕಾಗಿ ಅವನು ದಂಡ ತರಬೇಕಾಯಿತು. ಸತ್ಯಕ್ಕೆ ಸಾವಿಲ್ಲ ಎನ್ನುತ್ತಾರೆ. ಸತ್ಯವೇ ನನ್ನ ಮಗನಿಗೆ ಸಾವಾಯಿತು. ಇವನ ಪತ್ರ ನೋಡಿ ನನ್ನ ಅಣ್ಣ ನನಗೆ ತಿಳಿಸದೆ ಬೇರೆ ನೆಂಟಸ್ತಿಕೆ ನೋಡಿ ಆ ಮಗಳಿಗೆ ಮದುವೆ ಮಾಡಿಬಿಟ್ಟನು. ಇದು ತಿಳಿದ ನಂತರ ಗುರುದತ್ತನ ಮನಸ್ಸಿಗೆ ಇನ್ನೂ ಅಸಮಾಧಾನವಾಯಿತು. 'ಇದು ಹೀಗಾಗುತ್ತದೆ ಎಂದಿದ್ದರೆ ನಾನು ಬರೆಯುತ್ತಲೇ ಇರಲಿಲ್ಲ. ಏನೋ ತಪ್ಪು ಒಪ್ಪಿಕೊಳ್ಳುವದು ನನ್ನ ಸ್ವಭಾವ ಎಂದು ಬರೆದೆ. ಮಾವನಿಗೂ ಅದು ಅರ್ಥವಾಗಲಿಲ್ಲ' ಎಂದು ನನ್ನೆದುರಿಗೆ ಹೇಳಿದ. ಇತ್ತ ಖಾಜಗಿವಾಲೆ ತಿರುಗಿ ಗುರುದತ್ತನಿಗೆ ತೊಂದರೆ ಕೊಡಲಾರಂಭಿಸಿದ್ದರಿಂದ, ಹೇಗಾದರೂ ಮಾಡಿ ಅವನನ್ನು ಪುಣೆ ಬಿಡಿಸಿ ಇಲ್ಲಿಗೆ ತರಬೇಕಾಗಿದ್ದರಿಂದ ನಾನು ಸ್ವತಃ ಬಾಬುರಾವ್ ಪೈ ಅವರ ಆಫೀಸಿಗೆ ಹೋಗಿ ಎಲ್ಲಾ ಕಷ್ಟಗಳನ್ನು ಅವರೆದುರಿಗೆ ತೋಡಿಕೊಂಡು ಅವರಿಗೂ ಕನಿಕರ ಹುಟ್ಟುವಂತೆ ಮಾಡಿದೆ. ಅವರು ಆಗ ತಾನೇ ಹೊಸ ಸ್ಟುಡಿಯೋ ಕೊಂಡುಕೊಂಡಿದ್ದರು. ಹೊಸ ಚಿತ್ರಪಟ ಮಾಡುವವರಿದ್ದರು. "ನೀವು ಏನೂ ಯೋಚಿಸಬೇಡಿರಿ. ಗುರುದತ್ತನ ಭಾರ ನನ್ನ ಮೇಲೆ ಬಿಡಿರಿ. ನಾನು ಖಂಡಿತವಾಗಿ ಆತನನ್ನು ಅಲ್ಲಿಗೆ ಕರೆಸಿಕೊಳ್ಳುತ್ತೇನೆ" ಎಂಬ ಆಶ್ವಾಸನೆ ತೆಗೆದುಕೊಂಡೇ ಮರಳಿದೆ.

ಒಂದೆರಡು ತಿಂಗಳುಗಳೊಳಗೆ ಶ್ರೀ ಪೈ ಅವರ ಚಿತ್ರಪಟವೊಂದು ತಯಾರಾಯಿತು. ಹೆಸರು "ಮೋಹನಾ." ಅದರಲ್ಲಿ ದೇವಾನಂದ, ಹೇಮಾವತಿ ಸಪ್ರು ನಟಿಸುತ್ತಿದ್ದರು. ಬೆನರ್ಜಿ ಎಂಬುವವರು ದಿಗ್ದರ್ಶಕರಾಗಿದ್ದರು. ಗುರುದತ್ತನು ಇವರ ಕೈ ಕೆಳಗೆ ಕೆಲಸ ಮಾಡಲಾರಂಭಿಸಿದರು. ಪುಣೆ ಬಿಟ್ಟು ಬರುವಾಗ ತನ್ನ ಸ್ನೇಹಿತರನ್ನು ಅಗಲುವಾಗ ಗುರುದತ್ತನಿಗೆ ತುಂಬ ದುಃಖವಾಯಿತು. ಪ್ರಭಾತ ಸ್ಟುಡಿಯೋದಲ್ಲಿ ಒಗ್ಗಟ್ಟಿತ್ತು. ಶಿಸ್ತು ಇತ್ತು. ಕೆಲಸಕ್ಕೆ ಉತ್ತೇಜನವಿತ್ತು. ಇದೆಲ್ಲಕ್ಕೂ ಹಚ್ಚಾಗಿ ಶಾಂತ ವಾತಾವರಣ ಇತ್ತು. ಬೊಂಬಾಯಿಯಲ್ಲಿ ಇದೆಲ್ಲ ಹೇಗೆ ಸಿಕ್ಕೀತು? ಗುರುದತ್ತನು ಮೊದಲು "ಫೇಮಸ್" ಅನ್ನು ಸೇರಿದನು. ಮೂರು ವರ್ಷದ ಕಾಂಟ್ರಾಕ್ಟು ಮುಗಿಯಲು ಒಂದೇ ವರ್ಷ ಉಳಿದಿತ್ತು. "ಮೋಹನಾ" ಚಿತ್ತರು ನಡೆಯಲಿಲ್ಲ. ಆಗ ಗುರುದತ್ತನ ಕೆಲಸ ಹೋಯಿತು. ಅವನು ಆ ಫಿಲ್ಮ ಸಂಸಾರದಲ್ಲಿ ದುಡಿದು ದುಡಿದು ಜೀವಿಸುತ್ತಿದ್ದನು. ಬೊಂಬಾಯಿ ಬಿಟ್ಟು ಮದ್ರಾಸಿಗೆ ಹೋದನು. ಜೆಮಿನಿ ಇತರ ಸ್ಟುಡಿಯೋಗಳಲ್ಲಿ ಸೇರಲು ಸಾಕಷ್ಟು ಪ್ರಯತ್ನ ಮಾಡಿದನು. ಅದೇ ಹೊತ್ತಿಗೆ ಅವನು "ಪ್ಯಾಸಾ" ಚಿತ್ರಪಟದ ಕಥೆಯನ್ನು ಬರೆದಿದ್ದನು. ಕಥೆ ಬರೆಯುವ ಚಟ ಅವನಿಗೆ ಹತ್ತನೇ ವಯಸ್ಸಿನಿಂದ ಇತ್ತು. ಆಗಲೇ ಅಮಿಯಾ ಚಕ್ರವರ್ತಿಯವರೂ "ಗರ್ಲ್ಸ್ ಸ್ಕೂಲ್" ಎಂಬ ಚಿತ್ರಪಟ ಮಾಡುತ್ತಿದ್ದರು. ಅವರ ಹೆಂಡತಿ ಆಲ್ಮೋಡದಲ್ಲಿ ತನ್ನ ಅಕ್ಕ ಲಕ್ಷ್ಮಿ ಮತ್ತು ತಾಯಿಯೊಡನೆ ಇದ್ದಳು. ಆ ಗುರುತಿನಿಂದ ಗುರುದತ್ತನನ್ನು ಅಮಿಯಾ ಚಕ್ರವರ್ತಿಯವರು ಅಸಿಸ್ಟೆಂಟ್ ಡೈರೆಕ್ಟರ್ ಆಗಿ ನೇಮಿಸಿದರು. ಇದರ ನಂತರ ಶ್ರೀ ಜ್ಞಾನೇಂದ್ರ ಪ್ರಸಾದ ಗೋಸ್ವಾಮಿಯವರು "ಸಂಗ್ರಾಮ" ಚಿತ್ರಪಟದಲ್ಲಿ ಸಹಾಯಕ ಡೈರೆಕ್ಟರನಾಗಿ ಕೆಲಸ ಮಾಡಲು ತಾವಾಗಿಯೇ ಕರೆದರು. ಶ್ರೀ ಗೋಸ್ವಾಮಿಯವರಲ್ಲಿ ಗುರುದತ್ತನಿಗೆ ತುಂಬ ಶ್ರದ್ಧೆಯಿತ್ತು. ಅದಕ್ಕೆ ಅವರ ದೇಹಾವಸಾನ ಆದ ಮೇಲೂ ತನ್ನ ಚಿತ್ರಪಟಗಳನ್ನು ಅನೇಕ ಸಲ ಅವರಿಗೆ ಅರ್ಪಿಸಿದ್ದನು. ಈ ಮಧ್ಯೆ ದೇವಾನಂದನೂ ಆತನ ಅಣ್ಣ ಚೇತನ ಆನಂದನೂ ಕೂಡಿ ನಚಿಕೇತನ ಎಂಬ ಹೆಸರಿನಿಂದ ಒಂದು ಚಿತ್ರಾಲಯ ಆರಂಭಿಸಿದ್ದರು. ಅವರ ಮೊದಲನೇ ಚಿತ್ರಪಟ "ನೀಚಾನಗರ" ಎಂದಿತ್ತು.

ಎರಡನೇ ಚಿತ್ರಪಟವನ್ನು ಡೈರೆಕ್ಟ್ ಮಾಡಲು ದೇವಾನಂದನು ಗುರುದತ್ತನಿಗೇ ಹೇಳಿದನು. ಚೇತನ ಆನಂದ ಆಕ್ಷೇಪಿಸಿದರೂ ದೇವಾನಂದ ತಾನು ಕೊಟ್ಟ ಮಾತಿಗೆ ತಪ್ಪದೆ ಗುರುದತ್ತನಿಗೇ ಅವಕಾಶ ಕೊಟ್ಟನು. "ಬಾಜಿ" ಎಂಬ ಚಿತ್ರಪಟಕ್ಕೆ ಗುರುದತ್ತ ಕೈ ಹಾಕಿ

ದನು. ಬಲರಾಜ ಸಾಹನಿಯವರು ಇದಕ್ಕೆ "ಸ್ಕ್ರೀನ್ ಪ್ಲೇ" ಬರೆದಿದ್ದರು. ನಾಯಕ ದೇವಾನಂದ, ನಾಯಕಿ ಗೀತಾಬಾಲಿ, ಸಂಗೀತ ಶ್ರೀಮಾನ್ ಸಚಿನ್‌ದೇವ ಬರ್ಮನ್. ೧೯೪೯ ರಲ್ಲಿ ಈ 'ಬಾಜಿ' ಚಿತ್ರಪಟದ ಮುಹೂರ್ತವಾಯಿತು. ಈ ಮುಹೂರ್ತದಲ್ಲಿ ಶ್ರೀಮತಿ ಗೀತಾರೇ "ತದಬೀರಿಸೆ ಬಿಗಡಿ ಹುಯಿ" ಹಾಡನ್ನು ಹಾಡಿದಳು. ಆ ಹಾಡಿನ ರಿಕಾರ್ಡಿಂಗೂ ಆಯಿತು. ಅದನ್ನು ಕೇಳಿ ನಮಗೆಲ್ಲ ಹುಚ್ಚೇ ಹಿಡಿದಂತಾಯಿತು. ಏನು ಆ ಮಧುರ ಕಂಠ! ನಮಗೆಲ್ಲರಿಗೂ ಬಂಗಾಳಿ ಭಾಷೆ, ಬಂಗಾಳಿ ಜನ ಎಂದರೆ ಹೆಚ್ಚು ಅಭಿಮಾನ, ಹೆಚ್ಚು ಪ್ರೀತಿ. ಕಾರಣ ಎಂದರೆ ಕಲ್ಕತ್ತೆಯಲ್ಲಿ ಇದ್ದು ಅನೇಕ ವರ್ಷ ನಾವು ಜೀವನ ನಡೆಸಿದ್ದು, ಅಲ್ಲಿಯ ಸುಪ್ರಸಿದ್ಧ ಲೇಖಕರ, ಸಾಧು ಸಂತರ ಸಂಪರ್ಕ ನಮಗೆ ಆದದ್ದು. 'ಬಾಜಿ' ಚಿತ್ರಕಥೆಯನ್ನೂ ಗುರುದತ್ತನೇ ಬರೆದದ್ದು.

ಗುರುದತ್ತನಿಗೆ ತನ್ನ ಕುಟುಂಬದ ಬಗ್ಗೆ ವಾತ್ಸಲ್ಯ, ಕರ್ತವ್ಯಪಾಲನೆಯ ಅರಿವು, ಜವಾಬ್ದಾರಿ ಹೆಚ್ಚಾಗಿತ್ತು. ನಾವಿಬ್ಬರೂ ತಾಯಿ-ಮಕ್ಕಳಿಗಿಂತ ಹೆಚ್ಚಾಗಿ ಸ್ನೇಹಿತರಂತಿದ್ದೆವು. ನಮ್ಮಿಬ್ಬರ ಧ್ಯೇಯ, ಮಹತ್ವಾಕಾಂಕ್ಷೆ, ರುಚಿಗಳು, ಪುಸ್ತಕ ಪ್ರೀತಿ ಒಂದೇ ಆಗಿ ನಮ್ಮಿಬ್ಬರಲ್ಲೂ ಒಂದು ಅನ್ಯೋನ್ಯತೆ ಬಂದಿತ್ತು. ನನ್ನಿಂದ ಏನೊಂದನ್ನೂ ಆತ ಮುಚ್ಚಿಡುತ್ತಿರಲಿಲ್ಲ. ಆತ ನನಗೆ ಕಲ್ಪವೃಕ್ಷದಂತೆ ಆಗಿದ್ದ. ತಂಗಿಯನ್ನೂ ಅಷ್ಟೇ ಕಕ್ಕುಲತೆಯಿಂದ ಆತ ನೋಡುತ್ತಿದ್ದ. ೧೯೫೦ ರಿಂದ ಗುರುದತ್ತ ನನಗೆ ಶಾಲೆಯ ನೌಕರಿ ಮಾಡಲು ಬಿಡಲಿಲ್ಲ. "ಇಷ್ಟು ವರ್ಷ ನೀನು ನಮಗೋಸ್ಕರ ದುಡಿದದ್ದು ಸಾಕಮ್ಮಾ. ನಾನು ದೊಡ್ಡವನಾಗಿ ಗಳಿಸುವಂತಾದಾಗ ನೀನೇಕೆ ತಕ್ಕೆ ಕಷ್ಟಪಡಬೇಕು?" ಎಂದು ನನ್ನನ್ನು ನೌಕರಿ

ಯಿಂದ ಬಿಡಿಸಿಯೇಬಿಟ್ಟ.

ಗುರುದತ್ತನು ಮೊದಲು ಸಣ್ಣ ಮೋಟ ರೊಂದನ್ನು ಕೊಂಡು ಕೊಂಡನು. ದಿಗ್ದರ್ಶಕ ನಾದ ನಂತರ ಆವನನ್ನು ಕಾಣಲು ಬರುವ ಜನ ಅತಿ ಹೆಚ್ಚಾಯಿತು. ನಾವಿದ್ದ ಮನೆಯೋ ಬಹಳ ಚಿಕ್ಕದು. ಮಾತುಂಗದಲ್ಲಿ ನಮಗೆಲ್ಲಾ ದೊಡ್ಡ ಮನೆ ಸಿಗಲಿಲ್ಲ. ಕಡೆಗೆ ಗುರುದತ್ತನು "ಖಾರಿ" ಎಂಬ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡನು. ಆಗ 'ಜಾಲ' ಪಿಕ್ಚರಿಗೆ ಮಾಲ ವಣ ಪ್ರದೇಶದ ಹಿನ್ನೆಲೆಯು ಬೇಕಾಗಿತ್ತು. ಇದೊಂದು ಕ್ರೈಸ್ತ ಜನಾಂಗದವರ ಕಥೆ. ಅದ ರಲ್ಲಿ ದೇವಾನಂದ, ಗೀತಾಬಾಲಿ, ರಾಮಸಿಂಗ ಮುಂತಾದವರು ಭಾಗವಹಿಸಿದ್ದರು ಬರ್ಮನ್ ಅವರು ಕೊಂಕಣಕ್ಕೆ ಹೋಗಿ, ಅಲ್ಲಿಯ ಜನರ ಸಂಗೀತವನ್ನು ಅಭ್ಯಾಸ ಮಾಡಿ ಬಂದು ಅದಕ್ಕೆ ತಕ್ಕ ಸಂಗೀತ ಕೊಟ್ಟಿದ್ದರು. ನನಗಂತೂ ಮಾತುಂಗ ಬಿಟ್ಟು ಹೋಗುವ ಮನಸ್ಸಿರಲಿಲ್ಲ, ಗುರುದತ್ತ ತಾನೊಬ್ಬನೇ ಬೇರೆ ಮನೆಗೆ ಹೋಗಲಾರೆ ಎಂದು ಹಟ ಹಿಡಿದ.

ಇತ್ತ ಗುರುದತ್ತ ಗೀತಾ ಅವರ ವಾಗ್ದಾ ನವೂ ಆಗಿತ್ತು. ಇಂಥ ಪರಿಸ್ಥಿತಿಯಲ್ಲಿ ನಾನು ಏನು ಮಾಡಬೇಕೆಂಬುದದೇ ತೋಚಲಿಲ್ಲ. ಪ್ರಾಯಕ್ಕೆ ಬಂದ ಹುಡುಗಿಯನ್ನು ಮನೆಯಲ್ಲಿಟ್ಟು ಕೊಂಡು ಮಕ್ಕಳ ಲಗ್ನ ಮಾಡುವದು ಉಚಿತವೆನಿ ಸಲಿಲ್ಲ ನನಗೆ. ಇದೂ ಅಲ್ಲದೆ ಸಲಕ್ಷಣಳಾದ ಲಲಿತೆಯನ್ನು ಈಗಿನ ಕಾಲೇಜಿಗೆ ಕಳಿಸಿದರೆ, ಕಾಲೇ ಜಿನ ಹುಡುಗರು ತೊಂದರೆ ಕೊಡಲಾರಂಭಿಸಿ ದರೆ ಮುಂದೇನು ಗತಿ? ಲಲಿತೆ ಹುಡುಗೆ ಅಷ್ಟು ಧೈರ್ಯವಂತೆಯೂ ಅಲ್ಲ. ಎಲ್ಲಾದರೂ ಕಾಲು ಜಾರಿದರೆ ನಮ್ಮಂಥವರ ಗತಿ ಏನು? ಹೀಗೆಲ್ಲ ಏನೇನೋ ವಿಚಾರ ಮಾಡಿಕೊಂಡು ಲಲಿತೆಯ ಮದುವೆಗೆ ನಾನು ಒಪ್ಪಿಬಿಟ್ಟೆ. ನಾನು ಒಪ್ಪಿದ್ದು ಲಲಿತೆಯ ಮನಸ್ಸಿಗೆ ಬರಲಿಲ್ಲವೆಂದೂ ಕಾಣುತ್ತದೆ. ಆದರೆ ಗುರುದತ್ತನು ಅವಳನ್ನು ಹೇಗೋ ಸಂತೈಸಿ ಒಪ್ಪಿದನು.

'ಜಾಲ'ದ ನಂತರ ಗುರುದತ್ತನು ಗೀತಾ ಬಾಲಿಯ ಅಕ್ಕ ಹರಿದರ್ಶನ ಕೂಡ 'ಎಚ್ ಬಜಿ ಫಿಲ್ಮ್ಸ್' ಹೆಸರಿನಲ್ಲಿ 'ಬಾಜಿ' ಎಂಬ ಚಿತ್ರ ಮಾಡಲಾರಂಭಿಸಿದ. ಆಗ ಗೋವಾಂತಕಪ್ಪ ಪೋರ್ತುಗೀಜರ ಆಡಳಿತದಲ್ಲಿತ್ತು. ಅವರ ಆಡ ಳಿತದಲ್ಲಿ ನಡೆಯುತ್ತಿರುವ ಅತ್ಯಾಚಾರ, ಬಲಾ ತ್ಕಾರಗಳನ್ನು ಕುರಿತೇ ಈ ಕಥೆ ಇತ್ತು. 'ಜಾಲ' 'ಬಾಜಿ' ನಡೆದಷ್ಟು ಈ ಫಿಲ್ಮ್ ನಡೆಯಲಿಲ್ಲ. ಚಿತ್ರಪಟದ ನಾಯಕರು ಪ್ರೊಡ್ಯೂಸರರಿಗೆ ತುಂಬ ಉಪದ್ರವ ಕೊಡುವದನ್ನು ಗುರುದತ್ತನು ಸಹಿಸಲಾರದೆ ತಾನೇ ನಾಯಕನ ಪಾತ್ರ ಮಾಡು ವದೆಂದು ನಿರ್ಧರಿಸಿದನು. ಸ್ವಭಾವದಿಂದ ಅವನು ತೀರ ಮುಗ್ಧ; ನಾಚಿಕೊಳ್ಳುವವನು; ಸದಾ ಬೆಚ್ಚಿ ದಂತಿದ್ದವನು. ಇಂಥವನು ಹೇಗಪ್ಪ ನಟಿಸು ವನು ಎಂದು ನಮಗೆಲ್ಲ ದಿಗಿಲಾಗಿತ್ತು. ಅಂತೂ ಕೆಲಸ ಪ್ರಾರಂಭಿಸಿದ. ಈ ಚಿತ್ರಪಟದ ನಂತರ ತನ್ನ ಎಲ್ಲಾ ಚಿತ್ರಪಟಗಳಲ್ಲೂ ಆತನೇ ನಾಯ ಕನ ಪಾತ್ರ ಮಾಡಹತ್ತಿದನು.

೩

೧೯೫೩ರ ಮೇ ತಿಂಗಳಲ್ಲಿ ಗುರುದತ್ತನ ಮದುವೆ ಯಾಯಿತು. ಗೀತಾ ರಾಯಳನ್ನು ಅವಳ ಹಣ ಕ್ಕೋಸ್ಕರ ಗುರುದತ್ತ ಮದುವೆ ಮಾಡಿಕೊಂಡಿ ರುವನೆಂದೂ ಆಕೆಗೂ ಆತನಿಗೂ ಅಲ್ಲಿದೆಲ್ಲಿಗೆ ಎಂದೂ 'ಟೈಮ್ಸ್' ಪತ್ರಿಕೆಯಲ್ಲಿ ತುಂಬ ಅವ ಹೇಳನ ಮಾಡಿ ಬರೆದಿದ್ದರು. ಗುರುದತ್ತನಿಗೆ ಹಣದ ಮೇಲೆ ಆಸೆ ಎಂದೂ ಇರಲಿಲ್ಲ. ಹಾಗೆ ಇದ್ದಿದ್ದರೆ ಆಗಿದ್ದರೆ. ಹಣವನ್ನೆಲ್ಲ ದೋಚಿಕೊಂಡು ಆಕೆಯನ್ನು ಕೈಬಿಡಬಹುದಾಗಿತ್ತು. ಆತನು ಸಂಪಾ ದಿಸಿದ್ದು ತಾನು ಸ್ವತಃ ದುಡಿದು. ಒಂದು ಕಾಸನ್ನೂ ಇಟ್ಟುಕೊಳ್ಳದೆ ಬಂದದ್ದೆಲ್ಲ ಪರೋಪಕಾರಕ್ಕಾಗಿ ದಾನಧರ್ಮಕ್ಕಾಗಿ ಖರ್ಚುಮಾಡುವ ಎದೆ ಅವ ನಿಗಿತ್ತು. ಇಷ್ಟಾಗಿ ಮಾಡಿದ್ದನ್ನು ಹೇಳಿಕೊಳ್ಳುವ ಚಟವೂ ಅವನಿಗಿರಲಿಲ್ಲ. ಈ ಚಿತ್ರಪಟ-ವ್ಯವ ಸಾಯವೇ ಹೆಚ್ಚಾಗಿ ಆತ್ಮಸ್ತುತಿ ಮಾಡಿಕೊ ಳ್ಳುವುದಕ್ಕೆ ಹಿರಿದು. ಇನ್ನೊಬ್ಬರು ತಮ್ಮನ್ನು ಮೆಚ್ಚಿ ಮಾತನಾಡುತ್ತಾರೋ ಇಲ್ಲವೋ ಎಂಬ ಅನುಮಾನವಿದ್ದವರು ಆತ್ಮಸ್ತುತಿ ಮಾಡಿಕೊಳ್ಳು ತ್ತಿರಬಹುದು. ಗುರುದತ್ತನಿಗೆ ಯಾರ ಹೊಗ ಳಿಕೆಯಾಗಲಿ, ತೆಗಳಿಕೆಯಾಗಲಿ ಅತ್ಯ ಲಕ್ಷ್ಯವೇ

ಇರುತ್ತಿರಲಿಲ್ಲ. ತಾನಾಯಿತು, ತನ್ನ ಕೆಲಸವಾಯಿತು. ಹೀಗಾಗಿ ಅವನ ಸದ್ಗುಣಗಳೂ ಯಾರಿಗೂ ತಿಳಿಯದೆ ಹೋದವು. ಬಾಯಿ ಬಿಚ್ಚಿ ತನ್ನ ಸುಖ-ದುಃಖಗಳನ್ನು ಹೇಳದ್ದರಿಂದ ಅವೂ ಯಾರಿಗೂ ತಿಳಿಯದೆ ಹೋದವು. ಸದಾ ಮನದ ತಾಪತ್ರಯವಂತೂ ಇದ್ದೇ ಇರುತ್ತಿತ್ತು. ಆದರೂ ಕೈಯಲ್ಲಿ ತೆಗೆದುಕೊಂಡ ಕೆಲಸವನ್ನು ಎಂದೂ ಕೈ ಬಿಡಲಿಲ್ಲ: ಇನ್ನೊಬ್ಬರ ಮುಂದೆ ಹೋಗಿ 'ದೇಹಿ' ಎಂದು ಕೈಯೊಡ್ಡಲಿಲ್ಲ.

'ಬಾಜ' ನಂತರದ 'ಆರ-ಪಾರ' ಫಿಲ್ಮಿನಲ್ಲಿ ಶ್ಯಾಮಾ ಎಂಬುವಳನ್ನು ನಾಯಕಿಯನ್ನಾಗಿ ಮಾಡಿ, ತಾನು ನಾಯಕನಾಗಿ ಕೆಲಸಮಾಡಹತ್ತಿದನು. ಶ್ರಮಜೀವಿಗಳ ಜೀವನವನ್ನು ತೋರಿಸುವ ಈ ಫಿಲ್ಮು ತುಂಬ ನಡೆಯಿತು. ಹೆಸರೂ ತಂದಿತು. ಹಣವನ್ನೂ ತಂದಿತು. ಈ ಮಧ್ಯೆ ಮನೆಯ ವಾತಾವರಣವೇ ಬದಲಾಗಿದ್ದುದರಿಂದ ದೇವಿದಾಸನೂ, ವಿಜಯನೂ ಓದು-ಬರಹದಲ್ಲಿ ಮನಸ್ಸು ಹಾಕುತ್ತಿರಲಿಲ್ಲ. ದೇವಿದಾಸನನ್ನು ಒಂದು ಬೋರ್ಡಿಂಗ್ ಶಾಲೆಗೆ ಸೇರಿಸುವ ಸಲಹೆ ನಾನು ಗುರುದತ್ತನಿಗೆ ಕೊಟ್ಟೆನು. ಅವನಿಗೆ ಅದು ಆಗ ಸಾಧ್ಯವಿರಲಿಲ್ಲ. ಆದರೂ ನನ್ನ ಮಾತಿಗೆ ಒಪ್ಪಿ, ದೇವಿದಾಸನನ್ನು ಎಸ್. ಎಸ್. ಪಿ. ಎಂ. ಶಾಲೆಗೆ ಸೇರಿಸಿದನು. ೧೯೫೨ ನವೆಂಬರಿನಲ್ಲಿ ಆತ್ಮಾರಾಮ-ನಾಗರತ್ನಾ ಇವರ ಮದುವೆಯೂ ಆಯಿತು.

೧೯೫೪ ಜುಲೈ ತಿಂಗಳ ಒಂಬತ್ತಕ್ಕೆ ಗುರುದತ್ತನ ಚೊಚ್ಚಲಮಗ ತರುಣನ ಜನನವಾಯಿತು. ಅದೇ ವರುಷ ಮೇ ೬ಕ್ಕೆ ಮಗಳು ಲಲಿತೆಗೂ ಹೆಣ್ಣುಮಗು ಹುಟ್ಟಿತ್ತು. ಗುರುದತ್ತನಿಗೆ ತನ್ನ ಮಗನಿಗಿಂತ ಲಲಿತೆಯ ಮಗಳ ಮೇಲೇ ಹೆಚ್ಚು ಮಮತೆ. ಮೊದಲು ಕೂಸು ನೋಡಿದವನೇ ಅವನು. ಹುಟ್ಟಿದ ಮೂರನೆಯ ದಿನಕ್ಕೇ ಅದರ ಎಷ್ಟೋ ಫೋಟೋಗಳನ್ನು

ತೆಗೆದಿದ್ದನು. ಅದೆಷ್ಟೋ ವರ್ಷಗಳವರೆಗೆ ಸಣ್ಣ ಮಕ್ಕಳಿಲ್ಲದೆ ಬರಿದಾಗಿದ್ದ ಮನೆಗೆ ಈಗ ತುಂಬಿ ದಂತಾಯಿತು. ಇಬ್ಬರು ಮೊಮ್ಮಕ್ಕಳಿಗೂ ಹನ್ನೆರಡನೇ ದಿನ ಹೆಸರಿಡುವ ಸಂಭ್ರಮ ನಡೆಯಿತು. ಮಗಳ ಮಗುವಿಗೆ ಕಲ್ಪನಾ ಎಂದು ಹೆಸರಿಟ್ಟಿದ್ದಾಯಿತು. ಮಗ ಹುಟ್ಟಿದ ಮೇಲೆ ಗುರುದತ್ತ ಗೀತಾ ತಕ್ಕ ಮಟ್ಟಿಗೆ ಸಂತೋಷವಾಗಿ ಅನ್ಯೋನ್ಯದಲ್ಲಿಯೇ ಇದ್ದರು. ಮಗನಿಗಾಗಿ ಒಬ್ಬ ಆಯಾಳನ್ನು ಗೊತ್ತು ಮಾಡಿದರು. ನಾನು ಹೆಚ್ಚಾಗಿ ಮಗಳ ಮನೆಯಲ್ಲಿಯೇ ಇರುತ್ತಿದ್ದೆ. ಯಾಕೆಂದರೆ ಆಕೆಗೆ ಆಯಾ ಇಡುವ ಮನಸ್ಸೂ ಇರಲಿಲ್ಲ, ಅನುಕೂಲತೆಯೂ ಇರಲಿಲ್ಲ.

ಗುರುದತ್ತನು ನನ್ನಿಂದ ದೂರವಾಗಿದ್ದನೇನೋ ನಿಜ; ಆದರೆ ನನ್ನ ಬೇಕು–ಬೇಡಗಳನ್ನು ಅವನು ಯಾವಾಗಲೂ ಪೂರೈಸುತ್ತಿದ್ದನು. ನನಗೆ ಎಲ್ಲಿಗೆ ಬೇಕೋ ಅಲ್ಲಿಗೆ ಕಳಿಸಿಕೊಡುವನು. ಚಿಕ್ಕಂದಿನಿಂದಲೂ ದೊಡ್ಡೂರುಗಳನ್ನೂ ಪ್ರಕೃತಿ–ಸೌಂದರ್ಯವನ್ನೂ ನೋಡಬೇಕೆಂಬ ನನ್ನ ಹುಚ್ಚು ಕುತೂಹಲವನ್ನು ದಾರ್ಜಲಿಂಗ್, ಕಾಶ್ಮೀರಗಳಂತಹ ರಮ್ಯ ಪ್ರದೇಶಗಳಿಗೆ ಕಳಿಸಿಕೊಟ್ಟು ತೃಪ್ತಿ ಪಡಿಸಿದನು. ನಾನೂ ಅವನ ಮಾತಿಗೆ ವಿರುದ್ಧ ಹೋಗುತ್ತಿರಲಿಲ್ಲ. ಅವನ ವೈವಾಹಿಕ ಜೀವನದಲ್ಲಾಗಲಿ, ವ್ಯವಹಾರಿಕ ಜೀವನದಲ್ಲಾಗಲಿ ನಾನು ಕೈ ಹಾಕುತ್ತಿರಲಿಲ್ಲ. ನನ್ನಿಂದ ಏನೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದೆ.

ಒಮ್ಮೆ ಗುರುದತ್ತನು ಹೈದ್ರಾಬಾದಿಗೆ ಒಂದು ಚಿತ್ರಪಟ ಬಿಡುಗಡೆಗೆ ಹೋದಾಗ, ಒಂದು ತೆಲುಗು ಚಿತ್ರಪಟವನ್ನು ನೋಡಿದನಂತೆ. "ರೋಜುಲು ಮಾರ್‍ಯಾವು" ಎಂಬುದು ಅದರ ಹೆಸರು. ಅವರಲ್ಲಿ ವಹೀದಾ ರೆಹಮಾನ್ ಎಂಬವಳು ನೃತ್ಯ ಮಾಡಿದ್ದುದು ಗುರುದತ್ತನಿಗೆ ತುಂಬ ಹಿಡಿಸಿತಂತೆ. ಕೂಡಲೆ ಅವಳನ್ನು, ತನ್ನ ಮುಂದಿನ ಚಿತ್ರಪಟದಲ್ಲಿ ಕಾಂಟ್ರ್ಯಾಕ್ಟ್ ಮೂಲಕ ತೆಗೆದುಕೊಳ್ಳಬೇಕೆಂದು ಅನೇಕ ಸಲ ಅವಳ ತಾಯಿಯನ್ನು ಸಮಜಾಯಿಸಿದರೂ ಆಕೆ ಒಪ್ಪಲಿಲ್ಲವಂತೆ. ಒಮ್ಮೆ ತಲೆಯಲ್ಲಿ ಹೊಕ್ಕದ್ದನ್ನು ಸಹಸಾ ಗುರುದತ್ತ ಬಿಡುವಂಥವನಲ್ಲ. ನಾನಾ ಉಪಾಯಗಳಿಂದ ತಾಯಿ ಮಕ್ಕಳನು ಒಡಂಬಡಿಸಿ; ಆಕೆಯು ಅನೇಕ ಕರಾರುಗಳಿಗೆ ಒಪ್ಪಿ, ಕಾಂಟ್ರ್ಯಾಕ್ಟಿಗೆ ಆಕೆಯಿಂದ ಸಹಿ ಮಾಡಿಸಿಕೊಂಡೇ ಬೊಂಬಾಯಿಗೆ ಹಿಂದಿರುಗಿದನು. ಇವಳನ್ನು ಕೂಡಿಸಿಕೊಂಡು ತಯಾರಿಸಿದ ಚಿತ್ರಪಟವೂ ಪೂರ್ಣ ಯಶಸ್ವಿಯಾಯಿತು. ಪ್ರತಿಯೊಬ್ಬರು ಮೊದಮೊದಲು ಆಫೀಸಿನಲ್ಲಿ ವಹೀದಾಳನ್ನು ತೆಗೆದುಕೊಂಡಿದ್ದಕ್ಕಾಗಿ ಗುರುದತ್ತನನ್ನು ಹೀಯಾಳಿಸಿದ್ದರು. ಗುರುದತ್ತ ಅದಕ್ಕೆ ಕಿವಿಗೊಡಲಿಲ್ಲ. ಹೇಳಿದ ಕೆಲಸವನ್ನು ಅತಿ ಶೀಘ್ರ ಕಲಿತುಕೊಳ್ಳುವ ಬುದ್ಧಿ ಅವಳಿಗಿದೆ ಎಂದು ಹೇಳುತ್ತಿದ್ದ. ಆಗಿನ್ನೂ ಆಕೆಗೆ ಕೇವಲ ಹದಿನಾರು ವರ್ಷ ಪ್ರಾಯ. ಹೆಚ್ಚು ಕಲಿತವಳೂ ಅಲ್ಲ. ತಂದೆ ತೀರಿಕೊಂಡ ನಂತರ ಮನೆತನದ ಪರಿಸ್ಥಿತಿ ತೀರ ಶೋಚನೀಯವಾಗಿತ್ತು. ಆಗ ಯಾರಿಂದಲೋ ಈ ಫಿಲ್ಮ್–ಜಗತ್ತು ಸೇರಿದಳು. ಗುರುದತ್ತ ಅವಳನ್ನು ಈ ಚಿತ್ರಪಟದಲ್ಲಿ ತಂದ ನಂತರ ಚಿತ್ರಪಟ ವ್ಯವಸಾಯದಲ್ಲಿ ಗುರುದತ್ತನಲ್ಲಿದ್ದ ಜಾಣತನ, ದಿಗ್ದರ್ಶನ ಮಾಡುವ ತಲೆ ಜನರ ಕಣ್ಣಿಗೇ ಹೊಡೆಯಿತು. ಈ ಫಿಲ್ಮ್ ತಂದ ಹಣದಿಂದ ತನ್ನ ಆಫೀಸಿನ ಎಲ್ಲ ಕೆಲಸಗಾರರಿಗೂ ಮನೆಯಲ್ಲಿರುವ ಎಲ್ಲಾ ಆಳುಗಳಿಗೂ ಮೂರು ಮೂರು ತಿಂಗಳ ಬೋನಸ್ ಕೊಟ್ಟನು. ಯಾವಾಗಲಾದರೂ ಮೊದಲು ಸ್ಟುಡಿಯೋದಲ್ಲಿರುವವರಿಗೆ ಸಂಬಳ ಕೊಟ್ಟು, ಕಡೆಗೆ ತನ್ನ ಮನೆಯ ಖರ್ಚಿಗೆ ಕೊಡುತ್ತಿದ್ದನು. ಶೂಟಿಂಗ್ ನಡೆಯುತ್ತಿರುವಾಗ ನಿಶಬ್ದವಾಗಿ ಇರಬೇಕು. ಸ್ವಲ್ಪ ಶಬ್ದ ಅಥವಾ ಕೆಲಸದಲ್ಲಿ ಸ್ವಲ್ಪ ತಪ್ಪಾದರೆ ಸಾಕು, ಹುಲಿಯಂತೆ ಗರ್ಜಿಸುವನು. ಎಲ್ಲರೂ ಇವನಿಗೆ ಹೆದರಿ ಸಾಯುತ್ತಿದ್ದರು. ಆದರೆ ಕೆಲಸ ತೀರಿದ ಬಳಿಕ ಗುರುದತ್ತ ಅವರ ಪರಮ ಮಿತ್ರ. ಅವರ ಸುಖ–ದುಃಖ ಎಲ್ಲಾ ಕೇಳಿಕೊಳ್ಳುವನು; ಅವರಿಗೆ ಏನು ಬೇಕೋ ಅದನ್ನು ಒದಗಿಸಿಕೊಡುವನು. ಹಾಗಾಗಿ ಮೂರು ನೂರು ಮಂದಿ ಕೆಲಸಗಾರರೂ, ಆಫೀಸಿನ ಸಿಬ್ಬಂದಿಗಳೂ ಗುರುದತ್ತನನ್ನು ಅಷ್ಟೊಂದು ಶ್ರದ್ಧೆ, ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದರು. ಅವನಿಗೇನಾದರೂ ತಲೆಶೂಲಿಯಿದ್ದರೆ ತಾವು ದೇವರಿಗೆ ಬೇಡಿಕೊಳ್ಳುವರು! ಪ್ರತಿವರ್ಷ ಒಬ್ಬ ಶಿಲ್ಪಿಯು

ಗಣೇಶನ ಹಬ್ಬಕ್ಕೆ ಗಣಪತಿಯ ವಿಗ್ರಹ ಮಾಡಿ ತಂದು ಕೊಟ್ಟು, ತನ್ನ ಸಂಭಾವನೆ ಪಡೆಯುತ್ತಿದ್ದನು. ಆತನು ೧೯೬೩ರಲ್ಲಿ ತೀರಿಕೊಂಡಿದ್ದರಿಂದ ಅದೂ ನಿಂತುಹೋಯಿತು.

ಗುರುದತ್ತನಿಗೆ ಶಾಸ್ತ್ರೀಯ ಸಂಗೀತ ಎಂದರೆ ತುಂಬ ಪ್ರೀತಿ. ಒಮ್ಮೆ ಅತ್ತರಬಾಯಿಯನ್ನೂ, ಒಮ್ಮೆ ಸಿದ್ದೇಶ್ವರಿದೇವಿಯನ್ನೂ, ಒಮ್ಮೆ ಅಲಿ ಅಕ್ಬರ ಮತ್ತು ವಿಲಾಯತಖಾನರನ್ನೂ ಮನೆಗೆ ಕರೆತಂದು ಸಂಗೀತದ ಅನುಷ್ಠಾನ ಇಡುವನು. ಇಂತಹ ಸಮಾರಂಭ ಮನೆಯಲ್ಲಿ ನಡೆದ ಮರು ದಿನವೇ ಏನಾದರೊಂದು ನೆಪ ಮಾಡಿ ಮನೆಯಲ್ಲಿ ಜಗಳ ಕಟ್ಟಿಟ್ಟದ್ದೇ. ಯಥಾಪ್ರಕಾರ ಗೀತಾ ತವರುಮನೆಗೆ ಹೋಗಿ ಇಬ್ಬರು ಆಯಾರನ್ನೂ ಮಕ್ಕಳನ್ನೂ ಹಿಂದಿನಿಂದ ಕರೆಸಿಕೊಳ್ಳುವಳು. ಕಡೆಗೆ ಈತನೇ ಹೋಗಿ ಸಮಾಧಾನ ಮಾಡಿ, ಕರಕೊಂಡು ಬರಬೇಕು. ಪುಣ್ಯಾತ್ಮನಿಗೆ ಹೆಂಡತಿ–ಮಕ್ಕಳು– ಮನೆ ಎಂದರೆ ಯಾವ ಯಗ್ಗೂ ಇರುತ್ತಿರಲಿಲ್ಲ. ಗಂಡು ಅಭಿಮಾನ ಎಲ್ಲಾ ಕರಗಿ ಹೋಗಿರುತ್ತಿತ್ತು. ಇಷ್ಟು ಮಾಡಿದರೂ ಒಂದು ದಿನವೂ ಆತನ ಮನಸ್ಸಿಗೆ ಸಮಾಧಾನ ತೃಪ್ತಿ ಎಂಬುದು ಇರುತ್ತಿರಲಿಲ್ಲ. ತನ್ನ ದುಃಖ ತನ್ನಲ್ಲೇ ಹುದುಗಿರಿಸಿಕೊಳ್ಳುತ್ತಿದ್ದ; ಎಂದಿಗೂ ಹೊರಗೆ ಬಿಡುತ್ತಿರಲಿಲ್ಲ.

ತನ್ನ ಕೈಕೆಳಗೆ ಕೆಲಸ ಮಾಡುವವರಿಗೆ, ಅವರೊಳಿಷ್ಟು ಚುರುಕಿದ್ದರೆ ಸಾಕು, ಬೇಕಾದಷ್ಟು ಅವಕಾಶ ಕಲ್ಪಿಸಿಕೊಡುತ್ತಿದ್ದನು. ತಾನು ಸರಿದು ಅವರನ್ನು ಮುಂದೆ ತರುತ್ತಿದ್ದನು. ರಾಜ ಖೋಸಲಾಗೆ C-I. D. ಫಿಲ್ಮ್ ಮಾಡಲೂ ಪ್ರಮೋದ ಚಕ್ರವರ್ತಿಗೆ ಎರಡು ಫಿಲ್ಮುಗಳಲ್ಲಿ ಅಸಿಸ್ಟೆಂಟ್ ಆದ ಕ್ಷಣ ದಿಗ್ದರ್ಶನ ಮಾಡಲೂ, ಅವಕಾಶ ಕೊಟ್ಟಿದ್ದನು. ಹಾಗೆಯೇ ನಿರಂಜನ ಎಂಬವನಿಗೆ 'ರಾಜ' ಎಂಬ ಫಿಲ್ಮು ಮಾಡಲು ಒಪ್ಪಿಗೆ ಕೊಟ್ಟನು. ಇದರ ಕಥೆಯು ಒಂದು ಆಂಗ್ಲ ಕಾದಂಬರಿಯಿಂದ ಆರಿಸಿದ್ದು. ಸಿಮ್ಲಾದಲ್ಲಿ ಮಂಜುಗಡ್ಡೆಯ ಸೀನುಗಳನ್ನು ಚಿತ್ರಪಟಗಳಲ್ಲಿ ತೋರಿಸುವಂತಹ ಸಾಹಸ ಮೊದಲು ಮಾಡಿದವನು ಗುರುದತ್ತನೇ. ಆ ಪುಣ್ಯಾತ್ಮ ಏಳು ವರ್ಷ ಗುರುದತ್ತನ ಕೈಕೆಳಗೆ ಕೆಲಸ ಮಾಡಿದ್ದರೂ ಆತನ ದಿಗ್ದರ್ಶನ ಇವನಿಗೆ ಒಪ್ಪಿಗೆಯಾಗಲಿಲ್ಲ. ಚಿತ್ರಪಟ ಅರ್ಧ ಮುಗಿದಿತ್ತು. ಅಲ್ಲಿಗೆ ಅದನ್ನು ಮುಗಿಸಿಬಿಟ್ಟನು. ಲಕ್ಷಗಟ್ಟಲೆ ಹಣ ಸುರಿದದ್ದು ವ್ಯರ್ಥವಾಯಿತು. ಇದರ ನಂತರ ಒಂದಾದರೂ ಬಂಗಾಳಿ ಚಿತ್ರಪಟ ಮಾಡಬೇಕೆಂಬ ಆಕಾಂಕ್ಷೆ ಅವನಿಗೆ ತುಂಬ ಇತ್ತು, 'ಗೌರಿ' ಎಂಬ ಚಿತ್ರಪಟದಲ್ಲಿ ಗುರುದತ್ತ, ಗೀತಾ ಇಬ್ಬರೂ ನಾಯಕ ನಾಯಕಿಯರೆಂದು ನಿಶ್ಚಿತವಾಯಿತು. ಒಬ್ಬ ಶಿಲ್ಪಿಯ ಜೀವನ ಕಥೆ ಇದು. ಕಲಕತ್ತಾದಲ್ಲಿ ನಾಲ್ಕು ತಿಂಗಳು ಮನೆ ಬಾಡಿಗೆ ಹಿಡಿದು, ಬಂಗಾಳದವರ ರೀತಿ ನೀತಿಗಳನ್ನು ಅಭ್ಯಾಸ ಮಾಡಿ ಫಿಲ್ಮ್ ಪ್ರಾರಂಭಿಸಿದರು. ಕೆಲವು ರೀಲುಗಳಾದೊಡನೆ ಗೀತಾ ತಾನು ನಟಿಸಲಾರೆ ಎಂದಳು. ಗುರುದತ್ತನ ಉತ್ಸಾಹ ಎಲ್ಲಾ ಮಣ್ಣುಪಾಲಾಯಿತು. ಇದರಲ್ಲಿ ಎಷ್ಟೋ ಸಾವಿರ ರೂಪಾಯಿ ನಷ್ಟವಾಯಿತು. ಈ ಧಕ್ಕೆ ತಡೆಯಲಾರದೆ ಒಂದು ವಾರದ ತನಕ ಗುರುದತ್ತ ಎಲ್ಲಿ ಅದೃಶ್ಯವಾಗಿದ್ದನೆಂಬುದೇ ತಿಳಿಯಲಿಲ್ಲ.

'ಗೌರಿ' ಮತ್ತು 'ರಾಜ' ಫಿಲ್ಮಿನಿಂದ ಗುರುದತ್ತನಿಗೆ ದೊಡ್ಡ ಪೆಟ್ಟು ಬಿತ್ತು. ಲಕ್ಷಗಟ್ಟಲೆ ರೂಪಾಯಿಯ ನಷ್ಟ ಬಂತು. ಮನೆಯ ವಾತಾವರಣ ನೋಡಿದರೆ ಇಂತಹದು. ಆತನಿಗೆ ಮನಸ್ಸಿನ ಸಮತೋಲ ಹೇಗೆ ಉಳಿಯಬೇಕು? ಮದ್ರಾಸ ಪ್ರಾಂತದಿಂದ ಅಲ್ಲಿಯ ಚಿತ್ರಪಟಗಳಲ್ಲಿ ನಟನಾಗಿ ಕೆಲಸ ಮಾಡಲು ಬೇಡಿಕೆಗಳು ಬರುತ್ತಲೇ ಇದ್ದವು. ಆದರೆ ಇಲ್ಲಿಯ ತನಕ ಅದನ್ನು ಸ್ವೀಕರಿಸಲಿಲ್ಲ. ಈಗ ನಿರುಪಾಯನಾಗಿ ಅವನು ಕೆಲವು ಮದ್ರಾಸಿನ ಹಿಂದೀ ಪಿಕ್ಚರುಗಳಲ್ಲಿ ನಾಯಕನಾಗಿ ಕೆಲಸ ಮಾಡಲು ಒಪ್ಪಬೇಕಾಯಿತು. ಅದಲ್ಲದೇ ಅದೇ ಹೊತ್ತಿನಲ್ಲೇ 'ಚೌದವೀ ಕಾ ಚಾಂದ' ಎಂಬ ಪಿಕ್ಚರನ್ನು ಮಾಡತೊಡಗಿದನು. ಹಿಂದೆ ಕೈ ಸುಟ್ಟುಕೊಂಡದ್ದರಿಂದ ಅದನ್ನು ತಾನು ದಿಗ್ದರ್ಶಿಸದೆ ಬೇರೊಬ್ಬಾತನಿಗೆ ಕೊಟ್ಟನು. ಅದಷ್ಟು ಯಶಸ್ವಿಯಾಗಬೇಕೆಂದು ಅದರಲ್ಲಿ ಅನೇಕ ಹಾಡುಗಳನ್ನೂ ನೃತ್ಯಗಳನ್ನೂ ಸೇರಿಸಿ ಅದನ್ನು ಮುಗಿಸಿದನು. ಆತನ ಮನಸ್ಸಿನ ಪ್ರಕಾರ ಅದರಲ್ಲಿ ತಲೆ ಕಡಿಮೆ,

ಬೆಲೆ ಜಾಸ್ತಿ ಆಗುತ್ತು. ಜನರಿಗಾಗಿಯೇ ಮಾಡಿದ್ದು. ಜನ ಮೆಚ್ಚಿತು. ಗುರುದತ್ತನಿಗೆ ಅದು ರುಚಿಸಲಿಲ್ಲ. ಆದರೂ ಅದು ಗುರುದತ್ತನನ್ನು ಮೇಲಕ್ಕೆ ಎತ್ತಿತು. ಸ್ಟುಡಿಯೋದಲ್ಲಿ ಕೆಲಸ ಮಾಡಿದವರಿಗೆಲ್ಲ ಬೋನಸ್ಸು ಕೊಟ್ಟ. ತನ್ನ ಬಿಚ್ಚಾಸನ್ನೂ ಮಗ ತರುಣನನ್ನೂ ದಾರ್ಜಿಲಿಂಗಿಗೆ ಕಳುಹಿಸಿದ. ಮುಂದೆ ಅವರನ್ನು ಪರದೇಶಕ್ಕೂ ಕಳುಹಿಸುವ ವಿಚಾರ ಅವನಿಗಿತ್ತು. ತಾನೊಂದು ಏಕಿಸದೆ ದೃಶ ಇನ್ನೊಂದು ಬಗೆತು. ಅವನು ಇಷ್ಟು ಆಸೆ ಪಟ್ಟು ಮಾಡಿದ ಯೋಜನೆಗಳಾವೂ ಫಲಕಾರಿಯಾಗಲಿಲ್ಲ. ಇಷ್ಟೆಲ್ಲ ನಿರಾಶೆ ತುಂಬಿಕೊಂಡು. ಪೆಟ್ಟು ತಿಂದ ಮನಸ್ಸಿನೊಡನೆ. ಇಷ್ಟು ಆ ತೊಂದರೆಗಳನ್ನೆಲ್ಲಾ ಮರೆತು ಆತನು ಹೇಗೆ. ರಜತ ಪರದೆಯ ಮೇಲೆ ಸಮಚಿತ್ತನಾಗಿ ನಾಯಕನ ಪಾತ್ರ ನಿರ್ವಹಿಸುತ್ತಿದ್ದನೋ ಬಲ್ಲೋ ದೇವರೇ ಬಲ್ಲ! ಹಿರಿಯರ ಆಶೀರ್ವಾದ. ಸಾಧು-ಸಂತರ ಕೃಪೆ. ತನ್ನ ಮನೋಧೈರ್ಯ. ನಿಷ್ಕಲಂಕತೆ ಇವೇ ಆತನನ್ನು ಸಂರಕ್ಷಿಸುತ್ತಿರಬೇಕು.

'ಚೌದವೀಕಾ ಚಾಂದ್'ಕ್ಕಿಂತ ಮೊದಲು. 'ಕಾಗಜ ಕೇ ಫೂಲ್' ಎಂಬ ಚಿತ್ರಪಟವನ್ನು ತಾನೇ ಬರೆದು ತಾನೇ ನಿರ್ದೇಶಿಸಿದನು. ಗುರುದತ್ತನ ಸಿನೇಮಾ-ಜಗತ್ತಿನ ಅನುಭವವೇ ಆ ಚಿತ್ರಪಟದ ಕಥಾವಸ್ತುವಾಗಿತ್ತು. ಹಿಂದುಸ್ತಾನದ ಚಿತ್ರಪಟಗಳಲ್ಲಿ ಮೊಟ್ಟ ಮೊದಲು ಸಿನೆಮಾ ಸ್ಕೋಪಿನಲ್ಲಿ ತೋರಿಸುವ ಧೈರ್ಯ ಮಾಡಿದವ ಗುರುದತ್ತನೇ. ಈ ಫಿಲ್ಮನ್ನು ಈಗ ಜನಗಳು ಮೆಚ್ಚುತ್ತಿದ್ದರೂ ಆಗ ಅದು ಸರಿಯಾಗಿ ನಡೆಯಲಿಲ್ಲ. ಇದಕ್ಕೆಂದೇ ನಂತರ ಮಾಡಿದ ಚಿತ್ರಗಳನ್ನು ಆತನು ಬೇರೆಯವರಿಂದ ನಿರ್ದೇಶಿಸಿದ್ದನು. ಬೇರೆಯವರಿಗೂ ಅವಕಾಶ ಕೊಟ್ಟು ಅವರನ್ನು ಮುಂದೆ ತರಬೇಕೆಂಬುದೂ ಒಂದು ಇಚ್ಛೆಯಾ

ಗಿತ್ತು. ಇನ್ನು ಮುಂದೆ ತನ್ನ ಹೆಸರನ್ನು ಹಿಂದೆ ಹತ್ತಿ ಕೇಳದಂತೆ ಮಾಡಿಬಿಡುವೆನೆಂಬ ಸಾತ್ವಿಕ ಸಂತಾಪವೂ ಕಾರಣವಾಗಿರಬೇಕು. ಅದು ಏನೇ ಇರಲಿ, ತನ್ನ ಬಲಿದಾನ ತಾನೇ ಮಾಡಿದಂತೆ!

ಇದರ ನಂತರ ತಿರುಗಿ ಒಮ್ಮೆ ಬಂಗಾಳಿ ಚಿತ್ರಪಟ ಮಾಡಬೇಕೆಂಬ ಇಚ್ಛೆ ಬಂದು ಶ್ರೀ ಬಿಮಲ ಮಿತ್ರ ಅವರ 'ಬಿಘಾಸುನ್ನ'ವೆಂಬ ಕಥೆಯನ್ನು ಆರಿಸಿದನು. ಇದರಲ್ಲಿ ತಂದ್ರಾ ಬರ್ಮನ್ ಎಂಬವಳನ್ನು ಕರೆತರಿಸಿ ಮೂರು ರೀಲುಗಳನ್ನು ಮಾಡಿ ಅಲ್ಲಿಗೇ ನಿಲ್ಲಿಸಿದನು. ಕಾರಣ, ತಂದ್ರಾ ಬರ್ಮನ್ ತುಂಬಾ ತೊಂದರೆ ಕೊಡಲಾರಂಭಿಸಿದಳೆಂದು. ಹೀಗೆಯೇ ಅದೆಷ್ಟೋ ಚಿತ್ರಪಟಗಳನ್ನು ಆರಂಭಿಸಿ, ಪೂರ್ಣ ಮಾಡದೇ ನಿಲ್ಲಿಸಿದ್ದನೊ ಲೆಕ್ಕವಿಲ್ಲ. ಹಾಗೆಯೇ ಅನೇಕ ಕಥೆಗಳ ಹಕ್ಕುಗಳನ್ನು ಹಣ ಕೊಟ್ಟು ತೆಗೆದುಕೊಂಡು, ಕಾಂಟ್ರ್ಯಾಕ್ಟ್ ಸಹಿ ಮಾಡಿ, ಅರ್ಧದಲ್ಲೆ ಬಿಟ್ಟುಬಿಟ್ಟ ಫೈಲುಗಳು ಅದೆಷ್ಟೋ ಮೂಲೆಗೆ ಬಿದ್ದಿವೆ. ಗುರುದತ್ತನು ಅತಿಶಯ ಸೂಕ್ಷ್ಮಗ್ರಾಹಿ ಮತ್ತು ಮನಸ್ಸಿಗೆ ಬಂದಂತೆ ಮಾಡುವವನಾದ್ದರಿಂದ ಕೆಲಸದಲ್ಲಿ ಒಂದಿಷ್ಟು ಕೂಡ ಹೆಚ್ಚುಕಡಿಮೆಯಾಗುವದು ಆತನಿಗೆ ಸಹಿಸುತ್ತಿರಲಿಲ್ಲ. ಬದಲಾದರೆ ಮುಂದು ನೆಟ್ಟಗಾಯಿತೆಂದೂ ಇನ್ನೊಬ್ಬರ ಮನಸ್ಸು ನೋಯಿಸಿದೆನಲ್ಲಾ ಎಂದೂ ವ್ಯಥೆಪಡುವದೇ ಹೊರತು, ಮನಸ್ಸಿಗೆ ಒಗ್ಗದ ಕೆಲಸ ಅವನೆಂದೂ ಮಾಡುವದು ಸಾಧ್ಯವಿರಲಿಲ್ಲ.

೧೯೬೨ರಲ್ಲಿ 'ಸಾಹೇಬ, ಬೀಬಿ, ಔರ ಗುಲಾಮ್' ಪಿಕ್ಚರನ್ನು ಮಾಡುವ ವಿಚಾರ ಅವನಿಗೆ ಬಂತು. ಇದು ಶ್ರೀ ಬಿಮಲ ಮಿತ್ರರ ಕಥೆ. ಕಠಿಣ ವಿಷಯ. ಹಳೆಯ ಕಾಲದ ಜಮೀನು ಬಗ್ಗೆ ಇದ್ದದ್ದು. ಒಮ್ಮೆ ಮನಸ್ಸಿನಲ್ಲಿ ಹೊಕ್ಕ ಮೇಲೆ ಬಿಡುವನೇ? ಕಲ್ಕತ್ತದಲ್ಲಿ ಮನೆ ಮಾಡಿ ಪುರಾತನ ಜಮೀನುದಾರರ ಮನೆ ಹುಡುಕಿ, ವಹೀದಾ ಮತ್ತು ಮೀನಾಕುಮಾರಿ, ರೆಹಮಾನ್ ಮತ್ತು ತಾನು ನಾಯಕರಾಗಿ ಈ ಚಿತ್ರಪಟವನ್ನು ತಯಾರಿಸಿದನು. ದಿಗ್ದರ್ಶಕನನ್ನಾಗಿ ತನ್ನ ಸ್ನೇಹಿತನಾದ ಅಬ್ರಾರ ಅಲಿಯನ್ನು ಆರಿಸಿದನು. ಅಬ್ರಾರನು ಗುರುದತ್ತನ ಅನೇಕ ಚಿತ್ರಪಟಗಳಿಗೆ ಸಂಭಾಷಣೆ ಬರೆದು ಕೊಟ್ಟಿದ್ದನು. ಅತಿ ಮೇಧಾವಿ ಮತ್ತು, ಅವರೂ ದಿಗ್ದರ್ಶನಕ್ಕೆ ಕೈ ಹಾಕಿದ್ದು ಇದೇ ಮೊಟ್ಟಮೊದಲು. ಅವನ ಬೆನ್ನಿಗೇ ನಿಂತು ಇಡೀ ಪಿಕ್ಚರನ್ನು ಗುರುದತ್ತನೇ ದಿಗ್ದರ್ಶಿಸಿ ಅಬ್ರಾರನ ಹೆಸರು ಹಾಕಿದ್ದು ಎಲ್ಲರಿಗೂ ತಿಳಿದ ವಿಷಯವೇ.

ಇತ್ತ ಮನೆಯ ಪರಿಸ್ಥಿತಿ ಅತಿಶಯ ದುಃಖಕ್ಕೆ ಕಾರಣವಾಗಿತ್ತು. ೧೯೬೧ರಲ್ಲಿ ಗುರುದತ್ತನ ತಂದೆ ತೀರಿಕೊಂಡ ನಂತರ ಮನೆಯಲ್ಲಿ ಕೇಳುವವರೇ ಇಲ್ಲದಂತಾಯಿತು. ಗೀತಾ ಅಂತೂ ಹಗಲು-ರಾತ್ರಿ ಸಿಟಿಯಲ್ಲೇ ಇರುತ್ತಿದ್ದಳು. ಮನೆಯ ಆಳುಗಳು ಗುರುದತ್ತನ ಎದುರಿಗೆ ವಿಧೇಯರಾಗಿದ್ದರೂ ಆತನ ಹಿಂದೆ ಮನೆಯ ಯಜಮಾನಿಯ ಕೈಯೊಳಗಿನ ಸೂತ್ರದ ಗೊಂಬೆಗಳಂತೆ ವರ್ತಿಸುತ್ತಿದ್ದರು. ಅವಳು ಅವರಿಗೆಲ್ಲಾ ಬೇಕಾದ ಹಾಗೆ ಹಣ ಸುರಿದು ಸುರಿದು ತನ್ನ ಕಡೆ ಮಾಡಿಕೊಂಡಿದ್ದಳು.

ಚಿತ್ರಪಟ ವ್ಯವಸಾಯದವರ 'ಪಾರ್ಟಿ'ಗಳಿಗಷ್ಟೇ ಅಗತ್ಯವಿದ್ದರೆ ಮಾತ್ರ ಅವನು ಹೋಗುತ್ತಿದ್ದನು. ಕ್ಲಬ್ಬು, ರೇಸು ಮುಂತಾದ್ದಕ್ಕೆ ಹೋಗುತ್ತಿರಲೇ ಇಲ್ಲ. ರೇಸಿನ ಕುತೂಹಲಕ್ಕಾಗಿ ಒಂದೆರಡು ಸಲ ಹೋಗಿ ಆದಿರಬಹುದು, ಜಾತಿಭೇದ, ಧರ್ಮಭೇದವನ್ನೆಂದೂ ಅವನು ಮಾಡುತ್ತಿರಲಿಲ್ಲ. ಪರಂಪರೆಯಾಗಿ ಬಂದ ನಮ್ಮ ಅಂಧಶ್ರದ್ಧೆಗಳನ್ನೂ ಆತನು ಗಮನಿಸುತ್ತಿರಲಿಲ್ಲ. ಭಗವದ್ಗೀತೆ, ಕುರಾನ್, ಬೈಬಲ್ ಎಲ್ಲವನ್ನೂ ಓದುತ್ತಿದ್ದ. ಆದರೆ ಗುಡಿ-ಗುಂಡಾರಗಳಿಗೆ ಮಠ-ಮಸೀದೆಗಳಿಗೆ ಹೋಗುತ್ತಿರ-ಲಿಲ್ಲ. ಗೀತೆಯಲ್ಲಿಯ ಅನಾಸಕ್ತ ಯೋಗಿಯಂತೆ ಕರ್ಮದ ಫಲಗಳನ್ನು ಬಯಸದೆ ತನ್ನ ಜೀವನವನ್ನು ಸಾಗಿಸಿದ್ದನು. ಜೀವನದ ಒಂದು ನಿಮಿಷ ಕೂಡ ಹಾಳು ಮಾಡದೆ ಕರ್ಮರತನಾಗಿರುತ್ತಿದ್ದ. ಮನೆ-ಸ್ಟೂಡಿಯೋ. ಸ್ಟೂಡಿಯೋ-ಮನೆ, ಅಲ್ಲದೆ ಅವನು ಬೇರೆ ಎಲ್ಲಿಗೂ ಹೋಗುತ್ತಿರಲಿಲ್ಲ. ಸಮಯ ಸಿಕ್ಕಾಗ ಮಾತ್ರ ಮಕ್ಕಳೊಡನೆ ಆಡುವದು, ಅಡಿಗೆ ಮಾಡುವದು, ಇತರರಿಗೆ ಉಣಿಸುವದು, ಓದುವದು ಇವೇ ಅವನ ಹೊತ್ತು ಕಳೆಯುವ ಸಾಧನಗಳಾಗಿದ್ದವು. ಅವನ ಲೈಬ್ರರಿ ಇಂಗ್ಲಿಷ್, ಬಂಗಾಳಿ, ಹಿಂದೀ, ಮರಾಠಿ, ಸಂಸ್ಕೃತ, ಉರ್ದು ಪುಸ್ತಕಗಳಿಂದ ಸಮೃದ್ಧವಾಗಿತ್ತು. ಕೊನೆ ಉಸಿರೆಳೆ-

ವಾಗ ಸಹ ಮಂಚದ ಮೇಲೆ ಅವನ ಹತ್ತಿರ ಅರ್ಧ ಓದಿ ಇಟ್ಟ ಪುಸ್ತಕ ಬಾಯಿ ತೆರೆದು ಮಲಗಿತ್ತು.

ಸಣ್ಣಂದಿನಿಂದ ಎಲ್ಲ ಕೆಲಸದಲ್ಲೂ ಪ್ರಯೋಗ ಪ್ರಿಯತೆ ಅವನಲ್ಲಿ ಕಂಡುಬರುತ್ತಿತ್ತು. ಹೇಗೆ ಇಂಗ್ಲಿಷ್ ಚಿತ್ರಪಟಗಳಲ್ಲಿ ಎರಡು-ಮೂರು ಸಣ್ಣ ಕತೆಗಳಿಂದ ಫಿಲ್ಮ್ ಮಾಡುತ್ತಾರೆಯೋ ಹಾಗೆಯೇ ತಾನೂ ಮಾಡಬೇಕೆಂಬ ಇಚ್ಛೆ ಅವನಿಗೆ ಪ್ರಬಲವಾಗಿತ್ತು. ಆದರೆ ಆ ಇಚ್ಛೆ ಮಾತ್ರ ಕೈಗೂಡಲಿಲ್ಲ.

೧೯೬೧ ಅಕ್ಟೋಬರಿನಲ್ಲಿ ತರುಣನನ್ನು ತಾಯಿ ಓಸುಕಿಕೊಂಡು ಹೋದ ಮಾರುದಿನ ಬೆಳಗಾತ ಚಹ ಕುಡಿಯುವಾಗ "ಅಮ್ಮಾ, ಸ್ಟೂಡಿಯೋದಲ್ಲಿ ಒಳ್ಳೇ ಮದ್ರಾಸಿನ ಫಿಲ್ಮು ತೋರಿಸುವದಿದೆ. ನೀನೂ ಮಾಮಿಯವರೂ ಹೋಗುವಿರೇನು?" ಎಂದು ಕೇಳಿದನು. "ನೋಡೋಣ" ಎಂದು ನಾವಿಬ್ಬರೂ ಹೇಳಿದೆವು. ನಂತರ ಅವನು ಮಲಗಿದನು. ಅಂದು ಶನಿವಾರವಿತ್ತು. ಆಫೀಸಿನ ಅಕೌಂಟೆಂಟನು ಗುರುದತ್ತನ ಸಹಿ ತೆಗೆದುಕೊಳ್ಳಲು ಬಂದಿದ್ದನು. ಆಗ ಒಂದು ಗಂಟೆಯಾಗಲಿಕ್ಕೆ ಬಂದಿತ್ತು. ಇನ್ನು ಬ್ಯಾಂಕು ಬಂದಾಗುವದು ಎಂದು ಹೇಳಿ ಆತನು ಹೊರಟು ಹೋದನು. ವಿಜಯನೂ ಆಗ ಅಲ್ಲಿಯೇ ಇದ್ದನು. ಗುರುದತ್ತ ಎದ್ದು ಏನನ್ನೋ ಬರೆಯ ಹತ್ತಿದನು. ವಿಜಯ ಅತ್ತ ಕಣ್ಣು ಹೊರಳಿಸಿದ. ಕೂಡಲೆ ವಿಜಯನಿಗೆ "ಈ ರೂಮಿನಲ್ಲಿ ನಿನಗೇನು ಕೆಲಸ? ಹೊರಗೆ ಹೋಗು" ಎಂದನಂತೆ. ಆತ ತನ್ನ ಸ್ನೇಹಿತರ ಮನೆಗೆ ಹೊರಟು ಹೋದ. ಸುಮಾರು ಎರಡು ಗಂಟೆಯ ಹೊತ್ತಿಗೆ ಗುರುದತ್ತನ ರೂಮಿನಿಂದ "ಘೊರ್‌ಘೊರ್" ಎಂದು ಶಬ್ದ ಬರಲಾರಂಭಿಸಿತು. ನಿಶ್ಶಬ್ದವಾದ ಮನೆಯಲ್ಲಿ ಆ ಶಬ್ದ ಕೇಳಿ ಮನಸ್ಸು ಏಕೋ ಕಳವಳಿಸಿತು. ಆತನ ರೂಮಿಗೆ ಹೋಗಿ ನೋಡಿದಾಕ್ಷಣ ಅವನ ಆ ತೆರೆದ ಬಾಯಿಂದ ಹೊರಡುವ ಶಬ್ದ, ರೆಪ್ಪೆಗಳು ತೆರೆದು, ಕಣ್ಣು ಮೇಲಕ್ಕೇರಿದ ನೋಟಕ್ಕೆ ನಾನು ಹೆದರಿ ಮನೆಯ ಆಳುಗಳನ್ನು ಕರೆದೆ. "ಏನೋ ತಿಂದಿರಬೇಕು, ಬಾಯೀ" ಎಂದನು ಡ್ರೈವ್ಹರ್. ಕೂಡಲೇ ಆಫೀಸಿಗೆ ಫೋನ್ ಮಾಡಿದೆ. ಅಷ್ಟರಲ್ಲಿ ವಿಜಯನೂ ತಿರುಗಿ ಮನೆಗೆ ಬಂದನು. ಆತನ ಚುರುಕು ಬುದ್ಧಿಗೆ ಏನು ಹೊಳೆಯಿತೋ ಏನೋ, ತಲೆದಿಂಬಿನ ಕೆಳಗೆ ಕೈಹಾಕಿ ನೋಡಿದ. ತನ್ನ ತಮ್ಮ ಆತ್ಮಾರಾಮನಿಗೆ ಬರೆದ ಪತ್ರ! "ಆತ್ಮಾ, ನಾನು ಜೀವಕ್ಕೆ ಬೇಸತ್ತಿರುವೆನು. ನನ್ನ ಜೀವಕ್ಕೆ ನಾನೇ ಹೊಣೆ, ಮಕ್ಕಳನ್ನು ನೀನೇ ಪಾಲಿಸಬೇಕು, ಎಲ್ಲಾ ಭಾರ ನಿನ್ನ ಮೇಲೆ" ಎಂದು ಬರೆದು ಸಹಿ, ಮಾಡಿದ್ದನು. ಆಫೀಸಿನಿಂದ ಎಲ್ಲರೂ ಬಂದರು. ಯಾವ ನರ್ಸಿಂಗ್ ಹೋಮಿನಲ್ಲೂ ಇಂತಹ ಕೇಸು ತೆಗೆದುಕೊಳ್ಳುವದಿಲ್ಲ. ಕಡೆಗೆ ನಾನಾವತಿ ಆಸ್ಪತ್ರೆಯಲ್ಲಿ ಸ್ಪೆಶಲ್ ರೂಮಿನಲ್ಲಿ ಗುರುದತ್ತನನ್ನು ತೆಗೆದುಕೊಂಡು ಹೋಗಿ ಹಾಕಿದರು. ಮೂರು ದಿನಗಳ ತನಕ ಆತನು ಬದುಕುವಂತಿರಲಿಲ್ಲ. ನನ್ನ ಅಳಿಯನೂ ನನ್ನ ಅಣ್ಣನ ಮಗನೂ ಗುರುದತ್ತನ ಹತ್ತಿರ ಊಟ, ನಿದ್ದೆ ಬಿಟ್ಟು ಕಾವಲಾಗಿ ಕೂತರು. ಆದೇನೇನೋ ಚಿತ್ರಹಿಂಸೆ ನಡೆಸಿ, ಕಡೆಗೆ ಗುರುದತ್ತನಿಗೆ ತಪ್ಪಿ ಹೋದ ಜ್ಞಾನ ತಿರುಗಿ ಬಂತು. ಆದರೆ ಕೆಲವು ದಿನಗಳ ತನಕ ಆತನ ಸ್ಥಿತಿಯು ಶೋಚನೀಯವಾಗಿತ್ತು. ಹದಿನೈದು ದಿನ ಆಸ್ಪತ್ರೆಯಲ್ಲಿದ್ದು ಮನೆಗೆ ಬಂದ ನಂತರ ಹಗಲು-ರಾತ್ರಿ ಅವನನ್ನು ನೋಡಿಕೊಳ್ಳಲು ನರ್ಸ್ ಇಟ್ಟದ್ದೆ. ಮನೋವಿಜ್ಞಾನದ ಡಾಕ್ಟರನ್ನು ಕರೆದೆವು. ಎಲ್ಲಿ ಮನೋವಿಕಾರವಾಗುವದೋ ಎಂದು ದಿಗಿಲು ಕಾಡುತ್ತಿತ್ತು. ಗೀತಾ ತವರು ಮನೆಯಿಂದ ದಿನಕ್ಕೆ ಎರಡು ಸಲ ಬಂದು ತಿರಾಯಿತಂತೆ ಕೂತುಕೊಂಡು ಹೋಗುತ್ತಿದ್ದಳು. ಅಂತೂ ಸಂಪೂರ್ಣ ಗುಣಹೊಂದಲು ಒಂದೂವರೆ ತಿಂಗಳು ತಾಗಿತು. ಡಾಕ್ಟರರು ಹವಾ ಬದಲಾಯಿಸಲು ಹೇಳಿದರು. ಗೀತಾ ಈ ಮನೆಗೇ ಬಂದಿದ್ದಳು. ಗಂಡ, ಹೆಂಡತಿ, ಮಕ್ಕಳು ಕೂಡಿ ಕಾಶ್ಮೀರಕ್ಕೆ ಹೋದರು. ಅಲ್ಲಿಯ ಹವೆಯಿಂದ ಗುರುದತ್ತನು ಗುಣಹೊಂದಿದನು.

೪

ಈಗೀಗ ಗಂಡ-ಹೆಂಡಿರಲ್ಲಿ ಮಾತುಕತೆ ನಿಂತುಹೋಗಿತ್ತು. ಗುರುದತ್ತ ಪೆಡ್ಡಾರ್ ರೋಡಿನಲ್ಲಿ, ಒಂದು ಮನೆ ಕೊಂಡುಕೊಂಡು ಅಲ್ಲಿರುವನೆಂಬ ಸಮಾಚಾರ ನನಗೆ ತಿಳಿದುಬಂತು.

ಆತನನ್ನೆ ಇದೆಲ್ಲದರ ಬಗ್ಗೆ ಕೇಳೋಣವೆಂದರೆ ನನಗೆ ಧೈರ್ಯ ಸಾಲದು. ಮರೆಮಾಚದೆ, ನನ್ನಲ್ಲಿ ಮಾತನಾಡುವ ಸಲಿಗೆಯೂ ಗುರುದತ್ತನಲ್ಲೀಗ ಹೊರಟುಹೋಗಿತ್ತು. ನಾವಿಬ್ಬರೂ ತಾಯಿ ಮಕ್ಕಳು ಎಂಬುದೂ ಇತ್ತೀಚೆಗೆ ಮರೆಯಾಗುತ್ತ ಬಂದಿತ್ತು. ನನಗೇನಾದರೂ ಆತನಿಗೆ ತಿಳಿಸಬೇಕೆನಿಸಿದರೆ ನಾನು ಆತನ ಆಫೀಸಿನ ವಿಳಾಸಕ್ಕೆ ಪತ್ರದ ಮುಖಾಂತರ ತಿಳಿಸಬೇಕು; ಆತನೇನಾದರೂ ನನಗೆ ತಿಳಿಸಬೇಕಾಗಿದ್ದರೆ ನನ್ನ ಮನೆಯ ವಿಳಾಸಕ್ಕೆ ಪತ್ರ ಬರೆದು ತಿಳಿಸಬೇಕು. ಹೀಗಿದ್ದರೂ, ನನ್ನ ಅವಶ್ಯಕತೆಗಳನ್ನು ಪೂರೈಸಲು ಆತನು ಎಂದೂ ಮರೆಯುತ್ತಿರಲಿಲ್ಲ. ಆತನ ಆ ಮೊದಲಿನ ಸಲಿಗೆ, 'ಅಮ್ಮಾ' ಎಂದು ಪ್ರೇಮದಿಂದ ಕರೆಯುವ ಧ್ವನಿ ನನಗೀಗ ಕೇಳಿಸುತ್ತಿರಲಿಲ್ಲ. ಆತನ ಹಾಲ್ ಹವಾಲನ್ನು ನಾನು ಇತರರಿಂದಲೇ ತಿಳಿದುಕೊಳ್ಳಬೇಕಾಗುತ್ತಿತ್ತು. ಇದೇ ನನ್ನ ಮನಸ್ಸಿಗೆ ವಿಪರೀತ ದುಃಖ ಕೊಟ್ಟದ್ದು. ಆತನ ಜೀವನವೇ ತುಂಬ ತೊಡಕುಳ್ಳದ್ದಾಗಿತ್ತು. ಸದಾ ಆತನ ವಿಷಯಕ್ಕೆ ಭಯ, ಚಿಂತೆ. ಯಾವ ಘೊತ್ತಿಗೆ ಏನಾಗುವದೋ ಎಂಬ ಕಳವಳ. ಇವೆಲ್ಲಾ ಬಿಟ್ಟೂ ಬಿಡದೆ ನನ್ನನ್ನು ಕಾಡುತ್ತಿದ್ದವು; ನನ್ನನ್ನು ಬೇಟೆಯಾಡಿದಂತೆ ಮಾಡುತ್ತಿದ್ದವು. ಸಮಯ ಸಿಕ್ಕಾಗ ನಾನು ಆತನ ಹತ್ತಿರ ಹೋಗುತ್ತಿದ್ದರೂ ವಾಸ ಮಾಡುತ್ತಿದ್ದುದು ಮಾತುಂಗಾದ ಮನೆಯಲ್ಲೆ.

ಪೆಡ್ಡಾರ್ ರೋಡಿಗೆ ಹೋದ ನಂತರ ಗೀತಾ ಸಹ ಬೇರೆ ಮನೆಗೆ ಹೊರಟು ಹೋದಳು. ಹಿಂದಿನ ಜವಾನರನ್ನೂ ಡ್ರ್ಯಾವರನ್ನೂ ಕೆಲಸದಿಂದ ತೆಗೆದು ಬೇರೆಯೇ ಆಳುಗಳನ್ನಿಟ್ಟುಕೊಂಡಿದ್ದನು. ನನ್ನನ್ನೊಮ್ಮೆ ಹೇಳಿ ಕಳುಹಿಸಿದನು. ನನಗಾದರೋ ಎದೆಯಲ್ಲಿ ಡವಡವ ಪ್ರಾರಂಭವಾಯಿತು. ಹೋದೆ. "ಮಾತುಂಗಾದಿಂದ ಬೆಣ್ಣೆ, ಕಾಸಿದ ತುಪ್ಪ, ಒಂದೆರಡು ಉಪ್ಪಿನ ಕಾಯಿ ಮಾಡಿ ಕಳುಹಿಸು" ಎಂದು ಹೇಳಿದನು. "ನನ್ನ ಈ ನೂತನ ಅದಿಗೆಯುವನಿಗೆ ನಮ್ಮ ತರಹದ ಅಡಿಗೆ ಹೇಳಿಕೊಡು; ಮತ್ತು ಅವನಿಗೆ ಹಿಂದೀಯಲ್ಲಿ ಬರೆದುಕೊಡು" ಎಂದನು. ರತನ ಎಂಬವನನ್ನು ತನ್ನ ಸ್ವಂತದ ಕೆಲಸ ಮಾಡಲಿಕ್ಕೆಂದು ಇಟ್ಟುಕೊಂಡಿದ್ದನು. ಆ ಮನೆಯಾದರೂ ಸಾಕಷ್ಟು ಮಟ್ಟಸಾಗಿ ಚೆನ್ನಾಗಿತ್ತು. ನನಗೆ ಅಲ್ಲೇ ಅವನ ಕೂಡ ಇರಬೇಕೆನಿಸಿತು. ಆದರೆ ಮದ್ರಾಸಿನ ಆತನ ಪಿಕ್ಚರುಗಳಿಗಾಗಿ ಅವನು ಹೋಗುತ್ತಿದ್ದುದರಿಂದ ನಾನೊಬ್ಬಳೇ ಅಲ್ಲಿ ಇರಲು ಆತನೇ ಒಪ್ಪುತ್ತಿರಲಿಲ್ಲ. ಅವನ ಮಕ್ಕಳು ತಾಯಿಯ ಹತ್ತಿರವೇ ಇದ್ದುವು. ಒಮ್ಮೊಮ್ಮೆ ತಂದೆಯ ಹತ್ತಿರ ಬರುತ್ತಿದ್ದುವು. ನೀನಾಳನ್ನು ಮಾತ್ರ ಆಕೆ ಹೆಚ್ಚಾಗಿ ಕಳಿಸುತ್ತಿರಲಿಲ್ಲ. ಗುರುದತ್ತನಿಗೋ ಆ ಹುಡುಗಿಯ ಮೇಲೇ ಬಹಳ ಜೀವ. ಆಕೆಯ ಮನೆ ಖರ್ಚಿಗೆ ಹಣ, ಮಕ್ಕಳಿಗೆ ಬೇಕಾದ್ದನೆಲ್ಲ ಗುರುದತ್ತನೇ ಒದಗಿಸುತ್ತಿದ್ದನು. ತನ್ನವರು ಯಾರೂ ಇಲ್ಲದ ಆ ಮನೆಯಲ್ಲಿ ಏಕಾಕಿಯಾಗಿ ವಾಸಿಸುವಾಗ ಆತನ ಮನಸ್ಸು ಎಂಥ ಯಾತನೆ ಪಡುತ್ತಿತ್ತೋ ಯಾರಿಗೆ ಗೊತ್ತು? ಆ ಮನೆಗೆ ಹೋದ ನಂತರ ಅವನು ಹೆಂಡ ಕುಡಿಯುವದು ಹೆಚ್ಚಾಗಿತ್ತೆಂದು ಕೇಳಿಬರುತ್ತಿತ್ತು. ನಾನು ಹೆಣ್ಣುಮಗಳು, ಅಸಹಾಯಳು; ಏನೂ ಮಾಡಲಾರದವಳಾಗಿದ್ದೆ. ಆದರೆ ಎಲ್ಲರೂ ಅವನಿಂದ ಆಗುವ ಸಹಾಯ ಪ್ರಯೋಜನಗಳನ್ನು ಬೇಕಾದಷ್ಟು ಪಡೆದುಕೊಂಡು, ಬರಡು–ದನದಂತೆ ಈಗ ಕೈ ಬಿಟ್ಟಿದ್ದರು. ಯಾರೂ ಅವನ ಮಾನಸಿಕ ವ್ಯಥೆ, ಒಳಗೇ ಅವನನ್ನು ಸುಡುತ್ತಿದ್ದ ಚಿಂತೆ, ಕೆಸರಿನಲ್ಲಿಯ ಕಂಬದಂತೆ ಹೊಯ್ದಾಡುತ್ತಿರುವ ಅವನ ಸಂಸಾರಕ್ಕೆ ಸಮಾಧಾನ ಕೊಟ್ಟು ಕೈ ಹಿಡಿದವರಿರಲಿಲ್ಲ. ಅವನನ್ನು ತಿಳಿದುಕೊಳ್ಳುವ ಪ್ರಯತ್ನವನ್ನೂ ಮಾಡಲಿಲ್ಲ. ಮಕ್ಕಳು ಹತ್ತಿರ ಬಂದಾಗ ಅವರೊಡನೆ ಆದೆಷ್ಟು ಹಚ್ಚಿಕೊಂಡು ಮಾತಾಡುತ್ತಿದ್ದನಂತೆ!

೧೯೬೪ಳ ಜುಲೈ ತಿಂಗಳಲ್ಲಿ ಗುರುದತ್ತನ ಮಕ್ಕಳ ಹುಟ್ಟಿದ ಹಬ್ಬಕ್ಕೆ ನನಗೆ ಯಾವುದೋ ಕಾರಣದಿಂದ ಹೋಗಲಾಗಲಿಲ್ಲ. ಬಂದ ತನ್ನ ಎಲ್ಲ ತಮ್ಮಂದಿರನ್ನೂ ತಂಗಿಯನ್ನೂ ಕೇಳಿದನಂತೆ. ಮರುದಿನ ೧೦ನೇ ತಾರೀಖಿಗೆ ಪಾಲಿ ಹಿಲ್ಲಿನ ಭೂಮಿ ಪೂಜೆ ಇತ್ತು. ಮನೆ ಕೆಡವಿ ತಿರುಗಿ

ಮನೆ ಕಟ್ಟಿಸುವ ಯೋಜನೆ ಅದು. ಅದಕ್ಕೆ ಹೋಗಬೇಕೆಂದು ನಾನು ಬಯಸ್ಸನೇ ತಾರೀಕಿನೆ ಹೋಗಲಿಲ್ಲ. ಗುರುದತ್ತನಿಗೆ ಸಿಟ್ಟು ಬಂದಿರಬಹುದು. ಪ್ರತಿ ವರ್ಷ ನಾನು ಅವನ ಹುಟ್ಟಿದ ದಿನ ಅವನಿಗೆ ಇಷ್ಟವಾದ ಪದಾರ್ಥಗಳನ್ನು ಮಾಡಿಕೊಂಡು ಹೋಗುತ್ತಿದ್ದೆ. ಇದೇ ಸಲ ಹೋಗಿರಲಿಲ್ಲ.

ಭೂಮಿಪೂಜೆಗೆ ಎಲ್ಲರೂ ಸೇರಿದ್ದರು. ಗೀತಾ ಮಕ್ಕಳೊಡನೆ ಬಂದಿದ್ದಳು. ಅವರೆ ಪೂಜೆಗೆ ಗುರುದತ್ತನ ಜೊತೆಗೆ ಕುಳಿತುಕೊಳ್ಳಲು ಒಪ್ಪಲಿಲ್ಲ. ಗುರುದತ್ತನಿಗೆ ಬಹಳ ದುಃಖವಾಯಿತು. ಆಗ "ಅಮ್ಮಾ, ನೀನಾದರೂ ನನ್ನ ಬಳಿಯಲ್ಲಿ ಕೂತುಕೊಳ್ಳುವೆಯಾ?" ಎಂದು ಅಂಗಲಾಚಿದನು. ನನಗೇನು. ಯಾವ ಸಂಕೋಚವೂ ಇಲ್ಲದೆ ಅವನ ಹತ್ತಿರ ಕುಳಿತು, ನಾನೂ, ಆತನೂ, ನೀನಾ ಕೂಡಿ ಪೂಜೆ ಮಾಡಿದೆವು. ಮನೆಯನ್ನು ಕಟ್ಟಿಸುವ ಕಾಂಟ್ರ್ಯಾಕ್ಟನ್ನು ಆಗಿನ ಮೇಯರ್ ಆಗಿದ್ದ ಶ್ರೀ ಫಾಣೀಕರರು ವಹಿಸಿಕೊಂಡಿದ್ದರು. ಪೂಜೆ ಮುಗಿದ ನಂತರ ಅನೇಕ ಫೋಟೋ ತೆಗೆದರು. ಆ ದಿನ ಶೂಟಿಂಗ್ ಇದ್ದುದರಿಂದ ಗುರುದತ್ತ ತನ್ನ ಪ್ರಿಯವಾದ ಕೆಂಪು ಬಣ್ಣದ ಮೋಟಾರಿನಲ್ಲಿ ಹೊರಟಾಗ ನಾನು ಸಮೀಪ ಹೋಗಿ ಆತನ ಬೆನ್ನು ತಟ್ಟಿ, "ಗುರುದತ್ತಾ, ನಿನ್ನೆ ನಿನ್ನ ಹುಟ್ಟಿದ ಹಬ್ಬಕ್ಕೆ ನಾನು ಬರಲಾರದೇ ಹೋದೆ. ತಪ್ಪಾಯಿತು. ಕ್ಷಮಿಸುವಿಯಷ್ಟೇ?" ಎಂದೆನು. ಏನೆನಂತೆ ಗುರುದತ್ತ. ಏನನ್ನೂ ಮಾತಾಡದೆ ತನ್ನ ನಗೆ ನಕ್ಕು ಕಾರನ್ನು ಸ್ಟಾರ್ಟ್ ಮಾಡಿ ಹೊರಟೇ ಹೋದನು. ಎಷ್ಟೋ ಹೊತ್ತು ನಾನು ಆತನು ಹೊರಟುಹೋದ ಕಡೆಗೇ ನೋಡುತ್ತ ನಿಂತೆನು.

ಇದರ ನಂತರ ನಾನು ಗುರುದತ್ತನನ್ನು ನೀನಾಳ ಎರಡನೇ ಹುಟ್ಟಿದ ಹಬ್ಬಕ್ಕೆ ಗೀತಾಳ ಮನೆ

ಯಲ್ಲಿ ಕುಡಿಸ್ತೆ. ಆತನು ಶುಭ್ರವಾದ ಪಾಜಾಮ, ಕುರ್ತಾ ತೊಟ್ಟುಕೊಂಡು, ನಗು ನಗುತ್ತಾ ಮನೆಯೊಳಗೆ ಬಂದಿದ್ದನು. ಈಗಲೂ ಕಣ್ಣ ಮುಂದೆ ಅದೇ ಆಕಾರವೇ ಕಾಣುತ್ತಿದೆ. ನನ್ನನ್ನು ಕಂಡು, "ಅಮ್ಮಾ, ಏಕೆ ಹೀಗೆ ಬತ್ತಿ ಹೋಗಿದ್ದೀಯಾ?" ಎಂದು ಕೇಳಿದನು. ನಾನಾದರೂ ಏನೆಂದು ಉತ್ತರ ಹೇಳಲಿ? ಆದರೂ "ಮೈಯಲ್ಲಿ ಸೌಖ್ಯವಿಲ್ಲ" ಎಂದೆ. "ಯಾರ ಚಿಕಿತ್ಸೆಯಲ್ಲಿ ಇರುವೆ?" ಎಂದು ಮರು ಪ್ರಶ್ನೆ ಹಾಕಿದ. "ನಮ್ಮ ಜಯಗೋಪಾಲನ ಚಿಕಿತ್ಸೆಯಲ್ಲೇ ಇದ್ದೇನೆ," ಎಂದೆ. ಅದಕ್ಕೆ ನಗುತ್ತಾ "ಹುಂ, ಜಯಾಗೆ ಇನ್ನೂ ಬೇಕಾದ ಅನುಭವವಿಲ್ಲ, ಏನಮ್ಮಾ, ನಮ್ಮ ರುಬೆರೊ ಡಾಕ್ಟರ್ ಹತ್ತಿರ ಹೋಗಕೂಡದೇ?" ಎಂದನು.

ಹೆಂಡತಿಯು ತನ್ನನ್ನು ಬಿಟ್ಟು ಬೇರೆ ಇರುತ್ತಿದ್ದರೂ ಗುರುದತ್ತ ಮಕ್ಕಳ ಹುಟ್ಟಿದ ಹಬ್ಬಕ್ಕಾಗಲಿ, ಮಕ್ಕಳನ್ನು ನೋಡುವ ಆಸೆಯಾದರಾಗಲಿ, ಗೀತಾಳ ಮನೆಗೆ ಹೋಗುತ್ತಿದ್ದನು. ನೀನಾಳ ಎರಡನೆಯ ಹುಟ್ಟು ಹಬ್ಬ ಆದೇ ಕೊನೆಯದಾಗುವದಿತ್ತು. ಅಂತೆ ಬಹಳ ಸಂಭ್ರಮದಿಂದ ನಡೆಯಿತು. ನನಗೆ ಗುರುದತ್ತನನ್ನು ಕಣ್ಣು ತುಂಬ ನೋಡಿ ಮಾತನಾಡುವ ಸುಮಯ ಅಂದೇ ಲಭಿಸಿತ್ತು. ಇದಾದ ನಂತರ ನಾವಿಬ್ಬರೂ ತಾಯಿ ಮಕ್ಕಳು ಒಬ್ಬರಿಗೊಬ್ಬರು ಕಣ್ಣಾರೆ ಕಂಡೇ ಇರಲಿಲ್ಲ. ಇದು ಆಗಸ್ಟ ೧೯ನೇ ತಾರೀಖಿನ ಮಾತು.

ಜೀವನದ ಮೇಲೆ ಬೇಸತ್ತೋ ಏನೋ ಒಮ್ಮೆ ತರುಣ ಅರುಣರೊಡನೆ ಜಾನಿ ವಾಕರ್‌ನನ್ನೂ ಕರೆದುಕೊಂಡು ಜಂಗಲಿನಲ್ಲಿ ಬೇಟೆಯಾಡಲು ಗುರುದತ್ತ ಹೋಗಿದ್ದನು. ಆಗ ಹುಲಿಯನ್ನೂ ಬೇಟೆಯಾಡಿದ್ದನೆಂದು ಸತ್ತ ಹುಲಿಯೊಟ್ಟಿಗೆ ಫೋಟೋ ತೆಗೆಸಿಕೊಂಡಿದ್ದನ್ನು ನೋಡಿ ತಿಳಿಯಿತು. ಮಕ್ಕಳನ್ನು ಆಗಾಗ್ಗೆ ಕರೆಸಿಕೊಂಡು ಅವರಿಗೆ ಬೇಕಾದ್ದನ್ನೆಲ್ಲ ಕೊಂಡುಕೊಟ್ಟು ಅವರೊಡನೆ ಬೊಗರಿ, ಗೋಲಿಗುಂಡ ಆಡುವದು, ಪಟ ಹಾರಿಸುವದು, ಅವರನ್ನು ಸಿನೆಮಾ ಪಿಕ್ಚರಿಗೆ ಕರೆದೊಯ್ಯುವದು ಮಾಡಿ ತನ್ನ ಮನಸ್ಸಿಗೆ ಸಮಾಧಾನ ಮಾಡಿಕೊಳ್ಳುತ್ತಿದ್ದನು. ಅನೇಕ ಸಲ ತಾಯಿ ಅವರನ್ನು ತಂದೆಯ ಹತ್ತಿರ ಕಳಿಸುತ್ತಿರಲಿಲ್ಲ. ಗುರುದತ್ತನಿಗೆ ಆಗ ತುಂಬ ದುಃಖವಾಗುತ್ತಿತ್ತು. ವ್ಯಗ್ರವಾದ ತನ್ನ ಮನಸ್ಸನ್ನು ಸಂತೈಸಲು ಇಷ್ಟಪಟ್ಟು ಮದ್ಯ ಕುಡಿಯುವನು, ಒಮ್ಮೊಮ್ಮೆ ನಿದ್ದೆ ಬಾರದೆ ಮನಸ್ಸಿಗೆ ಬಹಳಷ್ಟು ತಾಪವಾದರೆ ನಿದ್ದೆಯ ಗುಳಿಗೆಗಳನ್ನೂ ತೆಗೆದುಕೊಳ್ಳುತ್ತಿದ್ದನಂತೆ. ಒಮ್ಮೊಮ್ಮೆ ತನ್ನ ಮೋಟಾರಿನಲ್ಲಿ ಮಧ್ಯ ರಾತ್ರಿಗೆ ಎಲ್ಲಾದರೂ ಹೋಗಿಯೇ ಬಿಡುವನಂತೆ. ಲೋಣಾವಳಿ ಅವನ ಅತ್ಯಂತ ಪ್ರೀತಿಯ ಸ್ಥಾನವಾಗಿತ್ತು. ಅಲ್ಲಿಗೆ ಹೋದರೂ, ಹೋಗುತ್ತಿದ್ದ. ಇತ್ತ ನಾವು ಎಲ್ಲಿ ಹೋದನೋ, ಜೀವಕ್ಕೇನು ಅಪಾಯ ಮಾಡಿಕೊಳ್ಳುವನೋ ಎಂದು ಒಂದೇ ಸಮನೇ ಕುದಿಯುತ್ತಿದ್ದೆವು.

ಗುರುದತ್ತ ಒಳಮುಚಿಕ ಮನಸ್ಸಿನವನು. ಹೊರಗೊಂದಿಷ್ಟೂ ತನ್ನ ಗುಟ್ಟನ್ನು ಬಿಟ್ಟುಕೊಡುತ್ತಿರಲಿಲ್ಲ. ಸಣ್ಣವನಿದ್ದಾರಭ್ಯ ಇದು ಅವನ ಸ್ವಭಾವ. ಎತ್ತಿ ಆಡಿಸಿದ ತನ್ನೆದುರಿಗೆ ಮಾತ್ರ ಏನೊಂದೂ ಮರೆಮಾಡುತ್ತಿರಲಿಲ್ಲ. ಏನೇ ಮಾಡಬೇಕಾದರೂ ತನ್ನ ಅಭಿಪ್ರಾಯ ಕೇಳುವನು. ನಾವಿಬ್ಬರೂ ತಾಯಿ ಮಕ್ಕಳಿಗಿಂತ ಹೆಚ್ಚಾಗಿದ್ದೆವು. ಇವೆಲ್ಲ ಚಿತ್ರಪಟ ವ್ಯವಸಾಯಕ್ಕೆ ಅವನು ಸೇರುವದಕ್ಕಿಂತ ಮೊದಲು ಇತ್ತು. ಸೇರಿದ ಮೇಲೆ ನಿಧಾನವಾಗಿ ನನ್ನಿಂದ ದೂರವಾಗುತ್ತಲೇ ಹೋದನು. ನನ್ನ ಇತರ ಲೌಕಿಕ ಇಚ್ಛೆಗಳನ್ನು ಆತನು ಪೂರೈಸದೆ ಇರುತ್ತಿರಲಿಲ್ಲ. ತಾನು ಡಾಯರೆಕ್ಟರಾದ ನಂತರ, "ಅಮ್ಮಾ ಇಷ್ಟು ವರ್ಷ ದುಡಿದು ದುಡಿದು ನಾನಾತರದ ಕಷ್ಟಪಟ್ಟಿದ್ದಿ. ದಾರಿದ್ರ್ಯದ ಝಳಕ್ಕೆ ಬೆಂದುಹೋಗಿದ್ದೀ. ಇನ್ನು ಸಾಕು ವಿಶ್ರಾಂತಿ ತೆಗೆದುಕೋ ಎಂದು ಹೇಳಿ ನನಗೆ ಶಾಲೆಯಲ್ಲಿ ಕೆಲಸ ಮಾಡಲು ಬಿಡಲಿಲ್ಲ. ಆತನ ಆಂತರಿಕ ದುಃಖ ಮನಸ್ಸಿನ ಕಳವಳ ಕಣ್ಣಮುಂದೆ ಕಂಡರೂ ಕುರುಡಿಯಂತೆ ನಾನು ಕಣ್ಣು ಮುಚ್ಚಿಕೊಂಡು ಇರಬೇಕಾಯಿತಲ್ಲಾ ಎಂದು ಮರುಗಿದೆ. ನನಗೂ ನನ್ನ ಪರಿವಾರಕ್ಕೂ ಬೆಂಬಲವಾಗಿದ್ದ ಗುರುದತ್ತ ನನೊಡನೆ ಕಡೆಕಡೆಗೆ ಮುಖಕ್ಕೆ ಮುಖ ಕೊಟ್ಟು ಮಾತಾಡುವ ಧೈರ್ಯವೂ ನನ್ನಲ್ಲಿ ಕುಗ್ಗಿ

ಹೋಗಿತ್ತು. ಇಷ್ಟಾಗಿ ಆತನ ಸಾಂಸಾರಿಕ ವಿಷಯದಲ್ಲಿ ನಾನಾದರೂ ಕೈಹಾಕಲು ಹೇಗೆ ಸಾಧ್ಯವಿತ್ತು? ಗಂಡ ಹೆಂಡಿರ ನಡುವೆ ಜಗಳವಿಲ್ಲದಾಗ, ಅವರ ನಡುವಿನ ಅನ್ಯೋನ್ಯತೆಯನ್ನು ನೋಡಿದರೆ ಬೆರಗು ಪಡುವಂತಿತ್ತು.

ಅಕ್ಟೋಬರ್ ಹತ್ತಕ್ಕೆ ಲಲಿತೆಯ ಮನೆಯಲ್ಲಿ ಅಬ್ದುಲ್ ಅಲಿ ಜಾಫರರ ಸಿತಾರವಾದನದ ಕಾರ್ಯಕ್ರಮ ಇತ್ತು. ಅನೇಕರಿಗೆ ಆಮಂತ್ರಣವಿತ್ತು. ಬಳಗದವರಿಗೆಲ್ಲ ಊಟವಿತ್ತು. ಅಂದು ಆಕೆಯ ಮಗನ ಎರಡನೆ ಹುಟ್ಟಿದ ಹಬ್ಬ. ಗುರುದತ್ತನು ಊಟಕ್ಕೆ ಬರಲಾರೆ; ಇನ್ನೆಂದಾದರೂ ಒಬ್ಬನೇ ಬಂದು ಊಟಮಾಡುವೆನೆಂದು ಹೇಳಿಕಳಿಸಿದ್ದನಂತೆ. ಜನಸಮೂಹ ಗದ್ದಲ ಎಂದರೆ ಅವನಿಗಿತ್ತೀಚೆಗೆ ಸಹನವಾಗುತ್ತಿರಲಿಲ್ಲ. ಮಾತುಂಗಕ್ಕೆ ನನ್ನ ಅಳಿಯ ಬಂದು "ನಿಮ್ಮನ್ನು ಕರಕೊಂಡು ಬಾ ಎಂದು ಲಲಿತೆ ಹೇಳಿಕಳಿಸಿದ್ದಾಳೆ. ತಯಾರಾಗಿರಿ" ಎಂದು ಸುದ್ದಿ ಮುಟ್ಟಿಸಿ ಎಲ್ಲಿಗೋ ಹೋದರು.

ನನ್ನ ಸೊಸೆ ಮತ್ತು ಅವಳ ಮಗಳನ್ನು ಕರಕೊಂಡು ಹೋಗಬೇಕೆಂಬ ಇರಾದೆಯಿಂದ ಅವರಲ್ಲಿಗೆ ಹೋಗಿದ್ದೆವು. ಅವರ ಮನೆಯಲ್ಲಿ ಕಾಲಿಡುವಷ್ಟರಲ್ಲಿ ನಮ್ಮ ಆಫೀಸಿನ ಮ್ಯಾನೇಜರರ ಫೋನ್ ಬಂದಿತ್ತು, "ಗುರುದತ್ತನಿಗೆ ಅತಿಶಯ ಕಾಯಿಲೆ ಬೇಗ ಬನ್ನಿರಿ" ಎಂದು.

ಇದನ್ನು ಕೇಳಿದೊಡನೆ ನನ್ನ ಹೊಟ್ಟೆಯಲ್ಲಿ ಒಮ್ಮೆಲೆ ರಾಶಿ ರಾಶಿ ಬೆಂಕಿ ಸುರುವಿದಂತಾಯಿತು. ಎಷ್ಟಾದರೂ ಕರುಳಿನ ನೋವು ತಾನೇ? ಆತ್ಮಾರಾಮನು ಕೂಡಲೆ ಪೆಡ್ಡರ ರೋಡಿಗೆ ಹೊರಟನು. "ನಾನೂ ಬರುವೆನು ಆತ್ಮಾ" ಎಂದಾಗ "ನಾನು ಹೋಗಿ ಗುರುದತ್ತ ಹೇಗಿರುವನೆಂದು ತಿಳಿದ ನಂತರ ನೀನು ಬಾರಮ್ಮಾ. ಈಗಲೇ ಬೇಡ" ಎಂದನು. ಹೊರಗೆ ಹೋಗುವಾಗ ಎಂದೂ ಮರೆಯದವನು ಕಾರಿನ ಬೀಗದ ಕೈ ಮರೆತೆನೆಂದು ವಾಪಸು ಬಂದನು. ಇದು ಏಕೋ ಒಳ್ಳೆಯ ಲಕ್ಷಣವಲ್ಲ ಎಂದು ನನಗನಿಸಿತು. ಅವನು ಹೋದ ನಂತರ ಆ ಕಡೆಯಿಂದ ಏನೂ ಸುದ್ದಿ ಬರಲಿಲ್ಲ. ನನ್ನ ಸ್ಥಿತಿ ಕಾದ ಹಂಚಿನ ಮೇಲೆ ನಿಂತಂತಾಯಿತು. ಒಂದೇ ಸಮನೇ ಪೇಚಾಡಹತ್ತಿದೆನು. ಅಂದು ಕ್ರಿಕೆಟ್ ಮ್ಯಾಚು ನಡೆಯುತ್ತಿತ್ತು. ಟ್ಯಾಕ್ಸಿಗಳ ಅಭಾವ. ಎಷ್ಟೋ ಹೊತ್ತಿನ ನಂತರ ಒಂದು ಟಾಕ್ಸಿ ಸಿಕ್ಕಿತು. ಮಾತುಂಗಕ್ಕೆ ಹೋಗಿ ಕೆಲಸಗಿತ್ತಿ ಗಂಗೂಗೆ "ಗುರುದತ್ತನಿಗೆ ತುಂಬ ಕಾಯಿಲೆ, ನಾನೀಗ ಅಲ್ಲಿಗೆ ಹೋಗುತ್ತಿರುವೆ. ವಿಜಯ ಬಂದರೆ ಅಲ್ಲಿಗೇ ಕಳಿಸು" ಎಂದು ಹೇಳಿ ಹೊರಟೆನು. ಟ್ಯಾಕ್ಸಿಯಿಂದಿಳಿದಾಕ್ಷಣ ಅಲ್ಲಿಯ ಕೆಲಸದವರ ಸಪ್ಪನ್ನ ಮೋರೆ ನೋಡಿ ಕೈಕಾಲೇ ಹೋದವು. ಹೇಗೆ ಮಹಡಿ ಹತ್ತಿ ಹೋದೆನೋ ಏನೋ! ಬಾಗಿಲು ಅರ್ಧ ತೆರೆದಿತ್ತು. ನಾನು ಒಳಗೆ ಹೋದೊಡನೆ ಆತ್ಮಾರಾಮ ಬಂದು ನನ್ನ ಕೈ ಹಿಡಿದು "ಅಮ್ಮಾ, ಎಲ್ಲಾ ಮುಗಿಯಿತಮ್ಮಾ" ಎಂದಿಷ್ಟೆ ಹೇಳಿ ಬಿಕ್ಕಳಿಸಹತ್ತಿದನು. ಹೇಗೋ ತಡೆದುಕೊಂಡು ನಾನು ಗುರುದತ್ತನ ರೂಮಿಗೆ ಹೋದೆನು. ಆತ ಮಲಗಿದ್ದನ್ನು ನೋಡಿದರೆ ಆತನ ಶಾಂತ ಮುಖ, ಇನ್ನೂ ಮುಖದ ಮೇಲಿದ್ದ ಆ ತೇಜಸ್ಸು ಕಂಡು, ಆತನ ಜೀವ ಹೋಗಿದೆಯೆಂದೇ ಭಾಸವಾಗುತ್ತಿರಲಿಲ್ಲ. ಒಮ್ಮೆ ಆತನ ಮುಖ ಕೈಕಾಲು ಮುಟ್ಟಿ ನೋಡಿದೆ. ಹಿಮದ ಗಡ್ಡೆಯಂತೆ ತಣ್ಣಗಿದ್ದವು. ನನ್ನ ಸೋದರಳಿಯ ಜಯಗೋಪಾಲನು ಅಲ್ಲಿಯೇ ಹತ್ತಿರ ನಿಂತಿದ್ದನು. ಆತನನ್ನು ಗಲಗಲನೆ ಅಲ್ಲಾಡಿಸಿ "ಜಯಾ ನನ್ನ ಗುರುದತ್ತನನ್ನು ಎಲ್ಲಿ ಕಳಿಸಿದೆಯಪ್ಪಾ? ಕಳೆದ ಸಲ ನೀನೇ ಅಲ್ಲವೇ ಆತನನ್ನು ಬದುಕಿಸಿಕೊಟ್ಟವನು? ಹೇಳು, ಸುಮ್ಮನೆ ಏಕೆ ನಿಂತಿರುವೆ?" ಎಂದು ದೊಡ್ಡ ದನಿ ತೆಗೆದು ಅತ್ತೆನು. ಆಗ ಆತ, "ಅಕ್ಕಾ ಬೆಳಗಿನ ಜಾವಕ್ಕೆ ನಮ್ಮ ಗುರುದತ್ತನ ಪ್ರಾಣ ಹಾರಿಹೋಗಿರಬೇಕು. ತುಂಬ ಹೊತ್ತು ಕಳೆದುಹೋದದ್ದರಿಂದ ಯಾವಾತನಿಂದಲೂ ಆತನನ್ನು ಬದುಕಿಸಿ ಕೊಳ್ಳುವದಾಗಲಿಲ್ಲ. ಎಲ್ಲಾ ಕೈ ಮೀರಿ ಹೋಗಿದೆ." ಎಂದು ನನ್ನನ್ನು ಕೂಡಿಸಿದನು. ನಾನು ಸರಿದು ಗುರುದತ್ತನ ಕಾಲ ಬಳಿಯೇ ಕುಳಿತೆನು. ಎಷ್ಟು ಹೊತ್ತು ಕುಳಿತಿದ್ದೆನೋ ತಿಳಿಯದು. ಗೀತಾ ಎದೆ ಎದೆ ಬಡಕೊಂಡು ಜೋರು ಜೋರಾಗಿ ಅಳುತ್ತಿದ್ದಳು. ಅಲ್ಲಿಂದ ಒಬ್ಬೊಬ್ಬರಾಗಿ ಚಿತ್ರಪಟದ ಸ್ನೇಹಿತರು ಬಂಧು ಬಾಂಧವರು ಒಳಗೆ ಬರಲಾರಂಭಿಸಿದರು. ಆತ್ಮಾರಾಮನು ನನ್ನನ್ನು ಕೈ ಹಿಡಿದು ಅಲ್ಲಿಂದ ಒಳಗಿನ ರೂಮಿಗೆ ಕೊಂಡೊಯ್ದನು. ಹೋಗುವಾಗ ಒಮ್ಮೆ

ಗುರುದತ್ತನನನ್ನು ಕಣ್ಣು ತುಂಬ ನೋಡಿ ರೂಮಿನಲ್ಲಿದ್ದ ಆತನ ವಸ್ತುಗಳನ್ನು ನಿರೀಕ್ಷಿಸಿದೆನು. ತಲೆ ಹತ್ತಿರ ಬಂದು ಗ್ಲಾಸಿನಲ್ಲಿ ನೀರೂ ಇನ್ನೊಂದರಲ್ಲಿ ಪಾನೀಯವೂ ಇತ್ತು. ಅರ್ಧ ಓದಿ ಮುಗಿಸಿದ ಪುಸ್ತಕ ಹಾಗೆಯೇ ತೆರೆದಿತ್ತು. ಆತನ ಎರಡು ಕೈಗಳು ಕೈಮುಗಿದಂತೆ ಎದೆಯ ಮೇಲಿದ್ದವು. ನೀನಾ ಎರಡು ವರ್ಷದ ಮಗು. "ಪಪ್ಪಾ ಪಪ್ಪಾ" ಎಂದು ತಂದೆಯ ಮೇಲೆ ಬಿದ್ದು ಹೊರಳಾಡುತ್ತಿತ್ತು. ಕ್ರಮೇಣ ಒಬ್ಬೊಬ್ಬರಾಗಿ ನನ್ನ ಮಗಳು ಲಲಿತಾ ಅಳಿಯ ಗೋಪಾಲಕೃಷ್ಣ ಮಗ ವಿಜಯ ದೇವದಾಸ ಬಂದರು. ತರುಣ, ಅರುಣ ಶಾಲೆಗೆ ಹೋಗಿದ್ದರು. ಅಲ್ಲಿ ಏನೋ ಇಂಗ್ಲೀಷ್ ಕಾರ್ಟೂನ್ ಪಿಕ್ಚರ್ ಅವರಿಗೆ ತೋರಿಸುತ್ತಿದ್ದರಂತೆ. ನನ್ನ ಅಳಿಯ ಹೋಗಿ ಅವರನ್ನು ಕರೆತಂದರು. ತರುಣ ಹತ್ತು ವರ್ಷದವನು. ಬಂದು ತಂದೆಯ ಪಾರ್ಶ್ವದಲ್ಲೇ ಅಳುತ್ತ ಕೂತಿದ್ದನು. ತಂದೆ ಮಕ್ಕಳ ಆ ಪ್ರೀತಿ ಅನ್ಯೋನ್ಯತೆ ನೋಡಿ ಯಾರಿಗೂ ಕರುಳು ಹಿಚುಕಿದಂತಾಗಬೇಕು.

ಕೆಳಗಡೆ ಗುರುದತ್ತನ ಅಂತ್ಯಕ್ರಿಯೆಗಳ ತಯಾರಿ ನಡೆದಿತ್ತು. ಆತನ ಸ್ವಂತದ ಲಾರಿ ತನ್ನ ಯಜಮಾನನ ಶವಯಾತ್ರೆ ಕೊಂಡೊಯ್ಯಲು ಸಿದ್ಧವಾಗಿತ್ತು. ನಾನು ಅತ್ತ ಕಡೆಗೆ ನೋಡಲೂ

ಧೈರ್ಯ ಸಾಲದೆ ತಲೆ ಕೆಳಗೆ ಹಾಕಿಕೊಂಡು ಅಳಿಯನ ಕಾರಿನಲ್ಲಿ ಅವರ ಮನೆಗೆ ಹೋದೆನು. ಪ್ರೋಗ್ರಾಮಿಗೆ ಬಂದ ಜನರು ಕೂತಿದ್ದರು. ಒಬ್ಬೊಬ್ಬರಾಗಿ ಎಲ್ಲರೂ ಹೊರಟು ಹೋದರು. ಅಬ್ದುಲ್ ಹಲೀಮನು ಮನೆಗೆ ಹೋಗಿ ಗುರುದತ್ತನ ಆತ್ಮಕ್ಕೆ ಶಾಂತಿಯಾಗಲೆಂದು ಭೈರವಿ ರಾಗ ಬಾರಿಸಿ 'ಅಲ್ಲಾ' ದೇವರಲ್ಲಿ ಪ್ರಾರ್ಥಿಸಿದನಂತೆ.

❀

ಎಲ್ಲಾ ಕಾರ್ಯಕ್ರಮ ಮುಗಿಸಿಕೊಂಡು ಮಗಳು ಮನೆಗೆ ಬಂದಳು. ಬಂದೊಡನೆ "ಏನೆಲ್ಲಾ ನಡೆಯಿತು ವಿಸ್ತಾರವಾಗಿ ಹೇಳು?" ಎಂದು ಪೀಡಿಸ ಹತ್ತಿದೆನು. ಹೇಳಿದಳು, "ಅಮ್ಮಾ ಏನು ಹೇಳಲಿ ಗುರುದತ್ತನಿಗೆ ಸ್ನಾನ ಮಾಡಿಸಿ ತರತರಹದ ಸುಗಂಧ ದ್ರವ್ಯಗಳಿಂದ ಶರೀರವನ್ನು ಉಜ್ಜಿ ಆತನ ಪ್ರಿಯವಾಗಿದ್ದ ಸೂಟನ್ನು ಕಾಲುಚೀಲ ಬೂಟುಗಳನ್ನು ಹಾಕಿ ಶೃಂಗರಿಸಿ ಆ ಲಾರಿಯ ಮೇಲಿಟ್ಟರು. ಒಬ್ಬೊಬ್ಬರಾಗಿ ಬಂದು ನಮಸ್ಕಾರ ಮಾಡಿ, ಹೂವಿನ ಮಾಲೆಗಳನ್ನು ಹಾಕಿದರು. ಇಡೀ ದೇಹವೆಲ್ಲ ಹೂಗಳಿಂದ ಮುಚ್ಚಿಹೋಗಿ ಮುಖ ಮಾತ್ರ ಕಾಣುತ್ತಿತ್ತು. ದೇವರನಾಮಗಳನ್ನು ಹಾಡುವ ಮೇಳವನ್ನು ಮುಂದೆ ಮಾಡಿಕೊಂಡು ಲಾರಿ ಸಾವಧಾನವಾಗಿ ಹೊರಟಿತು. ಸೋನಾಪುರಿಗೆ ತಲುಪಿದ ನಂತರ ಅನೇಕ ಫೋಟೋಗಳನ್ನು ಅಲ್ಲೂ ತೆಗೆದರು. ಅಲ್ಲಿಂದ ಇಲೆಕ್ಟ್ರಿಸಿಟಿ ಮುಖಾಂತರ ಆತನ ಶರೀರವು ಕೆಲವೇ ನಿಮಿಷಗಳಲ್ಲಿ ಭಸ್ಮವಾಯಿತು. ಎಂದೂ ಕನಸು ಮನಸ್ಸಿನಲ್ಲಿಯೂ ಯೋಚಿಸದಿದ್ದ ಈ ಆಘಾತವನ್ನು ಹೇಗೆ ತಾನೇ ಸಹಿಸುವದಮ್ಮಾ!" ಎಂದು ಹೇಳಿ ನನ್ನನ್ನು ಅಪ್ಪಿಕೊಂಡು ಭೋರಾಡಿ ಅತ್ತಳು.

ರಾತ್ರಿ ರೇಡಿಯೋ ಮುಖಾಂತರವಾಗಿ ದುಃಖ ವಾರ್ತೆಯನ್ನು ತಿರಿತಿರುಗಿ ಬಿತ್ತರಿಸಿದರು. ಡಿಸೆಂಬರ್ ತಿಂಗಳದಿಂದ ಗುರುದತ್ತನು ಕಲ್ಕತ್ತೆಯ ವಿಖ್ಯಾತ ಕಾನನಬಾಲಾ ಎಂಬ ನಟಿಯು ಕೂಡ ಶ್ರೀಕಾಂತ ಪಿಕ್ಚರಿನಲ್ಲಿ ನಟನಾಗಿ ಕೆಲಸ ಮಾಡುವ ಸಿದ್ಧತೆಯಾಗಿ ಮುಹೂರ್ತವೂ ಆಗಿತ್ತು.

ಪಾಲಿ ಹಿಲ್ಲಿನಲ್ಲಿಯ ಬಂಗಲೆಯನ್ನು ಮುರಿದು ಕಟ್ಟಿಸುವ ಮುಹೂರ್ತ ಮಾಡಿ ಮುಗಿಸದೆ ಅಲ್ಲಿಗೇ ಬಿಟ್ಟು. ಎಷ್ಟೋ ಚಿತ್ರಪಟಗಳನ್ನು ಪ್ರಾರಂಭಿಸಿ ನಡುವೆ ಕೈಬಿಟ್ಟು, ತನ್ನ ವಿಶ್ರಾಂತಿ ಧಾಮವಾದ ಲೋಣಾವಳವನ್ನೂ ಅಲ್ಲಿಯೇ ಬಿಟ್ಟು, ಜಗಳಾಡುವ ತನ್ನ ಹೆಂಡತಿಯನ್ನೂ ತೊರೆದು, ಪ್ರೀತಿಯ ಮಕ್ಕಳನ್ನೂ ನೋಡದೆ, ಅವನಿಗಾಗಿ ಒಂದೇ ಸಮನೆ ಹಲಬುತ್ತಿರುವ ತಾಯಿಯನ್ನೂ ಲೆಕ್ಕಿಸದೆ, ಇದ್ದುದನ್ನು ಇದ್ದಲ್ಲಿಯೇ ಇದ್ದಂತೆ ಬಿಟ್ಟು, ಏನೋ ಅವಸರದ ಕೆಲಸ ವಿದ್ದವನಂತೆ ಒಮ್ಮೆಲೆ ತೆರೆಯ ಮರೆಯಾದ ನನ್ನ ಮಗ ಗುರುದತ್ತ. ✡

****

ಒಂದು ಉತ್ತಮ ಗ್ರಂಥವನ್ನು ನಾಶಪಡಿಸುವುದೆಂದರೆ ಒಬ್ಬ ಸಜ್ಜನನನ್ನೇ ಕೊಂದಂತೆ.

—ಜಾನ್ ಮಿಲ್ಟನ್

ಸುಖವನ್ನು ಸಂಗ್ರಹಿಸಬೇಕಾದರೆ ಪುಸ್ತಕಗಳನ್ನು ಸಂಗ್ರಹಿಸು.

—ವಿ. ಸ್ಕಾಟ್

ಪ್ರತಿಯೊಂದು ಮನೆಗೂ ದೀಪ ಹೇಗೋ ಪುಸ್ತಕವೂ ಹಾಗೆಯೇ ಅವಶ್ಯವೆಂಬುದನ್ನು ನಮ್ಮವರು ಗ್ರಹಿಸಬೇಕಾಗಿದೆ.

—ಡಿ.ವಿ.ಜಿ.

Printed & published by G. Vamadev, Charity Commissioner, Belgaum, Receiver for movable proper of Loka Shikshana Trust, at Samyukta Karnataka Press, Koppikar Road, Hubli–580 020. Rept : Bombay : V. Satyamurthy Phone: 522412; Calcutta : H. Majumdar 46–4233; Madras : K. A. Subramanian Phone : 842201; New Delhi : P. R. Chopra Phone : 714130.

Registered with the Registrar of Newspapers for India under No. 3533/5